
ಸಾಹಿತ್ಯ ಅಕಾದೆಮಿ

ಭಾರತೀಯ ಸಾಹಿತ್ಯ ನಿರ್ಮಾಪಕರು

# ಡಾ| ಫರ್ಡಿನಾಂಡ್ ಕಿಟೆಲ್

ಡಾ. ಶ್ರೀನಿವಾಸ ಹಾವನೂರ







# ಡಾ। ಫರ್ಡಿನಾಂಡ್ ಕಿಟೆಲ್

ಒಳಬದಿಯ ರಕ್ಷಾಪುಟಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ರಾಜ ಶುದ್ಧೋದನನಿಗೆ ಮೂವರು ಕಾಲಜ್ಞಾನಿಗಳು ರಾಣಿ ಮಾಯಾಳ ಕನಸಿನ ಅರ್ಥವನ್ನು ವಿವರಿಸುತ್ತಿರುವ ದೃಶ್ಯವಿದೆ. ಅವರ ಕೆಳಗೆ ಕುಳಿತಿರುವ ಲಿಪಿಕಾರನು ಅರ್ಥ ವಿವರಣೆಯನ್ನು ದಾಖಲಿಸುತ್ತಿದ್ದಾನೆ. ಪ್ರಾಯಶಃ ಇದು ಭಾರತದಲ್ಲಿ ಲಭ್ಯವಾಗಿರುವ ಮೊಟ್ಟಮೊದಲ ಲೇಖನ ಕಲೆಯ ಚಿತ್ರಾತ್ಮಕ ದಾಖಲೆಯಾಗಿದೆ.

ದೊರಕಿರುವ ಸ್ಥಳ : ನಾಗಾರ್ಜುನಕೊಂಡ, ಕ್ರಿ.ಶ. 2ನೇ ಶತಮಾನ
ಕೃಪೆ : ರಾಷ್ಟ್ರೀಯ ವಸ್ತು ಸಂಗ್ರಹಾಲಯ, ನವದೆಹಲಿ

ಭಾರತೀಯ ಸಾಹಿತ್ಯ ನಿರ್ಮಾಪಕರು

# ಡಾ॥ ಫರ್ಡಿನಾಂಡ್ ಕಿಟೆಲ್

ಕನ್ನಡದ ಖ್ಯಾತನಾಮ ಕವಿ, ಕೋಶಕಾರ ಮತ್ತು ವಿದ್ವಾಂಸರು

ಲೇಖಕರು
ಡಾ. ಶ್ರೀನಿವಾಸ ಹಾವನೂರ

ಸಾಹಿತ್ಯ ಅಕಾದೆಮಿ

**Dr. Ferdinand KITTEL :** A Monograph on Dr. Ferdinand Kittel; Kannada Poet, Lexiconist and Research Scholar, by Dr. Shrinivas Havanur. Published by Sahitya Akademi, 2009.

Prince: Rs. 40/-



ಮೊದಲ ಮುದ್ರಣ: ೨೦೦೯

**ಸಾಹಿತ್ಯ ಅಕಾಡೆಮಿ**

ರವೀಂದ್ರ ಭವನ, ೩೫, ಫಿರೋಜ್‌ಷಹಾ ರಸ್ತೆ, ನವದೆಹಲಿ - ೧೧೦ ೦೦೧.
'ಸ್ವಾತಿ', ಮಂದಿರ್‌ಮಾರ್ಗ, ನವದೆಹಲಿ - ೧೧೦ ೦೦೧.
ಸೆಂಟ್ರಲ್ ಕಾಲೇಜ್ ಆವರಣ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-೫೬೦ ೦೦೧.
೪೪೩, ಗುಣ ಕಾಂಪ್ಲೆಕ್ಸ್, ಅಣ್ಣಾಸಾಲೈ, ತೇನಾಂಪೇಟೆ, ಚೆನ್ನೈ-೬೦೦ ೦೧೮.
೧೭೨, ಮುಂಬೈ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ಮುಂಬೈ-೪೦೦ ೦೧೪.
ಜೀವನ್‌ತಾರಾ ಭವನ. ೨೩ಎ-೪೪ ಎಕ್ಸ್, ಡೈಮಂಡ್ ಹಾರ್ಬರ್ ರಸ್ತೆ, ಕೋಲ್ಕತ್ತ - ೭೦೦ ೦೫೩

ಬೆಲೆ : ನಲವತ್ತು ರೂಪಾಯಿಗಳು

ISBN : 81-260-2688-X

ಅಕ್ಷರ ಸಂಯೋಜನೆ : ಕನ್ನಡ ಗಣಕ ಪರಿಷತ್ತು, ಬೆಂಗಳೂರು

ಮುದ್ರಣ
ಇಳಾ ಮುದ್ರಣ
ಬೆಂಗಳೂರು-೫೬೦ ೦೨೬
ದೂರವಾಣಿ: ೨೬೭೫೭೧೫೯

# ಪೀಠಿಕೆ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರೆ. ಕಿಟೆಲ್ ಕರ್ನಾಟಕಕ್ಕೆ ಬಂದರು. ಆ ಅವಧಿಯಲ್ಲಿ ಭಾರತೀಯ ಪ್ರಾಚ್ಯ ಇತಿಹಾಸ, ಧರ್ಮ, ಭಾಷೆ, ಸಾಹಿತ್ಯ ಕ್ಷೇತ್ರಗಳಲ್ಲಿ ಯುರೋಪಿಯನ್ ವಿದ್ವಾಂಸರು ಗಣನೀಯ ಮಟ್ಟದಲ್ಲಿ ಕಸಿ ಮಾಡಿದ್ದರು. ದ್ರಾವಿಡ ಭಾಷಾ ವಿಚಾರವಾಗಿ ಕಾಲ್ಡ್‌ವೆಲ್; ಶಾಸನ ಶೋಧದಲ್ಲಿ ಬರ್ಗೆಸ್, ಫ್ಲೀಟ್, ಹುಲ್ಷ್, ರೈಸ್‌ರು; ಧಾರ್ಮಿಕ ಕ್ಷೇತ್ರದಲ್ಲಿ ಮ್ಯಾಕ್ಸ್‌ಮುಲರ್; ಶಿಲ್ಪಕಲಾ ರಂಗದಲ್ಲಿ ಮೆಡೋಜ್-ಟೇಲರ್, ಕಸಿನ್ಸ್, ಫರ್ಗ್ಯೂಸನ್- ಮೊದಲಾದವರ ಕೊಡುಗೆಯಿಂದ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಸಮಗ್ರವಾಗಿ ರೂಪಿಸುವುದು ಸಾಧ್ಯವಾಯಿತು. ಡಾ. ಕಿಟೆಲ್ ಅವರೂ ಈ ವಿದ್ವತ್ಪ್ರಚಂಡರ ಸಾಲಿನಲ್ಲಿ ಗಣಿಸಲ್ಪಡುತ್ತಿದ್ದರು. ಇತ್ತ ಗುಂಡರ್ಟರು, ಬ್ರೌನರು ಮಲೆಯಾಳಿ, ತೆಲುಗು ಕೋಶಗಳನ್ನು ರಚಿಸಿದ್ದಾಗ, ಕಿಟೆಲರ ಕನ್ನಡ ಕೋಶವು ಹೊರಬಂದಿತು, ಮಾತ್ರವಲ್ಲ ವೈದುಷ್ಯದಲ್ಲಿ ಇವರುಗಳ ಕೃತಿಗಳಿಗಿಂತಲೂ ಮೇಲ್ಮಟ್ಟದ್ದೆನಿಸಿತು. ಪರಿಣಾಮವೆಂದರೆ ಕಿಟೆಲರ ಜೊತೆಗೆ ಕನ್ನಡಕ್ಕೂ ಹೆಚ್ಚಿನ ಮನ್ನಣೆ ದೊರಕಿತು.

ಈ ಹಿನ್ನೆಲೆಯಲ್ಲಿ ಕಿಟೆಲರ ಜೀವನ ಸಾಧನೆಯನ್ನು ವಿವೇಚಿಸ ಬಯಸಿದೆ. ಇವರಿಗೆ ಹಿರಿಯಣ್ಣನಂತಿದ್ದ, ಅದೇ ಬಾಸೆಲ್ ಮಿಶನ್ನಿನ ಮೈವ್‌ಗ್ಲಿಂಗ್ ಕನ್ನಡ ಪತ್ರಿಕೋದ್ಯಮ, ಗಾದೆಗಳ ಸಂಗ್ರಹ, ಪತ್ರ ಸಾಹಿತ್ಯ, ಕನ್ನಡ ಲಿಪಿಸುಧಾರಣೆ, ಯಕ್ಷಗಾನ, ಹರಿದಾಸ ಸಾಹಿತ್ಯ-ಇವುಗಳನ್ನು ಮೊದಲ ಬಾರಿಗೆ ಕನ್ನಡದಲ್ಲಿ ಪ್ರಕಟಿಸಿದ್ದರು. ಅದೇ ನಿಟ್ಟಿನಲ್ಲಿ ಕಿಟೆಲ್ ಮುಂದುವರಿದು, 'ಪ್ರಥಮ ಬಾರಿಗೆ' ಎಂಬುದನ್ನು ಸಾರ್ಥಕಗೊಳಿಸುವಂತೆ ಹಳಗನ್ನಡ ಕಾವ್ಯ ಸಂಪಾದನೆ, ಖಂಡಕಾವ್ಯ ರಚನೆ, ಕನ್ನಡ ವ್ಯಾಕರಣ, ಛಂದಸ್ಸುಗಳ ವಿವೇಚನೆ ಮುಂತಾದ್ದನ್ನು ಕೈಗೊಂಡು ಆ ಮುಂದಿನವರಿಗೆ, ಮತ್ತು ಇಂದಿನವರಿಗೆ ಮಾರ್ಗದರ್ಶಿಯಾಗಿ ವಿಜೃಂಭಿಸಿದ್ದಾರೆ. ಅವರೀ ಕಾರ್ಯದಲ್ಲಿ ಮತದೃಷ್ಟಿ ಹಾಗೂ ನೀತಿಮತ್ತೆ ಅಲ್ಲಲ್ಲಿ ತೋರಿ ಬಂದಿದೆಯಾದರೂ ಅದು ನಗಣ್ಯವೆಂದೇ ಭಾವಿಸತಕ್ಕದ್ದು.

೧೯೯೪ರಲ್ಲಿ ಮೊತ್ತ ಮೊದಲಿನ ಅಂತಾರಾಷ್ಟ್ರಿಯ ಕಿಟೆಲ್ ಸಮ್ಮೇಳನವು ಧಾರವಾಡದಲ್ಲಿ ನಡೆದು. ಅದರ ಪ್ರಬಂಧಗಳೆಲ್ಲ. 'A Dictionary with a Mission' ಎಂಬುದಾಗಿ - ಪ್ರಕಟವಾಯಿತು. ಅದಕ್ಕೂ ಮುಂಚೆ ೧೯೭೧ರಲ್ಲಿ ಕಿಟೆಲರ ಸುಧಾರಿತ ಆವೃತ್ತಿ ಹೊರಬಂದಾಗ ಗೋಷ್ಠಿಯೊಂದು ಧಾರವಾಡದಲ್ಲಿ ಜರುಗಿತು. ಆಗಿನ 'ಕನ್ನಡಕ್ಕೆ ಕಿಟೆಲ್ಲರ ಕೊಡುಗೆ' ಎಂಬಲ್ಲಿಯ ಲೇಖನಗಳಿಂದಲೂ ಅಲ್ಲಲ್ಲಿ ಹೆಚ್ಚಿನ ಮಾಹಿತಿಯನ್ನು ಹೆಕ್ಕಿ ತೆಗೆದು ಇದರಲ್ಲಿ ಸೇರಿಸಿಕೊಂಡಿದ್ದೇನೆ.

ಮೇ ೨೦೦೩ರಲ್ಲಿ ಜರ್ಮನಿಯ ಸ್ಟುಟ್‌ಗಾರ್ಟ ನಗರದಲ್ಲಿ ದ್ವಿತೀಯ ಅಂತಾರಾಷ್ಟ್ರೀಯ ಕಿಟೆಲ್ ಸಮ್ಮೇಳನ ಜರುಗಿತು. (ಆಗ ನಾನೂ ಒಂದು ಪ್ರಬಂಧವನ್ನು ಮಂಡಿಸಿದ್ದೆ.) ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಡಾ. ರೈನ್‌ಹಾರ್ಡ್ ವೆಂಟ್ ಎನ್ನುವವರು, "An Indian to the Indians?" ಎಂಬ

ಹೆಸರಿನಲ್ಲಿ ಪ್ರಕಟಿಸಿದ್ದು, ಅದರಲ್ಲಿ ಬಾಸೆಲ್ ಪತ್ರಾಗಾರದಲ್ಲಿದ್ದ ಜರ್ಮನ್ ಭಾಷೆಯ ಕಾಗದಪತ್ರಗಳ ಪ್ರಯೋಜನ ಪಡೆದು ವಿಷಯವನ್ನು ಮಂಡಿಸಿದವರಿದ್ದಾರೆ. ಈ ಗ್ರಂಥವನ್ನು ಡಾ. ವೆಂಟ್ ಈ ನನ್ನ ಪುಸ್ತಕಕ್ಕಾಗಿ ಪ್ರಕಟನ ಪೂರ್ವದಲ್ಲಿಯೇ ಕಳಿಸಿಕೊಟ್ಟರು. ಅದರಲ್ಲಿಯ ಹಲವಾರು ಪ್ರಬಂಧಕಾರರ, ವಿಶೇಷತಃ ವೆಂಟ್, ಮಾಜನ್ ಮುಲ್ಲಾ, ಕಾತ್ರಿನ್ ಬಿಂಡರ್, ರಾಲ್ಫ್ ಹೊಕೆ ಇವರುಗಳ ಪ್ರಬಂಧಗಳಲ್ಲಿ ಬಂದ ಅಂಶಗಳನ್ನು ಬಳಸಿಕೊಂಡದ್ದನ್ನು ಕೃತಜ್ಞತೆಯಿಂದ ನೆನೆಯುವೆ. ಅದರಂತೆ ಬಾಸೆಲ್ ಮಿಶನ್ನಿನ (ಈಗ ಅದರ ಹೆಸರು ಮಿಶನ್-21) ಪತ್ರಾಗಾರದ ಮುಖ್ಯಸ್ಥರಾಗಿದ್ದು, ಈಗ ನಿವೃತ್ತರಾಗಿರುವ, ಡಾ. ಪಾಲ್ ಜೆಂಕಿನ್ಸ್ ಅವರ ವಿಶೇಷ ಕೃತಜ್ಞತೆಗೆ ಪಾತ್ರನಾಗಿದ್ದೇನೆ.

ಡಾ. ಕಿಟೆಲ್ ಕುರಿತ ನನ್ನ ವ್ಯಾಸಂಗ ನಾಲ್ಕು ದಶಕಗಳಷ್ಟು ಹಿಂದಿನದು. ಅವರ ಬಗ್ಗೆ ಕಾಲಕಾಲಕ್ಕೆ ಹೊಸ ಅಂಶಗಳು ಬರುತ್ತಲೇ ಇದ್ದಾಗ ಅವರ ಸಂಶೋಧನ ಕಾರ್ಯದ ಬಗ್ಗೆ ಲೇಖನ, ಉಪನ್ಯಾಸಾದಿಗಳನ್ನು ಕೈಕೊಂಡದ್ದಿದೆ. ಈಚೆಗೆ (ಕ್ರಿ.ಶ. ೨೦೦೨) ಅವರು ಹೊಸಗನ್ನಡದ ಲೌಕಿಕ ಕವನ ರಚನೆಯಲ್ಲಿ ಮೊದಲಿಗರು ಎಂದು ತಿಳಿದು ಬಂತು. ಅಂತೂ ಇದು ಕಿಟೆಲರ ಮೇಲಿನ ನನ್ನ ಮೂರನೆಯ ಪುಸ್ತಕ. ಪ್ರಕೃತ, ಈ ಬಗ್ಗೆ ಪೂರ್ಣ ಪ್ರಮಾಣದ ಗ್ರಂಥವನ್ನು ಸಿದ್ಧಪಡಿಸಲು ಹೇಳಿದ ಕೇಂದ್ರ ಸಾಹಿತ್ಯ ಅಕಾಡೆಮಿಯವರನ್ನು ವಂದಿಸುವೆ. ಕಿಟೆಲರನ್ನು ಕುರಿತ ಮೂರನೆಯ ಅಂತಾರಾಷ್ಟ್ರೀಯ ಸಮ್ಮೇಳನ ಜರುಗಲಿದೆಯಷ್ಟೆ. ಆ ವೇಳೆಗೆ ಕನ್ನಡ ಮತ್ತು ಇಂಗ್ಲಿಷ್ – ಈ ಎರಡೂ ಭಾಷೆಗಳಲ್ಲಿ ಅವರ ಜೀವನ ಸಾಧನೆಯನ್ನು ಒದಗಿಸಲು ಸೂಚಿಸಿ ಉಪಕರಿಸಿದ್ದಾರೆ.

ಕಿಟೆಲರ ಮೇಲಿನ ನನ್ನ ವ್ಯಾಸಂಗಕ್ಕೆ ಪ್ರೋತ್ಸಾಹವಿತ್ತುದಲ್ಲದೆ, ಎರಡನೆಯ ಅಂತಾರಾಷ್ಟ್ರೀಯ ಕಿಟೆಲ್ ಸಮ್ಮೇಳನಕ್ಕೆಂದು ಸ್ಟುಟ್‌ಗಾರ್ಟ್‌ಗೆ ಕಳುಹಿಸಿ ಆ ಮುಂದೆ ಬಾಸೆಲ್‌ಗೂ ಹೋಗುವುದಕ್ಕೆ ಅನುವು ಮಾಡಿಕೊಟ್ಟ ಕಾಸೆಸ್ ಸಂಸ್ಥೆಯ ಡಾ. ಜೆ.ಎಸ್. ಸದಾನಂದ ಅವರನ್ನು ನೆನೆಯುವೆ. ಅದರಂತೆ ಮಂಗಳೂರಿನ ಕರ್ನಾಟಕ ತಿಯಾಲಾಜಿಕಲ್ ಕಾಲೇಜಿನ ಡಾ. ರತ್ನಾಕರ ಅಯ್ಯ ಅವರ ಸಲಹೆ ಮತ್ತು ಪ್ರೋತ್ಸಾಹ ನನಗೆ ಸದಾ ದೊರೆತಿದೆ. ಕಾಲೇಜಿನ ಪತ್ರಾಗಾರದಿಂದ ನನಗೆ ಬೇಕಾದ ಸಾಮಗ್ರಿಯನ್ನು ಒದಗಿಸುತ್ತಿರುವ ಶ್ರೀ ಬೆನೆಟ್ ಅಮನ್ನ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲಬೇಕು.

ಈ ಗ್ರಂಥದ ಡಿ.ಟಿ.ಪಿ ಕೆಲಸ ನಡೆದಾಗಲೂ ಸೇರ್ಪಡೆ, ತಿದ್ದುಪಡಿಗಳನ್ನು ಮಾಡುತ್ತಲೇ ಇದ್ದೆ. ಆದರೂ ಅಚ್ಚುಕಟ್ಟಾಗಿ ಕಂಪೋಸ್ ಮಾಡಿಕೊಟ್ಟ ಶ್ರೀಮತಿ ಸವಿತಾ ಹಾಗೂ ಕುಮಾರಿ ಗೀತಾ ಎನ್. ಇವರನ್ನು ಅಭಿನಂದಿಸುವೆ. ಕನ್ನಡ ಗಣಕ ಪರಿಷತ್ತಿನ ಶ್ರೀ ಜಿ.ಎನ್.ನರಸಿಂಹಮೂರ್ತಿಗಳು ನನ್ನ ಎಲ್ಲ ಗಣಕಯಂತ್ರದ ಯೋಜನೆಗಳಿಗೆ ಬೆನ್ನೆಲುಬಾಗಿ ನಿಂತವರು; ಎಂದಿನಂತೆ ಇದಕ್ಕೂ ಸಹ.

ಬೆಂಗಳೂರು
ಮಾರ್ಚ್ ೨೦೦೮

**ಡಾ. ಶ್ರೀನಿವಾಸ ಹಾವನೂರ**
೬೩ ಸೌತ್ ಕ್ರಾಸ್ ರಸ್ತೆ, ಬಸವನಗುಡಿ
ಬೆಂಗಳೂರು–೪, ದೂರವಾಣಿ:೨೬೬೨೦೭೪೮

# ಪರಿವಿಡಿ

# ಪ್ರಕರಣ – 1

## ಕಿಟೆಲ್ ಪೂರ್ವದ ಹೊಸಗನ್ನಡ ಸಾಹಿತ್ಯ

ಕ್ರಿಸ್ತಶಕಾರಂಭದಿಂದ ಹರಿದು ಬಂದ ಕನ್ನಡ ಸಾಹಿತ್ಯವಾಹಿನಿಗೆ ಪಾಶ್ಚಾತ್ಯ ಸಂಪರ್ಕವೆಂಬ ಹೊಸ ನೀರು ಸೇರಿದಂದಿನಿಂದ ಹೊಸಗನ್ನಡ ಸಾಹಿತ್ಯದ ಆರಂಭವಾಯಿತು. ಪಾಶ್ಚಾತ್ಯರ ಸಂಪರ್ಕವು ವಾಸ್ಕೋ-ದ-ಗಾಮನ ಕಾಲದಿಂದಲೇ ಒದಗಿ ಬಂದಿದ್ದರೂ ಜನಜೀವನದ ಮೇಲೆ ಅದರ ಪರಿಣಾಮವಾಗಿರಲಿಲ್ಲ. ಕ್ರಿ.ಶ. ೧೮೧೮ರಲ್ಲಿ ಪೇಶ್ವೆಯವರು ಅಳಿದ ಮೇಲೆ ಹಾಗೂ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಬ್ರಿಟಿಶ್ ಆಡಳಿತವು ನೆಲೆಗೊಂಡಂದಿನಿಂದ ಪಾಶ್ಚಾತ್ಯ ಸಂಪರ್ಕವು ಸ್ಪಷ್ಟವಾಗಿ ತಲೆದೋರಿತು. ಹೀಗೆ ೧೯ನೆಯ ಶತಮಾನದ ಆರಂಭದಿಂದಲೇ ಸಾಹಿತ್ಯೋದ್ಯಮದಲ್ಲಿ ಅದರ ಪ್ರಭಾವವು ಕಂಡುಬರತೊಡಗಿತು.

ಈ ಪಾಶ್ಚಾತ್ಯ ಸಂಪರ್ಕದ ಸಾಧನಗಳು ಯಾವುವೆಂದರೆ–

ಆಡಳಿತ,
ಕ್ರೈಸ್ತ ಮತಪ್ರಸಾರ,
ಶಿಕ್ಷಣ, ಮತ್ತು
ಮುದ್ರಣ.

ಬ್ರಿಟಿಶರ ಆಡಳಿತ ಪದ್ಧತಿಯ ಜೊತೆಗೆ ಔದ್ಯೋಗಿಕ ಸುಧಾರಣೆಗಳೂ ಪಾಶ್ಚಾತ್ಯ ನಾಗರಿಕತೆಯ ಅಂಶಗಳೂ ಒಂದೊಂದಾಗಿ ಬರತೊಡಗಿದುವು. ಜನ-ಜೀವನದ ದಿಸೆಯನ್ನೇ ಬದಲಿಸಿದುವು. ಕ್ರೈಸ್ತ ಮತದ ಪ್ರಸಾರಕ್ಕೆಂದು ಭಾರತಕ್ಕೆ ಬಂದ ಮಿಶನರಿಗಳು ಆಡಳಿತಗಾರರ ಅಪ್ರತ್ಯಕ್ಷ ನೆರವನ್ನು ಪಡೆದು, ಆ ನಿಮಿತ್ತವಾಗಿ ಶಿಕ್ಷಣ, ಸಾಹಿತ್ಯ ಕ್ಷೇತ್ರಗಳಲ್ಲಿ ನೇರವಾಗಿ ಪ್ರವೇಶಿಸಿದರು. ಇವರಿಬ್ಬರೂ ಆರಂಭಿಸಿದ ಹೊಸ ಶಿಕ್ಷಣ ಕ್ರಮವು ಗಮನಾರ್ಹವಾಗಿದೆ. ಆಧುನಿಕ ವಿಜ್ಞಾನ, ಪ್ರಪಂಚದ ನಾನಾ ದೇಶಗಳ ಪರಿಚಯ, ಇಂಗ್ಲಿಷ್ ಸಾಹಿತ್ಯ – ಇವು ಭಾರತೀಯ ಜನತೆಗೆ ಹೊಸದೊಂದು ಜಗತ್ತನ್ನು ತೆರೆದು ತೋರಿದವು. ಈ ಬಗೆಯ ಶಿಕ್ಷಣವು ಕಾಲ ಕ್ರಮೇಣ ಸಾಹಿತ್ಯ ವಿಕಾಸಕ್ಕೂ ಕಾರಣವಾಯಿತು. ಇಂತು ಆಡಳಿತ, ಕ್ರೈಸ್ತಮತ ಪ್ರಸಾರ ಹಾಗೂ ಹೊಸ ಶಿಕ್ಷಣ ಪದ್ಧತಿಗಳು ಆರಂಭ ಕಾಲದ ಹೊಸಗನ್ನಡ ಸಾಹಿತ್ಯಕ್ಕೆ ಪ್ರೇರಣೆಗಳಾಗಿದ್ದುವು. ಮುದ್ರಣ ವಿಧಾನವು ಇದಕ್ಕೆ ಬೆನ್ನೆಲುಬಾಗಿದ್ದಿತು. ಮುದ್ರಣವಂತೂ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಒದಗಿ ಬಂದ ಒಂದು ಅಮೂಲ್ಯ ಸಾಧನ; ಗ್ರಂಥೋದ್ಯಮದ ಕ್ರಾಂತಿಗೆ ಕಾರಣ.

ಹೊಸಗನ್ನಡದ ಅರುಣೋದಯಕ್ಕೆ ಪಾಶ್ಚಾತ್ಯ ಪ್ರಭಾವವೇ ಮುಖ್ಯ ಕಾರಣವಾದರೂ ಮೂಲದ ನೆಲ, ನೀರು ಕನ್ನಡದ್ದೇ ಎಂಬುದನ್ನು ಮರೆಯಲಾಗದು. ಹಳಗನ್ನಡ, ನಡುಗನ್ನಡ ಕಾಲಗಳಿಂದಲೂ ಸಾಗಿ ಬಂದ ಪರಂಪರಾಗತ ವಾಙ್ಮಯವು ಷಟ್ಪದಿ, ಕಂದ, ಸಾಂಗತ್ಯಗಳಲ್ಲಿ ರಚಿತವಾದ ಪೌರಾಣಿಕ ಹಾಗೂ ಚಾರಿತ್ರಿಕ ಕಾವ್ಯಗಳು, ಆ ಕಾಲದ ಜೈನ ವೀರಶೈವರ ವಿವಿಧ ಸಾಹಿತ್ಯ ರಚನೆ, ಹರಿದಾಸರ ಹಾಡುಗಳು, ಯಕ್ಷಗಾನ ಪ್ರಸಂಗಗಳು ಹೇರಳವಾಗಿ ಕಂಡುಬರುತ್ತವೆ. ಇತ್ತ ಮುಮ್ಮಡಿ ಕೃಷ್ಣರಾಜರು (೧೭೯೪-೧೮೬೮) ಹಾಗೂ ಅವರ ಆಸ್ಥಾನ ವಿದ್ವಾಂಸ ಮಂಡಲಿಯಿಂದ ರಚಿತವಾದ ಗದ್ಯ ಗ್ರಂಥಗಳು ಹೊಸಗನ್ನಡ ಸಾಹಿತ್ಯೋದಯದ ಕಾಲಾವಧಿಯಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದುವು. ಗದ್ಯದ ಪ್ರಾದುರ್ಭಾವವು ಹೊಸಗನ್ನಡ ವಾಙ್ಮಯದ ಮುಖ್ಯ ಲಕ್ಷಣವಷ್ಟೆ. ಗದ್ಯ ರಚನೆಯ ಒಲವು ೧೮ನೆಯ ಶತಮಾನದ ಉತ್ತರಾರ್ಧದಿಂದಲೇ ಕಂಡುಬಂದಿದ್ದು, ಅದೇ ಪರಂಪರೆಯನ್ನು ಮುಮ್ಮಡಿ ಕೃಷ್ಣರಾಜರು ಮುಂದುವರಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ಇನ್ನೊಂದು ಲಕ್ಷಣ, ಅದು ತನ್ನ ವ್ಯಾಪ್ತಿಯಲ್ಲಿ ಜನಾಭಿಮುಖವಾಗಿದ್ದುದು. ಮಿಶನರಿಗಳಲ್ಲಿಯಂತೂ ಈ ದೃಷ್ಟಿಕೋಣವು ಅಗತ್ಯದ್ದೇ ಆಗಿದ್ದಿತು. ಇದೇ ಮನೋಭಾವವು ಮೇಲೆ ಹೇಳಿದ ಸಾಂಪ್ರದಾಯಿಕ ಕವಿ-ಲೇಖಕರಲ್ಲಿಯೂ ಇದ್ದಿತು. ಹೊಸಗನ್ನಡ ಸಾಹಿತ್ಯದ ಉಗಮಕ್ಕೆ ಪಾಶ್ಚಾತ್ಯ ಸಂಪರ್ಕವೇ ಏಕಮೇವ ಕಾರಣವಲ್ಲ- ಎಂಬುದನ್ನು ಈ ಅಂಶವೂ ಸ್ಪಷ್ಟೀಕರಿಸುತ್ತದೆ.

ಮುದ್ರಣವು ಹೊಸ ಸಾಹಿತ್ಯದ ಬೆನ್ನೆಲುಬು, ಎಂದೆವಷ್ಟೆ. ಹಿಂದಿನ ಕಾಲದ, ಪ್ರತಿ ಮಾಡುವ ಪ್ರಮೇಯವು ತಪ್ಪಿ ಸಾವಿರಾರು ಪುಸ್ತಕ ಪ್ರತಿಗಳು ಏಕಕಾಲಕ್ಕೆ ದೊರೆಯುವ ಸೌಲಭ್ಯವುಂಟಾದದ್ದರಿಂದ, ಓನಾಮವನ್ನು ಕಲಿತವನೂ ಪುಸ್ತಕವನ್ನು ಪಡೆದು ಓದಬಲ್ಲವನಾದನು. ಆದರಿಂದಲೇ ಪರಮಾವಧಿ ಜನಾಭಿಮುಖವಾಗುವುದು ಸಾಧ್ಯವಾಯಿತು.

ಕನ್ನಡದ ಆದ್ಯ ಮುದ್ರಣ ಕಾರ್ಯವು ಕರ್ನಾಟಕದ ಹೊರಗಿನ ಸ್ಥಳಗಳಲ್ಲಿ ನಡೆಯಿತು. ಅದೂ ದೂರದ ಕಲ್ಕತ್ತೆಯ ಬಳಿಯಿರುವ ಶ್ರೀರಾಮಪುರದಲ್ಲಿ. ಅಲ್ಲಿ ೧೮೧೭ರಂದು ಮುದ್ರಿತವಾದ ಕನ್ನಡ ವ್ಯಾಕರಣ ಪುಸ್ತಕವು (ಇಂಗ್ಲಿಷಿನಲ್ಲಿ) ಹೊಸಗನ್ನಡದ ಮೊದಲ ಗ್ರಂಥವೆಂದು ಸ್ಥೂಲವಾಗಿ ಹೇಳಬಹುದು. ಅದರ ಕರ್ತೃ ವಿಲಿಯಮ್ ಕೇರಿಯು ಭಾರತದ ಅನೇಕ ಭಾಷೆಗಳಲ್ಲಿ, ಅದೇಕೆ ಏಶಿಯದ ಹಲವಾರು ಭಾಷೆಗಳಲ್ಲಿ ಸಹ ವ್ಯಾಕರಣ, ಕೋಶ ಮುಂತಾದವುಗಳನ್ನು ಬರೆದು, ಮುದ್ರಿಸಿ, ಪ್ರಕಟಿಸಿ, ಗ್ರಂಥೋದ್ಯಮದ ಅಸ್ತಿವಾರವನ್ನು ಹಾಕಿದ್ದಾನೆ.

ಇತ್ತ ಮದ್ರಾಸಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳಿಗೆ ಕನ್ನಡ ಕಲಿಯುವ/ಕಲಿಸುವ ಅಗತ್ಯವಿದ್ದ ಮೂಲಕ ತಮಿಳು, ತೆಲುಗುಗಳ ಜೊತೆಗೆ ಕನ್ನಡದ ಮೊಳೆಗಳನ್ನೂ ಸಿದ್ಧಪಡಿಸಲಾಯಿತು. (೧೮೨೦). ಮತ್ತು ಮೆಕ್ಕರೆಲ್ ಎಂಬ

ಅಧಿಕಾರಿಯು ಇಂಗ್ಲಿಷಿನಲ್ಲಿ ರಚಿಸಿದ ಕನ್ನಡ ವ್ಯಾಕರಣ, ಅದರಂತೆ ರೀವ್ ಎಂಬ ಮಿಶನರಿಯು ರಚಿಸಿದ ಶಬ್ದಕೋಶಗಳೂ ಅಲ್ಲಿ ಮುದ್ರಣಗೊಂಡವು.

ಬಳ್ಳಾರಿಯಲ್ಲಿಯೇ ಮುದ್ರಾಯಂತ್ರದ ಸ್ಥಾಪನೆಯಾದದ್ದು ಬಳ್ಳಾರಿಯ ಮಿಶನರಿ ಜನರಿಂದ (೧೮೨೬). ಇತ್ತ ಬೆಂಗಳೂರಿನಲ್ಲಿ ೧೮೪೦ರ ಸುಮಾರಿಗೆ ಮೈಸೂರು ಸರಕಾರ ಹಾಗೂ ಮಿಶನರಿ ಜನರು ಮುದ್ರಣಾಲಯಗಳನ್ನು ಸ್ಥಾಪಿಸಿ ಪತ್ರ ಪುಸ್ತಕಗಳನ್ನೂ ಮತೀಯ ಗ್ರಂಥಗಳನ್ನೂ ಹೊರತಂದರು. ಮಂಗಳೂರಿನಲ್ಲಿ ಮುದ್ರಣ ಕಾರ್ಯ ಮೊದಲಾದುದು ೧೮೪೧ರಲ್ಲಿ. ಮುಂಬಯಿ ಕರ್ನಾಟಕದಲ್ಲಿ ಮಾತ್ರ ದೇಶೀಯರೇ ಈ ಉದ್ಯಮದಲ್ಲಿ ಮುಂದಾದರು. (ಬೆಳಗಾಂವಿ, ಸವಣೂರು, ಧಾರವಾಡಗಳಲ್ಲಿ).

ಹೊಸಗನ್ನಡದ ಈ ತೇರನ್ನು ಆಡಳಿತಾಧಿಕಾರಿಗಳು ಮತ್ತು ಮಿಶನರಿ ಜನರು ಜೊತೆಯಾಗಿ ಮುಂದೆ ಸಾಗಿಸಿದ್ದಾರೆ. ಅವರಲ್ಲಿ ಪರಸ್ಪರ ಸಹಕಾರವಿದ್ದಿತು. ಕನ್ನಡ ಶಬ್ದಕೋಶವನ್ನು ತಯಾರಿಸಲು ಕಂಪನಿ ಸರಕಾರವು ರೀವ್ ಮಿಶನರಿಯನ್ನು ಕೇಳಿಕೊಂಡಿತು. (ಕಿಟೆಲ್‌ರಿಗಾದರೂ ಇದೇ ಬಗೆಯ ಸರಕಾರೀ ನಿಮಂತ್ರಣವಿದ್ದಿತು) ಕೆಲವು ಅಧಿಕಾರಿಗಳು ಕನ್ನಡ ಕಲಿಯುವುದರ ಮಟ್ಟಿಗೆ ತೃಪ್ತರಾಗದೇ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ಪರಂಪರೆಗಳಿಗೆ ಮಾರುಹೋಗಿ ಅದನ್ನು ಅಭ್ಯಸಿಸಿದರು. ಅವರಲ್ಲಿ ಎದ್ದು ತೋರುವ ಮೊದಲ ಹೆಸರು ವಾಲ್ಟರ್ ಎಲಿಯಟ್ ಎಂಬುವನದು. ಕಿತ್ತೂರಿನ ಚೆನ್ನಮ್ಮ ರಾಣಿ ಇವನನ್ನು ಸೆರೆಹಿಡಿದಿದ್ದಳು. ಅಲ್ಲಿಂದ ಬಿಡುಗಡೆಯಾಗಿ, ಈತ ಧಾರವಾಡದಲ್ಲಿ 'ಅಸಿಸ್ಟಂಟ್-ಟು-ಕಲೆಕ್ಟರ'ನಾಗಿದ್ದವನು ಮುಂದೆ ಮದ್ರಾಸಿನ ಚೀಫ್ ಸೆಕ್ರೆಟರಿ ಹುದ್ದೆಯ ವರೆಗೂ ಮೇಲೇರಿದನು. ಕನ್ನಡದಲ್ಲಿ ಶೈಕ್ಷಣಿಕ ಪುಸ್ತಕಗಳನ್ನು ಬರೆಯಿಸಿ, ಪ್ರಕಟಿಸಿದವರಲ್ಲಿ ಎಲಿಯಟ್ ಮೊದಲಿಗನು. ಉತ್ತರ ಕರ್ನಾಟಕದಲ್ಲಿಯ ಶಾಸನಗಳನ್ನು ಹುಡುಕಿ ತೆಗೆದು ಇತಿಹಾಸ ರಚನೆಯ ಅಡಿಗಲ್ಲನ್ನು ಇಟ್ಟನು. ಇತರ ಭಾಷೆಗಳೊಂದಿಗೆ ಕನ್ನಡವನ್ನು ಹೋಲಿಸಿ ಲೇಖನಗಳನ್ನು ಬರೆದನು. ಈ ಪರಂಪರೆಯನ್ನು ಮುಂದು ವರಿಸಿದ ವಿದ್ವಾಂಸ ಅಧಿಕಾರಿಗಳೆಂದರೆ ಬಿ.ಎಲ್. ರೈಸ್ ಮತ್ತು ಜೆ.ಎಫ್. ಫ್ಲೀಟ್. ಇವರು ಕಿಟೆಲರ ಸಮಕಾಲೀನರು. ಕಿಟೆಲರಿಗೆ ಕನ್ನಡ ಶಬ್ದಕೋಶ ರಚನೆಯನ್ನು ಒಪ್ಪಿಸುವ ಮಾತು ಬಂದಾಗ (೧೮೭೨) ಎಲಿಯಟ್ ಆ ಸೂಚನೆಯನ್ನು ಸ್ವಾಗತಿಸಿ ಬ್ರಿಟಿಶ್ ಸರಕಾರದ ಮನವೊಲಿಸಿದ್ದಾನೆ. ಆಗ ಅವನಿಗೆ ವೃದ್ಧಾಪ್ಯ.

ಮಿಶನರಿ ಜನರ ಸಾಹಿತ್ಯ ಸೇವೆಯನ್ನು ಈಗ ಪರಿಶೀಲಿಸೋಣ. ನಮ್ಮ ದೇಶಕ್ಕೆ ಬಂದ ಆರಂಭ ಕಾಲದ ಮಿಶನರಿಗಳಲ್ಲಿ ಅನೇಕರು ಉನ್ನತ ಕುಶಾಗ್ರ ಬುದ್ಧಿಯುಳ್ಳವರು. ಇಲ್ಲಿಗೆ ಬಂದ ಮೇಲೆ ದೇಶೀಯರ ಅನಾದರ, ಪ್ರತಿಭಟನೆಗಳನ್ನು ನುಂಗಿಕೊಂಡು ಕಷ್ಟದಿಂದ ಮತಪ್ರಸಾರ ಮಾಡಬೇಕಿದ್ದಿತು. ಆದರೆ ಪಾಶ್ಚಾತ್ಯ ಪದ್ಧತಿಯ ಶಿಕ್ಷಣ ಹಾಗೂ ಮುದ್ರಣ-ಎಂಬೆರಡು ಪ್ರಮುಖ ಸಾಧನಗಳಿಂದ ಅವರು ಇಲ್ಲಿಯ ಜನತೆಯ ಮನವೊಲಿಸಿಕೊಂಡರು. ಕ್ರಮೇಣ ನೆಲೆಯೂರಿದರು.

ಅವರ ಸಾಹಿತ್ಯ ಕಾರ್ಯವು ಒಂದು ನಿಶ್ಚಿತ ಕ್ರಮದಲ್ಲಿ ನಡೆದು ಬಂದಿತು. ತಮ್ಮ ಮಿಶನ್ ಕ್ಷೇತ್ರದ ಭಾಷೆಯನ್ನು ಕಲಿತ ಮೇಲೆ ಬೈಬಲ್ ಅನುವಾದಿಸುವುದು, ಜೊತೆಗೆ ಆ ಭಾಷೆಯ ವ್ಯಾಕರಣ, ಕೋಶಗಳನ್ನು ರಚಿಸುವುದು–ಇದು ಒಂದು ನಿಟ್ಟಿನ ಕೆಲಸವಾದರೆ, ಮಿಶನ್ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ ರಚನೆಯೂ ನಡೆಯುತ್ತಿದ್ದಿತು. ಇವೆಲ್ಲ ಕೃತಿಗಳಿಗಾಗಿ ಮಿಶನ್ ವತಿಯಿಂದ ಒಂದು ಅಚ್ಚುಕೂಟವನ್ನು ಸ್ಥಾಪಿಸಿ ಅವನ್ನು ಮುದ್ರಿಸುವುದು ಮತ್ತು ಅವುಗಳ ವಿತರಣವನ್ನು ಕೈಕೊಳ್ಳುವುದು; ಅನುಕೂಲವಾದರೆ ಸಂಸ್ಥೆಯ ವತಿಯಿಂದ ಪತ್ರಿಕೆಯನ್ನು ಹೊರಡಿಸುವುದು – ಈ ಚೌಕಟ್ಟಿನಲ್ಲಿಯೆ ಮಿಶನರಿಗಳ ವಾಙ್ಮಯ ಕಾರ್ಯವು ನಡೆದು ಬಂದಿತು. ಅವರ ಯಾವುದೇ ಸಾಹಿತ್ಯ ನಿರ್ಮಿತಿಗೆ ಕ್ರೈಸ್ತಧರ್ಮ ಪ್ರಸಾರವೇ ಪ್ರೇರಕವಾಗಿರುತ್ತಿದ್ದಿತು. ಆದರೆ ಯಾವುದೊಂದು ವಿಷಯದಲ್ಲಿ ಆಳವಾದ ಅಭ್ಯಾಸವನ್ನು ಕೈಕೊಂಡು ಗ್ರಂಥರಚನೆ ಮಾಡಿದ್ದಾಗ, ಮತೀಯ ದೃಷ್ಟಿಯು ಹಿಂದುಳಿದು ಆ ಕೃತಿಯು ಸರ್ವಜನಗ್ರಾಹ್ಯವಾದ ಸಂದರ್ಭಗಳೂ ಇವೆ.

ಕರ್ನಾಟಕದಲ್ಲಿ ಮೊತ್ತ ಮೊದಲನೆಯ ಮಿಶನ್ ಕೇಂದ್ರವು ಹದಿನೇಳನೆಯ ಶತಮಾನದಲ್ಲಿಯೆ ಸ್ಥಾಪಿತವಾದರೂ ಅದೊಂದು ಸಂಘಟಿತ ಪರಂಪರೆಯಾಗಿ ನಡೆದುಕೊಂಡು ಬಂದುದು ೧೮೧೦ರಿಂದ. ಪ್ರೊಟೆಸ್ಟಂಟ್ ವರ್ಗಕ್ಕೆ ಸೇರಿದ ಲಂಡನ್ ಮಿಶನ್ ಸಂಸ್ಥೆಯ ಜಾನ್ ಹ್ಯಾಂಡ್ಸ್ ಬಳ್ಳಾರಿಯಲ್ಲಿ ನೆಲೆನಿಂತ ವರ್ಷವದು. ಈ ಸಂಸ್ಥೆಯ ವತಿಯಿಂದ ಆಮೇಲೆ ಬಂದ ಜಾನ್ ರೀಡ್, ಡಬ್ಲ್ಯೂ. ಬೆಯ್ನನ್, ಬಿ.ಎಚ್. ರೈಸ್–ಇವರು ಬೆಳಗಾಂವಿ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಮಿಶನ್ ಕೇಂದ್ರಗಳನ್ನು ಸ್ಥಾಪಿಸಿದರು. ಹಾಗೂ ಶೈಕ್ಷಣಿಕ ಮತ್ತು ಮತೀಯ ಪುಸ್ತಕಗಳನ್ನು ಹೊರತಂದರು. ಮೊದಲಿಗನಾದ ಹ್ಯಾಂಡ್ಸ್, ಬೈಬಲ್ ಅನುವಾದಕ್ಕೆ ತೊಡಗಿದನಲ್ಲದೆ, ಚಿಕ್ಕ ಮತೀಯ ಪುಸ್ತಕಗಳನ್ನು ಹೊರತಂದನು. ಈ ಕೆಲಸದಲ್ಲಿ ಅವನಿಗೆ ನೆರವಾಗಲೆಂದು ಬಂದ ವಿಲಿಯಮ್ ರೀವ್ ಓರ್ವ ಭಾಷಾಕೋವಿದನು. ಮದ್ರಾಸ ಸರಕಾರವು ಇಂಗ್ಲಿಷ್–ಕನ್ನಡ ಕೋಶಗಳನ್ನು ತಯಾರಿಸುವ ಕೆಲಸವನ್ನು ಒಪ್ಪಿಸಿದ್ದುದು ಇವನಿಗೆಯೆ (೧೮೧೮). ಅದಕ್ಕೂ ಹಿಂದೆ, ಪಾಶ್ಚಾತ್ಯ ಸರಣಿಯ ಯಾವ ಒಂದು ಕನ್ನಡ ಶಬ್ದಕೋಶವೂ ಇರದಿದ್ದಾಗ, ಕೆಲವೇ ವರ್ಷಗಳ ಅವಧಿಯಲ್ಲಿ ಅಪಾರ ಕನ್ನಡ ಶಬ್ದಗಳನ್ನು ಕಲೆಹಾಕಿ ಕನ್ನಡ–ಇಂಗ್ಲಿಷ್ ಮತ್ತು ಇಂಗ್ಲಿಷ್–ಕನ್ನಡ ಕೋಶಗಳನ್ನು ಸಿದ್ಧಗೊಳಿಸಿದುದು ಒಂದು ಸಾಹಸವೇ ಸೈ. ಕಿಟೆಲರ ಶಬ್ದಕೋಶಕ್ಕೆ ಒಂದರ್ಥದಲ್ಲಿ ಇದು ತಳಹದಿಯಾಗಿದ್ದಿತು. ಅದರಲ್ಲಿ ಅನೇಕಾನೇಕ ತಪ್ಪುಗಳನ್ನು ಕಿಟೆಲ್ ಕಂಡಿದ್ದರೂ, ಆಮೂಲಾಗ್ರವಾಗಿ ಪರಿಶೀಲಿಸಿ ಅದರ ಪ್ರಯೋಜನವನ್ನು ಪಡೆದಿದ್ದಾನೆ.

ಇವರಿಬ್ಬರ ಅನಂತರ ಬಂದ ಜಾನ್ ರೀಡ್ ಬಳ್ಳಾರಿಯ ಮುದ್ರಣಾಲಯವನ್ನು ಊರ್ಜಿತಗೊಳಿಸಿದನು. (೧೮೩೨–೪೨). ಅನೇಕ ಪಠ್ಯಪುಸ್ತಕಗಳು ಮತ್ತು ಮತೀಯ ಗ್ರಂಥಗಳು ಆವನಿಂದಾಗಿ ಬೆಳಕಿಗೆ ಬಂದುವು. ಹ್ಯಾಂಡ್ಸ್ ಅನುವಾದಿಸಿ,

ಮುದ್ರಿಸಿದ್ದ ಬೈಬಲನ್ನು ಇವನು ಪರಿಷ್ಕರಿಸಿದನು. ಬೆಯ್ಗ್ಲನ್ನನ ಕೊಡುಗೆಯು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಸಂಬಂಧಿಸಿದುದಾಗಿತ್ತು. ಮುಂಬಯಿ ಕರ್ನಾಟಕದಲ್ಲಿ ಮಿಶನರಿ ಜನರ ಶೈಕ್ಷಣಿಕ ಕಾರ್ಯದ ಬುನಾದಿಯನ್ನು ಇವನೇ ಹಾಕಿದವನು. ಇತ್ತ ಬೆಂಗಳೂರಲ್ಲಿ ರೆವೆರೆಂಡ್ ಜಿ.ಎಚ್. ರೈಸ್ ಮಾಡಿದ ಕಾರ್ಯ ಅಮೋಘವಾದುದು. ಮತಪ್ರಸಾರ ವಂತೂ ಸರಿಯೇ: ಶಿಕ್ಷಣ, ಪಠ್ಯ ಹಾಗೂ ಇತರ ಗ್ರಂಥರಚನೆ, ಪತ್ರಿಕೋದ್ಯಮ ('ಅರುಣೋದಯ' ಪತ್ರಿಕೆ – ೧೮೬೨) ಎಲ್ಲದರಲ್ಲಿಯೂ ಇವನ ಅಂಗವಿದೆ. ಇವನ ಮಗನೇ ಕಿಟೆಲರ ಸಮಕಾಲೀನನಾದ ಬಿ. ಲೂಯಿ ರೈಸ್.

ಮೈಸೂರ ಸೀಮೆಯಲ್ಲಿ ಕ್ರೈಸ್ತಮತ ಪ್ರಸಾರ ಕಾರ್ಯವನ್ನು ಆರಂಭಿಸಿದವರು ವೆಸ್ಲಿಯನ್ ಮಿಶನರಿಗಳು (೧೮೩೬). ಥಾಮಸ್ ಹಾಡ್ಸನ್, ಕ್ಯಾಂಬೆಲ್ ಮೊದಲಾದ ವರು ಅಸ್ತಿತ್ವದಲ್ಲಿ ತಂದ ಶಿಕ್ಷಣ ಸಂಸ್ಥೆಗಳು ಮತ್ತು ಮುದ್ರಣಾಲಯ (೧೮೪೦) ಇಂದಿಗೂ ಖ್ಯಾತಿಯನ್ನು ಹೊಂದಿವೆ. ವೆಸ್ಲಿಯನ್ನರಲ್ಲಿ ಒಡೆದು ಕಾಣುವ ಹೆಸರು ಜಾನ್ ಗ್ಯಾರೆಟ್‌ನದು. ರೀವ್ಹನ ಕೋಶವನ್ನು ಆಧರಿಸಿ ಕನ್ನಡ–ಇಂಗ್ಲಿಷ್, ಮತ್ತು ಬಹುಮಟ್ಟಿಗೆ ಸ್ವತಂತ್ರವಾದ ಇಂಗ್ಲಿಷ್–ಕನ್ನಡ ಶಬ್ದಕೋಶಗಳನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಿದ್ಧಪಡಿಸಿದ್ದನು. ಅವನು ಸಂಪಾದಿಸಿದ ಬಹುಭಾಷಾ ಭಗವದ್ಗೀತೆಯು (೧೮೪೬–೪೮) ಅವನಿಗೆ ಅಖಿಲ ಭಾರತ ಕೀರ್ತಿಯನ್ನು ತಂದುಕೊಟ್ಟಿತು. ಅದರಲ್ಲಿ ಮೂಲ ಸಂಸ್ಕೃತ ಶ್ಲೋಕದ ಜೊತೆಗೆ ಮೊದಲು ಕನ್ನಡ, ಆಮೇಲೆ ಇಂಗ್ಲಿಷ್, ಲ್ಯಾಟಿನ್, ಜರ್ಮನ್ ಭಾಷೆಗಳಲ್ಲಿ ಅನುವಾದ/ಟೀಕೆಗಳಿವೆ. ಶಿಕ್ಷಣವು ಇವನ ಅಚ್ಚುಮೆಚ್ಚಿನ ವಿಷಯವಾಗಿದ್ದಿತು. ಅಂತೆಯೇ ೧೮೫೬ರಲ್ಲಿ ಮೈಸೂರ ಸಂಸ್ಥಾನದ ಶಿಕ್ಷಣಾಧಿಕಾರಿಯಾದನು. ಪಠ್ಯ–ಪುಸ್ತಕ ರಚನೆ, ಪ್ರಕಟಣೆಗಳಿಗೆ ಮಹತ್ವವನ್ನು ಕೊಟ್ಟನು. ಅವನು ಹೊರತಂದ ಪಂಚತಂತ್ರ (೧೮೬೫) ಮತ್ತು ಶಬ್ದಮಣಿದರ್ಪಣ (೧೮೬೮), ಇವುಗಳ ಸಂಪಾದನಾ ಕಾರ್ಯವನ್ನು ಆ ಮುಂದೆ ಕಿಟೆಲರೂ ಮಾಡಿದುದಿದೆ.

ಕಿಟೆಲ್ ಪ್ರತಿನಿಧಿಸಿ ಬಂದ ಬಾಸೆಲ್ ಇವ್ಯಾಂಜೆಲಿಕಲ್ ಮಿಶನ್ನಿನ ಬಗ್ಗೆ ತುಸು ವಿವರವಾಗಿ ತಿಳಿದುಕೊಳ್ಳುವಾ. ಹೊಸಗನ್ನಡ ಸಾಹಿತ್ಯ ರಂಗದಲ್ಲಿ ಇತರ ಮಿಶನರಿ ಸಂಸ್ಥೆಗಳಿಗಿಂತ, ಇವರ ಪಾತ್ರವು ಹಿರಿದಾದುದು. ಮಂಗಳೂರಿನಲ್ಲಿ ಅವರು ನೆಲೆ ನಿಂತುದು ೧೮೩೪ರಲ್ಲಿ. ಅಲ್ಲಿಂದ ೧೮೪೦ರ ವರೆಗೆ ಈ ಸಂಸ್ಥೆಗೆ ಬಾಲ್ಯದೆಶೆ. ೧೮೪೦ರಿಂದ ೧೮೫೬ರ ವರೆಗಿನ ಅವಧಿಯನ್ನು ದ್ವಿತೀಯ ಘಟ್ಟವೆಂದು ತಿಳಿಯಬೇಕು. ೧೮೪೨ರಲ್ಲಿ ಅವರ ಕಲ್ಲಚ್ಚಿನ ಮುದ್ರಣ ಆರಂಭವಾಯಿತು. ೧೮೫೨ರಲ್ಲಿ ಜಿಡಿಮೊಳೆಗಳ ಬಳಕೆಯಿಂದಾಗಿ ಮಿಶನ್ನಿನ ಬೆಳವಣಿಗೆಗೆ ತಳಪಾಯ ಹಾಕಿದಂತಾಯ್ತು. ಮಿಶನ್ನಿನ ಕೆಲಸವು ಬೆಳೆದಂತೆಲ್ಲ ಮಿಶನರಿಗಳ ಸಂಖ್ಯೆಯೂ ಬೆಳೆಯಿತು. ಮೂವರಿಂದ ಆರಂಭವಾದ ಮಿಶನ್ನಿನ ಕೆಲಸವನ್ನು ೧೮೫೬ರ ಸುಮಾರಿಗೆ ಮೂವತ್ತು ಜನ ನೋಡಿಕೊಳ್ಳಬೇಕಾಗಿ ಬಂದಿತು. ಅಂತೂ ೧೯೧೪ರ ವರೆಗೆ ೬೫ ಜನ ಜರ್ಮನ್ ಸ್ತ್ರೀ–ಪುರುಷರು ಕನ್ನಡ ನಾಡಿಗೆ ಬಂದಿದ್ದರೆನ್ನುವುದು

ಮಿಶನ್ನಿನ ಬೆಳವಣಿಗೆಯ ದ್ಯೋತಕವಾಗಿದೆ. ಇವರ ಸಂಘಟನಾ ಶಕ್ತಿ ಮತ್ತು ಶಿಸ್ತಿನ ದುಡಿಮೆಯಿಂದಾಗಿ ಮಿಶನ್ನಿನ ಕಾರ್ಯಕ್ಷೇತ್ರವು ಧಾರವಾಡ, ಕೆನರಾ ಜಿಲ್ಲೆಗಳಲ್ಲದೆ ದಕ್ಷಿಣ ಭಾರತದಲ್ಲಿ, ಮಲಬಾರ (೧೮೩೯), ನೀಲಗಿರಿ (೧೮೪೬), ಕೊಡಗು (೧೮೫೮) ಈ ಮಿಶನ್ನಿನ ಕರ್ಮಭೂಮಿಯಾಗಿದ್ದುವು.

ಕಿಟೆಲರಿಗಿಂತ ಪೂರ್ವದಲ್ಲಿ ಬಂದ ಅನೇಕ ಬಾಸೆಲ್ ಮಿಶನರಿಗಳಲ್ಲಿ ಗಾಟ್‌ಫ್ರಿಡ್ ವೈಗ್ಲೆ ಮತ್ತು ಮ್ಯೆವ್‌ಗ್ಲಿಂಗ್ ಇವರನ್ನು ಇಲ್ಲಿ ಹೆಸರಿಸಬೇಕು. ವೈಗ್ಲೆ ಒಬ್ಬ ಮೇಧಾವಿ; ಭಾರತೀಯ ತತ್ವಜ್ಞಾನವನ್ನು ಆಳವಾಗಿ ಅಭ್ಯಸಿಸಿದ್ದನು. ಭಗವದ್ಗೀತೆಯ ಪ್ರಕಟಣೆಯ ಕಾಲದಲ್ಲಿ ಗ್ಯಾರೆಟ್ ಇವನ ಸಲಹೆಯನ್ನು ಯಾಚಿಸಿದುದಿದೆ. ಕನ್ನಡ ಬೈಬಲ್ ಅನುವಾದ/ಪರಿಷ್ಕರಣ ಸಮಿತಿಗೆ ಈತ ಅಧ್ಯಕ್ಷನಾಗಿದ್ದ. ಐತಿಹಾಸಿಕ ಮಹತ್ವವುಳ್ಳ ಅವನ ಒಂದು ಬರೆಹವೆಂದರೆ ಕನ್ನಡ ಸಾಹಿತ್ಯದ ಪರಿಚಯವನ್ನು ZDMG ಎಂಬ ಜರ್ಮನ್ ಪತ್ರಿಕೆಯಲ್ಲಿ ಮೊದಲ ಬಾರಿಗೆ ರೂಪಿಸಿದುದು (೧೮೪೬–೪೮) ಕನ್ನಡ ಭಾಷೆಯ ಬಗ್ಗೆಯೂ ಅದರಲ್ಲಿ ವಿವರಣೆ ಇದೆ.

ಬಾಸೆಲ್ ಮಿಶನ್ನಿನ ಮೊದಲ ಮೂರು ದಶಕಗಳ ನೇತಾರನಂತಿದ್ದ ಮ್ಯೆವ್‌ಗ್ಲಿಂಗ್ ಮಹಾ ಕರ್ತೃತ್ವಶಾಲಿ ಹಾಗೂ ಬಹುಮುಖ ಪ್ರತಿಭೆಯುಳ್ಳವ. ಜೊತೆಗೆ ಸಾಹಸ ವೃತ್ತಿ, ಭಾವುಕತನಗಳೂ ನೆಲೆಗೊಂಡಿದ್ದುವು. ಕರ್ನಾಟಕದಲ್ಲಿ ತಾನು ಇದ್ದ ೨೫ ವರ್ಷಗಳ ಕಾಲದಲ್ಲಿ (೧೮೩೬–೩೮: ಧಾರವಾಡ. ೧೮೩೮–೫೧: ಮಂಗಳೂರು. ೧೮೫೨–೫೮: ಕೊಡಗು). ಧರ್ಮಪ್ರಸಾರ, ಶಿಕ್ಷಣ ಮತ್ತು ಸಾಹಿತ್ಯರಚನೆ–ಈ ಮೂರೂ ರಂಗಗಳಲ್ಲಿ ಅನುಪಮ ಕಾರ್ಯವೆಸಗಿದ್ದಾನೆ. ಮಿಶನರಿಗಳ ಕನ್ನಡ ಮತ–ಪುಸ್ತಕಗಳು ಸಾಮಾನ್ಯವಾಗಿ ಅನುವಾದಗಳಾಗಿದ್ದರೆ, ಈತ 'ಹೃದಯ ದರ್ಪಣ' 'ಈರಾರು ಪತ್ರಿಕೆ' 'ದೈವ ವಿಚಾರಣೆ' ಮುಂತಾದ ಸ್ವತಂತ್ರವೆನ್ನಬಹುದಾದ ಕೃತಿಗಳನ್ನು ರಚಿಸಿದನು. ಬಾಸೆಲ್ ಮಿಶನ್ನಿನವರು ಹಾಡುವ ಅನೇಕ ಕನ್ನಡ ಗೀತಗಳು ಇವನಿಂದ ಅನುವಾದಗೊಂಡವುಗಳು. ಜೊತೆಗೆ ತನ್ನ ಜ್ಞಾತಿಬಂಧು ವೈಗ್ಲೆಯೊಡನೆ 'ದೇಶಾಂತ್ರಿಯ ಪ್ರಯಾಣ' ವೆಂಬ ಪುಸ್ತಕಕ್ಕಾಗಿ ಸುಮಾರು ಇಪ್ಪತ್ತು ತಾತ್ವಿಕ ಹಿನ್ನೆಲೆಯ ಗೀತೆಗಳನ್ನು ರಚಿಸಿದ್ದಾನೆ (೧೮೪೮).

ಧಾರವಾಡಕ್ಕೆ ಬಂದ ವರ್ಷವೆ ಒಂದು ಇಂಗ್ಲಿಷ್ ಶಾಲೆಯನ್ನು ನಡೆಸುತ್ತಿದ್ದನು. ಕೊಡಗಿನಲ್ಲಿಯೂ ಶಿಕ್ಷಣ ಕಾರ್ಯದಲ್ಲಿ ತೊಡಗಿದುದರ ಪ್ರಯುಕ್ತ ಮದ್ರಾಸ ಸರಕಾರವು ಅವನನ್ನು ಅಲ್ಲಿಯ ಶೈಕ್ಷಣಿಕ ಅಧಿಕಾರಿಯಾಗಿ ಕೆಲ ಕಾಲ ನೇಮಿಸಿದ್ದಿತು. ಕನ್ನಡ ಪತ್ರಿಕಾ ಪ್ರಪಂಚಕ್ಕೆ ಅವನೇ ಮೊದಲಿಗನು. ೧೮೪೩–೪೪ರ 'ಮಂಗಳೂರು ಸಮಾಚಾರ' 'ಕನ್ನಡ ಸಮಾಚಾರ' ಪತ್ರಿಕೆಗಳು, ಅನಂತರದ 'ಕನ್ನಡ ಸುವಾರ್ತಿಕ' (೧೮೫೭)– ಇವನ್ನು ಸಂಪಾದಿಸಿ ಆದ್ಯ ಪತ್ರಿಕೋದ್ಯಮಿಯಾಗಿದ್ದಾನೆ. ಮ್ಯೆವ್‌ಗ್ಲಿಂಗ್ ಕನ್ನಡ ಲಿಪಿ ಸುಧಾರಣೆಗೂ ಮನಸ್ಸುಗೊಟ್ಟು ಇಡೀ 'ರಾಜೇಂದ್ರನಾಮೆ'ಯನ್ನು 'ಸುಧಾರಿತ' ಲಿಪಿಯಲ್ಲಿ ಮುದ್ರಿಸಿಬಿಟ್ಟನು (೧೮೫೮). ನಾಡಿನ ಮೂಲೆ ಮೂಲೆಗಳಲ್ಲಿ

ಸಂಚರಿಸಿದಾಗ ಸಂಗ್ರಹಿಸಿದ ಮೂರು ಸಾವಿರ ಗಾದೆಗಳ ಸಂಕಲನವನ್ನು ಹೊರತಂದನು (೧೮೪೭). ಹೀಗೆ ಗಾದೆಗಳ ಸಂಗ್ರಹ ಕಾರ್ಯದಲ್ಲಿಯೂ ಇವನದೇ ಅಗ್ರಸ್ಥಾನ. ಶುದ್ಧ ಸಾಹಿತ್ಯಿಕ ದೃಷ್ಟಿಯಿಂದ ಸಂದ ಮೆವ್‌ಗ್ಲಿಂಗನ ಸೇವೆಯೆಂದರೆ 'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲಿಕೆಯನ್ನು ಆರಂಭಿಸಿ, ಜೈಮಿನಿ ಭಾರತ, ಚೆನ್ನಬಸವ ಪುರಾಣ, ಬಸವಪುರಾಣ, ತೊರವೆರಾಮಾಯಣ, ದಾಸರ ಹಾಡುಗಳು, ಕುಮಾರವ್ಯಾಸ ಭಾರತ–ಇವುಗಳನ್ನು ಮುದ್ರಿಸುವಲ್ಲಿ ವಿಶೇಷ ಪರಿಶ್ರಮಪಟ್ಟನು. ಮುಂದುವರಿದು, ಆ ಕೃತಿಗಳಲ್ಲಿಯ ಕೆಲವನ್ನು ಯಾವುದೇ ಮತೋದ್ದೇಶವಿಲ್ಲದೆ, ತನ್ನ ನಿವೃತ್ತಿ ಕಾಲದಲ್ಲಿ ಜರ್ಮನ್ ಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಿದನು, ಮೇಲೆ ಹೇಳಿದ ZDMG ಪತ್ರಿಕೆಯಲ್ಲಿ, (೧೮೬೨–೬೫).

ಕಿಟೆಲ್ ಮಂಗಳೂರಿಗೆ ಹೊಸತಾಗಿ ಬಂದಾಗ ಮೈವ್‌ಗ್ಲಿಂಗನದೇ ಹಿರಿಯತನ. ಅವನ ವಿವಿಧ ಸಾಹಿತ್ಯಿಕ ಗೈಮೆಯಿಂದ ಕಿಟೆಲ್ ಸ್ಫೂರ್ತಿ, ಪ್ರೇರಣೆ ಮತ್ತು ಸಕ್ರಿಯ ಸಹಾಯವನ್ನು ಪಡೆದುದು ನಿಶ್ಚಿತ. ಆ ದೃಷ್ಟಿಯಿಂದ ಮ್ಯೆವ್‌ಗ್ಲಿಂಗ್ ಕಿಟೆಲರಿಗೆ ಮಾರ್ಗದರ್ಶಿ ಹಾಗೂ ಗುರು, ಎನ್ನಬಹುದು. ಮ್ಯೆವ್‌ಗ್ಲಿಂಗ್ ಸ್ವದೇಶಕ್ಕೆ ಹಿಂತಿರುಗಿದ ಮೇಲೆ ಕಿಟೆಲ್ ಕನ್ನಡ ನಿಘಂಟುವಿನ ಕಾರ್ಯವನ್ನು ಕೈಕೊಳ್ಳುವ ವಿಚಾರದಲ್ಲಿ ವಿಶೇಷವಾದ ಪ್ರೋತ್ಸಾಹ ಹಾಗೂ ಬೆಂಬಲವನ್ನು ನೀಡಿದ್ದಾನೆ.

ಮೇಲಣ ಹಾರುನೋಟದ ವಿವರಣೆಯಿಂದ ಕಿಟೆಲ್–ಪೂರ್ವದ ಹೊಸಗನ್ನಡ ವಾಙ್ಮಯದ ಸ್ವರೂಪದ ಸ್ಥೂಲ ಕಲ್ಪನೆ ಬಂದಿರಲು ಸಾಕು. ಹೊಸಗನ್ನಡ ಕಂದನನ್ನು ಬ್ರಿಟಿಶ್ ಅಧಿಕಾರಿಗಳು ಮತ್ತು ಮಿಶನರಿ ಜನರು ಕೈ ಹಿಡಿದು ಮುನ್ನಡೆಸಿದ ಕಾಲವದು. ದೇಶೀಯರು ಸಹ ತಮ್ಮದೇ ಆದ ರೀತಿಯಲ್ಲಿ ಸಾಹಿತ್ಯ ರಚನೆಗೆ ತೊಡಗಿದ್ದರೆನ್ನುವುದನ್ನೂ ತುಸು ನೋಡಿದ್ದೇವೆ. ಗಮನಿಸಬೇಕಾದ ಮಾತೆಂದರೆ, ಈ ಅವಧಿಯಲ್ಲಿ ಸ್ವತಂತ್ರ ವಿಚಾರದ ಅಭಿವ್ಯಕ್ತಿಯು ತಲೆದೋರದೆ ಅನುವಾದ, ಪರಿಷ್ಕರಣಗಳು ಸಾಹಿತ್ಯ ರಚನೆಯ ಮುಖ್ಯ ಮಾರ್ಗಗಳಾಗಿದ್ದುವು. ಆಗಿನ ಬರಹಕ್ಕೆ ಪ್ರೇರಣೆಗಳೆಂದರೆ–ಶಿಕ್ಷಣ ಹಾಗೂ ಧರ್ಮ ಪ್ರಸಾರ. ಇತ್ತ ಹೊಸ ಮಿಶನರಿಗಳ ಹಾಗೂ ಅಧಿಕಾರಿಗಳ ಕನ್ನಡ ವ್ಯಾಸಂಗಕ್ಕಾಗಿ ಮತ್ತು ಎಳೆಯರ ವಿದ್ಯಾಭ್ಯಾಸಕ್ಕಾಗಿ ಪಠ್ಯಪುಸ್ತಕಗಳ ರಚನೆಯು ಶೈಕ್ಷಣಿಕ ಬರವಣಿಗೆಯಾಗಿದೆ. ಮಿಶನರಿ ಜನರ ಮತಪ್ರಸಾರ ದೃಷ್ಟಿಯ ಪುಸ್ತಕ/ಪುಸ್ತಿಕೆಗಳೂ, ಹಿಂದೂ ವಲಯದಿಂದ ಹೊರಬಂದ ಪುರಾಣ ಮತ್ತು ಶಾಸ್ತ್ರ ಗ್ರಂಥಗಳ ಗದ್ಯ, ಟೀಕಾ ರೂಪದ ಕೃತಿಗಳೂ ಧಾರ್ಮಿಕ ಸಾಹಿತ್ಯವೆನ್ನಬೇಕು. ಈ ನಿಮಿತ್ತಗಳಿಂದ ಮಹತ್ವದ ಹಲವಾರು ಪ್ರಾಚೀನ ಕೃತಿಗಳು ಬೆಳಕಿಗೆ ಬಂದು ಅವುಗಳ ವ್ಯಾಸಂಗ ನಡೆಯುವುದಕ್ಕೆ ಸಹಾಯವಾಯಿತು. ಅದರಂತೆ ಕೋಶ, ವ್ಯಾಕರಣಗಳ ರಚನೆಯ ನಿಮಿತ್ತದಿಂದ ಕನ್ನಡ ಭಾಷೆಯ ಅಧ್ಯಯನದ ಅಸ್ತಿವಾರವನ್ನು ಹಾಕಲಾಯಿತು.

ಕಿಟೆಲರ ಸಾಹಿತ್ಯ ಕಾರ್ಯವು ಇದೇ ದಾರಿಯಲ್ಲಿ ಮುಂದುವರಿಯಿತು. ಅವರ ಆರಂಭದ ಗೈಮೆಗಳಾದ ಪತ್ರಿಕೋದ್ಯಮ, ಪದ್ಯರಚನೆ, ಪಂಚತಂತ್ರಾದಿ ಪಠ್ಯಗಳ, ಗದ್ಯ-ಪದ್ಯ ಸಂಗ್ರಹಗಳ ಸಂಪಾದನೆ, ಮತೀಯ ಪುಸ್ತಕಗಳ ಅನುವಾದ, ಶಬ್ದಕೋಶ ರಚನೆ ಹಾಗೂ ಭಾಷೆ-ಸಾಹಿತ್ಯಗಳ ಕುರಿತ ಬಿಡಿ ಲೇಖನಗಳು, ಭಾರತೀಯ ತತ್ವಜ್ಞಾನದ ವಿವೇಚನೆ-ಇವೆಲ್ಲ ಅಂಗಗಳಲ್ಲಿ ಅವರಿಗಿಂತ ಮುಂಚೆ ಅಷ್ಟಿಷ್ಟು ಕೃಷಿಯಾಗಿದ್ದಿತು. ಅಂತರ ಇಷ್ಟೇ; ಕಿಟೆಲರ ವೈದುಷ್ಯ ಹಾಗೂ ಶಾಸ್ತ್ರೀಯ ದೃಷ್ಟಿ-ಇವುಗಳಿಂದ ಅಂಥ ಕೃತಿಗಳ ಮಟ್ಟ ಮೇಲೇರಿತು. ಗುಣಗೌರವ ಹೆಚ್ಚಿತು.

# ಪ್ರಕರಣ – 2

## ಫರ್ಡಿನಾಂಡ್ ಕಿಟೆಲರ ಆರಂಭದ ಜೀವನ

ಕಿಟೆಲ್, ಕ್ರಿಸ್ತ, ಕನ್ನಡ, ಕವನ ಮತ್ತು ಕೋಶ – ಇವು ಐದೂ 'ಕ' ಕಾರದ ಶಬ್ದಗಳು. ಶಾಬ್ದಿಕವಾಗಿ ಅಲ್ಲದೆ, ಪರಸ್ಪರ ಸಂಬಂಧದಲ್ಲಿಯೂ ಅವುಗಳಲ್ಲಿ ಅನ್ಯೋನ್ಯತೆ ಇದೆ. ಕಿಟೆಲ್ ಕ್ರಿಸ್ತನ ಸಂದೇಶವನ್ನು ಸಾರುವುದಕ್ಕೆಂದು ಕರ್ನಾಟಕಕ್ಕೆ ಬಂದರು. ಕನ್ನಡವನ್ನು ಆಳವಾಗಿ ಅಭ್ಯಸಿಸಿ ಗ್ರಂಥ ಸಂಪಾದನೆ ಮಾಡಿದರು. ಅದಕ್ಕೆ ಮುಕುಟವಿಟ್ಟಂತೆ ಕನ್ನಡ ಕೋಶವನ್ನು ರಚಿಸಿದರು. ರೆವರೆಂಡ್ ಆಗಿ ಇಲ್ಲಿಗೆ ಬಂದು ಕನ್ನಡ, ವಿಷಯಕವಾದ ಡಾಕ್ಟರೇಟನ್ನು ಪಡೆದರು. ಅವರದು ಅನನ್ವಿತ ವ್ಯಕ್ತಿತ್ವದ ಜೀವನ ಹಾಗೂ ಮೌಲಿಕ ಕಾರ್ಯದ ಸಾಧನೆ.

ಉತ್ತರ ಜರ್ಮನಿಯ ರೆಸ್ಟರ್‌ಹಾಫ್ ಎಂಬಲ್ಲಿ ದಿನಾಂಕ ೭ ಏಪ್ರಿಲ್ ೧೮೩೨-ರಂದು ಜನನ. ತಂದೆ ಗಾಟ್‌ಫ್ರೀ ಕಿಟೆಲ್; ತಾಯಿ ಹೆಲೆನ್. ಮಗುವಿಗೆ ಫರ್ಡಿನಾಂಡ್ ಎಂದು ನಾಮಕರಣ ಮಾಡಿದರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಅವನು, ನೆರೆಯ ಊರಾದ ಔರಿಕ್ ಎಂಬಲ್ಲಿ–ಅಜ್ಜನಿರುವ ಕಾರಣದಿಂದ–ಶಿಕ್ಷಣವನ್ನು ಮುಂದುವರಿಸಿದ. ತಂದೆ ತಾಯಿಗಳ ಕಣ್ಣರಿಕೆಯಲ್ಲಿ ಬೆಳೆಯದಿದ್ದ ಕಾರಣ, ತುಸು ಹಟಮಾರಿ ಪ್ರವೃತ್ತಿ ಕಂಡು ಬಂದಿತು.

ಅಲ್ಲಿಯ ಶಾಲೆಯಲ್ಲಿ ಅವನ ಕೆಲವು ಸ್ವಭಾವ ವಿಶೇಷತೆಗಳು ವ್ಯಕ್ತವಾದುವು. ಆತ ಶಾಂತಸ್ವಭಾವದವ; ತುಸು ಸಂಕೋಚ ಪ್ರವೃತ್ತಿಯವನೂ ಹೌದು. ಮಿತಭಾಷಿ; ವ್ಯರ್ಥವಾದ ಮಾತಿಗೆ ತೊಡಗುತ್ತಿದ್ದಿಲ್ಲ. ಮೋಜಿನ ಐಷಾರಾಮದ ವೃತ್ತಿ ಅವನಿಗೆ ಸೇರದು.

ಆದರೆ ಅವನದು ಕುಶಾಗ್ರ ಬುದ್ಧಿ. ಹಿಬ್ರೂ, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಬಲು ಬೇಗ ಪ್ರವೀಣನಾದ. ಅವನ ವಿದ್ಯಾಪ್ರಗತಿಯು ಮುಖ್ಯಾಧ್ಯಾಪಕರಿಂದ "never less than good" ಎಂಬ ಹೊಗಳಿಕೆಗೆ ಪಾತ್ರವಾಗಿತ್ತು. ಈ ಮಧ್ಯೆ ಅವನು ಗಂಭೀರ ಸ್ವರೂಪದಲ್ಲಿ ಬೇನೆ ಬಿದ್ದನು. ಜ್ವರದ ತಾಪದಿಂದ ಕನವರಿಸುತ್ತಿದ್ದನು. ಆ ಕಾಲಕ್ಕೆ ಅವನಲ್ಲಿ ದೈವಭಕ್ತಿ ನೆಲೆಗೊಂಡಿತೆಂದು ಹೇಳಲಾಗುತ್ತದೆ. ಬೈಬಲನ್ನು ಪಠಣ ಮಾಡುವುದು, ಕ್ರಿಸ್ತನ ಜೀವನವನ್ನು ಮೆಲುಕು ಹಾಕುವುದು ಅವನ ಮನಸ್ಸಿಗೆ ನೆಮ್ಮದಿಯನ್ನು ಕೊಡುವಂಥದ್ದಾಗಿತ್ತು. ಆ ಭಾವನಿರ್ಭರತೆಯಲ್ಲಿ ಕೆಲವು ಸ್ತೋತ್ರಗಳನ್ನೂ ತನ್ನ ಮಾತೃಭಾಷೆಯಲ್ಲಿ ರಚಿಸಿದ್ದನು.

ಫರ್ಡಿನಾಂಡನಿಗೆ ಈಗ ೧೭ ವರುಷ. ಇನ್ನೂ ಮೂರು–ನಾಲ್ಕು ವರ್ಷ ಕಲಿಯಬೇಕಿತ್ತು. ಅದನ್ನು ನಿಲ್ಲಿಸಿ ಮಿಶನರಿ ತರಬೇತಿ ಹೊಂದಬೇಕೆಂದು ಆಶಿಸಿದ.

ಶಾಲೆಯ ಮುಖ್ಯಸ್ಥರಿಗೆ ಇವನ ವಿಚಾರ ತಿಳಿದು ಅಚ್ಚರಿಪಟ್ಟರು. ಬುದ್ಧಿವಂತ ಹಾಗೂ ಸುಸ್ವಭಾವದ ವಿದ್ಯಾರ್ಥಿಯಾಗಿದ್ದ ಅವನನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. ವಿವರಣೆ ಕೇಳಿದ ಮೇಲೆ ಅವನ ಧಾರ್ಮಿಕ ಶ್ರದ್ಧೆಯ ಆಳವನ್ನು ಅರಿತರು. ಅವನಿಗೆ ಅನುಮತಿ ಕೊಡುವ ತಮ್ಮ ಶಿಫಾರಸಿನಲ್ಲಿ ಹೀಗೆ ಹೇಳಿದರು.

> His interest in religion is not merely a theoretical one. Rather he understood it basically as a conditon of life. A convinced piety is the principal feature of his character. He is mentally and physically fit for his self-chosen profession.

ಈ ಮಧ್ಯೆ ಅವನ ಹಿರಿಯರು ಎತ್ತರದ ನಿಲುವಿನ ಫರ್ಡಿನಾಂಡ್ ಮಿಲಿಟರಿಯಲ್ಲಿ ಸೇರಿಸಬೇಕೆಂದು ಯೋಜಿಸಿದ್ದರು. ಆದರೆ ಅವನು ಸಮೀಪ-ದೃಷ್ಟಿ ದೋಷದವನೆಂದು ಕಂಡು ಬಂದದ್ದರಿಂದ (short sight) ಆ ವಿಚಾರವನ್ನು ಕೈಬಿಡಬೇಕಾಯಿತು.

ಮಿಶನರಿ ತರಬೇತಿಗಾಗಿ ಫರ್ಡಿನಾಂಡ್ ಬಾಸೆಲ್‌ಗೆ ಹೋದ. ಆದರೆ ಸುಲಭವಾಗಿ ಪ್ರವೇಶ ಸಿಗುವುದೆಂತು? ಅವನ ಶಾಲಾ ಶಿಕ್ಷಣ ಮುಗಿದಿರಲಿಲ್ಲ. ಹದಿನೆಂಟು ತುಂಬಿರಲಿಲ್ಲ. ಆಗ ತನ್ನ ಮನವಿಯಲ್ಲಿ ಕಿಟೆಲ್ ಹೀಗೆ ನಿವೇದಿಸಿದ್ದ:

"ಶಾಲೆಯಲ್ಲಿ ಇಷ್ಟರವರೆಗೆ ನಾನು ಕಲಿತಿದ್ದರೂ ಅದೇಕೋ ನೆಮ್ಮದಿ ಎನಿಸಿಲ್ಲ. ಐಹಿಕ ಸುಖಸಾಧನಗಳು ನನಗೆ ಸೇರುತ್ತವೆಂಬುದು ನಿಜ. ಆದರೆ ಆಮೇಲೆ ಜಿಗುಪ್ಸೆ ಬಂದು ಬಿಡುತ್ತದೆ. ನಿಮ್ಮ ಸಂಸ್ಥೆಯಲ್ಲಿ ತರಬೇತಿ ಹೊಂದಿದ ಮೇಲೆಯೂ ನಾನೊಬ್ಬ ಉತ್ತಮ ಮಿಶನರಿ ಆದೇನು-ಎಂಬ ವಿಶ್ವಾಸವು ನನಗಿಲ್ಲ. ಏನೇ ಆಗಲಿ. ಆ ಮಾರ್ಗ ಹಿಡಿದ ಅನಂತರವಾದರೂ ನೆಮ್ಮದಿ ಸಿಕ್ಕೀತು."

ಕಿಟೆಲರ ಈ ಪ್ರಾಮಾಣಿಕ ನಿಲುಮೆ ಆಯ್ಕೆ ಸಮಿತಿಯವರಿಗೆ ವೇದ್ಯವಾಯಿತು. ಆ ಸಮಿತಿಯ ಮುಖ್ಯಸ್ಥರಾದ ಜೋಸೆನ್‌ಹಾನ್ಸ್ ಆ ದಿನದ ಸಭೆಯಲ್ಲಿ ಇಲ್ಲದಾಗಲೂ ಕಿಟೆಲರನ್ನು ಆಯ್ಕೆ ಮಾಡಲಾಯಿತು. ಆ ಮುಂದೆ ಅಧ್ಯಕ್ಷರಿಗೆ ಕಿಟೆಲರ ಬುದ್ಧಿಮತ್ತೆ ಹಾಗೂ ಪ್ರಾಮಾಣಿಕ ನಿಲುವಿನ ಬಗ್ಗೆ ಆದರಭಾವ ಮೂಡಿದ್ದಿತು. ಅಲ್ಲದೆ ವಿವಿಧ ಪರೀಕ್ಷೆಗಳಲ್ಲಿ ಯಾವಾಗಲೂ ಅವರು ಮೇಲಿನ ಸ್ಥಾನದಲ್ಲಿದ್ದರು.

ಮೂರು ವರ್ಷದ ಆ ಮತ ಶಿಕ್ಷಣ ಮುಗಿದ ಮೇಲೆ ಕಿಟೆಲ್ ೧೮೫೩ರ ಕೊನೆಯಲ್ಲಿ ಕನ್ನಡ ನಾಡಿಗೆ ಬಂದರು. ಧಾರವಾಡ-ಹುಬ್ಬಳ್ಳಿ, ಕೇಟಿ (ಬಡಗು ಪ್ರದೇಶ) ಮಂಗಳೂರು, ಮಡಿಕೇರಿ ಮುಂತಾದ ಊರುಗಳಲ್ಲಿ ಮತಪ್ರಸಾರ ಕಾರ್ಯ ಕೈಕೊಂಡರು.

ಆಗಿನ ದಿನಗಳಲ್ಲಿ ವಿದೇಶಗಳಿಗೆ ಹೋದ ಮಿಶನರಿಗಳ ಮದುವೆಯ ಕಾರ್ಯದಲ್ಲಿ ಕೇಂದ್ರ ಮಿಶನ್ ಸಂಸ್ಥೆ ಒಂದರ್ಥದಲ್ಲಿ ಆಸ್ಥೆಯನ್ನು ವಹಿಸುತ್ತಿತ್ತು; ಅವರ ಸಮ್ಮತಿಯಾದರೂ ಬೇಕಾಗುತ್ತಿತ್ತು. ಕಿಟೆಲರಿಗೆ ಮಲೆಯಾಳೀ ಕೋಶಕಾರ ರೆ.

ಗುಂಡರ್ಟರ ಮಗಳನ್ನು ಪ್ರಸ್ತಾಪ ಮಾಡಲಾಗಿತ್ತು. ಆದರೆ ಗುಂಡರ್ಟ ಕುಟುಂಬದವರೇ ಬೇಡ ಎಂದರಂತೆ. ಓರ್ವ ಇಂಗ್ಲಿಷ್ ಕನ್ಯೆಯದೂ ಸೂಚನೆ ಬಂದಾಗ ಅವಳೂ ನಿರಾಕರಿಸಿದಳು. ಕಿಟೆಲರ ಅಸ್ತವ್ಯಸ್ತ ವೇಷ, ನಯಗಾರಿಕೆ ಇಲ್ಲದ ಮಾತುಕತೆ ಈ ನಿರಾಕರಣೆಗೆ ಕಾರಣವಾಗಿರಬೇಕು. ಕ್ರಿ.ಶ. ೧೮೬೦ರಲ್ಲಿ ಪಾಲಿನೆ ಐಶ್ ಎಂಬವಳೊಡನೆ ಮದುವೆಯಾಯಿತು. ಇಬ್ಬರು ಮಕ್ಕಳು ಜನಿಸಿದ್ದರು. ಆದರೆ ಕೆಲ ವರ್ಷಗಳಲ್ಲಿಯೇ ಆಕೆ ತೀರಿಕೊಂಡಳು. ಆಮೇಲೆ ಅವಳ ತಂಗಿ ಜ್ಯೂಲಿಯನ್ನು ಮದುವೆಯಾದರು. ಕುಟುಂಬ ಬೆಳೆಯಿತು.

ಕಿಟೆಲ್ ಇಲ್ಲಿಗೆ ಬರುವ ಇಪ್ಪತ್ತು ವರ್ಷಗಳಿಗೆ ಮುಂಚೆ (೧೮೩೪) ಬಾಸೆಲ್ ಮಿಶನ್ನಿನವರು ಮಂಗಳೂರಿನಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿದ್ದರಷ್ಟೆ. ಮುಂದೆ ನಾಡಿನ ಉತ್ತರ ಭಾಗಕ್ಕೆ ಆ ಮೇಲೆ ಕೊಡಗು, ಬಡಗು ಪ್ರದೇಶಗಳಿಗೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದ್ದರು. ಆಗಿನ ಅವರ ಮತಪ್ರಸಾರದ ಕಾರ್ಯ ಮೂರು ನಿಟ್ಟಿನಲ್ಲಿ ಸಾಗಿ ಬಂದಿತು. ಒಂದನೆಯದು, ಪ್ರಾಥಮಿಕ ಮಟ್ಟದ್ದು: ಸಂತೆ, ಜಾತ್ರೆಗಳಲ್ಲಿ ಜನ ನೆರೆದಾಗ, ಕ್ಷೇತ್ರ ಸ್ಥಳಗಳಲ್ಲಿ ಉತ್ಸವ ನಡೆದಾಗ ಅಲ್ಲಿಗೆ ಹೋಗಿ, ಕ್ರೈಸ್ತ ಮತದ ಮೇಲ್ಮೆಯನ್ನು ತಮ್ಮದೇ ಆದ ವಿಶಿಷ್ಟ ಕನ್ನಡದಲ್ಲಿ ಸಾರುವುದು.

ಎರಡನೆಯದು, ಬೈಬಲ್ ಮತ್ತು ಇತರ ಮತೀಯ ಕೃತಿಗಳನ್ನು ಕನ್ನಡದಲ್ಲಿ ಅನುವಾದಿಸಿ, ಮುದ್ರಿಸಿ ಪ್ರಕಟಿಸುವುದು.

ಮೂರನೆಯದು, ಶಾಲೆಗಳನ್ನು ಆರಂಭಿಸಿ ಇಂಗ್ಲಿಷ್ ಮುಂತಾದ ಪಾಶ್ಚಾತ್ಯ ಕ್ರಮದ ಶಿಕ್ಷಣ ಕೊಡುವುದು: ಆ ಬೋಧನೆಯಲ್ಲಿ ಸ್ವಮತೀಯ ದೃಷ್ಟಿಕೋಣದ ವಿಚಾರಗಳನ್ನು ತರುವುದು.

ಈ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳು ಬೇಕಲ್ಲವೆ? ಅದನ್ನು ಸಿದ್ಧಪಡಿಸುವ ಕೆಲಸವೂ ಮಿಶನ್ನಿನವರದೇ ಆಗಿದ್ದಿತು. ಅವುಗಳ ಉತ್ತಮಿಕೆಯನ್ನು ಗಮನಿಸಿ ಆಗಿನ ಮದ್ರಾಸ ಸರಕಾರವು ಇವರ ಹಲವಾರು ಪಠ್ಯಪುಸ್ತಕಗಳನ್ನು ಅಂಗೀಕರಿಸಿ ಬಳಸತೊಡಗಿತು. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಇದುವೆ ಪುಸ್ತಕೋದ್ಯಮದ ಮೊದಲ ಹಂತ ಎಂದು ಹೇಳಲಡ್ಡಿಯಿಲ್ಲ.

ಕಿಟೆಲರಿಗೆ ಮುಂಚೆ, ಮೇಲೆ ಹೇಳಿದ ರೀತಿಯಲ್ಲಿ ಹಲವಾರು ಜನ ಬಾಸೆಲ್‌ದಿಂದ ಬಂದ ಮಿಶನರಿಗಳು ಕಾರ್ಯನಿರತರಾಗಿದ್ದರು. ಐವತ್ತಕ್ಕೂ ಮೇಲ್ಪಟ್ಟು ಶಾಲೆಗಳು ಸ್ಥಾಪಿತವಾಗಿದ್ದವು. ಪುಸ್ತಕ ಪ್ರಕಟಣೆ ಮಾತ್ರ ವ್ಯವಸ್ಥಿತವಾಗಿ ರೂಪುಗೊಂಡಿರಲಿಲ್ಲ. ಈ ಕಾರ್ಯದಲ್ಲಿ ಆ ಕಾಲಕ್ಕೆ ತೊಡಗಿದವರಾದ ಮೈವ್‌ಗ್ಲಿಂಗ್ ಅವರು ಮಿಶನ್ನಿನ ಸಾಹಿತ್ತಿಕ ಕಾರ್ಯಕ್ಕೆ ಅಡಿಪಾಯ ಹಾಕಿದ್ದರು. ಕಿಟೆಲ್ ಅದರ ಮೇಲೆ ವಿದ್ವತ್ತಿನ ಸೌಧವನ್ನೇ ನಿರ್ಮಿಸಿದರೆನ್ನಬೇಕು. ವಿವರವಾಗಿ ನೋಡುವಾ.

ಬಾಸೆಲ್‌ನಲ್ಲಿ ಇದ್ದಾಗಲೇ ಕಿಟೆಲರು ಧಾರವಾಡಕ್ಕೆ ಹೋಗಿ ಅಲ್ಲಿ ಮತ ಪ್ರಚಾರಕ್ಕೆ ತೊಡಗಬೇಕೆಂದು ನಿರ್ಣಯವಾಗಿದ್ದಿತು. ಈ ಮೊದಲ ಭಾರತ ಪ್ರವಾಸದಲ್ಲಿ ಅವರ ಜೊತೆಗೆ ಇನ್ನು ಮೂವರು ಬಾಸೆಲಿಗರು ಇದ್ದರು. ಕಾಫ್‌ಮನ್ ಎಂಬ ಹೊಸ

ಮಿಶನರಿ. ಸೋಫಿ ಎಂಬವಳು ಮಲೆಯಾಳಕ್ಕೆ ಹೊರಟವಳು ಮತ್ತು ಮಿಶನರಿ ವುರ್ತ್ ಎಂಬವನನ್ನು ಹುಬ್ಬಳ್ಳಿಯಲ್ಲಿ ಮದುವೆಯಾಗಲಿದ್ದ ಫೆನ್ನಾ ಎಂಬ ಕನ್ಯಾಮಣಿ. ಆದರೆ ಮುಂಬಯಿಗೆ ಬಂದು ಅಲ್ಲಿಂದ ದಕ್ಷಿಣದತ್ತ ನಾವೆಯಲ್ಲಿ ಹೊರಟಾಗ ಕಿಟೆಲರಿಗೆ ಭರ್ತಿ ಜ್ವರ. ಹವೆ, ವಾತಾವರಣ ಬದಲಾದಾಗ ಅನೇಕ ಜನ ಪಾಶ್ಚಾತ್ಯ ಮಿಶನರಿಗಳಿಗೆ ಹೀಗಾಗುವುದು ಮಾಮೂಲಾಗಿದ್ದಿತು. ಕಿಟೆಲ್ ಹೊನ್ನಾವರದಲ್ಲಿ ರೆ. ಅಮ್ಮಾನ್ ಎಂಬ ಸಹೋದ್ಯೋಗಿಯವರಲ್ಲಿ ತಂಗಿ, ಜ್ವರ ನಿಂತ ಮೇಲೆ ಧಾರವಾಡಕ್ಕೆ ಬಂದರು. (ಡಿಸೆಂಬರ್ ೧೮೫೩). (ಹೊನ್ನಾವರದಲ್ಲಿ ಮಿಶನ್ನಿನ ಆವಾಸವನ್ನು ಕಟ್ಟುವುದಕ್ಕೆ ಕಿಟಲರ ತಂದೆ ತಾಪಿದ್ದ ಸಂಸ್ಥೆಯ ವತಿಯಿಂದ ಆರ್ಥಿಕ ಸಹಾಯ ಒದಗಿಸಿದ್ದರು).

ಹುಬ್ಬಳ್ಳಿ-ಧಾರವಾಡಗಳಲ್ಲಿ ಅವರು ಎರಡು ವರ್ಷ ಇದ್ದರು. ತಾವು ಹಳ್ಳಿಗಳಲ್ಲಿ ಸುತ್ತಾಡಬೇಕು. ಜನಗಳೊಂದಿಗೆ ಮುಕ್ತವಾಗಿ ಬೆರೆಯಬೇಕು; ಮಾತನಾಡಿಸಬೇಕು- ಎಂಬಲ್ಲಿ ಅವರಿಗೆ ಅದಮ್ಯ ಉತ್ಸಾಹ. ಹಾಗಾಗಿ ೧೮೫೪ರ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಹುಬ್ಬಳ್ಳಿಯ, ಸಮೀಪದ ೭-೮ ಹಳ್ಳಿಗಳಿಗೆ ಪಾಲ್-ಎಂಬ ದೇಶೀಯ ಪ್ರಚಾರಕನೊಂದಿಗೆ ಹೋಗಿ ಬಂದರು. ಮಾತ್ರವಲ್ಲ ತಮ್ಮೆರಡು ತ್ರೈಮಾಸಿಕ ವರಿದಿಗಳಲ್ಲಿ ಅದರದ್ದೇ ಪ್ರಸ್ತಾಪ. ತಾವು ಕಂಡ ಇಲ್ಲಿಯ ಸುಗ್ಗಿಯ ದಿನಗಳು, ನೀರಿನ ಬರ, ಕೀಟ-ಪಕ್ಷಿಗಳನ್ನೂ ಸಹ ವರ್ಣಿಸಿದ್ದಾರೆ. ಆಡುಗಳು ಗಿಡದ ಹಸುರೆಲೆಗಳನ್ನು ಜಗಿದು ತಿನ್ನುವುದನ್ನು ಕೂಡಾ ಅದರಲ್ಲಿ ಉಲ್ಲೇಖಿಸಿದ್ದಾರೆ.

ಆ ವರದಿಗಳಲ್ಲಿ ತಾನು ಯಾರು ಯಾರನ್ನು ಕಂಡು ಮಾತಾಡಿಸಿದೆ ಎಂಬುದನ್ನೂ ಕಿಟೆಲ್ ಹೇಳಿದಾಗ ಅವರು ಜನರನ್ನು ಸಂಪರ್ಕಿಸಿದ ರೀತಿ ಮೇಲಿನವರಿಗೆ ಹಿಡಿಸಲಿಲ್ಲ. ಸಾಲದ್ದಕ್ಕೆ ಕೆಳಮಟ್ಟದ ಕೆಲಸಗಳಿಗೆ ತಾನೇ ಜನಗಳನ್ನು ನಿಯಮಿಸುವುದು, ಹಳ್ಳಿಯ ಮಕ್ಕಳನ್ನು ತಾವಾಗಿ ಮುಗಿಬಿದ್ದು ಮುದ್ದು ಮಾಡುವುದು-ಇವೇ ಮುಂತಾದ ಸ್ವತಂತ್ರ ರೀತಿಯ ನಡವಳಿಕೆಗಳನ್ನು ಮೇಲೆ ಹೇಳಿದ ಜೋಸೆನ್‌ಹಾನ್ಸ್ - ಕಿಟೆಲರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನುಳಿಸಿಕೊಂಡೇ, ಅವರಿಗೆ ಎಚ್ಚರ ಹೇಳಿದರು. ಹಳ್ಳಿಗರನ್ನು ತುಸು ದೂರ ಇರಿಸಿಕೊಂಡು ವ್ಯವಹರಿಸುವುದನ್ನು ಬಿಟ್ಟು 'You have tread on the devil's own ground' ಎಂಬುದಾಗಿ ಆಕ್ಷೇಪಿಸಿದರು. ಉಳಿದ ಸಹೋದ್ಯೋಗಿಳು ಜನರಿಂದ ತುಸು ಅಂತರದಲ್ಲಿದ್ದುಕೊಂಡೇ ಮತಪ್ರಚಾರ ಮಾಡುತ್ತಿದ್ದರಲ್ಲವೆ? ಕಿಟೆಲರ ಈ ತದ್ವಿರುದ್ಧ ವರ್ತನೆಯ ಹಿಂದೆ, ತಾನು ಏನಾದರೂ ಸ್ವಂತಿಕೆಯುಳ್ಳದ್ದನ್ನು ಮಾಡಬೇಕೆಂಬ ವಿಚಾರ ಬಲವಾಗಿದ್ದಿತು.

ಹಳ್ಳಿಗಳಿಗೆ ಹೋದಾಗ ಮತಪ್ರಚಾರವನ್ನೇನೊ ಮಾಡತೊಡಗಿದರು. ಆದರೆ ಕಿಂಚಿತ್ತಾದರೂ ಯಶಸ್ಸು ಸಿಗಲಿಲ್ಲ. ಅವರು ಆರಂಭ ಮಾಡುತ್ತಿದ್ದ ಕ್ರಮವೇ ವಿಶಿಷ್ಟವಾಗಿದ್ದಿತು.

"ನೀವು ನಿಮ್ಮ ದೇವರನ್ನು ನಂಬುತ್ತೀರಾ?"

"ನೀವು ಆಯುಷ್ಯದಲ್ಲಿ ತುಂಬಾ ತಪ್ಪುಗಳನ್ನು ಮಾಡುತ್ತಿದ್ದೀರಿ. ಅವುಗಳನ್ನು ನಿವಾರಿಸಲು ನಿಮಗೆ ಯಾರಿದ್ದಾರೆ?"

"ನೀವು ಏಸುವಿನ ಹೆಸರನ್ನು ಕೇಳಿದ್ದೀರಿ. ಅವನು ನಿಮಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ್ದಾನೆ. ಅವನನ್ನು ಯಾಕೆ ನಂಬಬಾರದು?"

ಹೀಗೆ ನೇರವಾಗಿ, 'ಒರಟಾಗಿ' ಕೇಳುತ್ತಾ ಹೋದರೆ ಸಾಮಾನ್ಯ ಜನಕ್ಕೆ ಏನೆನಿಸೀತು? ತನ್ನ ಮಾತಿನ ಸಂವಾದದ ಪರಿಣಾಮ ಕೇಳುಗರ ಮೇಲೆ ಹೇಗಾಗುವುದೆಂಬ ಕಲ್ಪನೆ ಅವರಿಗೆ ಬರಲೇ ಇಲ್ಲವೇನೋ!

ಮತಾಂತರದ ಪ್ರಸ್ತಾಪ ಬಂದಾಗ ಕೆಲವು ಜನರು ತೋರಿದ ಪ್ರತಿಕ್ರಿಯೆಗಳ ಮಾದರಿ ಇದು:

–ಹೋ! ನಾನು ಎಂದೋ ಏಸುವಿನ ಅನುಯಾಯಿಯಾಗಿಬಿಟ್ಟಿದ್ದೇನೆ.

–ಏಸುವು ಪುನರ್ಜನ್ಮ ತಾಳಿದ ಎನ್ನುತ್ತೀರಿ. ನಮಗೆ ಖಾತ್ರಿಯಾಗಬೇಕಾದರೆ ಈಗ ದರ್ಶನ ಕೊಡುವನೇನು?

–ನೀವು ಹೀಗೆಲ್ಲ ನಮ್ಮ ಧರ್ಮ, ದೇವರುಗಳ ಟೀಕೆ ಮಾಡುತ್ತೀರಿ. ಅದಕ್ಕೇ ಈ ವರ್ಷ ಮಳೆ ಬೀಳಲಿಲ್ಲ.

–ನೀವು ನನಗೆ ಪ್ರತೀ ತಿಂಗಳು ೨೦ ರೂ. ಕೊಡ್ತೇವಿ ಅಂತ ಬರೆದು ಕೊಟ್ಟರೆ ಈಗಲೇ ನಿಮ್ಮ ಮತಕ್ಕೆ ಸೇರ್ತೇನಿ!

ತಮ್ಮಿಂದ ಮತಾಂತರದ ಕೆಲಸ ಆಗದೇ ಇದ್ದಾಗ, ಕಿಟೆಲರು ಎಣಿಸಿದ್ದು ಹೀಗೆ: "ಇಲ್ಲಿಯ ಸಾಮಾನ್ಯ ಜನರು 'ಬಡವರು, ಅಜ್ಞಾನಿಗಳು'. ಮಿಶನರಿಗಳು 'ತಾವು ಎತ್ತರದವರು; ಹೆಚ್ಚು ತಿಳಿದವರು' ಎಂಬ ನಿಲುವಿನಿಂದ ವರ್ತಿಸಿದರೆ ತಪ್ಪಾಗುತ್ತದೆ. ಅದರಿಂದಾಗಿ ಕೆಲಸ ಕೈಗೂಡುತ್ತಿಲ್ಲ".

ಒಮ್ಮೆ ಹುಬ್ಬಳ್ಳಿಯ ಓರ್ವ ವೀರಶೈವ ಸ್ವಾಮಿಗಳಲ್ಲಿಗೆ ಹೋಗಿ, ಕ್ರೈಸ್ತಧರ್ಮದ, ಹಾಗೂ ಪಾಪ–ಪುಣ್ಯಗಳ ವಿಷಯ ಹೇಳತೊಡಗಿದರು. ಅವರು ತುಂಬಾ ಆಸಕ್ತಿಯಿಂದ ಕೇಳುವಂತೆ ಕಂಡರು. ಸರಿ, ಅವರ ಮಠದಲ್ಲಿಯೇ ಕೆಲವು ದಿನ ತಂಗಿದರು. ಆದರೂ ಸ್ವಾಮಿಗಳು ತಮ್ಮ ಮತದ ವರ್ತುಲದಿಂದ ಒಂದಿನಿತೂ ಸರಿಯಲಿಲ್ಲವೆಂದು ತಮ್ಮ ವರದಿಯಲ್ಲಿ ದಾಖಲಿಸಿದ್ದಾರೆ.

'ತಾವಿದ್ದುದು ಜರ್ಮನಿಯಲ್ಲಿ. ಇಲ್ಲಿ ಅದಕ್ಕೆ ಬೇರೆಯೇ ಆಗಿರುವ ಹಿಂದುಸ್ತಾನದ ಜನರಿದ್ದಾರೆ' ಎಂಬ ಕಲ್ಪನೆಯೇ ಕಿಟೆಲರಿಗೆ ಬರುತ್ತಿರಲಿಲ್ಲವೋ ಏನೋ. ತಮ್ಮ ದೇಶದ ಜನರನ್ನು, ಅವರು ಅಪರಿಚಿತರೇ ಇದ್ದರೂ ನೇರ ರೀತಿಯಲ್ಲಿ ಮಾತನಾಡಿಸುವ ಕ್ರಮ ಹೇಗೋ, ಹಾಗೇ ನಮ್ಮ ಜನರೊಡನೆ. ತಾನೊಬ್ಬ ಕನ್ನಡಿಗನೇ ಎಂಬಂತೆ ವರ್ತಿಸಿದರೆ ಅದರ ಪ್ರತಿಕ್ರಿಯೆ ಹೇಗಿರಬಹುದೆಂದು ಯಾರೂ ಯೋಚಿಸಬಹುದು. ಇದರಿಂದಾದ ಒಂದು ಪ್ರಯೋಜನವೆಂದರೆ ಕಿಟೆಲರಿಗೆ ಕನ್ನಡದ ಆಡುನುಡಿ ಕರಗತವಾದದ್ದು.

ಇನ್ನೊಂದೆಂದರೆ ಜೊತೆಗಿನ ಸೀನಿಯರ್ ಮಿಶನರಿಗಳು ಏನಾದರೂ ಹೇಳ ಹೋದಾಗ ತನಗೆ ಸರಿಕಂಡರೆ ಮಾತ್ರ ಅದರಂತೆ ಮಾಡೋದು; ಇಲ್ಲವಾದರೆ ತನ್ನದೇ ರೀತಿಯಲ್ಲಿ ಮುಂದುವರಿಯುತ್ತಿದ್ದರು. ಹೀಗಾಗಿ ಹಲವಾರು ಸಹೋದ್ಯೋಗಿಗಳ

ಬೇಸರ, ತಿರಸ್ಕಾರಗಳನ್ನು ಎದುರಿಸಬೇಕಾಗಿ ಬಂದಿತು. ಅಂತೂ ಅಲ್ಲಿ ಬೇರೆ ಇದ್ದ ಮಿಶನರಿಗಳಿಗೆ, ಕಿಟೆಲ್ ಓರ್ವ ಬಿಗುಮಾನದ ವ್ಯಕ್ತಿಯಾಗಿ ತೋರಿ ಬಂದರು. 'ಹಟಮಾರಿ', 'ಬಟ್ಟೆ ಬರೆಗಳಲ್ಲಿ ಅಸ್ತವ್ಯಸ್ತ', ಮಿಶನರಿ ಕಾರ್ಯ ಯಥಾ ಯಥಾ', 'ಬರೀ ಓದುವವ' ಮುಂತಾಗಿ ಅವರ ಬಗ್ಗೆ ಅಭಿಪ್ರಾಯಗಳಿದ್ದುವು. ಗುಂಡರ್ಟ್ ಮತ್ತು ಮೈವ್‌ಗ್ಲಿಂಗ್ ಇಬ್ಬರಿಗೇನೇ ಅವರ ಬಗ್ಗೆ ಸಹಾನುಭೂತಿ ಇದ್ದಿತು.

ಇಂತಹ 'ಉಪದ್ವ್ಯಾಪ'ಗಳನ್ನು ಕಿಟೆಲರು ಮಾಡುವುದು ಬೇಡವೆಂದೋ ಏನೋ, ಅವರನ್ನು ಕೇಟಿ ಎಂಬಲ್ಲಿಯ (ನೀಲಗಿರಿ ಜಿಲ್ಲೆ) ತಮ್ಮ ಕೇಂದ್ರಕ್ಕೆ ವರ್ಗ ಮಾಡಲಾಯಿತು. (ನವೆಂಬರ್ ೧೮೫೬). ಇದರಿಂದ ಕಿಟೆಲರ ಮನೋವೃತ್ತಿಯಾಗಲೀ, ಕಾರ್ಯವಿಧಾನವಾಗಲೀ ಬದಲಾಗಲಿಲ್ಲ. ಅವರಿಗೆ ಇನ್ನಷ್ಟು ಸ್ವಾತಂತ್ರ್ಯವೇ ದೊರೆಯಿತೆನ್ನಬಹುದು.

ಇತ್ತ ಕಿಟೆಲ್ ಇಲ್ಲಿಯೂ ಮತಪ್ರಸಾರಕ್ಕೆ ಸಂಭಾಷಣೆಗಳ ಮೂಲಕ ಯತ್ನಿಸಿದರು. ಸುತ್ತಮುತ್ತಲಿನ ಊರುಗಳನ್ನು ಸುತ್ತಿದರು. "ಏನೂ ಪ್ರಯೋಜನ ಆಗ್ತಾ ಇಲ್ಲ" ಎಂದು ಮತ್ತೆ ಅವರಿಗೆ ಅನಿಸತೊಡಗಿತು. ಊರೂರು ಸುತ್ತುವುದು ಮಾತ್ರ ಅವರಿಗೆ ಪ್ರಿಯವಾದ ಕೆಲಸವೇ ಆಗಿತ್ತು.

ಯೌವನದ ಹಸಿಬಿಸಿ ಹುಮ್ಮಸ್ಸಿನ ದಿನಗಳವು. ದೇಶೀಯರೊಡನೆ ಒಂದೇ ಚಪ್ಪರದಲ್ಲಿ ವಾಸಿಸಬೇಕು. ಅವರ ಸಾದಾ ಅಡಿಗೆ, ಬಟ್ಟೆಬರೆ ರೂಢಿಸಿಕೊಳ್ಳಬೇಕು. ಮತ ಪರಿವರ್ತನೆಗೆ ಅದು ಸುಲಭ ಮಾರ್ಗ ಎಂದೆಲ್ಲಾ ಯೋಚಿಸಿದ್ದರು. ದಿನಾಂಕ ೧೬–೩–೧೮೫೭ರಂದು ಕೇಂದ್ರಕ್ಕೆ ಹಾಗೆಂದು ಪತ್ರ ಬರೆದರು:

I would like to be stationed permanently in a village and live there as a servent. rather than as a master; analyse, what could be done there and tour the vicinity when circumstances allow it''

ಹಾಗೆ ಬೇರೆ ಗುಡಿಸಲು ಕಟ್ಟಿಸಿಕೊಂಡು ವಾಸಿಸುತ್ತಿದ್ದಾಗ, ಮೇಲಿನವರಿಂದ "ನೀವು ಕೂಡಲೇ ಮಿಶನ್ ನಿವಾಸಕ್ಕೇ ಮರಳಬೇಕು" ಎಂದು ಆಜ್ಞೆಯಾಯಿತು!

ಇನ್ನೇನು ಮಾಡುವುದು? ಶಾಲಾ ಶಿಕ್ಷಕನಾಗಲೇ? ಹಾಗೆ ಯೋಚಿಸಿ ಕೇಟಿಯಲ್ಲಿ ಶಾಲೆಯನ್ನು ತೆರೆದರು. ಅಲ್ಲಿನ ಸ್ಥಳೀಯ ಭಾಷೆ ಬಡಗು. ಸರಿ, ಒಬ್ಬ ತರುಣನನ್ನು ಸಹಶಿಕ್ಷಕನನ್ನಾಗಿ ಗೊತ್ತು ಮಾಡಿದರು. ತಾವು? ಬರಿ ಓದುವುದರಲ್ಲಿ ಮಗ್ನರು! ಕೆಲವು ಕಾಲ ಸರಕಾರೀ ಹಾಗೂ ಮಿಶನ್ನಿನವರ ಶಾಲೆಗಳ ಇನ್‌ಸ್ಪೆಕ್ಟರರಾಗಿಯೂ ನಿಯಮಿತರಾಗಿದ್ದರು. ಅಂತೂ ಶೈಕ್ಷಣಿಕ ವಿಚಾರವೂ ಕೊನೆಗೊಂಡಿತು.

ಮೈವ್‌ಗ್ಲಿಂಗ್ ಒಬ್ಬರೇ ಅವರ ಜೀವನಕ್ರಮ, ವಿದ್ಯಾಪರಿಣತಿ–ಇವನ್ನು ಗೌರವಿಸುತ್ತಿದ್ದರು. ಅವರ ಪೂರ್ಣ ಪ್ರಯೋಜನ ಪಡೆಯುವ ದೃಷ್ಟಿಯಿಂದ ಅವರನ್ನು ಕೇಟಿಯಿಂದ ಮಂಗಳೂರಿಗೆ ವರ್ಗ ಮಾಡಿಸಿದರು. ಅಲ್ಲಿಯ ಮುದ್ರಣಕಾರ್ಯ, ವಿವಿಧ ಧಾರ್ಮಿಕ ಪುಸ್ತಕಗಳ ಪ್ರಕಟಣೆ ಮೊದಲಾದ ಕೆಲಸಕ್ಕೆ ತೊಡಗಿಸಿದರು (೧೮೬೦). ಕಿಟೆಲರ ಸಾಹಿತ್ಯಿಕ ಜೀವನ ಅಲ್ಲಿಂದ ಮೊದಲಾಯಿತು.

ಆರೇಳು ವರ್ಷ ಈ ರೀತಿ ಸಾರಸ್ವತ ಕಾರ್ಯದಲ್ಲಿ ತೊಡಗಿಯಾದ ಮೇಲೆ, ಎರಡು ವರ್ಷಗಳ ಕಾಲ (೧೮೬೬–೬೭) ಸ್ವದೇಶಕ್ಕೆ ಹೋಗಿ ಬಂದರು. ಅಲ್ಲಿ ಇದ್ದಾಗಲೂ ಭಾರತೀಯ ತತ್ವಶಾಸ್ತ್ರದ ಪುಸ್ತಕಗಳನ್ನು (ಆ ವೇಳೆಗೆ ಜರ್ಮನ್ ಭಾಷೆಯಲ್ಲಿಯೇ ಈ ವಿಷಯದ ಗ್ರಂಥಗಳ ರಚನೆಯಾಗಿತ್ತು) ಮನನ ಮಾಡಿದರು.

ಮರಳಿ ಬಂದ ಮೇಲೆ ಕೊಡಗಿನ ಮಡಿಕೇರಿಯಲ್ಲಿ ವಾಸ. ಅಲ್ಲಿಯಾದರೂ ಪ್ರವಚನ ಮುಂತಾದ್ದನ್ನು ಮಾಡಬೇಕು. ಆದರೆ ಕೇಳುಗರ ಹೃದಯಕ್ಕೆ ತಟ್ಟುವಂತೆ ಭಾಷಣ, ಸಂಭಾಷಣೆ ತನಗೆ ಸಾಧಿಸಲಿಲ್ಲ ಎಂದು ಅವರಿಗೆ ಅನಿಸುತ್ತಿತ್ತು. ಪ್ರಾಯಶಃ ಬೌದ್ಧಿಕ ಪ್ರಖರತೆ ಇರುವ ಯಾರಿಗೇ ಆಗಲಿ ಭಾವನಾತ್ಮಕ ನಿಲುವು ಹೊಂದಿಕೆಯಾಗುವುದಿಲ್ಲವೇನೊ.

ಕ್ರಿ.ಶ. ೧೮೭೨ನೆಯ ಇಸವಿ ಅವರ ಜೀವನದಲ್ಲಿ ವಿಶೇಷ ಮಹತ್ವದ್ದು. ಆ ವರ್ಷ ಸ್ಥಾಪಿತವಾದ Indian Antiquary ಪತ್ರಿಕೆಯಲ್ಲಿ ಮತ್ತು Indian Evangelical Reviewದಲ್ಲಿ ಭಾಷಾವಿಷಯಕ ಲೇಖನಗಳನ್ನು ಬರೆದರು. ಹಳಗನ್ನಡ ಕಾವ್ಯಗಳನ್ನು ಸಂಪಾದಿಸಿ ಮತ್ತು ಕಾವ್ಯ ಸಂಕಲನಗಳನ್ನು ಸಿದ್ಧಪಡಿಸಿ ಪ್ರಕಟಿಸಿದರು. ಭಾರತೀಯ ತತ್ವಜ್ಞಾನಕ್ಕೆ ಸಂಬಂಧಿಸಿದ ಗ್ರಂಥ, ಲೇಖನಗಳನ್ನು ಜರ್ಮನ್ ಭಾಷೆಯಲ್ಲಿಯೂ ಬರೆದರು.

ಇದೇ ವೇಳೆಗೆ ಕನ್ನಡ ನಿಘಂಟುವಿನ ರಚನೆಯ ಸೂಚನೆಯು ಮುಂಬಂದಿತು. ೧೮೭೨ರಿಂದ ೧೫ ವರ್ಷಗಳ ಕಾಲ ಅದೇ ಕೆಲಸ. ಮತ್ತೊಮ್ಮೆ ಜರ್ಮನಿಗೆ ಹೋದಾಗ ಅದರ ಕರಡು ಸಿದ್ಧವಾಯಿತು. ೧೮೮೩ರಲ್ಲಿ ಮರಳಿ ಬಂದು ಆ ಹಸ್ತಪ್ರತಿಯನ್ನು ಪರಿಷ್ಕರಿಸಿ ಹೊಸದಾಗಿ ದೊರೆತ ಇನ್ನಷ್ಟು ಶಬ್ದಗಳನ್ನು ಸೇರಿಸಿ ಮುದ್ರಣಕ್ಕಾಗಿ ಪ್ರತಿಯನ್ನು ಸಿದ್ಧಗೊಳಿಸಿದರು. ೧೮೯೨ರಲ್ಲಿ ಸ್ವದೇಶಕ್ಕೆ ಹಿಂತಿರುಗಿದರು. ಮುದ್ರಣ ಕಾರ್ಯ ಮಂಗಳೂರಲ್ಲಿಯೇ ನಡೆಯಿತು. ಅಂತೂ ೧೮೯೪ರಲ್ಲಿ ಕನ್ನಡ–ಇಂಗ್ಲಿಷ್ ಕೋಶವು ಹೊರಬಂದಿತು. ಆ ಕೂಡಲೇ ಪ್ರಶಂಸೆಯ ಸುರಿಮಳೆ. ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯವು ಈ ಕೃತಿಯ ನಿಮಿತ್ತದಿಂದ ಅವರಿಗೆ ಗೌರವ ಡಿ.ಲಿಟ್. ಪದವಿಯನ್ನು ನೀಡಿತು (೧೮೯೬). ಕನ್ನಡದ ಕೆಲಸಕ್ಕಾಗಿ ವಿದೇಶದಲ್ಲಿ ದೊರೆತ ಮನ್ನಣೆ ಇದು. ಇತ್ತ ಕನ್ನಡದ ಕುರಿತು ಅವರು ಮಾಡಿದ ಕೆಲಸವನ್ನು ಮೊದಲಿಗೆ ಮೆಚ್ಚಿದ ದೇಶೀಯರೆಂದರೆ ಧಾರವಾಡದಲ್ಲಿ ಆದೇ ಸ್ಥಾಪಿತವಾಗಿದ್ದ (೧೮೯೦) ಕರ್ನಾಟಕ ವಿದ್ಯಾವರ್ಧಕ ಸಂಘದವರು. ಕಿಟೆಲ್ ಆಗ ಕರ್ನಾಟಕದಲ್ಲಿ ಇದ್ದಿರಲಿಲ್ಲವಾದರೂ ಅವರನ್ನು ಗೌರವ ಸದಸ್ಯರಾಗಿ ನೇಮಕ ಮಾಡಿದ್ದರು.

ಸ್ವಗ್ರಾಮಕ್ಕೆ ಹಿಂತಿರುಗಿದಾಗಲೂ ಕಿಟೆಲರ ಗ್ರಂಥರಚನೆ ಸಾಗಿಯೇ ಇದ್ದಿತು. ಕನ್ನಡ ಬೈಬಲಿನ ಭಾಷೆಯ ಸುಧಾರಣೆಯಲ್ಲಿ ಪಾಲ್ಗೊಂಡಿದ್ದರು. ಅವರ ಕೊನೆಗಾಲದ ಕೃತಿ ಕನ್ನಡದ ಪ್ರೌಢ ವ್ಯಾಕರಣವಾಗಿದ್ದಿತು. ಅದರ ಮುದ್ರಿತ ಪ್ರತಿಯನ್ನು ನೋಡಿದ ಧನ್ಯತೆಯಲ್ಲಿ ಆ ಮರುದಿನವೇ ಅಸು ನೀಗಿದರು (೧೯೦೩).

ಕನ್ನಡದ ಮಟ್ಟಿಗೆ ಕಿಟೆಲ್ ಅವರದು ಬಹು ಪ್ರಖ್ಯಾತವಾದ ಹೆಸರೇನೋ ಹೌದು. ಆದರೆ ಸ್ವತಹ ಜರ್ಮನಿಯಲ್ಲಿ ಮತ್ತು ಬಾಸೆಲಿನ ಸ್ಥಳೀಯ ದಾಖಲೆಗಳಲ್ಲಿ ಅವರ ಹೆಸರು ಬಹು ಬಳಕೆಯದಾಗಲಿಲ್ಲ. ಸ್ಲ್ಯಾಟರ್ ಎಂಬಾತ ಬಾಸೆಲ್ ಮಿಶನ್ ಸಂಸ್ಥೆಯ ಸಮಗ್ರ ಇತಿಹಾಸವನ್ನು ಜರ್ಮನ್ ಭಾಷೆಯಲ್ಲಿ ರಚಿಸಿದ್ದು (ಐದು ಸಂಪುಟಗಳದ್ದು) ಒಂದೆರಡು ಕಡೆಗೆ ಮಾತ್ರ ಕಿಟೆಲರ ಪ್ರಸ್ತಾಪ ಮಾಡಿದ್ದಾನೆ. ಅದೂ ಅವರು 'ಪ್ರವಚನ ಕಾಲದಲ್ಲಿ ಕೀರ್ತನೆಗೆ ಮಹತ್ವ ಕೊಡಬೇಕೆಂದು ಹೇಳಿದ್ದಕ್ಕೆ ಕೇಂದ್ರ ಸಂಸ್ಥೆಯಿಂದ ಬೈಸಿಕೊಂಡರು'–ಎಂಬ ಕಾರಣದಿಂದ ಬಂದಿದೆ.

ಅತ್ಯಂತ ಕುಶಾಗ್ರ ಬುದ್ಧಿಯವರೂ ಭಾಷಾದೃಷ್ಟಿಯಿಂದ ಮಿಶನ್ನಿಗೆ ಅಮೋಘವಾದ ಸೇವೆ ಸಲ್ಲಿಸಿದವರೂ ಆಗಿದ್ದ ಕಿಟೆಲರನ್ನು ಅವಗಣಿಸುವಂತಾದ್ದಕ್ಕೆ ಏನು ಕಾರಣ?

ಪಾಲ್ ಜೆಂಕಿನ್ಸ್ (ಬಾಸೆಲ್ ಮಿಶನ್ನಿನ ಪತ್ರಾಗಾರದವರು) ಈ ಕಾರಣಗಳನ್ನು ಊಹಿಸಿದ್ದಾರೆ:

ಒಂದನೆಯದು, ಮಿಶನರಿಗಳಾದವರು ವಿವಿಧ ವೃತ್ತಿಗಳಲ್ಲಿದ್ದು ಪ್ರಾಥಮಿಕ ಶಿಕ್ಷಣ ಮಾತ್ರವೆ ಹೊಂದಿ, ಅಲ್ಲಿಂದ ಮಿಶನರಿ ತರಬೇತಿಯನ್ನು ಮುಗಿಸಿ ಭಾರತಕ್ಕೆ ಬಂದುದೇ ಹೆಚ್ಚು. ಕಿಟೆಲರು, ಹೈಸ್ಕೂಲು ಶಿಕ್ಷಣವನ್ನು ಹೊಂದಿ ಭಾಷಾ ಕೋವಿದರೆನಿಸಿದ್ದರು.

ಹೆಚ್ಚಿನ ಮಿಶನ್ನಿನವರು ಬಾಸೆಲ್ ಹತ್ತಿರದ ವುರ್ಟೆಂಬರ್ಗ್ ಎಂಬ ಜರ್ಮನ್ ಪ್ರದೇಶದಿಂದ ಬಂದವರಾಗಿ, ಅವರದೇ ಆದ ಪ್ರಭಾವೀ ಲಾಬಿ ಇದ್ದಿತು. ಕಿಟೆಲ್ ಆ ಪ್ರದೇಶದಿಂದ ತುಂಬಾ ದೂರವಿದ್ದ ಫ್ರಿಜಿಯನ್ (ಕೆಳ ಜರ್ಮನಿ) ಊರಿನಿಂದ ಬಂದವರಾಗಿದ್ದರು.

ಕೊನೆಯದಾಗಿ ಸೇರಿಸಬಹುದಾದ್ದೆಂದರೆ ಅವರ ಬೌದ್ಧಿಕ ಅಹಂಮನ್ಯತೆ. ಇದರಿಂದಾಗಿ ಕಿಟೆಲ್ ಮಿಶನರಿಗಳಾರೊಡನೆಯೂ ಸುಲಭವಾಗಿ ಬೆರೆಯುವ ಪ್ರವೃತ್ತಿ ಯವರಾಗಿರಲಿಲ್ಲ.

# ಪ್ರಕರಣ – 3

## ಜೀವನದ ಪ್ರೇರಣೆಗಳು

ಪ್ರತಿಯೊಬ್ಬರ ಸಾಧನೆಯಲ್ಲಿ ಮುನ್ನಡೆಸುವ ಕೆಲವು ಪ್ರೇರಕ ಶಕ್ತಿಗಳಿರುತ್ತವೆ. ಕಿಟೆಲರ ಜೀವನದಲ್ಲಿ ಆತ್ಯಂತಿಕ ಧರ್ಮನಿಷ್ಠೆ ಹಾಗೂ ಆಳವಾದ ಭಾಷಾಸಕ್ತಿ–ಇವೆರಡನ್ನು ಪ್ರೇರಕ ಶಕ್ತಿಗಳೆಂದು ಹೇಳಬಹುದು.

### ಧಾರ್ಮಿಕ ನಿಷ್ಠೆ

ಧಾರ್ಮಿಕ ನಿಷ್ಠೆ ಎನ್ನುವುದು ಎಲ್ಲ ಮಿಶನರಿ ಜನರಲ್ಲಿ ಇರಬೇಕಾದ ಅಂಶವೇ. ಕಿಟೆಲ್ ಮನೆತನವೇ ಹಾಗೆ ನಡೆದುಕೊಂಡು ಬಂದಿದ್ದಿತು. ಅವರ ತಂದೆ ಸ್ವಯಂ ಧರ್ಮೋಪದೇಶಕನಿದ್ದನು. ತಾನು ಮಿಶನರಿಯಾಗಬೇಕೆನ್ನುವ ಬಯಕೆಯ ಹಿನ್ನೆಲೆಯನ್ನು ಕಿಟೆಲರು ಹೀಗೆ ಹೇಳಿದ್ದಾರೆ:

I attempt achieving sanctification by my own strengh. Where otherwise, shall I seek refuse than in Christ? Last year, we studied the Acts of Apostles. (ಅಪೋಸ್ತಲರ ಕೃತ್ಯಗಳು–ಎಂಬುದು ಬೈಬಲಿನ ಹೊಸ ಒಡಂಬಡಿಕೆಯ ಉತ್ತರಾರ್ಧದಲ್ಲಿ ಬರುವ ಒಂದು ಸಂಧಿ.) I felt so much pity with those who served dead idols that I want to see them saved in Christ. I am not conscious of any other motives but the love of Christ.

ಕಿಟೆಲರ ಧಾರ್ಮಿಕ ನಿಷ್ಠೆಗೆ ಎರಡು ಮುಖಗಳು: ಒಂದು ಭಾವನಾತ್ಮಕ, ಇನ್ನೊಂದು ವೈಚಾರಿಕ. ಕಿಟೆಲ್ ಯೇಸುವಿನ ಜೀವನವನ್ನು ಕಾವ್ಯ ರೂಪದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಇದು ಭಾವನಾತ್ಮಕವಾದರೆ, ಕ್ರೈಸ್ತ ಮತಕ್ಕೆ ಸಂಬಂಧಿಸಿದ ಚರಿತ್ರೆ ಮುಂತಾದ ಬರಹದ ಕಾರ್ಯವನ್ನು ವೈಚಾರಿಕ ಸದರಿನಲ್ಲಿ ಸೇರಿಸಬಹುದು. ಇದೇ ಧಾರ್ಮಿಕ ಮನೋಭಾವದಿಂದ ಕಿಟೆಲ್ ಭಾರತೀಯ ತತ್ವಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿದರು. ಇತರ ಮಿಶನರಿಗಳು ಹಿಂದೂಧರ್ಮವನ್ನು ಟೀಕಿಸುವ ದೃಷ್ಟಿಯಿಂದ ಈ ವ್ಯಾಸಂಗ ಮಾಡುತ್ತಾ ಇದ್ದರೆ, ಕಿಟೆಲರಲ್ಲಿ ಭಾರತೀಯ ದರ್ಶನ–ಸಿದ್ಧಾಂತಗಳನ್ನು ತಿಳಿಯುವ ಆಶಯವೇ ಮುಖ್ಯವಾಗಿದ್ದಿತು. ಅದಕ್ಕೆಲ್ಲ ಕ್ರೈಸ್ತ ಪ್ರಣಾಲಿಯೇ ಪರೋಕ್ಷವಾಗಿ ಪ್ರೇರಣೆ ಒದಗಿಸಿರಲು ಸಾಕು. ಮತ್ತಲ್ಲದೆ, ಕಡು ನೀತಿಮತ್ತೆಯು ಅವರಲ್ಲಿ ನೆಲೆಗೊಂಡಿದ್ದಿತು. ಈ ಬಗೆಯ Puritanism ಹತ್ತೊಂಬತ್ತನೆಯ ಶತಮಾನದ ಪಾಶ್ಚಿಮಾತ್ಯರನೇಕರಲ್ಲಿ ವ್ಯಕ್ತವಾದದ್ದೇ. ಜೊತೆಗೆ ಕಿಟೆಲರಲ್ಲಿ ಮೂರ್ತಿ ಪೂಜೆಯ ಕಾರಣದಿಂದ ಹಿಂದೂ ಧರ್ಮದ ಬಗ್ಗೆ ಕಿಂಚಿತ್ ಅಸಹನೆಯೂ ಇದ್ದಿತು.

## ಭಾಷಾಸಕ್ತಿ

ತಮ್ಮ ಸಂಪರ್ಕಕ್ಕೆ ಬಂದ ಭಾಷೆ ಯಾವುದೇ ಇರಲಿ, ಕಿಟೆಲರು ಅದರ ವ್ಯಾಕರಣ ಪ್ರಕ್ರಿಯೆ, ಉಚ್ಚರಿಸುವ ರೀತಿ ಮತ್ತು ಶಬ್ದಗಳ ಅರ್ಥ–ಇವನ್ನು ಶೀಘ್ರವಾಗಿ ಗ್ರಹಿಸುವ ವಿಶೇಷ ಸಾಮರ್ಥ್ಯವನ್ನು ಪಡೆದಿದ್ದರು. ಕೋಟ, ಬಡಗು ಮುಂತಾದ ಉಪಭಾಷೆ ಅಥವಾ ಆಡುನುಡಿಯ ಬಗೆಗೂ ಇದೇ ಬಗೆಯ ಗ್ರಹಣಶಕ್ತಿ ಇದ್ದದ್ದು ಬೆರಗುಗೊಳಿಸುವಂಥದಾಗಿತ್ತು. ಅದು ಕಾರಣ, ಅವರ ಕುರಿತ ಚರಮಲೇಖದಲ್ಲಿ– [He] had such an exellent memory that he knew whether and where every word was to be found in the classical writitngs–ಎಂಬುದಾಗಿ ಹೇಳಿದ್ದಿದೆ.

ಇಂತು ಯಾವುದೇ ಭಾಷೆ ಹಾಗೂ ಅದರ ಶಬ್ದ ಪ್ರಪಂಚ; ಈ ನಿಟ್ಟಿನಲ್ಲಿ ಕಿಟೆಲರಿಗೆ ಒಂದು ಬಗೆಯ ವಿಶೇಷ ಆಕರ್ಷಣೆ ಇದ್ದಿತು. ಅವರು ಅನೇಕ ಹಳಗನ್ನಡ ಕಾವ್ಯಗಳನ್ನು ಹಸ್ತಪ್ರತಿಯ ರೂಪದಲ್ಲಿ ಓದಿದ್ದರೂ ಅಲ್ಲಿಯ ಕಾವ್ಯ ಸೌಂದರ್ಯಕ್ಕಿಂತ ಅವುಗಳಲ್ಲಿಯ ಶಬ್ದ ಸಂಪತ್ತು ಮತ್ತು ಭಾಷಾಶುದ್ಧತೆಯ ಕಡೆಗೇ ಹೆಚ್ಚಾಗಿ ಗಮನವಿರುತ್ತಿತ್ತು. ಮುಂದೆ ಅವನ್ನು ಸಂಪಾದಿಸಿ ಪ್ರಕಟಿಸುವಾಗಲೂ, ಪಠ್ಯಪುಸ್ತಕಗಳನ್ನು ರಚಿಸುವಾಗಲೂ ಈ ಮನೋಭಾವವೇ ಅವರಲ್ಲಿ ಒಡೆದು ತೋರುವಂತಿದೆ.

ಮುಂದುವರಿದು ಹೇಳುವುದಾದರೆ, ಶಬ್ದಾಂತರ್ಗತ ಭಾಷೆಯ ಮೂಲಕವೇ ಧರ್ಮ ಸಾಧನೆಯಾಗಬೇಕಲ್ಲವೆ. ಆದ್ದರಿಂದ ಶಬ್ದವಿಚಾರವೂ ಕ್ರೈಸ್ತಧರ್ಮಕ್ಕೆ ಪರೋಕ್ಷವಾಗಿ ಸಂಬಂಧಿಸಿದ್ದೇ ಎಂಬುದಾಗಿ ಕಿಟೆಲರಂತಹ ಮಿಶನರಿಗಳು ಭಾವಿಸಿರಬೇಕು. ಮರಾಠೀ–ಇಂಗ್ಲಿಷ್ ಕೋಶದ ಕರ್ತೃ ಮೋಲ್ಸ್‌ವರ್ತ್ ಇದೇ ನಿಲುವನ್ನು ತೋರ್ಪಡಿಸಿದ್ದಾನೆ (೧೮೪೫).

It [the Dictonary] was undertaken not from a thirst after honour or emolument, but from an humble desire of promoting the propagation of the glorious Gospel; and it was continued by the energy of this desire, through sickness and weakness and against troubles and difficulties and grievous discourgement.

ಕಿಟೆಲರಲ್ಲಿ ಭಾಷಾಸಕ್ತಿಯೆಂಬುದು ರಕ್ತಗತವಾಗಿತ್ತಷ್ಟೆ. ಹೀಗಾಗಿ ಕನ್ನಡ ನುಡಿ ಮತ್ತು ಕನ್ನಡ ಶಬ್ದಭಂಡಾರ ಅವರ ಚಿಂತನೆಯನ್ನು, ಆಜೀವ ಆವರಿಸಿಕೊಂಡಿತ್ತು. ಅಂತೂ ಈ ವಿಷಯವನ್ನು ಆಳವಾಗಿ ಅಭ್ಯಸಿಸಿದರು.

ಈ ವಿಚಾರದಲ್ಲಿ ಕನ್ನಡದ ಪ್ರೌಢ ವೈಯಾಕರಣಿ ಕೇಶಿರಾಜನೇ (೧೩ನೆಯ ಶತಮಾನದವ) ಅವರ ಕನ್ನಡ ಪ್ರೊಫೆಸರ್! ತಾನು ಬರೆದದ್ದು ವ್ಯಾಕರಣ ಗ್ರಂಥವಾದರೂ ಅದನ್ನು 'ಶಬ್ದಮಣಿದರ್ಪಣ' ಎಂದು ಕರೆದು 'ಶಬ್ದ' ಭಂಡಾರದ ಮಹತ್ವವನ್ನು ಕಿಟೆಲರಿಗೆ ಮನಗಾಣಿಸಿಕೊಟ್ಟವ – ಈ ಕೇಶಿರಾಜ. ಶಬ್ದಗಳ ಅರ್ಥವನ್ನು ಇಡಿಯಾಗಿ, ಸರಿಯಾಗಿ ಗ್ರಹಿಸುವುದು ಅವಶ್ಯವೆಂದು ಕಿಟೆಲ್ ಮನಗಂಡಿದ್ದರು.

ಪ್ರಾಚೀನ ಕನ್ನಡ ಕಾವ್ಯಗಳ ಪ್ರತಿಕಾರರು ಎಂತೆಂತಹ ತಪ್ಪು ಮಾಡುತ್ತಿದ್ದರೆಂಬುದು ತಿಳಿದ ವಿಷಯ. ಕಿಟೆಲರಿಗೆ ಅದೊಂದು ಅಸಹನೀಯ ಸಂಗತಿಯಾಗಿತ್ತು. ಹೀಗಾಗಿ ಪ್ರಾಚೀನ ಕಾವ್ಯವೊಂದರ ಹಲವಾರು ಹಸ್ತಪ್ರತಿಗಳನ್ನು ಅವರು ಅರಸುತ್ತಿದ್ದರು. ಉದ್ದೇಶ, ಸರಿಯಾಗಿ ಅರ್ಥಕೊಡುವ ಪದವನ್ನು ಕಂಡು ಹಿಡಿಯುವುದಾಗಿದ್ದಿತು. ಇಷ್ಟು ಮಾತ್ರವಲ್ಲ, ಮುದ್ರಣಕ್ಕೆ ಕೊಡುವ ಮುಂಚೆ ತಾವೇ ಪ್ರತಿಮಾಡಿ ಇಟ್ಟುಕೊಳ್ಳುತ್ತಿದ್ದರು. ಗ್ರಂಥ ಸಂಪಾದನಾ ಶಾಸ್ತ್ರದ ಈ ಮೊದಲ ಹೆಜ್ಜೆಯನ್ನು ರೂಢಿಸಿದವರು ಕಿಟೆಲರು. I.A.ಪತ್ರಿಕೆಯ ಒಂದು ಲೇಖದಲ್ಲಿ ತಮ್ಮ ನಿಲುಮೆಯನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ–

Last year, when searching after Canerese manuscripts in the Raja's library at Maisur, I happened to meet with Mangaraj Nighantu. I had never seen such a work before and anxious to get a copy, I took this with me to Mercara where I copied it, as it was with its thousand mistakes.

# ಪ್ರಕರಣ – 4

# ಗ್ರಂಥ ರಚನೆ

ಈ ಹಿನ್ನೆಲೆಯಲ್ಲಿ ಕಿಟೆಲರ ಗ್ರಂಥರಚನೆಯನ್ನು ವಿವರವಾಗಿ ಪರಿಶೀಲಿಸೋಣ. ಅದು ಈ ಕೆಳಗಿನ ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗಿದೆ:

೧. ಶಾಲಾ ಪಠ್ಯಗಳು
೨. ಪತ್ರಿಕೋದ್ಯಮ
೩. ಕವನಕೋಶ
೪. ಹಳಗನ್ನಡ ಕಾವ್ಯ; ಸಂಕಲನ ಮತ್ತು ಸಂಪಾದನೆ
೫. ಸಾಹಿತ್ಯಿಕ ಬಿಡಿಲೇಖಗಳು
೬. ಕೊಡಗು ಶಾಸನಗಳು; ಆದಿವಾಸೀ ಸಂಸ್ಕೃತಿ
೭. ಹಿಂದೂಧರ್ಮ ವಿವೇಚನೆ
೮. ಕ್ರೈಸ್ತ ಮತೀಯ ಬರಹಗಳು
೯. ದ್ರಾವಿಡ–ಸಂಸ್ಕೃತ ಸಂಪರ್ಕ
೧೦. Kannada-English Dictionary
೧೧. A Grammar of the Kannada Language

## ೧. ಶಾಲಾಪಠ್ಯಗಳು

ಈ ವಿಷಯವಾಗಿ ಮದ್ರಾಸ ಸರಕಾರದ ವಿದ್ಯಾಖಾತೆಗೂ ಬಾಸೆಲ್ ಮಿಶನ್ನಿಗೂ ಪರಸ್ಪರ ಹಿತಸಂಬಂಧವೇ ಇದ್ದಿತು. ಇತಿಹಾಸವಿಷಯಕ ಶಾಲಾ ಪಠ್ಯಗಳು ಇಂಗ್ಲಿಷ್ ನಲ್ಲಿ ಇದ್ದವುಗಳೇ. ಅವನ್ನು ಕನ್ನಡಕ್ಕೆ ಭಾಷಾಂತರಿಸುವ ವಿಷಯದಲ್ಲಿ ದೇಶೀಯರು ಇದ್ದರಾದರೂ ಬಾಸೆಲ್ ಮಿಶನರಿಗಳಿಗೆ ಒಪ್ಪಿಸಿದ್ದುದು ಅವರ ಕೆಲಸದ ಬಗೆಯಲ್ಲಿ ಅಧಿಕಾರಿಗಳಿಗೆ ವಿಶ್ವಾಸವಿದ್ದುದೇ ಕಾರಣ. ಅಂತೂ ಕಿಟೆಲರು ಎರಡು ಇತಿಹಾಸದ ಪುಸ್ತಕಗಳನ್ನು (ಮಾರಿಸ್ ಕೃತ) ಅನುವಾದಿಸಿ ಕೊಟ್ಟರು. ಆದರೆ ಕನ್ನಡ ಭಾಷಾವಾಚನ ಪುಸ್ತಕವೊಂದನ್ನು ಸ್ವತಂತ್ರವಾಗಿ ಸಿದ್ಧಪಡಿಸುವಾಗ ಕಿಟೆಲರು ವಿನೂತನ ರೀತಿಯಲ್ಲಿ ಶ್ರಮಿಸಿದ್ದಾರೆ.

### ೧.೧ ಕನ್ನಡ ಪಾಠಗಳ ಮೂರನೆ ಪುಸ್ತಕವು

ಮಾದರಿಯಾಗಿ ಅವರು ರಚಿಸಿದ 'ಕನ್ನಡ ಪಾಠಗಳ ಮೂರನೆ ಪುಸ್ತಕವು' ಎಂಬುದನ್ನು ಪರಿಶೀಲಿಸೋಣ. ಇದರಲ್ಲಿ ಎಂಟು ವರ್ಗಗಳಿದ್ದು, ಪಾಶ್ಚಾತ್ಯ ಭೌತಿಕ ವಿಷಯಗಳೇ ಪ್ರಧಾನವಾಗಿ ಬಂದಿವೆ. ಅವೇದರೆ ಧಾತುವರ್ಗ (ಭೌತ ಹಾಗೂ

ಭೂಗರ್ಭ ಶಾಸ್ತ್ರಗಳು) ಸ್ಥಾವರ ವರ್ಗ (ಸಸ್ಯಶಾಸ್ತ್ರ), ಜಂತುವರ್ಗ, ವ್ಯಕ್ತಿ ಚರಿತ್ರೆಗಳು, ಪ್ರದೇಶ ವರ್ಣನೆ, ಖಗೋಲ ವಿಜ್ಞಾನ ಮತ್ತು ಯಂತ್ರವರ್ಗ. ಆಶ್ಚರ್ಯವೆಂದರೆ ಒಂದು ಹನಿ ನೀರು ಮತ್ತು ಒಂದು ಧೂಳಿಯ ಕಣ–ಇವುಗಳಲ್ಲಿರುವ ಜೀವಿಗಳ ಪರಿಚಯವನ್ನು ಒಂದು ಪಾಠದಲ್ಲಿ ಮಾಡಿಕೊಟ್ಟದ್ದು.

ಇತ್ತ ಸಾಹಿತ್ಯಿಕ ಗದ್ಯ ಮತ್ತು ಪದ್ಯ ಪಾಠಗಳಿಗೆ ಕೇವಲ ೪೦ ಪುಟಗಳು! ಈ ಎಲ್ಲ ವಿಷಯಗಳ ಹಿನ್ನೆಲೆಯನ್ನು ಗುರುವಿನ ಪ್ರಸ್ತಾವನೆಯಲ್ಲಿ ಕೊಟ್ಟಿದ್ದಾರೆ. ಕೊನೆಯಲ್ಲಿ, ಪುಸ್ತಕದೊಳಗೆ ಬಂದಿರುವ ಎಲ್ಲ ಸಂಸ್ಕೃತ ಶಬ್ದಗಳ ಮೂಲ ರೂಪಗಳನ್ನು ಕೂಡಮಾಡಿದ್ದಾರೆ. ಜೊತೆಗೆ ಅವುಗಳಿಗೆ ಸಮಾನವಾದ ಇಂಡೋ–ಆರ್ಯನ್ ಶಬ್ದಗಳೂ ಇವೆ. ವಿದ್ಯಾರ್ಥಿಗಳಿಗೆ ಅದರ ಅಗತ್ಯ ಇರಲಿಕ್ಕಿಲ್ಲ. ಕಿಟೆಲರ ಶಬ್ದಾಸಕ್ತಿಯೂ ಇಲ್ಲಿಂದಲೇ ಮೊದಲಾಗುತ್ತದೆ.

ಈ ಮೂರನೆಯ ಪುಸ್ತಕವು ಸಂಪೂರ್ಣವಾಗಿ ಕಿಟೆಲರದು. ಅದರ ವಿಷಯಗಳ ವರ್ಗೀಕರಣ ಅಷ್ಟೆ ಹಾಗೂ ರಚನೆ, ಎಲ್ಲವೂ ಕಿಟೆಲರದೇ ಹಾಗೂ ಪೀಠಿಕೆಯಲ್ಲಿ ಹೇಳಿದ ಮಾತುಗಳೂ ಸ್ವೋಪಜ್ಞವಾಗಿರುವುದರಿಂದ, ಅದರ ಕೆಲವು ಅಂಶಗಳು ಅವಶ್ಯವಾಗಿ ಗಮನಿಸುವಂತಿವೆ;

'ಲೋಕದಲ್ಲಿರುವ ಬೇರೆ ಬೇರೆ ವಸ್ತುಗಳ ಸಮೂಹಗಳನ್ನು, ನಾವೇ ನೋಡಿ ತಿಳುಕೊಳ್ಳುತ್ತೇವೆ; ಹಲವು ತರದ ವಸ್ತುಗಳ ವಿದ್ಯಮಾನವನ್ನು, ಮತ್ತೊಬ್ಬರ ಬೋಧನೆಯಿಂದ ತಿಳಿದುಕೊಳ್ಳುತ್ತೇವೆ. ಸೋಮನಾಥನೆಂಬವನು ಹೇಳುತ್ತಾನೆ:

"ಹಲವು ಬಲ್ಲರವರಿಂದ ಕಲಿಯಬೇಕು, ಕೆಲವು ಕಲಿಕಿಯಿಂದ ಕಲಿಯಬೇಕು;
ಹಲವು ಶಾಸ್ತ್ರದಿಂದ ಕಲಿಯಬೇಕು, ಹಲವು ಮಾಡುವವರಿಂದ ಕಲಿಯಬೇಕು;
ಹಲವು ಕಂಡು ನೋಡಬೇಕು, ಹಲವು ಜ್ಞಾನದಿಂದ ತಿಳಿಯಬೇಕು;
ಹಲವು ಸತ್ಪುರುಷರ ಸಂಗದಿಂದರಿಯಬೇಕು; ಅಲ್ಲಿಂದ ಸರ್ವಜ್ಞನಾಗುವನು
ಹಲವು ಹಳ್ಳಗಳು ಕೂಡಿದರೆ ಸಮುದ್ರವು ಹ್ಯಾಂಗೆ ತುಂಬುತ್ತದೋ ಹಾಗೆಯೇ
ಬುದ್ಧಿಪ್ರಕಾಶ ಕೂಡು ಎಂಬುದರ್ಥವು".

ಬುದ್ಧಿವಂತನು ತನ್ನನ್ನು ತಾನು ತಿಳಿದುಕೊಳ್ಳಬೇಕೆಂದು ಬಯಸುವದಲ್ಲದೆ, ತನ್ನ ಇಂದ್ರಿಯಗಳಿಗೆ ಲೋಕದಲ್ಲಿ ಗೋಚರವಾಗುವ ವಸ್ತುಗಳನ್ನೂ ಅರಿಯಬೇಕೆಂದು, ವಿಚಾರಣೆ ಮಾಡಿ, ವಿದ್ವಾಂಸರು ರಚಿಸಿದ ನಾನಾ ವಿಧವಾದ ಗ್ರಂಥಗಳನ್ನು ಓದಿ, ವಿದ್ಯೆಯನ್ನು ಪಡೆಕೊಳ್ಳಲಿಕ್ಕೆ ಸಾಧಿಸುವನು.

ಲೋಕವನ್ನೂ ಲೋಕದಲ್ಲಿರುವದೆಲ್ಲವನ್ನೂ ದೇವರು ಉಂಟು ಮಾಡಿದ್ದಾನೆ. ದೇವರು ಅನಾದಿಯೂ ಅನಂತನೂ ನಿರ್ಮಲನೂ ಸಚ್ಚಿದಾನಂದನೂ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ ಆಗಿದ್ದಾನೆ. ಆತನು ಉಂಟು ಮಾಡಿದ ಸೃಷ್ಟಿಯು ಧಾತು, ಉದ್ಭಿಜ್ಜ, ಜಂತುಗಳು ಎಂದು ಮೂರು ವಿಧವಾಗಿವೆ.

೧. ನೀರು ಕಲ್ಲು, ಮಣ್ಣು, ಹೊನ್ನು ಮುಂತಾದ ಲೋಹಗಳು, ವಜ್ರ ಮುಂತಾದ ರತ್ನಗಳು ಎಂಬ ನಿರ್ಜೀವವಾದ ಈ ವಸ್ತುಗಳಿಗೆ ಧಾತು ಎಂಬ ಹೆಸರು. ಅವುಗಳಿಗೆ ಜೀವವೂ ಚಲನೆಯೂ ಇಲ್ಲದದರಿಂದ ನಿರ್ಜೀವಗಳೆನ್ನಿಸಿ ಕೊಳ್ಳುತ್ತವೆ. ಅವು ಉದ್ಭಿಜ್ಜ ಮತ್ತು ಜಂತುಗಳಂತೆ ಆಹಾರದಿಂದ ಬೆಳೆಯುವದಿಲ್ಲ; ದೊಡ್ಡವಾದರೆ ಸ್ಪರ್ಶನಮಾತ್ರದಿಂದ ಆಗುತ್ತವೆ.

೨. ಮರ, ಗಿಡ, ಬಳ್ಳಿ, ಹುಲ್ಲು, ಗಡ್ಡೆ ಮುಂತಾದವುಗಳಿಗೆ ಉದ್ಭಿಜ್ಜವೆಂದು, ಹೆಸರು. ಇವು ಗಾಳಿಯಿಂದ ಕದಲುವದಲ್ಲದೆ ಧಾತುಗಳಂತೆ ಸ್ಥಳಾಂತರ ಮಾಡಲಾರದೆ, ಮೊಳಿತಲ್ಲಿಯೇ ಇರುತ್ತವೆ. ಆದ್ದರಿಂದ ಅವುಗಳಿಗೆ ಸ್ಥಾವರವೆಂದು ಹೆಸರು. ಧಾತುಗಳಿಗೆ ಚಲನೆ ಪ್ರಾಣ ಎರಡೂ ಇಲ್ಲ, ಆದರೆ ಇವುಗಳಿಗೆ ಜೀವವಿದೆ; ಧಾತುಗಳು ನಿರ್ಜೀವಾಚರಗಳೆಂದ ಮೇಲೆ ಇವುಗಳು ಸಜೀವಾಚರಗಳೆನ್ನತಕ್ಕದ್ದಾಗಿದೆ. ಉದ್ಭಿಜ್ಜವು ಬೇರುಗಳಿಂದ ನೀರನ್ನೂ ಭೂಮಿಯ ಸಾರವನ್ನು, ಬಾಯಿಯಿಂದ ಹೀರುವಂತೆ ಶೇದಿ, ಈ ಆಹಾರದಿಂದ ಬೆಳೆಯುತ್ತವೆ. ಸಸ್ಯಾದಿಗಳಿಗೆ ಎಲೆಗಳು ಪ್ರಾಣಕೋಶಗಳಂತೆ ಶ್ವಾಸಕರಣಗಳಾಗಿವೆಂದು, ಹೇಳಬಹುದು. ಹೀಗೆ ಈ ಜಾತಿಯು ಪಂಚಭೂತಗಳಿಂದ ಸಾಕಿಸಿಕೊಂಡು, ಮೊಳಿತು, ಬೆಳದು, ಎಲೆಗಳನ್ನೂ ಹೂವುಗಳನ್ನೂ ಬಿಟ್ಟು, ಫಲ ಫಲಿಸಿ, ಕಡೆಯಲ್ಲಿ ಬಾಡಿ, ಸಾಯುತ್ತದೆ.

೩. ಇನ್ನು ದೇವರು ಉಂಟು ಮಾಡಿದ ಜೀವಿಗಳಲ್ಲಿ ತರತಮಗಳು ಯಾವವೆಂದರೆ: ಆತ್ಮಭಾವದ ದೇವದೂತರು, ಶರೀರ ಜೀವ ಆತ್ಮಗಳುಳ್ಳ ಮನುಷ್ಯರು, ಭೂಚರವಾದ ಮೃಗಗಳು, ಖೇಚರವಾದ ಹಕ್ಕಿಗಳು, ಜಲಚರವಾದ ಜಂತುಗಳು, ಭೂಜಲಚರವಾದ ಜಂತುಗಳು, ಅಂತು ಆರು ವಿಧ.

ಧಾತುಗಳೂ ಉದ್ಭಿಜ್ಜಗಳೂ ಜಂತುಗಳೂ ತಮ್ಮಷ್ಟಕ್ಕೆ ಹುಟ್ಟಲಿಲ್ಲ, ದೇವರು ಅವುಗಳನ್ನು ಸೃಷ್ಟಿಸಿದ್ದಾನೆ; ಆದುದರಿಂದ ಅವುಗಳಿಗೆ ಸೃಷ್ಟಿ ಎಂದು ಹೆಸರು. "ಕಾರ್ಯದಿಂದ ಕರ್ತನು ತಿಳಿಯುವನು" ಎಂಬ ಪ್ರಮಾಣದ ಪ್ರಕಾರ ಲೋಕದಲ್ಲಿರುವ ಸೃಷ್ಟಿಯ ಲಕ್ಷಣಗಳಿಂದ ಇದನ್ನುಂಟು ಮಾಡಿದ ದೇವರ ಬಲವೂ ಜ್ಞಾನವೂ ಗೋಚರವಾಗುತ್ತವೆ. ಆತನು ಅದೃಶ್ಯನಾಗಿದ್ದರೂ ಆತನು ನಿರ್ಮಿಸಿದ ಸೃಷ್ಟಿಯನ್ನು ನೋಡಿ, ಚನ್ನಾಗಿ ವಿಚಾರಿಸುವದರಿಂದ ಆತನ ಭಾವವನ್ನೂ ಗುಣಗಳನ್ನೂ ತಿಳುಕೊಳ್ಳಬಹುದು. ದೇವರ ತಿಳುವಿಕೆ ಇಲ್ಲದವನ ಜ್ಞಾನವು ಅಜ್ಞಾನವಾಗಿದೆ. ಸೃಷ್ಟಿ ವಿದ್ಯಾಭ್ಯಾಸ ಶ್ರೇಷ್ಠವಾಗಿರುವದರಿಂದ ಹಿಂದು ಗ್ರಂಥ ಒಂದರಲ್ಲಿ ಬರೆದದ್ದೇನೆಂದರೆ–

"ವಿದ್ಯೆಗಳನ್ನು ಕಲಿಸದೆ ಇದ್ದರೆ ಮಕ್ಕಳಿಗೆ ತಂದೆಯು ವೈರಿಯು"

ಸಕಲ ಪ್ರಾಣಿಗಳನ್ನು ಸಂರಕ್ಷಿಸುತ್ತಾ ಬರುವ ದೇವರನ್ನು ಮನಮುಟ್ಟಿ ಭಜಿಸುವುದು ಮನುಷ್ಯರಿಗೆ ಯುಕ್ತವಾಗಿದೆ. ಸದ್ಭಕ್ತರಿಗೆ ಆತನ ಕೃಪೆಯ ಪ್ರಸಾದವು ಸಿದ್ಧಿಸುವದೆಂಬು ದಕ್ಕೆ ಏನೂ ಸಂದೇಹವಿಲ್ಲ'.

ಈಗಿನ ವಾಚನಪಾಠದ ಪುಸ್ತಕಗಳಲ್ಲಿ ಭಾಷೆ ಮತ್ತು ಸಾಹಿತ್ಯಕ ದೃಷ್ಟಿ ಪ್ರಧಾನವಾಗಿರುತ್ತದೆ. ವಿಜ್ಞಾನ ವಿಷಯಗಳನ್ನು ಹೇಳಿದರೂ ಅವಕ್ಕೆ ಸಾಹಿತ್ಯಿಕ ಲೇಪ ಇರುತ್ತದೆ. ಕಿಟೆಲರಿಗೆ ಆಗಿನ ದಿನಗಳಲ್ಲಿ ಮಕ್ಕಳ ಜ್ಞಾನ ವಿಸ್ತಾರದತ್ತ ಗಮನವಿದ್ದಿತು. ಹೀಗಾಗಿ ಭೌಗೋಲಿಕ ಪಾಠಗಳಲ್ಲಿ ವಿವಿಧ ಭೂಪ್ರದೇಶಗಳ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡುವ ದೃಷ್ಟಿಯಿಂದಲೇ ವಿಷಯಗಳು ಬಂದಿವೆ. ವಿಶೇಷವೆಂದರೆ ವಿಜ್ಞಾನ ಪಾಠದ ಸುರುವಿಗೆ ತಾವೇ ಒಂದೊಂದು ಪದ್ಯ ರಚಿಸಿ ಕೊಟ್ಟಿರುವುದು. ಅವರ ಲೌಕಿಕ ಕವನಗಳ ಮೊದಲ ನಿದರ್ಶನಗಳಿವು.

## ೧.೨ ಪಂಚತಂತ್ರ

'ಶಾಲೆಗಳ ಪ್ರಯೋಜನಾರ್ಥಕವಾದದ್ದು' ಎಂಬ ಹಣೆಪಟ್ಟಿ ಇರುವ 'ಕನ್ನಡ ಪಂಚತಂತ್ರ'ವು ವಿಶಿಷ್ಟ ರೀತಿಯಿಂದ ಸಂಪಾದಿತವಾಗಿದೆ. ಇದರ ಮೂಲ ಕನ್ನಡ ಗದ್ಯ ಗ್ರಂಥವು ಯಾವುದೆಂಬುದನ್ನು ಸೂಚಿಸಿಲ್ಲ. ಆದರೆ ಅದರ ನುಡಿಗಟ್ಟು ೧೮ನೆಯ ಶತಮಾನದ್ದಾಗಿ ತೋರುತ್ತದೆ. ಪಂಚತಂತ್ರದ ಕಥೆಗಳು ವಸುಭಾಗಭಟ್ಟ ಮತ್ತು ವಿಷ್ಣುಶರ್ಮ - ಎಂಬೆರಡು ಲೇಖಕ-ನಾಮಗಳಲ್ಲಿ ದೊರೆಯುತ್ತಿದ್ದು ಕಿಟೆಲರು ವಸುಭಾಗಭಟ್ಟನದನ್ನು ಅನುಸರಿಸಿದ್ದಾರೆ.

ಕಿಟೆಲರು ಈ ಕೃತಿಯ ಸುರುವಿಗೆ ಬರೆದ ೨೨ ಪುಟಗಳ ವಿಸ್ತಾರವಾದ 'preface' ಮಾತ್ರ ಮಗುವಿಗೆ ತೊಡಿಸಿದ ದೊಡ್ಡ ಮುಂಡಾಸಿನಂತಿದೆ! ಅದನ್ನು ಬರೆಯುವಾಗ, ಪಂಚತಂತ್ರವನ್ನು ಜರ್ಮನ್ ಭಾಷೆಗೆ ಅನುವಾದಿಸಿದ-ಥಿಯೊಡೊರ್ ಬೆನ್ಫೆ ಮತ್ತು ಜೆ. ಕೊಸೆಗಾರ್ಟನ್ ಅವರ ಪೀಠಿಕೆಗಳನ್ನು ಕಿಟೆಲ್ ನೋಡಿದ್ದಾರೆ. ಮತ್ತು ಅವರ ರೀತಿಯಲ್ಲಿಯೇ ಪಂಚತಂತ್ರದ ಕಥೆಗಳ ಮೂಲ ಎಲ್ಲಿಯದು, ಇವಕ್ಕೂ ಈಸೋಪನ ನೀತಿಕತೆಗಳಿಗೂ ಸಂಬಂಧ ಏನು? ಪಂಚತಂತ್ರದ ರಚನಾಕಾಲ ಯಾವುದು? ಮುಂತಾಗಿ ಪೀಠಿಕೆಯಲ್ಲಿ ವಿವೇಚಿಸ ಪ್ರಯತ್ನಿಸಿದ್ದಾರೆ.

ಪಂಚತಂತ್ರದ ರಚನಾಕಾಲವನ್ನು ನಿರ್ಧರಿಸುವಲ್ಲಿ ಪಾಣಿನಿ, ಪಿಂಗಳ, ಜೈಮಿನಿ ಮೊದಲಾದ ಸಂಸ್ಕೃತ ಶಾಸ್ತ್ರಕಾರರ ಪ್ರಸ್ತಾಪವನ್ನು ತಂದಿದ್ದಾರೆ. ಈ ಕೃತಿಯಲ್ಲಿ ಉಲ್ಲೇಖಗೊಂಡ ಅವರುಗಳ ಕಾಲವನ್ನು ನಿರ್ಧರಿಸಿದರೆ, ಪಂಚತಂತ್ರದ ಕಾಲ ನಿರ್ಣಯ ಸುಲಭ. ಆದರೆ ಕಿಟೆಲರ ಅವಧಿಯಲ್ಲಿ ಅನೇಕ ಸಂಸ್ಕೃತ ಶಾಸ್ತ್ರಕಾರರ ಕಾಲನಿರ್ಣಯ ಸರಿಯಾಗಿ ಆಗಿರಲೇ ಇಲ್ಲ. ಹೀಗಾಗಿ ಕಿಟೆಲರು ನಿರ್ಣಯಿಸಿದ್ದರಲ್ಲಿ ತಪ್ಪುಗಳಿವೆ ಎನ್ನುವುದಕ್ಕಿಂತ ಅಸಮರ್ಪಕವಾಗಿದೆ ಎಂದು ತಿಳಿಯಬೇಕು. ಆದರೆ ಇಂಥದೊಂದು ಪ್ರಯತ್ನ ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ಮೊದಲ ಬಾರಿಗೆ ಕಿಟೆಲರಿಂದ ನಡೆಯಿತೆಂಬುದು ಪ್ರಸ್ತುತವಾದದ್ದು.

ಈ ಪೀಠಿಕೆಯಲ್ಲಿ ಈಸೋಪನ ನೀತಿಕತೆಗಳ ಪ್ರಸ್ತಾಪವೂ ಇದೆ. ಈಸೋಪನದು ಧಾರ್ಮಿಕ ದೃಷ್ಟಿಯಾದರೆ ಇಲ್ಲಿಯದು ನೀತಿಬೋಧೆಯ ಉದ್ದೇಶವನ್ನು ಹೊಂದಿದೆ

ಎಂಬುದನ್ನು ಕಿಟೆಲ್ ತೋರಿಸಿಕೊಟ್ಟಿದ್ದಾರೆ. ಎರಡೂ ಕೃತಿಗಳಲ್ಲಿ ಪ್ರಾಣಿಗಳನ್ನು ಮಾನವ ಜೀವಿಗಳಂತೆ ಚಿತ್ರಿಸಲಾಗಿದೆಯಷ್ಟೇ. ಈ ಪರಿಕಲ್ಪನೆ ಮೂಲತಃ ಭಾರತೀಯರದೆ? ಅಥವಾ ಗ್ರೀಕರದೆ-ಎಂಬುದನ್ನು ಖಚಿತವಾಗಿ ಹೇಳ ಸಾಧ್ಯವಿಲ್ಲ, ಎಂದಿದ್ದಾರೆ.

ತನ್ನ ಪೀಠಿಕೆಯಲ್ಲಿ ಅವರು ಬೇರೆ ಕೆಲವು ಹೊಸ ಅಂಶಗಳನ್ನು ತಂದಿದ್ದಾರೆ, ಉದಾ.ಗೆ ಋಗ್ವೇದ ಕಾಲದಲ್ಲಿ ಬರಹ ಅಥವಾ ಲಿಪಿ ಅನ್ನುವುದು ಇನ್ನೂ ಹುಟ್ಟಿರಲಿಲ್ಲ. ಆದರೆ ಮಹಾಭಾರತದ ಕಾಲಕ್ಕೆ ನಿಶ್ಚಿತವಾಗಿ ಬರಹವು ಬಳಕೆಯಲ್ಲಿದ್ದಿತು; ಮಹಿಳೆಯರೂ ಅದರಲ್ಲಿ ತೊಡಗಿದ್ದರೆನ್ನುವ ಕೆಲವು ಹೊಸ ಅಂಶಗಳನ್ನು ವಿಶದಗೊಳಿಸಿದ್ದಾರೆ.

ಇಷ್ಟೆಲ್ಲ ವಿವರಣೆ ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿತ್ತೇ? ಎಂದು ಕೇಳಬೇಡಿರಿ! ಕಿಟೆಲರಿಗೇ ಬೇಕಿತ್ತು ಎನ್ನುವ.

ಪಂಚತಂತ್ರದ ಕತೆಗಳೆಲ್ಲವೂ ಇಲ್ಲಿ ಇಲ್ಲ. ಅನೇಕ ಕತೆಗಳನ್ನು ಕೈಬಿಟ್ಟದ್ದರ ಕಾರಣ? Tales violating the rules of decency, for which every father of a family and every honest teacher doubtlessly will thank us-ಎಂಬುದಾಗಿ ಹೆಮ್ಮೆಪಟ್ಟಿದ್ದಾರೆ! ಮೇಲೆ ಹೇಳಿದ ಅವರ ಕಡು ನೀತಿಮತ್ತೆಯ ಪರಿಣಾಮವಿದು. ಮಾತ್ರವಲ್ಲ; 'ದೇವರಿಗೆ ಅಂಜಿ ನಡೆ', 'ನೆರೆಹೊರೆಯವರನ್ನು ಪ್ರೀತಿಸು' ಎಂಬಂತಹ ಮಹತ್ವದ ನೀತಿಗಳನ್ನು ಪಂಚತಂತ್ರದ ಕತೆಗಳಲ್ಲಿ ತಂದಿಲ್ಲವೆಂದು ಬೇಸರಿಸಿದ್ದಾರೆ!

## ೧.೩. ಮಾರಿಸ್ ಕೃತ ಇತಿಹಾಸ ಪುಸ್ತಕಾನುವಾದ

ಹೆನ್ರಿ ಮಾರಿಸ್ ಎಂಬವನು ಇಂಗ್ಲೆಂಡ್ ಹಾಗೂ ಹಿಂದೂ ದೇಶ – ಹೀಗೆ ಎರಡು ಇತಿಹಾಸ ಪುಸ್ತಕಗಳನ್ನು ನಮ್ಮಲ್ಲಿಯ ಶಾಲೆಗಳಿಗೆಂದೇ ಬರೆದಿದ್ದು ಅವು ದೇಶಾದ್ಯಂತ ಬಳಕೆಯಲ್ಲಿದ್ದುವು, ಹಲವಾರು ವೃತ್ತಿಗಳನ್ನು ಕಂಡವು. ಕಿಟೆಲ್ ಅವೆರಡನ್ನೂ "ಚನ್ನಪಟ್ಟಣದ (ಮದ್ರಾಸ್) ಆಧಿಪತ್ಯದ ಮೇರೆಗೆ ಶಾಲೆಗಳ ಪ್ರಯೋಜನಾರ್ಥವಾಗಿ 'ಬೋಧನೆಯ ಸರಕಾರೀ ಡೈರೆಕ್ಟರ್' [D.P.I] ಅವರ ಅಪ್ಪಣೆಯ ಪ್ರಕಾರ ಕನ್ನಡದಲ್ಲಿ ಟೀಕಿಸಿದ್ದು" ಎಂಬುದಾಗಿ ಹೇಳಿದ್ದರೂ 'Translated and adapted' ಎಂಬ ಮಾತಿರುವುದರಿಂದ ಬರಿಯೇ ಅನುವಾದಿಸಿಲ್ಲ ಎಂದು ಹೇಳಬಹುದು; ಅರ್ಥಾತ್ ಅಲ್ಲಲ್ಲಿ ಹೆಚ್ಚಿನದನ್ನು ಸೇರಿಸಿರಬಹುದು.

'ಹಿಂದೂ ದೇಶದ ಚರಿತ್ರವು' ಇದರಲ್ಲಿ ಕ್ರಿ.ಸ್ತ ಶಕಾರಂಭದಿಂದ ೧೯ನೆಯ ಶತಮಾನದ ವರೆಗಿನ ಇತಿಹಾಸವಿದೆ. ಒಟ್ಟಿನ ೨೬ ಅಧ್ಯಾಯಗಳಲ್ಲಿ ೧೧ನೆಯದು ಮಾತ್ರ ಮೈಸೂರಿನ ಚರಿತ್ರೆಗೆ ಮೀಸಲು. ಮೂಲ ಲೇಖಕನಿಗೆ ತಿಳಿದ ಇತಿಹಾಸವೆಂದರೆ ವಿಲಾಯತಿಯವರದೇ. ಅದಕ್ಕಾಗಿ ೧೫ ಪ್ರಕರಣಗಳು ! ೧೮೬೦ರ ದಶಕದಲ್ಲಿ ಕನ್ನಡ ನಾಡಿನ ಅದರಂತೆ ದೇಶದಲ್ಲಿಯ ಶಾಸನಗಳಿಂದ ಇತಿಹಾಸ ತಿಳಿಯದಿದ್ದುದೂ ಈ ಭೇದಭಾವಕ್ಕೆ ಕಾರಣ.

ಅಂದಹಾಗೆ ಆಗಿನ ಕಾಲದ ಕಿಟೆಲರ ಕನ್ನಡ ನುಡಿ ಯಾವ ಬಗೆಯದ್ದಿತ್ತು, ಎಂಬುದು ಕುತೂಹಲದ ವಿಷಯ. ಇಲ್ಲಿ ವ್ಯಕ್ತವಾಗಿರುವ ವಿಷಯವೂ ಅಷ್ಟೇ ಮೋಜಿನದಾಗಿದೆ;

"ಆಗಿನ ಸಮಯಕ್ಕೆ ಚನ್ನಪಟ್ಟಣವು ದೊಡ್ಡ ಕಂಟಕದೊಳಗೆ ಇತ್ತು. ಹ್ಯಾಗಂದರೆ ಹೈದರನು ಸಾವಿರ ಸಾವಿರ ದಂಡುಗಾರರನ್ನು ಕೂಡಿಕೊಂಡು 'ಕರ್ನಾಟಿಕಾ' ದೇಶದ ಬೈಲಿಗೆ ಇಳಿಯುತ್ತ ಬರುತ್ತಿದ್ದನು. ಅವನು ಹಲು ಕಾಲದಿಂದ ಆ ಗೊತ್ತಿಗಾಗಿ ಹಿರಿದಾದದ್ದೊಂದು ಸೈನ್ಯವೆತ್ತುತ್ತ ನಿಜಾಮ ಮುಂತಾದ ಮುಸಲ್ಮಾನರಾದ ಪತಿಗಳನ್ನು ಸಹಾಯಕ್ಕೆ ಕರದು, ದಿಕ್ಕು ದಿಕ್ಕಿನಿಂದ ಬಂದ ಸಾಹಸಗಾರರನ್ನು ತನ್ನಲ್ಲಿ ಇಟ್ಟುಕೊಂಡು ಇದ್ದನೆಂದು ಹಿಂದು ದೇಶ ಪ್ರಸಿದ್ಧವಾಗಿತ್ತು. ಆದರೂ ಚನ್ನಪಟ್ಟಣದ ಅಧಿಪತಿಗೆ ಅಲ್ಲಿಯ ಉಳಿಕೆಯ ಅಧಿಕಾರಸ್ಥರಿಗೆ ಸಹಾ, ಅದೆಲ್ಲಾ ಗೊತ್ತಾಗಿರಲಿಲ್ಲ. ಶತ್ರುಗಳಿಗೆ ಎದುರಾಗಿ ನಿಂತುಕೊಳ್ಳಲಿಕ್ಕೆ ಚೆನ್ನಾಗಿ ಯುದ್ಧ ಸಾಧಕ ಮಾಡಿಸಿದ ಪಡೆ ಇರಲಿಲ್ಲ; ರಸ್ತೆಗಳು ಒಟ್ಟುಕೊಂಡಿರಲಿಲ್ಲ: ಅದು ಹೊರ್ತಾಗಿ ಬಂಗಾಳದಲ್ಲಿ ಸ್ವಲ್ಪ ಕಾಲದ ಆಚೆ ನಡದ ಹಾಗೆ ಚನ್ನಪಟ್ಟಣದಲ್ಲಿಯೂ ಆಧಿಪತ್ಯದವರೊಳಗೆ ಮಾನಗೇಡುಳ್ಳ ಜಗಳಗಳು ನಡೆದವು.

## ೨. ಕಿಟೆಲರ ಪತ್ರಿಕೋದ್ಯಮ

ಕನ್ನಡ ಪತ್ರಿಕೋದ್ಯಮ ವಿಚಾರದಲ್ಲಿ ಕಿಟೆಲರ ಸಾಧನೆ ಎದ್ದುಕಾಣುವಂತಹದಲ್ಲ. ಆದರೆ ಮ್ಯಾಕ್ ಎಂಬ ಸಹೋದ್ಯೋಗಿಯೊಡನೆ ಕೆಲ ಕಾಲ ಸಂಪಾದಿಸಿದ 'ವಿಚಿತ್ರ ವರ್ತಮಾನ ಸಂಗ್ರಹ' ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ಅವರದೇ ಆದ ಛಾಪು ಇದೆಯೆಂಬ ಕಾರಣದಿಂದ ಎರಡು ಮಾತು ಹೇಳಬೇಕು. ಅದರ ಪ್ರಕಟನೆಯ ೧೮೬೨ನೆಯ ವರ್ಷ; ಎಂದರೆ ಕಿಟೆಲರು ಅದೇ ಆಗ ಕನ್ನಡ ಸಾಹಿತ್ಯದಲ್ಲಿ ಪ್ರವೇಶಿಸಿದ್ದರು. ಆಗ ಕನ್ನಡದಲ್ಲಿ ಒಂದೆರಡು ಪತ್ರಿಕೆಗಳು ಮಾತ್ರವೇ ಪ್ರಕಟವಾಗುತ್ತಿದ್ದವು. ಹರ್ಮನ್ (Hermann) ಮೈವ್‌ಗ್ಲಿಂಗ್ ಕನ್ನಡದ ಮೊತ್ತಮೊದಲಿನ ಪತ್ರಿಕೆಯಾದ 'ಮಂಗಳೂರು ಸಮಾಚಾರ'ವನ್ನೂ (೧೮೪೩) ತದನಂತರ ೧೮೫೭ರಲ್ಲಿ ಮತ್ತೊಂದನ್ನೂ ಪ್ರಕಟಿಸಿ ನಿಲ್ಲಿಸಿದ್ದರು. ಮೈಸೂರಲ್ಲಿ 'ಕರ್ಣಾಟಕ ಪ್ರಕಾಶಿಕೆ' ಎಂಬ ಒಂದು ವಾರಪತ್ರಿಕೆ (೧೮೫೬) ಧಾರವಾಡದಲ್ಲಿ 'ಕನ್ನಡ ಜ್ಞಾನಬೋಧಕ'ವೆಂಬ ಮಾಸಪತ್ರಿಕೆ (೧೮೬೧), ಬೇರೆ ಒಂದೆರಡು ಪತ್ರಿಕೆಗಳು ಮಾತ್ರವೇ, ಕಿಟೆಲರ ಕಾಲದಲ್ಲಿ ಇದ್ದವುಗಳು.

ಹೀಗೆ ಕನ್ನಡ ಪತ್ರಿಕಾ ವ್ಯವಹಾರದಲ್ಲಿ ಆರಂಭಕಾಲದ್ದಾದರೂ ಈ ಪತ್ರಿಕೆ ಅತ್ಯಂತ ಸುಂದರವಾಗಿ ಹಾಗೂ ವೈವಿಧ್ಯಮಯ ಲೇಖನಗಳನ್ನು ಒಳಗೊಂಡು ಹೊರಬರತೊಡಗಿತು. ಇದರ ಪ್ರಾಯೋಜಕರು ಮುಂಬಯಿಯ ಅರೆ-ಸರಕಾರಿ ಸಂಸ್ಥೆಯಾದ 'Canerese Vernacular Society' ಎಂಬವರು. ಇವರೇ 'ಕನ್ನಡ ಜ್ಞಾನಬೋಧಕ'ದ ಪ್ರವರ್ತಕರಾಗಿದ್ದು, ಅದಾವ ಕಾರಣದಿಂದಲೋ ಒಂದು ಪತ್ರಿಕೆಯನ್ನು ಆರಂಭಿಸಲು ಮಂಗಳೂರಿನ ಬಾಸೆಲ್ ಮಿಶನ್ನಿನವರಿಗೆ ಕೇಳಿಕೊಂಡ ರೆಂದು ಕಾಣುತ್ತದೆ.

ಈ ಪತ್ರಿಕೆಯ ಹೆಸರು 'ವಿಚಿತ್ರ' ಶಬ್ದವನ್ನು ಒಳಗೊಂಡದ್ದು ವಿಚಿತ್ರವಾಗಿದೆಯಲ್ಲವೆ. ಆದರೆ ಸಂಸ್ಕೃತದಲ್ಲಿ ವಿಚಿತ್ರ ಎಂದರೆ beautiful, handsome ಎಂಬ ಅರ್ಥ ಮುಖ್ಯವಾಗಿದೆ. (ಆಪ್ಟೆ ಕೋಶದ ಪ್ರಕಾರ). ಕಿಟೆಲರಿಗೆ ಆಗಿನ್ನೂ ಕನ್ನಡ ನುಡಿಗಟ್ಟಿನ ರೂಢಿಯಾಗಿರಲಿಲ್ಲ. ಅವರು ಹೊರಡಿಸಿದ ಪತ್ರಿಕೆ 'ಸಚಿತ್ರ'ವೂ ಆಗಿದ್ದು ಸೊಗಸಾದ ಚಿತ್ರಗಳನ್ನು ಒಳಗೊಂಡಿದ್ದಿತು. ಇನ್ನೊಂದು ವಿಶೇಷವೆಂದರೆ ಅದರ ದೊಡ್ಡ ದೆನ್ನುವ ಸೈಜು. (ಫೂಲ್ಸ್‌ಕ್ಯಾಪ್‌ನದು).

"ಕನ್ನಡ ಜನರಲ್ಲಿ ಓದುವವರ ಮತ್ತು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವ ಸಂಗತಿಗಳನ್ನು ಮೆಚ್ಚುವವರ, ಮುಖ್ಯವಾಗಿ ಈಗ ಕಲಿಯತೊಡಗಿದವರ ಬುದ್ಧಿಯನ್ನು ಇನ್ನೂ ಹೆಚ್ಚು ವೃದ್ಧಿ ಮಾಡುವ ಹಾಗೆ ಒಳ್ಳೇ ಪುಸ್ತಕಗಳಿಂದ ಆರಿಸಿ ತೆಗೆದದ್ದು ಸರ್ತಿಸರ್ತಿಗೆ ಇದರಲ್ಲಿ ಸೇರಿಸಲಾಗುವುದು" ಎಂದು ಅದರ ಸಂಪಾದಕೀಯದಲ್ಲಿ ಹೇಳಲಾಗಿದೆ. ಮೇಲ್ಕಂಡ ಮುಂಬಯಿ ಸಂಸ್ಥೆಯವರ ಶೈಕ್ಷಣಿಕ ಉದ್ದೇಶವೇ ಅದಾಗಿದ್ದಿತು.

ಪತ್ರಿಕೆಯಲ್ಲಿ ಬರುತ್ತಿದ್ದ ದೇಶವಿದೇಶಗಳ ನಾನಾ ಬಗೆಯ ವರ್ತಮಾನಗಳು, ಹೊಸ ಶೋಧಗಳು, ಜೀವನ ಚರಿತ್ರೆಗಳು, ಪ್ರಖ್ಯಾತ ಕೃತಿಗಳಿಂದ (ಇಂಗ್ಲಿಷ್) ಆಯ್ದ

ಲೇಖನ, ಕವಿತೆಗಳು (ಉದಾ.ಗೆ. Chaucerನ ಕಾವ್ಯದಿಂದ), ನೀತಿ ಕತೆಗಳು, ಆಶ್ಚರಿಯ ಘಟನೆಗಳು–ಇವುಗಳಿಂದ ಪತ್ರಿಕೆಯ ಸ್ವರೂಪವನ್ನು ತಿಳಿಯಬಹುದು. ಜೊತೆಗೆ ಇಂಗ್ಲಿಷ್‌ನಲ್ಲಿಯವೇ ಕವಿತೆಗಳೂ ದಾಸರ ಪದಗಳೂ ಇದ್ದವು. ಅಲ್ಲಲ್ಲಿ ಕ್ರೈಸ್ತ ಮತಪರ ಸುದ್ದಿಗಳೂ ಪ್ರಕಟವಾಗುತ್ತಿದ್ದವು. ವಿಕ್ಟೋರಿಯಾ ರಾಣಿಯ ಪತಿಯು ಕ್ರೈಸ್ತಮತೀಯ ಅಭಿವೃದ್ಧಿಗೆ ಯಾವ ರೀತಿಯಲ್ಲಿ ನೆರವಾಗುತ್ತಿದ್ದ ಎನ್ನುವುದು–ಇಂಥ ಒಂದು ಸುದ್ದಿ. ಭಾಷಾ ವಿಚಾರವೂ ಆಗಾಗ ಹೊರಹೊಮ್ಮಿದೆ. ಇಂಗ್ಲಿಷ್ ವ್ಯಾಕರಣ ಕಲಿಕೆ, ಅದರಂತೆ ಜರ್ಮನ್, ಸಂಸ್ಕೃತ ಹಾಗೂ ಇಂಗ್ಲಿಷ್–ಸಮಾನ ಶಬ್ದಗಳ ಪಟ್ಟಿ ಇದ್ದು, ಅದೆಲ್ಲ ಕಿಟೆಲರದೇ. ಅಲ್ಲದೆ ಅವರಿಂದ ರಚಿತವಾದ ಕೆಲವು ಬಿಡಿ ಪದ್ಯಗಳಿವೆ. ಅವರು ಆ ಮುಂದೆ ಪ್ರಕಟಿಸಿದ ಯೇಸುವಿನ ಜೀವನದ ಪದ್ಯಮಾಲಿಕೆ ಇದೆ. ಜ್ಯೋತಿಷ್ಯದ ಕುರಿತಾದ ಲೇಖನಗಳು, ಮುಂತಾಗಿ ಬಂದಿವೆ. ಮಾರ್ಟಿನ್ ಲೂಥರನ ಚರಿತ್ರೆಯ ಲೇಖಕ್ಕೆ 'ಹೆಸರು ಹೋದವನೊಬ್ಬನ ಚರಿತ್ರೆಯು' ಎಂಬ ಶೀರ್ಷಿಕೆ ಇದೆ. ಬಹುಶಃ 'ಕೀರ್ತಿಶೇಷ' ಇದರ ಕನ್ನಡಾನುವಾದವು. ಹೀಗೆ ವಿಚಿತ್ರವಾಗಿ ರೂಪಗೊಂಡಿರಬೇಕು. ಈ ಪತ್ರಿಕೆಯಲ್ಲಿನ ಭಾಷಾ ಶೈಲಿಯನ್ನು ಅರಿಯಲು, ಅದರಿಂದ ಆಯ್ದ ಸ್ವಲ್ಪ ಭಾಗವನ್ನು ಈ ಕೆಳಗೆ ಕೊಡುತ್ತಿದ್ದೇನೆ. ಅದರಿಂದ ಆಗಿನ ಕನ್ನಡ ಭಾಷೆಯ ಅವಸ್ಥೆಯನ್ನೂ ಅರಿಯಬಹುದಾಗಿದೆ.

ಕ್ರಿ.ಶ. ೧೭೩೨ನೇ ವರುಷ ಜಾರ್ಜ್ ಹ್ವಿತ್ಫಿಲ್ಡ್‌ನೆಂಬ ವಿದ್ಯಾರ್ಥಿ ವೆಸ್ಲಿಯನ್ ಮೆಥಾಡಿಸ್ಟ್ ಸಂಸ್ಥೆಯನ್ನು ಕೂಡಿಕೊಂಡನು. ಇವನು ಒಬ್ಬ ದ್ರಾಕ್ಷಾರಸ ವಿಕ್ರಯಸ್ಥನ ಮಗನಾಗಿದ್ದು ಮೊದಲು ಪಟಿಂಗತನದಲ್ಲಿ ಹೊರಳಾಡಿ, ಕಾಲಗತಿಯಲ್ಲಿ ಮಾನಸಾಂತರ ಹೊಂದಿ ದೇವಜ್ಞಾನದರ್ಶನ ಕಲಿಯುವಂಥವನಾದನು.

ಹ್ವಿತ್ಫೀಲ್ಡನು ವೆಸ್ಲಿಗಿಂತ ಇನ್ನೂ ವಾಕ್ಚತುರನು, ಅವನು ಮಿಗು ಸಾಹಸಪಟ್ಟು ಪ್ರಸಂಗಿಸುವಲ್ಲಿ  ಕಾಲಿನಿಂದ ನೆಲಕ್ಕೊದೆಯುತ್ತಾ, ಕಣ್ಣೀರು ಹಾಕುತ್ತಾ ಇರುವುದನ್ನು ಬಿಡನು. ಪ್ರಸಂಗ ತೀರಿಸುವಂಥದು ರಕ್ತ ಕಾರುವಷ್ಟು ದಣಿದವನಾಗಿ ತೋರುವನು. ಅವನು ಸಾರುತ್ತಿರಲು ಯಾರ ಮನಸ್ಸೂ ಇತ್ತತ್ತು ಚಲಿಸದೊಡನೆ ಆಕರ್ಷಿಸುತ್ತಿದ್ದನು.

ಈ ವಿಷಯದಲ್ಲಿ ಹಡಗ ಕಟ್ಟುವ ಕೆಲಸದವನೊಬ್ಬನು ಒಮ್ಮೆ ತಾನು ತನ್ನ ಊರಿನ ದೇವಾಲಯದೊಳಗೆ ಪ್ರಸಂಗ ಕೇಳುವ ಹೊತ್ತಿನೊಳಗೆ ಒಂದು ಪೂರ್ಣ ಹಡಗವನ್ನು ಬುಡ ಹಿಡಿದು ತುದಿಯವರೆಗೂ ಮನಸ್ಸಿನಲ್ಲಿ ಕಟ್ಟುವಂತೆ ಆಗುತ್ತಿತ್ತು; ಆದರೆ ಹ್ವಿತ್ಫೀಲ್ಡ್‌ದೊರೆಯು ಪ್ರಸಂಗಿಸುವಲ್ಲಿ ಒಂದು ತೊಲೆಯನ್ನಾದರೂ ಇಡುವದು ತನ್ನಿಂದಾಗದೆಂದು, ಹೇಳಿದನು.

ಹ್ವಿತ್ಫೀಲ್ಡನು ಒಂದಾನೊಂದು ದಿವಸ ಕಲ್ಲಿದ್ದಲು ಖಣಿಯು ಕೆಲಸದವರೆಂಬ ಗುಂಪಿಗೆ ದೇವರ ವಾಕ್ಯ ತಿಳಿಸುವಾಗ ಅವರಲ್ಲೊಬ್ಬ ಕಾಡು ಗುಣದವನು ಅವನೆದುರಿನದೊಂದು ಮರದ ಟೊಂಗಿಯಲ್ಲಿ ಕೂತುಕೊಂಡು ಅವನ ಮೇಲೆ ನಿರ್ಲಜ್ಜಾ ದೃಷ್ಟಿಯನ್ನಿಟ್ಟು ಅಣಕಿಸುತ್ತಿರಲು ಹ್ವಿತ್ಫೀಲ್ಡನು ಅವನನ್ನು ಕಂಡು, ಸಿಡಿಲಿನಂತೆ

ತನ್ನ ವಾಗ್ವಜ್ರವನ್ನು ಅವನ ಮೇಲೆ ಬಡಿದ ಕ್ಷಣವೇ ಅವನು ದಿಗಿಲಾಗಿ ಟೊಂಗಿಯಿಂದ ನೆಲಕ್ಕುರುಳಿ ಬಿದ್ದನು". (ವಿಚಿತ್ರ ವರ್ತಮಾನ ಸಂಗ್ರಹ. ೧೮೬೨. ಪು. ೫೯೬).

ಈ ಪತ್ರಿಕೆಗೆ ಪುರವಣಿಯಾಗಿ 'ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ'ವೂ ಜೋಡಿಸಲ್ಪಟ್ಟಿತ್ತು. ಏನೇ ಆಗಲಿ ಪತ್ರಿಕೆಯು ಕೆಲ ತಿಂಗಳ ಕಾಲ ನಡೆದು ನಿಂತು ಹೋಯಿತು.

# ೩. ಕಿಟೆಲ್ ಕವನಕೋಶ

ಕಿಟೆಲರನ್ನು ಕನ್ನಡ ಶಬ್ದಕೋಶಕ್ಕಾಗಿ ನೆನೆಯುತ್ತೇವೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ 'ಕೋಶ' ಎಂದು ಹೆಸರಿಸಬಹುದಾದಷ್ಟು ಕವಿತೆಗಳು ಹೊರಹೊಮ್ಮಿವೆ. ಕಿಟೆಲರಿಗೆ ಎಳವರೆಯದಿಂದಲೇ ಕವನ ರಚಿಸುವ ಹವ್ಯಾಸ ಇದ್ದಿತೆಂದು ಕಾಣುತ್ತದೆ. ೧೮೫೩ರ ಡಿಸೆಂಬರಿನಲ್ಲಿ ಧಾರವಾಡಕ್ಕೆ ಬಂದರಷ್ಟೆ. ಬಂದ ಎರಡು ವಾರಗಳಲ್ಲಿ ಹುಬ್ಬಳ್ಳಿಯಲ್ಲಿ ರೆ. ವುರ್ತ್ ಎಂಬ ಸಹೋದ್ಯೋಗಿಯ ಮದುವೆ ನೆರವೇರಿತು. ಆಗ ಕಿಟೆಲ್ ಕವಿತೆ ರಚಿಸಿ (ಜರ್ಮನ್ ಭಾಷೆಯಲ್ಲಿ) ದಂಪತಿಗಳಿಗೆ ಶುಭವನ್ನು ಕೋರಿದರಂತೆ. ಈ ನಿಮಿತ್ತದಿಂದ ಅವರನ್ನು ಹೊಸಗನ್ನಡ ಕವಿತೆಯ ಆರಂಭಕಾರರೆಂದು ಗುರುತಿಸ ಸಾಧ್ಯವೆ? ನೋಡೋಣ.

ಕಾವ್ಯ, ಕವಿತೆ, ಪದ್ಯ–ಇವು ಮೂರರ ಇಂಗಿತ ಒಂದೇ. ಇವುಗಳ ಬಳಕೆಯಲ್ಲಿ 'ಕಾವ್ಯ' ದೊಡ್ಡದು ಮತ್ತು ವಿಸ್ತಾರಿತ ವಸ್ತುವುಳ್ಳದ್ದು ಎಂಬುದಾಗಿ ತಿಳಿದಿದ್ದೇವೆ. 'ಕವಿತೆ' ಎನ್ನುವುದು ಗಾತ್ರದಲ್ಲಿ ಚಿಕ್ಕದು, ಜೀವನದ ಒಂದು ಸಣ್ಣ ಅಂಶವನ್ನು ಕಿರಿದರಲ್ಲಿ ಚಮತ್ಕಾರವಾಗಿ ಹೇಳುವುದು ಎಂದದರ ಆಶಯ. ಪದ್ಯ? ಗದ್ಯದ ವಾಕ್ಯರಚನೆ ಇರದೇ, ಮಾತ್ರಾ ಬಂಧದಲ್ಲಿ ನಿರ್ದಿಷ್ಟ ಸಾಲುಗಳಲ್ಲಿ ರಚಿಸಿದರೆ ಅದು ಪದ್ಯ. ಅದರಲ್ಲಿ ಕಾವ್ಯಾಂಶ, ಎಂದರೆ ಕಾವ್ಯದ ಸೊಗಸುಗಾರಿಕೆ, ಕಲ್ಪಕತೆ ಇರಲಿಕ್ಕೂ ಇಲ್ಲ.

ಹಳಗನ್ನಡದಲ್ಲಿಯ ಕಾವ್ಯಗಳು ಪೌರಾಣಿಕ ಕಥನವಾಗಿರಬಹುದು, ಧರ್ಮಶಾಸ್ತ್ರದ ವಿಷಯವಿರಬಹುದು. ಎರಡನ್ನೂ ಬೆರೆಸಿದ್ದು ಆಗಿರಬಹುದು. ನಮ್ಮ ಕಾವ್ಯ ಪರಂಪರೆಯಲ್ಲಿ ಇವುಗಳೇ ಎದ್ದು ಕಾಣುವಂತಿವೆ. ಚಿಕ್ಕ ಗಾತ್ರದ ಶರಣರ ವಚನಗಳು, ಹರಿದಾಸರ ಕೀರ್ತನೆಗಳು, ಅನುಭಾವದ ಪದಗಳು, ಅಷ್ಟಕ–ಮುಕ್ತಕಗಳೂ ಇವೆ. ಅವುಗಳ ವಿಷಯವೂ ಧರ್ಮ, ನೀತಿ ಪರವಾದದ್ದು. ಮೇಲೆ ಹೇಳಿದ ಹೊಸ 'ಪದ್ಯ'ದ ಮಾದರಿ ೧೯ನೆಯ ಶತಮಾನದ ಪೂರ್ವಾರ್ಧದಿಂದ ಮೊದಲಾಯಿತೆನ್ನಬಹುದು. ಆ ಮೇಲೆ ೧೯ನೆಯ ಶತಮಾನದ ಉದ್ದಕ್ಕೂ ಅಲ್ಲಲ್ಲಿ ಕಾಣಿಸಿಕೊಂಡಿದೆ.

ಈ ಹೊಸಗನ್ನಡ ಕವಿತೆಗೆ. ಪ್ರೇರಣೆ ದೊರೆತದ್ದು ಪಾಶ್ಚಿಮಾತ್ಯ ಸಂಪರ್ಕ ಎಂಬುದು ತಿಳಿದ ವಿಷಯ. ಈ ಸಂಪರ್ಕದ ವಾಹಕಗಳಾದದ್ದು ಕ್ರೈಸ್ತ ಮತಪ್ರಸಾರ ಮತ್ತು ಪಾಶ್ಚಿಮಾತ್ಯ ರೀತಿಯ ಶಿಕ್ಷಣ ಎನ್ನುವುದು ಸರಿಯೇ!. ಆದರೆ ಹಳಗನ್ನಡ ಕಾವ್ಯಕ್ಕಿಂತ ಯಾವ ರೀತಿಯಲ್ಲಿ ಈ ಹೊಸ ಕವಿತೆ ವಿಶಿಷ್ಟತೆಯನ್ನು ಪಡೆದಿದೆ?

ಒಂದು, ಮೇಲೆ ಹೇಳಿದಂತೆ ಕಿರಿದಾದ ಗಾತ್ರ. (ಇದೇ ಮುಂದೆ ೨೦ನೆಯ ಶತಮಾನದ ಆರಂಭದಲ್ಲಿ ಭಾವಗೀತೆಗೆ ಎಡೆಮಾಡಿಕೊಟ್ಟಿತು).

ಎರಡನೆಯದು, ಧಾರ್ಮಿಕ ಅಂಶಗಳಿಗಿಂತ ಲೌಕಿಕ ವಿಷಯಕ್ಕೆ ಪ್ರಾಶಸ್ತ್ಯ.

ಮೂರನೆಯದು, ಹಳಗನ್ನಡದ ಪ್ರೌಢ ಹಾಗೂ ಸಂಸ್ಕೃತಭೂಯಿಷ್ಠವಾದ ಭಾಷೆಗಿಂತ ನೇರ, ಸರಳ ನಿರೂಪಣೆ.

ನಾಲ್ಕನೆಯದು, ಹಳೆಯ ಛಂದೋಬಂಧವನ್ನು ಬಹುಮಟ್ಟಿಗೆ ಕೈಬಿಟ್ಟು, ಅದರಲ್ಲಿಯ ಷಟ್ಪದಿಯನ್ನು ಮಾತ್ರ ಉಳಿಸಿಕೊಂಡದ್ದು.

ಇದಿಷ್ಟು ೧೯ನೆಯ ಶತಮಾನದ ಹೊಸ ಕವಿತೆಯ ಸ್ಥೂಲ ಲಕ್ಷಣಗಳು. ಸ್ವಂತದ ಅನಿಸಿಕೆಯ, ನವೀನ ಕಲ್ಪಕತೆಯ, ಮತ್ತು 'ಭಾವಗೀತೆ' ಎನ್ನಬಹುದಾದ ಹೊಸಗನ್ನಡ ಕವಿತೆ ೧೯ನೆಯ ಶತಮಾನದ ಕೊನೆಯಲ್ಲಿ ಕ್ರಮೇಣ ಮೆಲ್ಲನೆ ತಲೆ ಎತ್ತಿತು. ತಿಳಿಯಬೇಕಾದ ಮಹತ್ವದ ಅಂಶವೆಂದರೆ ಆರಂಭದ ಈ ಕವಿತೆ ಇಂಗ್ಲಿಷ್ ಮತ್ತು ತುಸುಮಟ್ಟಿಗೆ ಸಂಸ್ಕೃತ ಹಾಗೂ ಜರ್ಮನ್ ಭಾಷೆಗಳಿಂದ ಅನುವಾದಗೊಂಡದ್ದು.

ಕಿಟೆಲರು ೧೮೫೩ರಲ್ಲಿ ಇಲ್ಲಿಗೆ ಬಂದರಷ್ಟೆ. ಆ ಕಾಲಕ್ಕೆ ಹೊಸಗನ್ನಡ ಕವಿತೆ ಎಂಬುದು ಇರಲೇ ಇಲ್ಲ. ಆದರೆ ಮಿಶನರಿಗಳ ಪ್ರಭಾವದಿಂದ ಕ್ರೈಸ್ತ ಗೀತೆಗಳು ಮಾತ್ರ ೧೮೪೦ರಿಂದ ಬೆಳಕಿಗೆ ಬರತೊಡಗಿದುವು. ಸುರುವಿಗೆ ಅವು ಕೂಡ ಯುರೋಪಿಯನ್ ಭಾಷೆಗಳಿಂದ ಶಬ್ದಶಃ ಅನುವಾದಗೊಂಡವುಗಳು ಮತ್ತು ಅದೇ ಪಾಶ್ಚಾತ್ಯ ಧಾಟಿಯಲ್ಲಿ ಹೇಳಬಹುದಾದವುಗಳು. ಇಂಥ ಗೀತೆಗಳನ್ನು ಮೊದಲಿಗೆ ಪ್ರಕಟಿಸಿದವರು ಲಂಡನ್ ಮಿಶನ್ ಹಾಗೂ ಬಾಸೆಲ್ ಮಿಶನ್‌ದವರು. (೧೮೪೨ರಲ್ಲಿ ಬಾಸೆಲ್ ಮಿಶನ್ ಅಂಥ ಒಂದು ಕಿರು ಸಂಗ್ರಹವನ್ನು ಮೊದಲ ಬಾರಿಗೆ ಹೊರತಂದಿದೆ).

ಈ ಹಿನ್ನೆಲೆಯಲ್ಲಿ ಕಿಟೆಲರು ಅದಾವ ನಿಮಿತ್ತದಿಂದ ಕವಿತಾರಚನೆಗೆ ತೊಡಗಿದರು; ಅದಕ್ಕೆ ಪ್ರೇರಣೆ ಯಾವುದು ಎಂಬುದನ್ನು ನೋಡುವ. ಮಿಶನರಿಯಾಗಿ ೧೮೫೩ರ ಕೊನೆಗೆ ಇಲ್ಲಿಗೆ ಬಂದ ಮೇಲೆ ೬-೭ ವರ್ಷಗಳವರೆಗೆ ತಮ್ಮ ಮಿಶನರಿ ಜೀವನವನ್ನು ಯಾವ ರೀತಿಯಾಗಿ ನಡೆಸಬೇಕೆಂದು ತಿಳಿಯದೇ ಒದ್ದಾಡಿದರಷ್ಟೆ. ಕೊನೆಗೆ ಮ್ಯೆವ್‌ಗ್ಲಿಂಗರ ಸೂಚನೆಯ ಮೇರೆಗೆ ಗ್ರಂಥರಚನೆ/ಪ್ರಕಟನೆಗೆ ಮತ್ತು ಕವಿತಾರಚನೆಗೆ ತೊಡಗಿಕೊಂಡರು. ಹೇಗೂ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಆಳವಾಗಿ ಅಭ್ಯಸಿಸಿದ್ದರು. ಕನ್ನಡ ಛಂದೋಬಂಧವನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ನಾಗವರ್ಮನ 'ಛಂದೋಂಬುಧಿ'ಯನ್ನು ಸಂಪಾದಿಸಿ ಪ್ರಕಟಿಸಿದ್ದರು. ಅಲ್ಲದೆ Indian Antiquaryಯಲ್ಲಿ ಪ್ರಕಟವಾದ Notes on Indian Poetry & Prosody (೧೮೭೪) ಮತ್ತು ಅದಕ್ಕೂ ಮೊದಲು ಪ್ರಕಟವಾದ 'Karnataka Vaishnava Dasas' (೧೮೭೩) ಎಂಬುವನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಸ್ವತಃ ಅವರು ಕನ್ನಡದಲ್ಲಿ ಕವನ ರಚಿಸಹೊರಟದ್ದಕ್ಕೆ ನಿಜವಾದ ಪ್ರೇರಣೆ ಕರ್ನಾಟಕದ ವೈಷ್ಣವ ಎಂದರೆ ಹರಿದಾಸರ ಹಾಡುಗಳು. ಮತಪ್ರಸಾರದ ನಿಮಿತ್ತದಿಂದ ಧಾರ್ಮಿಕ ಹಾಗೂ ಇತರ ಸಮಾರಂಭಗಳಿಗೆ ಹೋದಾಗ ದಾಸರ ಹಾಡುಗಳನ್ನು ಕೇಳಿದ್ದರು. ಎಲ್ಲೆಡೆಗೆ ನಡೆಯುತ್ತಿದ್ದ ಈ ಕೀರ್ತನೆಗಳು ಜನಸಮೂಹದ ಮೇಲೆ ಮಾಡುತ್ತಿದ್ದ ಪ್ರಭಾವದ ಕಲ್ಪನೆ ಅವರಿಗೆ ಮೂಡಿದ್ದಿತು. ಪ್ರತಿ ಮೂರು ತಿಂಗಳಿಗೆ ಕಳಿಸುತ್ತಿದ್ದ ವರದಿಗಳಲ್ಲಿ, ಮೇಲಿಂದ ಮೇಲೆ, ಸಂಗೀತವನ್ನು ಹಿಂದುಗಳಂತೆ ಮತ ಪ್ರಸಾರಕ್ಕೆ ಬಳಸಬೇಕೆಂದು ಹೇಳುತ್ತಿದ್ದರು. ಒಂದು ವರದಿಯಲ್ಲಿ ಬಂಗಾಲದಲ್ಲಿಯ

ಲಂಡನ್ ಮಿಶನ್ ಸೊಸೈಟಿಯವರು ತಮ್ಮ ಮತಪ್ರಸಾರಕ್ಕೆ ಬಂಗಾಲಿ ಸಂಕೀರ್ತನ ವನ್ನು ಬಳಕೆಗೆ ತಂದು ಯಶಸ್ವಿಯಾಗಿದ್ದಾರೆಂದು ಬರೆದರು. ಈ ಕೆಲಸಕ್ಕಾಗಿ ದೇಶೀ ರಾಗಗಳಲ್ಲಿ ಹಾಡುವವರು ಬೇಕು. ಹಾಡುಗಳನ್ನು ರಚಿಸುವವರೂ ಬೇಕು– ಎಂಬುದಾಗಿ ಮತ್ತೊಂದು ವರದಿಯಲ್ಲಿ ಕಾಣಿಸಿದರು. ಇದನ್ನು ಸಾಧಿಸಬೇಕಾದರೆ ತಮ್ಮ ದೈವಜ್ಞಾನದ (Theological) ಸೆಮಿನರಿಯಲ್ಲಿ ಕನ್ನಡ ಕಾವ್ಯಗಳನ್ನು ಕಲಿಸುವ ವ್ಯವಸ್ಥೆ ಇರಬೇಕು. ದೇಶೀಯ ಮಟ್ಟುಗಳಲ್ಲಿ ಹಾಡುಗಳನ್ನು ರಚಿಸುವ ಮಿಶನರಿಗಳು ತೊಡಗಬಹುದಾದರೂ ಅವರು ಆ ಕೆಲಸವನ್ನು ಯಶಸ್ವಿಯಾಗಿ ಮಾಡಲಾರರು. ಅದಕ್ಕಾಗಿ ದೇಶೀಯರನ್ನು ತರಬೇತುಗೊಳಿಸಬೇಕು. . . ಒಂದೇ, ಎರಡೇ, ಹೀಗೆ ಮೇಲಿಂದ ಮೇಲೆ ಹಾಡುಗಳ, ಸಂಗೀತದ ಪ್ರಸ್ತಾಪ ಮಾಡಿಯೇ ಮಾಡುತ್ತಿದ್ದರು.

ಆದರೆ ಬಾಸೆಲಿನ ಕೇಂದ್ರ ಕಮಿಟಿಯು ಹಿಂದೂ ರಾಗಗಳು, ಪಕ್ಕ ವಾದ್ಯಗಳು– ಮುಂತಾದ್ದಕ್ಕೆ ಪ್ರಾಶಸ್ತ್ಯವನ್ನು ಕೊಡಬಾರದು. ಕೆಥಲಿಕರು ಹಾಗೆ ಮಾಡುತ್ತಾರಾದ್ದ ರಿಂದ, ಪ್ರೊಟೆಸ್ಟಂಟರಾದ ತಾವು ಬೇರೆ ಎಂಬುದನ್ನು ಜನ ತಿಳಿಯದೇ ಹೋಗ ಬಹುದು. ಆದ್ದರಿಂದ 'Kittel should be warned not to go further' ಎಂದು ವಿಧಿಸಿದರು! 'It is poetry the Hindus want' ಎಂಬುದಾಗಿ ಕಿಟೆಲ್ ತಮ್ಮ ಸ್ಪಷ್ಟ ನಿಲುಮೆಯನ್ನು ೧೮೭೦ರಲ್ಲಿ ತಿಳಿಸಿದ್ದಕ್ಕೆ ಇದು ಕೇಂದ್ರ ಸಮಿತಿಯ ಪ್ರತಿಕ್ರಿಯೆ! ಅದಾದ ಮೇಲೆ ಕಿಟೆಲರು ಆ ಸಮಿತಿಗೆ ಮತ್ತೊಮ್ಮೆ ಹೇಳ ಹೋಗಲಿಲ್ಲ. ಮತ್ತು ಕವಿತೆ ಬರೆಯುವುದನ್ನೇ ನಿಲ್ಲಿಸಿದರೆಂದು ಕಾಣುತ್ತದೆ.

## ೩.೧ ಕಥಾಮಾಲೆ

ಕಥಾಮಾಲೆಯು ಯೇಸು ಕ್ರಿಸ್ತನ ಜೀವನದ ಘಟನೆಗಳ ಮಾಲೆ. ಅದರಲ್ಲಿಯ ಪದ್ಯಗಳು ಷಟ್ಪದಿ (೮೫) ಹಾಗೂ 'ಪೂರ್ವಿ' ಎಂಬ ದೇಶೀರಾಗದ ಹಾಡುಗಳಿಂದ ಕೂಡಿದ್ದು, ಇದೊಂದು ವಿಚಿತ್ರ ಬೆರಕೆ ಅನಿಸೀತು. ಹಾಗೇಕೆ ಮಾಡಿದ್ದೆಂದು ವಿವರಿಸಬಹುದು. ಷಟ್ಪದಿಯಂತೂ ನಡುಗನ್ನಡ ಕಾವ್ಯದ ಅನೇಕರಿಗೆ ಜನಪ್ರಿಯ ಛಂದೋಬಂಧವಾಗಿದ್ದಿತು. ಕ್ರಿ.ಶ. ೧೮, ೧೯ ಈ ಶತಮಾನಗಳ ಪರಂಪರಾಗತ ಕಾವ್ಯರಚನೆಯು–ಕಿಟೆಲರ ಅನಂತರವೂ ಈ ಛಂದೋಬಂಧದಲ್ಲಿಯೇ ಸಾಗಿ ಬಂದಿದ್ದಿತು. ಆ ದೇಶೀರಾಗವನ್ನು ಆರಿಸಿಕೊಳ್ಳುವುದಕ್ಕೆ ಈ ಮುನ್ನ ವಿವರಿಸಿದ ಅವರ ದೃಷ್ಟಿಕೋಣವೇ ಕಾರಣ. ಆದರೆ ಅವೆರಡರ ಸೇರ್ಪಡೆಗೆ ಏನು ಕಾರಣ? ನನಗೆ ತೋಚುವ ಮಟ್ಟಿಗೆ ಅವರು ಆರಂಭದ ಒಂದೆರಡು ವರ್ಷ ಹುಬ್ಬಳ್ಳಿ–ಧಾರವಾಡದಲ್ಲಿ ದ್ದಾಗಲೋ, ಇನ್ನಾವಾಗಲೋ ಉತ್ತರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಶ್ರೀಕೃಷ್ಣಪಾರಿಜಾತ' ಎನ್ನುವ ವಿವಿಧ ರಾಗಗಳ ಸಂಗೀತ ರೂಪಕವನ್ನು ಅವರು ನೋಡಿದ್ದರು. "ಇಲ್ಲಿಯ ಜನ ಐದಾರು ತಾಸು ಬೇಸರವಿಲ್ಲದೆ ಆ ಸಂಗೀತವನ್ನು ಆಲಿಸಿದರು" ಎಂಬುದಾಗಿ (ಅದರ ಹೆಸರು ಹೇಳಿಲ್ಲ) ತಮ್ಮದೊಂದು ಲೇಖನದಲ್ಲಿ

ಉಲ್ಲೇಖಿಸಿದ್ದಾರೆ. ಜನಗಳನ್ನು ಈ ರೀತಿ ಆಕರ್ಷಿಸುವುದಕ್ಕೆ ದೇಶೀಯ ಹಾಡುಗಳು ಬೇಕೆಂದು ಬಾಸೆಲ್ ಕೇಂದ್ರಕ್ಕೆ ಹೇಳಿಯೇ ಇದ್ದರು. ಹೀಗೆ 'ಕಥಾಮಾಲೆ'ಗೆ ಶ್ರೀಕೃಷ್ಣಪಾರಿಜಾತವು ನಿಮಿತ್ತವಾಗಿರಬೇಕು. ಅದರ ಜೊತೆಗೆ ಯಕ್ಷಗಾನ ಪ್ರಸಂಗಗಳೂ ಕಾರಣವಾಗಿರಬೇಕು ಎಂದು ಕಾತ್ರಿನ್ ಬಿಂಡರ್ (ಫೆಶರ್) ಊಹಿಸುತ್ತಾರೆ. ಅವನ್ನು ದಕ್ಷಿಣ ಕನ್ನಡ ಜಿಲ್ಲೆಯ ಊರುಗಳಲ್ಲಿ ಅವರು ನಿತ್ಯವೂ ಕಾಣಬಹುದಾಗಿದ್ದಿತು. ಅವರು ಆಯ್ದುಕೊಂಡ ಷಟ್ಪದಿ ಮತ್ತು ಪೂರ್ವಿ ರಾಗಗಳ ಬಳಕೆ ಯಕ್ಷಗಾನಗಳಲ್ಲಿ ಸರ್ವಸಾಮಾನ್ಯ.

ಕಿಟೆಲರು ಆಯ್ದುಕೊಂಡ ಯೇಸುವಿನ ಜೀವನ ಘಟನೆಗಳಿಗೆ ಜೆ. ಬಾರ್ಥ್ ಎಂಬವನ ಜರ್ಮನ್ ಗ್ರಂಥವು ಆಕರವಾಗಿದೆ. ಅದೊಂದು ಅತ್ಯಂತ ಜನಪ್ರಿಯ ಕ್ರೈಸ್ತ ಮತೀಯ ಗ್ರಂಥ. ೧೯೦೮ರಲ್ಲಿ ಅದರ ೪೩೦ನೇ ಆವೃತ್ತಿ ಬಂದುದಂತೆ! ಅದರಲ್ಲಿಯ ೧೦೨ ಘಟನೆಗಳಲ್ಲಿ ಕಿಟೆಲ್ ಕೆಲವನ್ನು ಬಿಟ್ಟಿದ್ದಾರೆ. ಉಳಿದ ಮಿಶನರಿಗಳು ಗದ್ಯದಲ್ಲಿ ಬರೆದಿದ್ದರೆ ಕಿಟೆಲ್ ಮೇಲೆ ಕಾಣಿಸಿದ ಹಿಂದೂ ಸಂಗೀತಪರವಾದ ತಮ್ಮ ನಿಲುಮೆಯನ್ವಯ ಪದ್ಯರೂಪವನ್ನು ಆಯ್ದುಕೊಂಡರು.

ಕಿಟೆಲ್ ಭಾರತದ ಪ್ರಾಚೀನ ಕವಿಗಳ ಮಾದರಿಯಲ್ಲಿ ತಮ್ಮ ಕಾವ್ಯವನ್ನು ಶ್ರೀಕಾರದ ಮಂಗಳಶ್ಲೋಕದಿಂದ ಆರಂಭಿಸಿದ್ದಾರೆ.

ಶ್ರೀಜನಾರ್ಚಿತ ಸತ್ಯಸಾಕ್ಷಿಯೆ
ಭೂಜನೈಕೋಗುರುವೆ, ದೇವಜ
ರಾಜಪವನೀ ರವಿಯೆ, ಸುಪಥವೆ, ಜೀವದಧಿಪತಿಯೇ।
ತೇಜದುದಯವೆ ದೇವಶಾಂತಿಯೆ
ಮೂಜಗನ್ನಾಥೇಸು ನಿಮ್ಮಖ
ಮಾಜಿಕೊಳ್ಳದೆ ಮೂಡು ಭಕ್ತರ ಹೃದಯಕಮಲದೊಳು॥

ಮುಂದೆ ಯೇಸುವಿನ ಜನನದಿಂದ ಆರಂಭಿಸಿ ಅವನ ದಿವಾರೋಹಣದ ವರೆಗಿನ ಕಥೆ ಸಾಗಿ ಬಂದಿದೆ. ಆ ಬದುಕಿನ ವಿವಿಧ ಘಟನೆಗಳು ಒಂದೊಂದು ಕಥೆಯ ರೂಪವನ್ನು ತಾಳಿದ್ದರಿಂದ ಇದಕ್ಕೆ 'ಕಥಾಮಾಲೆ' ಎಂದು ಕರೆದಿದ್ದಾರೆ. ಕಿಟೆಲರ ಗಮನ ನೇರ ಕಥಾ ನಿರೂಪಣೆಯಲ್ಲಿದೆ; ವರ್ಣನೆಗಳಲ್ಲಿ ಅಲ್ಲ. ಆದರೆ ಉಪದೇಶದ ನುಡಿಗಳು ಅಲ್ಲಲ್ಲಿ ಕಂಗೊಳಿಸುತ್ತವೆ. ಕ್ರಿಸ್ತನ ನೀತಿ ಬೋಧೆಯಿರುವ ಪ್ರಕರಣದ (೧೪ನೆಯದು) ಕೊನೆಯ ನುಡಿಯಿದು:

ಪಾಪಸಾಗರ ದಾಟಿ ಸಗ್ಗಕೆ
ಪೋಪ ಹಡಗವನೇಸು ವೊಡೆಯನು
ಕಾಪು ಕಾಯ್ವದು, ಕಾಯದಿದ್ದರೆ ಕೇಳಿರಾಳುಗಳೇ।
ದೀಪವಿಲ್ಲದ ಗಾಢದಿರುಳಲಿ

ಶಾಪದಲೆಗಳು ಹೊಡೆದು ಒಡೆಯಲು
ತಾಪದಿಂ ನೀವಲೆಗಳೊಳ್ ಮುಳಮುಳುಗಿ ಹೋಗುವಿರಿ॥

ವಿದೇಶೀಯನೊಬ್ಬನಿಂದ ರಚಿತವಾದದ್ದೆಂದು ಅನ್ನಿಸದಷ್ಟು ಈ ಪದ್ಯದ ಬಂಧ ದೇಶೀಯವಾಗಿದೆ.

ಯೇಸುವಿನ ಕಥೆ ಮತ್ತು ಉಪದೇಶಗಳೂ ಆದಾಗಲೇ ಕನ್ನಡ ಬೈಬಲಿನಲ್ಲಿ, ಎಂದರೆ ಅದರ ಹೊಸ ಒಡಂಬಡಿಕೆಯ ರೂಪಾಂತರಿತ ಬರವಣಿಗೆಗಳಲ್ಲಿ ಬಂದದ್ದೇ ಇದೆ. ಅಲ್ಲೆಲ್ಲ ಕ್ರೈಸ್ತಮತೀಯ ಶಬ್ದಗಳನ್ನು ವಿಚಿತ್ರ ರೀತಿಯಲ್ಲಿ, ಎಂದರೆ ಹೊಸ ಶಬ್ದಗಳನ್ನು ಸೃಷ್ಟಿಮಾಡಿ ಕೊಡಲಾಗಿದೆ. ಕಿಟೆಲರು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಬಳಕೆಯಲ್ಲಿದ್ದಂಥ ಪದಗಳನ್ನು ಬೇಕೆಂದೇ ಬಳಸಿದ್ದಾರೆ–ಇಲ್ಲಿಯ ಜನಮನಕ್ಕೆ ಹತ್ತಿರವಾಗಬೇಕೆಂದು. ಕಥಾಮಾಲೆಯ ಮೊದಲ ನಾಂದಿ ಪದ್ಯಕ್ಕೆ 'ಶ್ರೀಯೆಹೋವಾಯ ನಮಃ' ಎಂದು ಶೀರ್ಷಿಕೆ ಕೊಟ್ಟದ್ದು, ಯೇಸುವನ್ನು 'ಗುರುವೇ' (ಈ ಹಿಂದಿನ 'ಕರ್ತನೇ' ಬದಲಾಗಿ) ಮತ್ತು 'ಒಡೆಯನೇ' ಎಂದು ಕರೆದುದು. ಅದರಂತೆ 'ಭಕ್ತಿ' ('ವಿಶ್ವಾಸ'ಕ್ಕೆ ಬದಲಾಗಿ), 'ಮೋಕ್ಷ' 'ದರ್ಶನ' 'ಅಭಿಷೇಕ' 'ಪದಕಮಲ' ಎಂಬ ಪದಗಳನ್ನು ರೂಢಿಸಿದುದನ್ನು ಗಮನಿಸಬೇಕು. 'ವೇದ' ಶಬ್ದವನ್ನೂ ಪರ್ಯಾಯವಾಗಿ ಬಳಸಿದ್ದಾರೆ. ಯೆಹೋವನನ್ನು 'ದೇವ' ಎಂದು ಹಿಂದಿನ ಮಿಶನರಿಗಳು ಕರೆದದ್ದು ಸರಿಯೇ. ಆದರೂ ಅದು ಸಾಮಾನ್ಯ ಬಳಕೆಯ ಶಬ್ದ. ಕಿಟೆಲರು ಅದರ ಜೊತೆಗೆ ಈಶ ಅಥವಾ ಈಶ್ವರ ಎಂಬುದನ್ನು ಅಲ್ಲಲ್ಲಿ ತಂದಿದ್ದಾರೆ. ಈ ಪದವು ಹಿಂದೂಗಳಿಗೆ ಹೆಚ್ಚು ಹತ್ತಿರದ್ದು– 'ಶಿವ' ಎಂಬ ನಿರ್ದಿಷ್ಟ ಅರ್ಥವನ್ನು ಕೊಡುತ್ತದೆಯಾದ್ದರಿಂದ.

ಹಾಡು! ಈ ಪರಿಕಲ್ಪನೆ ಕಿಟೆಲರಲ್ಲಿ ಇಷ್ಟೊಂದು ಆಳವಾಗಿತ್ತಲ್ಲ–ತಮ್ಮ ಪದ್ಯರಚನೆಯಲ್ಲಿ ಸಂಯುಕ್ತ ದ್ವಿತ್ವಾಕ್ಷರ ಹಾಗೂ ಮಹಾಪ್ರಾಣಗಳನ್ನು ಪ್ರಯತ್ನಪೂರ್ವಕವಾಗಿ ಕಡಿಮೆ ಬಳಸಿದ್ದಾರೆ. ಮತ್ತು ಎಲ್ಲ ನುಡಿಗಳಲ್ಲಿ ಹಳಗನ್ನಡದ ವೈಶಿಷ್ಟವಾದ ದ್ವಿತೀಯ ಪ್ರಾಸವನ್ನು ತಪ್ಪದೇ ಕಾಯ್ದುಕೊಂಡಿದ್ದಾರೆ. ಈ ಕಾರಣದಿಂದಾಗಿ ಅಲ್ಲಲ್ಲಿ ಶಿಥಿಲ ಜೋಡಣೆ ಹಾಗೂ ಸಂಧಿದೋಷ ಕಂಡುಬರುತ್ತದೆ. ಆದರೆ ಅದನ್ನು ದೊಡ್ಡ ದೋಷವೆಂದು ಪರಿಗಣಿಸುವಂತಿಲ್ಲ. ದೇಶೀಯ ರಚನೆಗಳಲ್ಲಿಯೂ – ಆ ಕಾಲದವು. ಇಂಥ ನ್ಯೂನತೆಗಳು ಅಲ್ಲಲ್ಲಿ ಕಾಣಬರುತ್ತವೆ.

ಕಥಾಮಾಲೆಯು ಇನ್ನೂ ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಇದು ಅವರ ದೀರ್ಘ ಪದ್ಯ ರಚನೆಯಲ್ಲಿ ಪ್ರಥಮ ಪ್ರಯತ್ನ. ಆಮೇಲೆ ಬಿಡಿ ಕವನಗಳನ್ನು ಸಾಕಷ್ಟು ರಚಿಸಿದ್ದರೂ ಕನ್ನಡ ಕಾವ್ಯ ಪರಂಪರೆಯನ್ನು ರೂಢಿಸಿಕೊಂಡ ಆ ಕಾಲದ ಅನೇಕರಲ್ಲಿ ಇಷ್ಟರ ಮಟ್ಟಿಗೆ ಸಾಧಿಸಿದ್ದು ಅಪೂರ್ವ–ಅದೂ ಒಂದು ಖಂಡಕಾವ್ಯವನ್ನು ರಚಿಸುವ ಮಟ್ಟಿಗೆ. ಇಷ್ಟೊಂದು ದೀರ್ಘ ಕೃತಿ ರಚಿತವಾದದ್ದು ಕ್ರೈಸ್ತ ಸಾಹಿತ್ಯದಲ್ಲಿ ಬೇರಾವುದೂ ಇಲ್ಲ. ಜೊತೆಗೆ ಇದು ಹೊಸಗನ್ನಡ ಸಾಹಿತ್ಯದಲ್ಲಿಯೇ ಮೊದಲ ಖಂಡಕಾವ್ಯ (Minor epic).

ಕಿಟೆಲರೇನೋ ಬರೆದರು. ಅದನ್ನು ಯಕ್ಷಗಾನ ಪ್ರಸಂಗದಂತೆ ರಂಗದ ಮೇಲೆಯೂ ತರಬಹುದಾಗಿತ್ತು. ಚರ್ಚುಗಳಲ್ಲಿಯೂ ಹಾಡಬಹುದಾಗಿತ್ತು. ಆದರೆ ಈ follow-up ಕೆಲಸ ಮಾಡುವಂಥ ಪರಿಸ್ಥಿತಿ ಬಾಸೆಲ್ ಮಿಶನ್ನಿನ ಆಗಿನ ದಿನಗಳಲ್ಲಿ ಇರಲಿಲ್ಲ. ಹೀಗಾಗಿ ಮೊದಲ ಆವೃತ್ತಿಯಷ್ಟೇ ಹೊರಬಂದಿತು. ಉಳಿದ ಅನೇಕ ಮಿಶನ್ ಪುಸ್ತಕಗಳಂತೆ ಇದು ಮಾತ್ರ ಮರುಮುದ್ರಣ ಕಾಣಲೇ ಇಲ್ಲ.

ಕಥಾಮಾಲೆಯನ್ನು ಮತೀಯ ಸಾಹಿತ್ಯವೆಂದು ಪರಿಗಣಿಸಬೇಕಾಗಿಲ್ಲ. ಮುಂದಿನ ಶತಮಾನದ ಆರಂಭದಲ್ಲಿ ಮಾನ್ಯ ಗೋವಿಂದ ಪೈಗಳು ಯೇಸುವಿನ ಕೊನೆಯ ದಿನಗಳ ಕಥೆಯನ್ನೊಳಗೊಂಡ 'ಗೊಲ್ಗೊಥಾ' ಕಾವ್ಯವನ್ನು ರಚಿಸಿದ್ದಾರಲ್ಲವೆ.

## ೩.೨ ಬಿಡಿ ಕವನಗಳು

ಆ ಮುಂದಿನವೆಲ್ಲಾ ಕಿಟೆಲರ ಬಿಡಿ ಕವನಗಳು. ಅವನ್ನು ಧಾರ್ಮಿಕ, ಅರೆಧಾರ್ಮಿಕ (ಉದಾ. ದೇವರನ್ನು ಕುರಿತವುಗಳು) ಮತ್ತು ಲೌಕಿಕ ಎಂದು ವಿಭಾಗಿಸಬಹುದು. ಈ ಮೂರರಲ್ಲಿ ಸ್ವತಂತ್ರ ರಚನೆಗಳೇ ಹೆಚ್ಚಾಗಿ ಇವೆ; ಅನುವಾದಗಳಾದರೂ ಶಬ್ದಶಃ ರೂಪಾಂತರಗಳಾಗಿರದೇ, ಅವನ್ನು 'ಭಾವಾನುವಾದ' ಎಂದು ಕರೆಯಬಹುದಾಗಿದೆ.

ಆದರೆ 'ಕನ್ನಡ ಮೂರನೆಯ ಪುಸ್ತಕ'ದಲ್ಲಿ ಬಂದ ೬೦ರಷ್ಟು ಬಿಡಿ ಪದ್ಯಗಳು ಲೌಕಿಕ ಸದರಿನಲ್ಲಿ ಬರುವಂತಹವು. ಇವುಗಳನ್ನು ಹೀಗೆ ವರ್ಗೀಕರಿಸಬಹುದು:

| | |
|---|---|
| ನಿಸರ್ಗ | ದೇಶ ವಿದೇಶ |
| ಜೀವನ ವಿಕಾಸ | ದೇವರು |
| ನೀತಿ ವಿಚಾರ | ಪ್ರಾಣಿ–ಜೀವಿಗಳು |

ನಿಸರ್ಗ ವರ್ಣನೆಯಲ್ಲಿ ಬರುವ 'ಸೂರ್ಯ'ನ ಮೂಲಕ ಆಧುನಿಕ ಖಗೋಳ ವಿಜ್ಞಾನದ ಮುಖ್ಯ ಅಂಶಗಳನ್ನೇ ನಿವೇದಿಸಿದ್ದಾರೆ:

ನಡೆಯುವದು ಚಂದ್ರನವನಿಯ ಸುತ್ತು ಮಾಸದೊಳು
ನಡೆವವೆರಡು ರವಿಯ ಸುತ್ತು ವರುಷಕ್ಕೊಮ್ಮೆ
ನಡೆಯುವವು ತನ್ನಚ್ಚಸುತ್ತವನಿ ಹಗಲಿರುಳೊಮ್ಮೆ ಮನುಜರ ಹಿತಕ್ಕೆ
ನಡೆಯುವವು ಗ್ರಹ ಚಂದ್ರಗ್ರಹಗಳನ್ನು ಸುತ್ತಿಸುತ
ನಡೆಯುವವು ತಮ್ಮಚ್ಚ ಸುತ್ತಿಸುತ ಸಕಲ ಗ್ರಹ: ರವಿಯಲ್ಲವೋ ಗ್ರಹರಾಜನು.

'ನಡೆಯುವ' ಕ್ರಿಯೆಯು ಸುರುವಾತಿಗೆ ತಪ್ಪದೆ ಬಂದುದನ್ನು ಗಮನಿಸಬೇಕು. ಎಲ್ಲ ಗ್ರಹಗಳೂ ಭೂಮಿ, ಚಂದ್ರರೂ ಸಹಿತವಾಗಿ ಸೂರ್ಯನಿಗೆ ಅಧೀನ, ಆದ್ದರಿಂದ ಆತ ಗ್ರಹರಾಜ; ಬರಿಯೆ ರವಿ ಅಲ್ಲ!

ಸೂರ್ಯನನ್ನು ವರ್ಣಿಸುವ ಇನ್ನೊಂದು ಪದ್ಯದ ಭಾವ ಇಂತಿದೆ;

ಅವನು ಜಗಕೆ ಹರುಷವ ಕೊಡುವವ. ಆದರೇನು ಅವನ ತಾಪಶಮನಕ್ಕೆ ಪಕ್ಷಿ ಮಾತ್ರವಲ್ಲ ವೃಕ್ಷಗಳೂ ಸಹಿತ ನಿದ್ರೈಯುತ್ತವಂತೆ. ಅರುಣೋದಯವನ್ನು ಕಂಡಾಕ್ಷಣ ಬಗೆಬಗೆಯ ದನಿಯಿಂದ ಸ್ತುತಿಸುತ್ತವೆ! ಎಂದಿದ್ದಾರೆ. ಕಲ್ಪನೆ ಮನನೀಯವಾಗಿದೆ.

ಸಮುದ್ರ ವರ್ಣನೆ ನಮ್ಮ ಪಾರಂಪರಿಕ ಅಷ್ಟಾದಶ ವರ್ಣನೆಗಳಲ್ಲಿ ಬರುವಂತ-ಹದೇ. ಕಿಟೆಲ್ ಹೊಸ ಯುಗಕ್ಕೆ ಅನುಗುಣವಾಗಿ ಬೇರೆಯೇ ಆಗಿ ವರ್ಣಿಸಿದ್ದಾರೆ:

ಹೆಸರು 'ರತ್ನದ ಗಣಿಯು' ಯೋಗ್ಯವೇ
ಹಸನ ಮೌಕ್ತಿಕ ಹವಳ ತಲೆಯದು
ರಸದ ಕುಲದೊಳತುಲ್ಯ ಲವಣವು ಬಹಳ ರುಚಿಪ್ರದವು
ತುಸುವು ತಡೆಯದೆ ಹಡಗಗಳೊಳಗೆ
ದೆಸಗೆ ದೆಸಗೈ ಹೋಗಿ ಸುಪಥದ–
ಲೆಸೆದು ದ್ವೀಪಗಳಿಂದ ಲಾಭವ ಪಡೆದು ತರುತಿಹರು.

ಈ ಪದ್ಯದ ಉತ್ತರಾರ್ಧವು ಪ–ಗದ್ಯವಾಗಿದೆಯಾದರೂ, ಉಪ್ಪಿಗಿಂತ ರುಚಿಯಿಲ್ಲ–ಎಂಬ ನಾಣ್ಣುಡಿಯನ್ನು ಸಮುದ್ರದ ವರ್ಣನೆಯಲ್ಲಿ ತಂದದ್ದು ಮೆಚ್ಚಬೇಕಾದದ್ದೇ.

ಹಲವಾರು ದೇಶ–ವಿದೇಶಗಳನ್ನು ವರ್ಣಿಸಿದ ಬಗೆಯೂ ಮನೋಜ್ಞವಾಗಿದೆ. ಜಗತ್ತಿನಿಂದ ಆರಂಭಿಸಿ ಏಶಿಯ, ಅಮೇರಿಕ ಯುರೋಪ ಖಂಡಗಳನ್ನು ಕ್ರಮವಾಗಿ ವರ್ಣಿಸಿದ್ದಾರೆ. ಇಂಗ್ಲಂಡ್ ದೇಶದ ಕುರಿತು ಹೇಳುವಾಗ, 'ಒಂದು ಕಾಲಕ್ಕೆ ಇಂಗ್ಲಿಷರು ಚರ್ಮದುಡಿಗೆ, ಕಲ್ಲುಕತ್ತಿ, ತಲೆಯಲ್ಲಿ ಕೋಣಗೊಂಬುಗಳನ್ನು ಧರಿಸಿದ ಕಾಡು ಮನುಷ್ಯರಿದ್ದುದನ್ನು ಹೇಳುತ್ತಾರೆ. ಈಗ? ಅಲ್ಲಿಯ ಲಂಡನ್ ನಗರವೊಂದನ್ನು ನೋಡಿದರೆ ಸಾಕು, ಆ ದೇಶ ಎಷ್ಟೊಂದು ಪ್ರಗತಿಯನ್ನು ಸಾಧಿಸಿದೆ–ಎಂಬುದರ ಕಲ್ಪನೆ ಬರುತ್ತದೆ. ಆ ನಗರವು–

ಅಮಲಶೋಭಾ ರಾಣಿಧಾನಿಯ–
ನಮಿತ ಕೀರ್ತಿ ಲಂಡನೆಂದ್, ಅರಿ
ಗಮಕುಚಿತವ ಪೊಗೆವ ಗಾಡಿಯು
ಕ್ರಮಿಸದೋಡುತಿಹುದುಬ್ಬೆ ಹಡಗವು
ಸಮನೆಯಿಂದಲಿ ನಿಲ್ವ ಬಂದರವೆಷ್ಟೂ ಇಹವಲ್ಲ!

'ಹೊಗೆಯ ಗಾಡಿ'–ರೈಲು ಅದೇ ಆಗ ನಮ್ಮ ಭಾಗದಲ್ಲಿ ಪ್ರವೇಶಿಸಿತ್ತು. ಮಕ್ಕಳಿಗಂತೂ ಅದು ಹೊಸತೇ. ಅಂದಹಾಗೆ ಲಂಡನ್ 'ರಾಣಿಧಾನಿ'. ಏಕೆ? ವಿಕ್ಟೋರಿಯ ರಾಣಿಯಿದ್ದುದರಿಂದ ಅದು 'ರಾಜ'ಧಾನಿ ಹೇಗಾದೀತು? ಶಬ್ದದ ಬಳಕೆಯಲ್ಲಿ ಕಿಟೆಲರ ಸೂಕ್ಷ್ಮ ಪ್ರಜ್ಞೆಯನ್ನು ಗಮನಿಸಬೇಕು.

ಮಾನವ ಜೀವನದ ವಿಕಾಸ – ಇದನ್ನು ಎರಡೇ ಪದ್ಯಗಳಲ್ಲಿ ವರ್ಣಿಸಿದ್ದಾರೆ. ಮೊದಲು ಮನುಜರು ಸದನವಿಲ್ಲದೆ ಮೃಗಗಳಂತೆ ಇದ್ದವರು ತೋಟ, ಕೃಷಿ ಮಾಡಿಕೊಂಡು ಬೆಳೆ ತೆಗೆದರು. 'ಆ ಸುಖದ ತಳದಲಿ ನೆಲದ ಕಟ್ಟನು ಹಾಕಿ ಮನೆಗಳ ಕಟ್ಟಿ ಪುರಜನರಿಗೆ ಒಪ್ಪಿಸಿದರು'.

ದೇವರಲ್ಲಿ ಕಿಟೆಲರಿಗೆ ಅನೂನವಾದ ಶ್ರದ್ಧೆ. ಅದಕ್ಕೆ ಕಾರಣ ಆತ ಸೃಷ್ಟಿಯ ಕರ್ತನೆಂಬುದು.

ಬಾಲರವನಿಯಲಾರು ತಂದರು
ಹಾಲು ಮೊಲೆಯೊಳಗಾರು ಸೃಜಿಸಿದರ್
ಜಗದ ಭಾರವ ನಡಿಸೊ ಮಹಿಮೆಯ
ಹಗಲು ರಾತ್ರಿ ಕಾಯೊ ಮಹಿಮೆಯ ಯಾರು ಗೈದರ್?

(ಪದಾಂತ್ಯದಲ್ಲಿ ವ್ಯಂಜನ ಶಬ್ದಗಳು ಮಾತ್ರಾ ಗಣನೆಯ ಕಾರಣದಿಂದ ಇಲ್ಲಿ ಬಂದುವಾದರೂ, ಕಿಟೆಲರಿಗೆ ಅದೊಂದು ಇಷ್ಟವಾದ ಪ್ರಕಾರವೇ ಆಗಿದ್ದಿತು).

ಮುಂದುವರಿದು ಧೂಳಿಯಲ್ಲಿ ಸಹ ವಿಶ್ವಕರ್ತನು ಜೀವಗಳನ್ನು ಸೃಷ್ಟಿಸಿದ ಎಂದು ತಿಳಿಯಪಡಿಸುತ್ತಾರೆ. ಈ ವಿಚಾರವನ್ನು ಮಂಡಿಸಿದ ರೀತಿಯಿದು:

ಚೆಲುವ ಪುಸ್ತಕವೋದಲೊಬ್ಬನು
ಸುಳಿವ ಧೂಳಿಗೆ ಬಿದ್ದ ಧೂಳನ್ನ್
ಉಳಿಸದೊರಸಿದ ನಿಳಯಕೆ ಛೀ ಛೀ ಎನುತ ಬೇಸರದಿ
ತಿಳಿಯದವನಿಗೆ ಧೂಳ ಕೌತುಕ
ವಳಿದ ಜೀವಗಳಮಿತ ರಾಶಿಯು
ಪೊಳೆವುತಿಹುದಾ ಧೂಳಿನೊಳಗತಿಸೂಕ್ಷ್ಮ ದರ್ಶನಕೆ

ದೇವರು 'ಸರ್ವಜ್ಞ'-ಎಲ್ಲವನ್ನು ತಿಳಿದವ ಎಂಬುದನ್ನು ಮಕ್ಕಳಿಗೆ ಹೇಗೆ ತಿಳಿಸಬೇಕು? 'ಬಾಲಕರ ಗೀತೆಗಳು' ಪುಸ್ತಕದಲ್ಲಿ 'ಎಷ್ಟು ಚಿಕ್ಕ ಚಿಕ್ಕ ಎಂದು ಲೆಕ್ಕ ಮಾಡಬಹುದೆ? ಮುಂತಾಗಿ ಕೇಳುವಲ್ಲಿ ಸೊಗಸಾಗಿ ಮನಗಾಣಿಸಿಕೊಟ್ಟಿದ್ದಾರೆ.

ನೀತಿಬೋಧೆಯ ಹಳೆಯ ರೀತಿಯ ಪದ್ಯಗಳೂ ಕೆಲವಿವೆ. ಇದೊಂದು ಮಾದರಿ:

ನರಿಗಳೂರನು ಶೇರುವವೆ? ವಾ–
ಸರದ ಬೆಳಕಿಗೆ ಗೂಗೆಗಳು ಸಂ–
ಚರಿಸುವವೆ? ಬೆಳದಿಂಗಳಿಷ್ಟವೆ ಜಾರಚೋರರಿಗೆ?
ಸರಸಗೀತಾ ಪ್ರೌಢಿ ಗೊಲ್ಲರಿಗರಿಯಲಹುದೆ? ದುರ್ವ್ಯಸನದಿಂದ್
ಉರಿವ ಪಾತಕಗೇತಕೈ ಸನ್ಮಾರ್ಗದಭ್ಯಾಸ?

(ಪ್ರಶ್ನಾರ್ಥಕ ಚಿಹ್ನೆಗಳನ್ನು ಅವರೇ ಮೂಲದಲ್ಲಿ ಕೊಟ್ಟಿದ್ದಾರೆ).

ಸಂಸಾರವನ್ನು ಅತಿಯಾಗಿ ನೆಚ್ಚಿಕೊಳ್ಳಬಾರದು ಎಂದು ಸಾಮಾನ್ಯವಾಗಿ ಹರಿದಾಸರು ಹೇಳುತ್ತಾರೆ. ಅಲ್ಲಿ ನಿಷೇಧಾರ್ಥವಿದ್ದರೆ, ಕಿಟೆಲರು ನವೀನ ರೀತಿಯಲ್ಲಿ ಆಶಾವಾದಿಯೆಂಬಂತೆ ಮಂಡಿಸುತ್ತಾರೆ.

ಊರ ದಾರಿಯ ನಡೆವ ಮನುಜನು
ನೀರಡಿಸಿ ಅರವಟಿಗೆಯನ್ನು ನೆರೆ
ಸಾರಿ ತೃಷೆಯನು ಕಳೆದು ಸೌಖ್ಯದಿ ಎಲ್ಲರೊಡಗೂಡಿ
ಬೇರೆ ಬೇರೆಯೆ ತಮ್ಮ ದಾರಿಯ

ಸಾರಿ ಅಗಲುವ ಹಾಗೆ ಸ್ತುತಿಸುತ–
ರಾರಿಗಾರ್ ಅಂತಿಮ ಕಾಲವು ತೀರಿ ಬರಲು.

ಸಂಸಾರವನ್ನು ಕಡೆಗಣಿಸುವ ಮಾತೇ ಇಲ್ಲ! ಸೌಖ್ಯ ಪಡಬೇಕು. ಪ್ರಯಾಣಿಸುವ ಮನುಷ್ಯರು ನೀರು ಕುಡಿದು ತೃಪ್ತಿಪಡಲು ಅರವಟಿಗೆಗೆ ಬರುತ್ತಾರೆ. ಒಡಗೂಡುತ್ತಾರೆ. ತೃಷೆಯನ್ನು ಹಿಂಗಿಸಿದ ಮೇಲೆ ಬೇರೆ ಬೇರೆ ದಾರಿ ಹಿಡಿದು ತಮ್ಮಷ್ಟಕ್ಕೆ ಹೊರಟು ಹೋಗುತ್ತಾರೆ. ಸತಿ ಸುತರ ವಿಷಯದಲ್ಲಿಯೂ ಹಾಗೆ ಇರಬೇಕಲ್ಲವೆ. ವಟಪತ್ರಮಿವಾಂಭಸೌ ಎಂಬ ಆರ್ಯೋಕ್ತಿಯ ಅನ್ವಯವೇ ಇಲ್ಲಿದೆ.

ದೇವರ ಕೃಪೆ ಬೇಕಾದರೆ ಮನುಷ್ಯನು ಪಾಪಬುದ್ಧಿಯನ್ನು ಬಿಡಬೇಕು–ಎಂಬುದೂ ಅವರ ನಿಶ್ಚಿತವಾದ ಅಭಿಮತ. ಇಲ್ಲಿಯೂ ಎರಡು ನವೀನ ದೃಷ್ಟಾಂತಗಳಿವೆ:

ಇರುಳು ಮನೆಯೊಳು ಮಲಗಿ ನಿದ್ದೆಯ
ಭರದಲೆದ್ದವ ಮೆಲ್ಲಮೆಲ್ಲನೆ
ಕರದಿ ಕಂಭವ ಹುಡುಕಿ ತಡವರಿಸುತ್ತ ಭೀತಿಯನು
ಹೊರಡಿಸುವವೊಲ್ ಪಾಪ ಬುದ್ಧಿಯು
ಹರಿಯೆ. . . . .ಭೀತಿ ಕಳೆಯುವನು.

ಜೀಡು ಕಬ್ಬಿಣವನ್ನು ನೀರೊಳಗೆ ಒಗೆದರೆ ಮುಳುಗುವುದು. ಎಷ್ಟೆಂದರೂ ಅಶುದ್ಧವಾದದ್ದು. ಆ ಮಾಲಿನ್ಯವನ್ನು ಕಳೆದು ತಿದ್ದಿ ಮಾಡಿದಂಥ ಕಬ್ಬಿಣವನ್ನು ಹಡಗು ಕಟ್ಟುವುದರಲ್ಲಿ ಉಪಯೋಗಿಸಿದರೆ ತೇಲುವುದು. ಹಾಗೆಯೇ ಮನುಷ್ಯನಿಗೆ ವಿಮಲ ಬೋಧೆಯ ಸಿದ್ಧಿಯಾದರೆ ಪಾಪವೆಂಬ ಕಡಲಿಗೆ ಅದು ಹಡಗವಾಗಿ ಪರಿಣಮಿಸುತ್ತದೆ:

ಮುದ್ದೆ ಕಬ್ಬಿಣ ಜಲದೊಳಿರಿಸಿದ–
ಪೆದ್ದುವುದು [?] ಕೇಳ್, ಅದನೆ ಪಾತ್ರೆಯ
ತಿದ್ದಿದರೆ ತೇಲುವುದು, ತಿಳಿ ಆ ಪರಿಯಲೇ ಬುದ್ಧಿ
ಹೊದ್ದಿ ಮಲಿನವು ಬೆರಿಕೆಯಾಗಿಹ
ಬುದ್ಧಿ ಕೆಡುವದು, ವಿಮಲ ಬೋಧೆಯ
ಸಿದ್ಧಿ ಆದರೆ ಪಾಪ–ಕಡಲಿನ ಹಡಗವಹುದೆಂದ

ಕಾಫಿ ಬೀಜ (ಹಾಗೂ ಚಹಾದ ಎಲೆ) ಕಿಟೆಲರ ಕಾಲಕ್ಕೆ ಬಳಕೆಯಲ್ಲಿ ಬಂದು ಬಿಟ್ಟಿದ್ದವು. ಅವನ್ನೂ ವರ್ಣಿಸಿದ್ದಾರೆ. ಇದು ಕಾಫಿ:

ಕಾಪಿ ಕಾಯದ ತಾಪವೋಡಿಸಿ
ಕೋಪಕಾಸ್ಪದ ಕೊಡದೆ, ಕಾದ, ಅಪ
ರೂಪದೌಷಧಿಯಾಗಿ ಬೆಳೆವದು ಗಿರಿಯ ವನದಲ್ಲಿ
ಆ ಪಡಲ್ ಹಬಸೀ ಸುವನದಿಂದ
ಈ ಪಣಾಯಿತ ಹಿಂದು ಶೀಮೆಗೆ
ತಾ ಮೊರಟು ಸಹ್ಯಾದ್ರಿ ತಪ್ಪಲದಲ್ಲು ಬಂದ್ ಇಹುದು.

ಅರಳೆಯ (ಹತ್ತಿಯ) ಬಗ್ಗೆ ಬರೆದದ್ದು ಇನ್ನಷ್ಟು ಮೋಜಿನದಾಗಿದೆ:

ಅರಳಿ ತಾನ್ ಇಂಗ್ಲಿಷರ ಶೀಮೆಗೆ
ತೆರಳಿ ಬಹು ಜನ ನೋಡಿ ಅತಿ ಶೃಂ–
ಗರಿಸಿಕೊಂಡು ಆಮೇಲೆ ತನ್ನೈಶ್ವರ್ಯ ರೂಪದಲಿ
ಮರಳಿ ತಾ ಪೊರಮಟ್ಟು ದೇಶವ
ಮರಿಯದಂತೆ ತಿರುಗುವುದು, ನಾನಾ
ಪರಿಯಲದರಿಂ ಹಿತವು ಬಪ್ಪುದಸಂಖ್ಯ ಜನರಿಗೆ.

ಇಂಗ್ಲಿಷರ ಸೀಮೆಯಿಂದ ಸೊಗಸಾದ ಬಟ್ಟೆಯೇನೋ ಬರಬಹುದು. ಅದರಲ್ಲಿ ನಮ್ಮ ಆರ್ಥಿಕ ಶೋಷಣೆ ಇದ್ದಿತು; ಆ ಮಾತು ಬೇರೆ!

**೩.೩ ಇನ್ನೂ ಕೆಲವು ಬಿಡಿ ಕವನಗಳು**

ಕಿಟೆಲರು ಕನ್ನಡದಲ್ಲಿಯ ಕೆಲವು ಬಿಡಿ ಪದ್ಯಗಳನ್ನು ಜರ್ಮನ್ ಭಾಷೆಗೆ ಪರಿವರ್ತಿಸಿ, ಬಾಸೆಲ್ ಕಮಿಟಿಗೆ ಸಲ್ಲಿಸಿದ ಕಾಲಕಾಲದ ವರದಿಗಳಲ್ಲಿ ಕೊಡುತ್ತಿದ್ದರಂತೆ. ಆದರೆ ಕನ್ನಡದಲ್ಲಿಯೇ ಬರೆದ ಲೌಕಿಕ ವಿಷಯದ ಕೆಲವು ಸ್ವತಂತ್ರ ಪದ್ಯಗಳನ್ನು ತಾವು ಸಂಪಾದಿಸುತ್ತಿದ್ದ 'ವಿಚಿತ್ರ ವರ್ತಮಾನ ಸಂಗ್ರಹ' ಪತ್ರಿಕೆಯಲ್ಲಿ (೧೮೬೨) ಕೊಟ್ಟಿದ್ದಾರೆ. ಇದು ಮಾರ್ಟಿನ್ ಲೂಥರನ ಕುರಿತಾದದ್ದು:

ಕ್ಷೋಣಿಯೊಳಗಿಹ ಹಿಂದು ದೇಶದ
ಮಾನವರು ಕೆಲರೊಳ್ಳೆಯವನೆಂದ್
ಹೀನನೆಂದ್ಕೃತರೆಂದು ಪೇಳ್ವರು ಬುದ್ಧಿಯಾಲಿಸಿರೀ
ಕ್ಷೂಣತೆಯ ಮಾತಿನಲಿ ದೂಷಣೆ
ಕಾಣಿಸುತ ನುಡಿಯುವದು ಗುಣವಿದು
ಜಾಣರಿಗೆ ಸರಿಯಲ್ಲ ದೇವರ ದೃಷ್ಟಿಗೆಲ್ಲೆಲ್ಲ.

ಡ್ಯೂಕ್ ಆಫ್ ವೆಲಿಂಗ್ಟನ್ನನ (ನೆಪೋಲಿಯನ್ನನನ್ನು ಸೋಲಿಸಿದ ವೀರ) ಚರಿತ್ರೆಯನ್ನು ಗದ್ಯದಲ್ಲಿ ಕೊಟ್ಟಾದ ಮೇಲೆ ಅವನ ಬಗ್ಗೆ ಈ ಎರಡು ಪದ್ಯಗಳನ್ನು ರಚಿಸಿ ಸೇರಿಸಲಾಗಿದೆ.

ಅವನು ತನ್ನಯ ಬಾಲಪ್ರಾಯ ದೊ–
ಳವನಿಯೊಳಗಿಹ ಇತರ ಮನುಜರ
ಹವಣಿನಂತೆಯೆ ಕಂಗಳಿಗೆ ಗೋಚರಿಸುತಿದ್ದಿಲ್ಲ.
ದಿವಸಗಳಾನಂದದು ಕೊಟ್ಟಿಪ–
ದವನಿಗಾಗಲೆ ಮೊದಲ ಹೃದಯದಿ ಹುಟ್ಟಿಸಿದ್ದರೆಯು.
ಕಾಳಗದೊಳರಿವಿಜಯದಮಿತ ವಿ–
ಶಾಲ ಭುಜಬಲವನ್ನು ಮಿಗಿಯುವ
ಲೀಲೆಯಿಂದಲಿ ಮೆರೆಸಲಖಿಳರು ತಿಳಿದವನ ಮತಿಯಾ–

ಕಾಶಸಮಬಲನೆನ್ನುತಾ ಜನ
ಜಾಲನವನಿಗೆ ಇಂಗಲಾಂಡಿನ
ಪಾಳಯದ ಪತಿಗಳೊಳು ಬಿರುದಿನ ಪೆಸರ ಪಾಲಿಸಿತು.

ಅದೇ ಪತ್ರಿಕೆಯಲ್ಲಿ 'ಹೆಸರು ಹೋದವನೊಬ್ಬನ ಚರಿತ್ರೆಯು' ಎಂಬ ಲೇಖವಿದೆಯಷ್ಟೆ. (ಹೆಸರು ಹೋದವ-ಕೀರ್ತಿಶೇಷ ಎಂದ ಹಾಗೆ). ಅದೇ ವಿಷಯದ ಬಗ್ಗೆ ೬ ನುಡಿಗಳ ಒಂದು ಕವನ ಇದೆ. ಇದು ಮಾದರಿ:

ಚಿನ್ನ ಗನಿಯೊಳು ಕೆಲಸಗೈಯುವ
ಖಿನ್ನ ಆಳಿಗೆ ಓರ್ವ ಮಗನು-
ತ್ಪನ್ನನಾದನು ಬೆಳೆದು ಪ್ರಾಯವ ತುಂಬಲಾಮೇಲೆ
ಉನ್ನತಾಮಳ ವಿದ್ಯೆಯಲಿ ಸಂ-
ಪನ್ನನಾದನು ದೇವವಾಕ್ಯವ
ಮನ್ನಿಸುವ ಗ್ರಹಿಕೆಯಲಿ ಅನುದಿನ ಪರಿಸುತೀಕ್ಷಿಸಲೂ.

ಪದ್ಯಗಳನ್ನು ಷಟ್ಪದಿಯಲ್ಲಿ ರಚಿಸಬೇಕು ಮತ್ತು ಕನ್ನಡ ಕವಿತೆಯ ಹಿರಿಯ ಲಕ್ಷಣವಾದ ದ್ವಿತೀಯಾಕ್ಷರ ಪ್ರಾಸವನ್ನು ತಪ್ಪದೇ ಪಾಲಿಸಬೇಕು-ಇವೆರಡು ಅಂಶಗಳನ್ನು ಕಿಟೆಲರು ಆತ್ಮಸಾತ್ ಮಾಡಿಕೊಂಡಿದ್ದರು.

ಮೇಲಣ ಪದ್ಯಗಳಲ್ಲಿ ಕಾವ್ಯ ಸ್ವಾರಸ್ಯವೆನ್ನುವುದು ಇಲ್ಲ. ಎಂದೆನಿಸಬಹುದು. ಆದರೆ ಜ್ಯೋತಿರ್ವಿಜ್ಞಾನದ ಬಗ್ಗೆ ಇರುವ ಲೇಖನಕ್ಕಾಗಿ ಸೇರಿಸಿದ ಈ ಪದ್ಯದಲ್ಲಿ ತುಸು ಹೊಸತನವಿದೆ.

ಆಶಿಸಿದರಾದಿಕಾಲದ ಮನುಜರುನ್ನತಾ-
ಕಾಶದಾ ಮಹಿಮೆಯನು ಚೆನ್ನಾಗಿ ತಿಳಿಯಲವರೆ
ರಾಶಿರಾಶಿಯ ತಾರೆಗಳ ನೋಡಿ ಶೋಧಿಸುತ ನಮಿಸಿದರು ಮಹಿಮಾತ್ಮಗೆ
ನಾಶವಾಯ್ತೀಗಲಾ ಜ್ಯೋತಿಷ್ಯ ಜನರೊಳು ಪ್ರ-
ಕಾಶಕ್ಕೆ ಮೆಚ್ಚದಲೆ ಗಾಢಾಂಧಕಾರಾತಿ
ಪಾಶದೊಳು ಸಿಕ್ಕಿರುವ ನಾಸ್ತಿಕರು ಹೊಟ್ಟೆ ದೇವರೆ ಯೆನುವರೂ.

'ಹೊಟ್ಟೆಯೇ ದೇವರು'! ವಿಶಿಷ್ಟ ಪದ: ಈಗಿನ ಕಾಲದ ನಾಣ್ಣುಡಿಯೇ ಆಗಿದೆ. ಹಸಿದ ಹೊಟ್ಟೆಯಲ್ಲಿ ದೇವರು ಅದೆಂತು ನೆನಪಾಗುವನು?

## ೩.೪ ಬಾಲಕರ ಗೀತಗಳು

ಮಕ್ಕಳಿಂದ ಹಾಡಿಸುವುದಕ್ಕೆಂದು ರಚಿತವಾದ ಪದ್ಯ ಸಂಕಲನವಿದು. ಹಲವಾರು ಆವೃತ್ತಿಗಳನ್ನು ಕಂಡಿದ್ದ ಈ ಸಂಕಲನದಲ್ಲಿ ಒಂದೊಂದು ಸಲವೂ ಹೆಚ್ಚಿನ ಪದ್ಯಗಳನ್ನು ಸೇರಿಸುತ್ತ ಬಾಸೆಲ್ ಮಿಶನ್ನಿನವರು ಇವನ್ನು ಪ್ರಕಟಿಸಿದ್ದಾರೆ. ಹಾಡುವುದಕ್ಕೆ ಅನುಕೂಲವಾಗಲೆಂದು ಆಂಗ್ಲ ಸ್ವರಪ್ರಸ್ತಾರವನ್ನು ಕೊಟ್ಟಿದ್ದಾರೆ - ಸುಧಾರಿತ

ಆವೃತ್ತಿಗಳಲ್ಲಿ. ಹೀಗಿರುತ್ತ ಮೊದಲ ಆವೃತ್ತಿಯನ್ನು ಮಾತ್ರ ಇಲ್ಲಿ ಪರಿಶೀಲಿಸಬೇಕಾಗಿದೆ. ಏಕೆಂದರೆ ಅದರಲ್ಲಿಯ ೧೮ ಪದ್ಯಗಳಲ್ಲಿ ೧೬ ಕಿಟೆಲರವು.

ಇವೆಲ್ಲ ಜರ್ಮನ್ ಭಾಷೆಯಿಂದ ಅನುವಾದಗೊಂಡವುಗಳು. ಮತೀಯವಾದವುಗಳನ್ನು ಬಿಟ್ಟರೆ ಲೌಕಿಕ ಸ್ವರೂಪದವು ಸಾಕಷ್ಟು ಇವೆ. ಕಿಟೆಲರ ಕವನಿಸುವಿಕೆ ಹೊಸ ದಾರಿಯಲ್ಲಿ ಸಾಗಿಬಂದದ್ದು ಗೊತ್ತಾಗುತ್ತದೆ. ಎಂದರೆ ಇವು ಶಬ್ದಶಃ ಅನುವಾದಗಳಾಗಿರದೇ, ಭಾವಾನುವಾದಗಳಿವೆ. ಮತ್ತು ಅಲ್ಲಲ್ಲಿ ನಮ್ಮ ದೇಶೀಯ ಜೀವನದ ಹೊಳಹು ಕಂಡು ಬರುತ್ತದೆ. ಈ ೧೬ ಪದ್ಯಗಳಲ್ಲಿ ಮೂರು ಕ್ರೈಸ್ತ ಮತೀಯವಾಗಿದ್ದು ಉಳಿದವುಗಳು ಲೌಕಿಕ ಸ್ವರೂಪದವೇ ಆಗಿವೆ. ಹಾಗೆ ಬಂದಿರುವ ವಿಷಯಗಳೆಂದರೆ ಸಂಧ್ಯಾರ್ಚನೆ, ವಟವೃಕ್ಷ, ದೇವರ ಮಹಿಮೆ ಮತ್ತು ಸ್ವದೇಶ ಪ್ರೀತಿ.

ಓ ವಟವೆ, ಓ ವಟವೆ
ನಿನ್ನೆಲೆಯೆಷ್ಟೋ ಚಂದ।
ವಸಂತದೊಳಗಲ್ಲದೆ ಹೇಮಂತದೊಳು ಹಾಗೆಯೇ। ಓ ವಟವೆ

. . . .

ಓ ವಟವೆ . . . ನಿನ್ನಂತೆ ಆಗಬೇಕು.
ಓ ವಟವೆ, ಓ ವಟವೆ
ನಿನ್ನಂತೆ ಆಗಬೇಕು
ನಾ ನಿತ್ಯದಲ್ಲಿ ಜನಕೆ
ಸಂತೋಷದಾನ ಕೊಡುವೆ

ಇಲ್ಲಿಯ ಪದ್ಯಗಳಲ್ಲಿ ಜರ್ಮನ್ ಹಾಡಿನ ಧಾಟಿಗಳನ್ನೇ ಇಟ್ಟುಕೊಂಡಿರುವದರಿಂದ ನಮ್ಮ ಹಾಡಿನ ಪರಂಪರೆಗೆ ಅನುಗುಣವಾಗಿ ಇಲ್ಲ.

ಇದು ದೇವರ ಮಹಿಮೆಯನ್ನು ಹೇಳುವ ಪದ್ಯ.

ಎಷ್ಟು ನಕ್ಷತ್ರಗಳೆಂದು ಎಣಿಸೆಂದರಹುದೆ?
ಮೇಘಕಿದು ಮಿತಿಯೆಂದು
ನೀ ಹೇಳ ಬಲ್ಲೆಯೇ?
ಆ ಮಹಾಂತ ಸೇನೆಯನ್ನು
ದೇವರು ಎಲ್ಲವನ್ನು
ಲೆಕ್ಕ ಮಾಡಿ ಇಟ್ಟನು.

ಎಷ್ಟು ಮೀನು ಜಲದಲ್ಲಿ
ಚಲಿಸೋದು ಸುಖದಿಂ
ಎಷ್ಟು ನೊಣ ಬಿಸಿಲಲ್ಲಿ

ನರ್ತಿಸೋದು ನಲುವಿಂ?
ನೀನು ತಿಳಿದವನಲ್ಲ
ದೇವರೆಲ್ಲವನ್ನು ಬಲ್ಲ
ಲೆಕ್ಕ ಮಾಡಿ ಇಟ್ಟನು.

ಕಲ್ಪನೆ ಸೊಗಸಾಗಿದೆಯಲ್ಲವೇ? ಇದೊಂದು ಕಥನರೂಪೀ ಪದ್ಯ:

ಒಬ್ಬ ಚಿಕ್ಕ ಹುಡುಗ ಹೂವ ಕಾಡಿನಲ್ಲಿ
ಕಂಡು ಹತ್ರಕೋಡಿದ
ನೋಡಿ ನೋಡಿ, ವಿಸ್ಮಯ ಪಟ್ಟನಾತ್ಮದಲ್ಲಿ
ಛಂದಛಂದ ಪುಷ್ಟವೇ ಛಂದ ಕಾಡಿನಲ್ಲಿ
ನಿನ್ನ ತೆಗಕೊಳ್ಳುವೆ
ಹೂವೆ ಕಾಡಿನಲ್ಲಿ! ಎನ್ನಲದು ಮೂರ್ಖನೇ,
ನನ್ನ ಮುಳ್ಳು ಕೂರ್, ಎಲೇ ಎಂದಿತುಗ್ರದಲ್ಲಿ
ಛಂದಛಂದ ಪುಷ್ಟವೇ . . .

ಹರಕೊಂಡನವನು । ಹೂವ ಕಾಡಿನಲ್ಲಿ
ಹೂವು ಸಲೆ ಚುಚ್ಚಿತು; ಬೇನೆ ಅವಗಾದುದು.
ಕೇಳು ಲೋಕದರ್ಥವೇ ಹೂವು ಕಾಡಿನಲ್ಲಿ
ಮೆಚ್ಚಬೇಡ ಅದಕೆ, ಅದು ಚುಚ್ಚುವಂಥದೇ
ನಿಲ್ಲು ದೂರದಲ್ಲಿ
ಇರು, ಛಂದಛಂದ ಪುಷ್ಟವೇ ಛಂದ ಕಾಡಿನಲ್ಲಿ.

ದೇವರ ಮಹಿಮೆಯನ್ನು ಹೇಳುವ ಇನ್ನೊಂದು ಪದ್ಯದಲ್ಲಿ–

ವಿವಿಧ ಜಂತು ಚೇಷ್ಟೆಗೂ
ಹಶ್ವಾದಿಯಾಟ ಪಾಟಕತ–
ನಂಗಂತ್ಯ ತೋರ್ವದಿಲ್ಲ
ಪ್ರಕಾಶ ಎಲ್ಲ ದಿಕ್ಕಿನೊಳ್
ರೇಣ್ವಣುಕಾಷ್ಟ ತೃಣದೊಳ್.

ಉಪನಿಷತ್ತಿನ ಅಣುರೇಣು ತೃಣಕಾಷ್ಟದಲ್ಲಿ ಪರಮಾತ್ಮನಿದ್ದಾನೆಂಬ ಭಾವವನ್ನು ಕಿಟೆಲರು ತಂದಿದ್ದಾರೆ.

ತೆಂಗಿನ ಮರದ ಕುರಿತ ಅವರ ಈ ಕೆಳಗಿನ ಪದ್ಯದಲ್ಲಿ ದಕ್ಷಿಣ ಕನ್ನಡ ಪರಿಸರದ ಚಿತ್ರಣವೇ ಇದೆ:

(ಮೂಲ – Es gingen drei Jaeger)

ಸಮುದ್ರತೀರದ ಹತ್ತರ ನಾ ನೋಡಿದೆನೊಂದು
ಮರವ ನೋಡಿದೆನೊಂದು ಮರವ
ಆ ತೆಂಗಿನ ಮರದ ಸೋಗೆಯು
ತಂಗಾಳಿಗೆ ಮೆಲ್ಲನಾಡಿತು
ಆ ಮರವ ಹತ್ತಿದ ಬಿಲ್ಲವ
ಸೀಯಾಳವ ಕೆಳಗೆ ಹಾಕಿದ
ಬಾಯ್ಯಾರುವ ದಾರಿಗ ಬಂದರೆ
ಸೀಯಾಳವ ಕೇಳಿಕೊಳ್ಳನೆ
ಆ ತೆಂಗಿನ ಮರದೊಳೆಲ್ಲಿಯು
ಅನರ್ಥ ಪದಾರ್ಥವಿರದು.

(ಮಕ್ಕಳ ನೆನಪಿಗೆ ಅನುವಾಗುವಂತೆ ಕೆಲ ಶಬ್ದಗಳು ಪುನರುಕ್ತಿಗೊಂಡಿವೆ)

'ಅನರ್ಥ?' ಜರ್ಮನ್ ಪದ್ಯದ ಧಾಟಿಗೆ ಹೊಂದುವಂತೆ ಶಬ್ದ ಬೇಕಲ್ಲವೆ. ಇಲ್ಲಿ ಅನರ್ಥ–ಎಂದರೆ ಪ್ರಯೋಜನವಿಲ್ಲದ್ದು ಎಂದು ತಿಳಿಯಬೇಕು. ಅಂತೂ ಕಿಟೆಲರ ಭಾವಾನುವಾದದ ಪದ್ಯರಚನೆಗೆ ಇದು ಒಳ್ಳೆಯ ಮಾದರಿ. ಅದರಂತೆ ಕೋಗಿಲೆ, ನಕ್ಷತ್ರಲೋಕ, ಸೃಷ್ಟಿಯ ವೈಚಿತ್ರ್ಯ ಮುಂತಾದ ವಿಷಯಗಳಿರುವ ಬೇರೆ ಪದ್ಯಗಳೂ ಕಿಟೆಲ್ ವಿರಚಿತವಾದವುಗಳಿವೆ.

'Was ist des deutschen Waterland?' ಎಂಬ ಪದ್ಯವು ಜರ್ಮನ್ ದೇಶವನ್ನು ಕುರಿತದ್ದು. ಅದನ್ನು ನಮ್ಮ 'ಜಂಬೂದ್ವೀಪ'ಕ್ಕೆ (ಭಾರತ) ಅನ್ವಯಿಸಿ ಹೀಗೆ ಹಾಡನ್ನು ರಚಿಸಿದ್ದಾರೆ:

ಸ್ವದೇಶ ಯಾವುದೆಲವೋ? ಕರ್ನಾಟಕವೊ ಮ–
ಲಾದ್ರಿಯೋ? ಅಲಲ್ಲಲಲ್ಲಲಲ್ಲವೇ। ಸ್ವದೇಶ–
ವದು ಬೇರೆಯೇ!
ಸ್ವದೇಶ ಯಾವದೆಲವೋ?
ಮದ್ರಾಸೆಲೊ ಕಲ್ಕಾತೆಯೋ?
ನೌಲೀಲೆ ಕಾಣುವಲ್ಲಿಯೋ?
ವಿದ್ಯಾರ್ಥಿ ಸಂಘ ವಾಸವೋ?
ಅಲಲ್ಲಲಲ್ಲಲಲ್ಲವೇ
ಸ್ವದೇಶವದು ಬೇರೆಯೇ!

ಸ್ವದೇಶ ಯಾವದೆಲವೋ?
ಮೈಸೂರೆಲೊ ಮರಾಠಿಯೋ?
ವಿವಿಧ ಧಾನ್ಯ ಸ್ಥಾನವೋ? ॥. . . . .
ಸ್ವದೇಶ ಯಾವದೆಲವೋ?

ಆ ಮುಂಬಯೋ ಪಂಜಾಬವೋ?
ಸಿಂಧ್ವಾದಿ ನೀರ ವನವೋ? . . . .
ಹಾಗಾದರೆನ್ನು! ಯಾವದು ಅದಲ್ಲ ಆ ಸ್ವ-
ದೇಶವು. . . . .
ಈ ಜಂಬುದ್ವೀಪದೊಳಗೆ ಸದ್ಭಕ್ತರಿರುವಲ್ಲಿಯೆ
ಸಹೋದರೈಕ್ಯ ಮಹಿಮೆ ಪ್ರಕಾಶಿಸಿಪ್ಪ ಸ್ಥಳವೆ
ಅದೋ ಅದೇ ಅದೇ ಅದೇ,
ಅದೆನ್ನ ಸ್ವಂತ ದೇಶವೇ!

ಹೀಗೆ ಕಿಟೆಲರಿಗೆ ಕನ್ನಡದಲ್ಲಿ ತಾನು ಪದ್ಯಗಳನ್ನು ರಚಿಸಬೇಕು ಎಂಬ ಅಪೇಕ್ಷೆಯು ಹಳಗನ್ನಡ ಕಾವ್ಯಗಳನ್ನು ಅಭ್ಯಸಿಸುತ್ತಿದ್ದ ಕಾಲದಿಂದಲೇ ಬೆಳೆದು ಬಂದಿರಬೇಕು.*

ಮುಂದೆ ತಮ್ಮ ಕಾವ್ಯಾಭ್ಯಾಸದ ಪರಿಣಾಮವಾಗಿ ಎರಡು ಕವನ ಸಂಕಲನಗಳನ್ನು ಸಂಪಾದಿಸಿದರು. ಒಂದರ ಹೆಸರು 'ಕರ್ನಾಟಕ ಕಾವ್ಯಮಾಲೆ' ಇನ್ನೊಂದು 'ಕಾವ್ಯಮಂಜರಿ'

* ಕಿಟಲ್ ರಜೆಯಲ್ಲಿ ತನ್ನ ಊರಿಗೆ ಹೋಗಿ ಹೊಸ ಹೆಂಡತಿಯೊಡನೆ ಮರಳಿ ಬಂದನಷ್ಟೆ. ಊಟಕ್ಕೆ ಕುಳಿತಾಗ ಸ್ಥಳೀಯ ಕ್ರೈಸ್ತ ಮಕ್ಕಳು ಪ್ರಾರ್ಥನಸ್ತೋತ್ರಗಳನ್ನು ಹೇಳಬೇಕು. ಆಗ ಅವರು ಕಿಟೆಲರು ರಚಿಸಿದ ಗೀತಗಳನ್ನೇ ಹೇಳಿದರಂತೆ. ಕಿಟೆಲ್ ದಂಪತಿಗಳಿಗೆ ಸಂತೋಷವಾಗಿರಬೇಕು.

## ೪. ಹಳಗನ್ನಡ ಕಾವ್ಯ: ಸಂಕಲನ ಮತ್ತು ಸಂಪಾದನೆ

ಕಿಟೆಲರು ತಮ್ಮ ಗಮನಕ್ಕೆ ಬಂದಿದ್ದ ಪ್ರತಿಯೊಂದು ಹಳಗನ್ನಡ ಕಾವ್ಯಗಳನ್ನು ಹುಡುಕಿ ತಂದು ಓದಿದ್ದರು. ಕೆಲವನ್ನು ಎರಡು-ಮೂರು ಬಾರಿ ಓದಿರಲೂ ಸಾಕು-ಸರಿಯಾದ ಪಾಠವನ್ನು ಕಂಡುಕೊಳ್ಳುವ ದೃಷ್ಟಿಯಿಂದ. ವಿಶೇಷವೆಂದರೆ ಅವೆಲ್ಲ ಹಸ್ತಪ್ರತಿ ರೂಪದಲ್ಲಿ ಇದ್ದವುಗಳು. ಅಂಥವನ್ನು ಓದುವುದು ಎಷ್ಟೊಂದು ಕಷ್ಟಕರವೆಂಬುದನ್ನು ಹೇಳಬೇಕಿಲ್ಲ.

ಆದರೆ ಕಿಟೆಲರಿಗೆ ಕಾವ್ಯಗಳಲ್ಲಿಯ ಕಲ್ಪನಾಮಯತೆ, ಕವಿಸಮಯ ಮತ್ತು ಪೌರಾಣಿಕ ಪವಾಡಗಳು ಹಿಡಿಸುತ್ತಿರಲಿಲ್ಲ. ಬದಲಾಗಿ ಆ ಕಾವ್ಯಗಳ ಭಾಷೆ, ಶಬ್ದಾರ್ಥ, ವ್ಯಾಕರಣ ಮತ್ತು ಛಂದಸ್ಸಿನ ಪ್ರಕ್ರಿಯೆಗಳನ್ನು ತಿಳಿಯುವಲ್ಲಿ ಹೆಚ್ಚಾಗಿ ಅವರ ಆಸಕ್ತಿ ಇದ್ದಿತು.

ತಮ್ಮ ಸಂಪಾದನ ಕಾರ್ಯದಲ್ಲಿ ಕಿಟೆಲರ ಆಶಯ 'To Cultivate a taste for good poetry' ಎಂಬುದಾಗಿತ್ತು. ಹಾಗಿದ್ದರೆ good poetry ಎಂದರೆ ಅವರ ದೃಷ್ಟಿಯಲ್ಲಿ ಯಾವುದು? ಆ ಬಗ್ಗೆಯೂ ಒಂದೆಡೆ ಹೇಳಿದ್ದಾರೆ:

Purety and freedom from sectarianism are the characteristics of good poetry. And regard has been paid throughout for these.

ಇದನ್ನು ಸಾಧಿಸಲು ಅವರು ಕೆಲವೊಂದು ನಿಯಮಗಳನ್ನು ರೂಪಿಸಿಕೊಂಡರು. ಒಂದು, ಕಾವ್ಯದಲ್ಲಿ ಬಂದ ಯಾವುದೊಂದು ಶಬ್ದ ಇಲ್ಲವೆ ಶಬ್ದಗುಚ್ಛವನ್ನು ಬದಲಿಸುವುದು. ಇನ್ನೊಂದು 'ಉನ್ನತ ಮನಸ್ಸಿನ ಪರಿಪಾಕಕ್ಕೆ ಹೊಂದಿಕೆಯಾಗದ ಅಂಶವಿದ್ದರೆ ಅದನ್ನು ಕೈ ಬಿಡುವುದು.

ಪರಿಣಾಮವಾಗಿ ಅವರು ಭಾರತೀಯ ಕಾವ್ಯರಚನೆಯ ಒಂದು ಲಕ್ಷಣವೇ ಆದ ಉತ್ಪ್ರೇಕ್ಷೆ, ಕಲ್ಪಕತೆ ಇವು ಬಂದಲ್ಲೆಲ್ಲ ಕೈಬಿಟ್ಟರು. ಇಲ್ಲವೆ ಅವನ್ನು ಉಳಿಸಿಕೊಂಡು ಟೀಕಿಸಿದರು. ಇದು ಎಲ್ಲಿಯವರೆಗೆ ಮುಂದುವರಿಯಿತು ಎಂದರೆ, ಹಳಗನ್ನಡ ಕಾವ್ಯಗಳಲ್ಲಿ ಪ್ರಧಾನವಾಗಿ ಕಂಡುಬರುವ ಹಿಂದೂ ದೇವ-ದೇವತೆಗಳನ್ನು ಟಿಪ್ಪಣಿ ರೂಪದಲ್ಲಿ ನಿಂದಿಸಿದರಲ್ಲದೆ, ಕೆಲ ಪದಗುಚ್ಛಗಳನ್ನು ಬೇಕಾಬಿಟ್ಟಿಯಾಗಿ ಬದಲಿಸಿದರು. ಕಾವ್ಯ ಸಂಪಾದನ ಕಾರ್ಯದಲ್ಲಿ ಇದು ಸರ್ವಥಾ ಅಪೇಕ್ಷಣೀಯವಲ್ಲವೆಂಬುದು ತಿಳಿದ ಮಾತೇ ಆಗಿದೆ.

### ೪.೧ ಕರ್ನಾಟಕ ಕಾವ್ಯ ಮಾಲೆ

ಮೊದಲಿಗೆ 'ಸಣ್ಣ ಕರ್ನಾಟಕ ಕಾವ್ಯ ಮಾಲೆ' ಇದ್ದದ್ದು ಮರು ಮುದ್ರಣದಲ್ಲಿ ಅದೊಂದು ಕನ್ನಡ ಕಾವ್ಯದ ಪ್ರೌಢ ಸಂಗ್ರಹವಾಗಿ ಬೆಳೆಯಿತು (೧೮೭೪). ಯಾವುದೇ ಕವನ ಸಂಗ್ರಹದಲ್ಲಿ ಒಬ್ಬೊಬ್ಬ ಕವಿಯಿಂದ ಒಂದಷ್ಟು ಭಾಗವನ್ನು ಆಯ್ದು ಪ್ರಕಟಿಸುವ ಕ್ರಮವಿರುತ್ತದೆ. ಆದರೆ ಕಿಟೆಲ್ ವಿಷಯವಾರ ಪದ್ಯಗಳನ್ನು ಎತ್ತಿಕೊಂಡಿದ್ದಾರೆ. ಎಂದರೆ

ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ ಬೇರೆ ಬೇರೆ ಕವಿಗಳ ಪದ್ಯಗಳು ಅದರಡಿಯಲ್ಲಿ ಬರುತ್ತವೆ. (ಇದೊಂದು ವಿನೂತನ ಉಪಕ್ರಮ. ಈಗೂ ಹಾಗೆ ಮಾಡುವ ಕ್ರಮವಿಲ್ಲ. ಏನಿದ್ದರೂ ಹೊಸಗನ್ನಡ ಕಾಲದಲ್ಲಿ ಅವರದೇ ಮೊದಲ ಬಾರಿಗೆ ಸಿದ್ಧವಾದ ಸಂಗ್ರಹ.) ವಿಷಯಗಳೇನು ಗೊತ್ತೇ? ಭಕ್ತಿ, ಆಸೆ, ದುರ್ಜನ ಸಂಗ, ವಸಂತ ಋತು, ಸುಕವಿತ್ವ ಲಕ್ಷಣ, ಮುಂತಾಗಿ ೧೦೩ ವಿಷಯಗಳಿವೆ. ಕಿಟೆಲರ ಸ್ವೋಪಜ್ಞತೆಗೆ ಇದು ನಿದರ್ಶನ. ಪ್ರತಿಯೊಂದು ಪದ್ಯಕ್ಕೆ ಅನ್ವಯ ಮತ್ತು ಪದಚ್ಛೇದಗಳನ್ನು ಕೊಡಲಾಗಿದೆ. ಶಬ್ದಾರ್ಥ? ಮೊದಲ ಆವೃತ್ತಿಯಲ್ಲಿ ೧೫ ಪುಟಗಳಿದ್ದದ್ದು ಈ ವಿಸ್ತಾರಿತ ಸಂಗ್ರಹದಲ್ಲಿ ೧೩೦ ಪಟಗಳಷ್ಟು ಬೆಳೆದಿದೆ. ಒಟ್ಟಿನ ೬೩೦ ಪದ್ಯಗಳಲ್ಲಿ ೩,೫೦೦ ಶಬ್ದಗಳಿಗೆ ಅರ್ಥ, ಅಲ್ಲದೆ ವಿದೇಶಿಯರಿಗೆ ಸುಲಭ ಗ್ರಾಹ್ಯವಾಗಲೆಂದು ಇಂಗ್ಲಿಷಿನಲ್ಲಿಯೂ ಅರ್ಥವನ್ನು ಕೊಟ್ಟಿದ್ದಾರೆ.

ಇದನ್ನು ಸಿದ್ಧಪಡಿಸುವಲ್ಲಿ ತಮ್ಮ ಉದ್ದೇಶ ಏನೆಂಬುದನ್ನು ಕಿಟೆಲ್ ಹೀಗೆ ಕಾಣಿಸಿದ್ದಾರೆ:

It is prepared only with regard to the want of schools but also with the aim to cultivate a taste for good poetry.

Good poetry!ಅವರ ಅಭಿಪ್ರಾಯದ ಪ್ರಕಾರ ಉತ್ತಮ ಕವಿತೆಯ ಲಕ್ಷಣಗಳು ತುಸು ಬೇರೆಯೇ ಇದೆ. ಅವೆಂದರೆ: ಪರಿಶುದ್ಧತೆ (Purety) ಮತ್ತು ಮತೀಯ ದೃಷ್ಟಿಯಿಂದ ಮುಕ್ತತೆ (Free from sectarianism) ಜೊತೆಗೆ ತಮ್ಮ Prefaceನಲ್ಲಿ ಇನ್ನು ಮೂರು ನಿಲುಮೆಗಳನ್ನು ಕಾಣಿಸಿದ್ದಾರೆ:

- Nothing that might give offence
- No undue exaggeration
- Should not be inconsistent with hgher culture of mind.

ಇವುಗಳಲ್ಲಿ undue exaggeration ಎನ್ನುವುದು ಹಳಗನ್ನಡ ಕಾವ್ಯಗಳಿಗೆ ಒಪ್ಪುವ ಮಾತಲ್ಲ. ಉಪಮೆಯಲ್ಲಿ ಅತಿಶಯೋಕ್ತಿ ಇರಬೇಕಾದದ್ದು ಸಹಜವೇ. ಹಾಗೆ ನೋಡಿದರೆ ಅತಿಶಯೋಕ್ತಿ ಎಂಬುದೇ ಒಂದು ಅಲಂಕಾರವೆನಿಸಿದೆ. ಮತ್ತೆ ಉಪಮೆಗಳು ವಾಸ್ತವವಾದವುಗಳೇ ಇರಬೇಕು ಎಂಬುದು ಅವರ ನಿಲುಮೆ. ಉದಾ.ಗೆ ಸ್ವರ್ಗದಲ್ಲಿ ಉದ್ಯಾನ, ಆಕಾಶದಲ್ಲಿ ಗಂಗೆ ಇವು ಶುದ್ಧ ಕಾಲ್ಪನಿಕವಾದವುಗಳು: ವಾಸ್ತವ ಅಲ್ಲ, ಎನ್ನುತ್ತಾರೆ.

ಇನ್ನೊಂದು ವಿಶೇಷವೆಂದರೆ ಹಿಂದೂ ದೇವತೆಗಳ ಬಗ್ಗೆ ಕಿಟೆಲರಿಗಿದ್ದ ಅಸಡ್ಡೆ. ಉದಾ.ಗೆ ಕನ್ನಡದಲ್ಲಿ ಜನಪ್ರಿಯವಾದ 'ಸೋಮೇಶ್ವರಶತಕ'ದಲ್ಲಿ ಪ್ರತಿ ಪದ್ಯದ ಕೊನೆಗೆ 'ಹರಹರಾ ಶ್ರೀಚೆನ್ನಸೋಮೇಶ್ವರಾ' ಎಂಬುದಾಗಿ ದೇವರ ಹೆಸರು ಬರುತ್ತದಲ್ಲ! ತೆಗೆಯಬೇಕು. ಮತ್ತೆ ಪಾದಪೂರ್ತಿಗೆ ಏನು ಮಾಡಬೇಕು? 'ನರನೆಲಾ ಕೇಳ್ಕೊಪ್ಪುದೀ ಬುದ್ಧಿಯಾ' ಎಂದು ಪ್ರತಿಯೊಂದು ಪದ್ಯಾಂತಕ್ಕೆ ಸೇರಿಸಿದ್ದಾರೆ. ಇಂಥ ಹಿಂದೂ ದೇವತಾ ನಾಮಗಳ ಹೆಸರನ್ನೆಲ್ಲ ಕಿಟೆಲ್ ತೊಡೆದು ಹಾಕಿದ್ದಾರೆ.

ಅದರಂತೆ ಹರಿದಾಸರ ಹಾಡುಗಳಲ್ಲಿ ದೇವರ ಹೆಸರುಗಳು ಬಂದೇ ಬರುತ್ತವಷ್ಟೇ. ಕೊನೆಯ ನುಡಿಯಲ್ಲಿರುವ ಮುದ್ರಿಕೆಯು ಸಾಮಾನ್ಯವಾಗಿ 'ವಿಠಲ' ಶಬ್ದದಿಂದ ಕೂಡಿರುತ್ತದೆ. ಕಿಟೆಲರು ಕೆಲವು ದಾಸರ ಕೀರ್ತನೆಗಳನ್ನು ತಮ್ಮ ಈ ಸಂಗ್ರಹದಲ್ಲಿ ಕೊಟ್ಟಿದ್ದು, ಅಲ್ಲಲ್ಲ ಬರುವ ವಿಠಲಾಂಕಿತ ಪದಕ್ಕ ಮೇಲೆ ತೋರಿಸಿದಂತೆ ಬೇರೊಂದು ಪದಗುಚ್ಛವನ್ನು ಸೇರಿಸಿದ್ದಾರೆ. ಉದಾ.ಗೆ ಪುರಂದರದಾಸರ 'ಯಾರು ಹಿತವರು ನಿನಗೆ ಈ ಮೂವರೊಳಗೆ' ಎಂಬ ಜನಪ್ರಿಯ ಕೀರ್ತನೆಯನ್ನು ಕೊಟ್ಟಾದ ಮೇಲೆ ಕೊನೆಯಲ್ಲಿಯ

'ಚಿತ್ತದೊಳು ಶುದ್ಧಿಯಂ ಪುರಂದರ ವಿಠಲನೇ
ಉತ್ತಮೋತ್ತಮನೆಂದು ಸುಖಿಯಾಗು ಮನುಜಾ'

ಎಂಬ ಈ ಸಾಲುಗಳನ್ನೇ ಕೊಡಲಿಲ್ಲ–ಪುರಂದರವಿಠಲ ಎಂಬ ದೇವರ ಹೆಸರು ಬರುವ ಕಾರಣದಿಂದ. ಕಿಟೆಲರ ಈ ಪ್ರವೃತ್ತಿ ಹಾಗೂ ದೃಷ್ಟಿಕೋಣವನ್ನು ಆರ್. ನರಸಿಂಹಾಚಾರ್ಯರು ಬೇರೊಂದು ಸಂದರ್ಭದಲ್ಲಿ ಈ ರೀತಿ ಆಕ್ಷೇಪಿಸಿದ್ದಾರೆ:

It is a matter to be deeply regretted that Kittel who is one of the pioneers in the field of Kannada language and literature. . . has omitted in his solitude for leaving everything that savoured of superstition and containing anything adducing to Hindu mythology.

## ೪.೨ ಕಾವ್ಯಮಂಜರಿ

ಕಾವ್ಯಮಾಲೆಯು ಪ್ರಕಟವಾದ ಕೆಲ ವರ್ಷಗಳ ಅನಂತರ ಹಳಗನ್ನಡದ ಇನ್ನೊಂದು ಕವನ ಸಂಗ್ರಹವನ್ನು ಹೊರತಂದರು. ಅದನ್ನು –

"ಟೀಕೆಯೂ ನಿಘಂಟುವೂ ಸಹಿತವಾದ
**ಕಾವ್ಯಮಂಜರಿ**
ಕನ್ನಡ ಕವಿತ್ವದ ಮೊದಲಿನ ಪುಸ್ತಕವು"

ಎಂದು ಕರೆದಿದ್ದಾರೆ. ಗಾತ್ರದಲ್ಲಿ ಚಿಕ್ಕದು. ಆಯ್ದ ೧೧ ಹಳಗನ್ನಡ ಕಾವ್ಯಗಳಲ್ಲಿ ಕುಮಾರವ್ಯಾಸ ಭಾರತಕ್ಕೆ ವಿಶೇಷ ಮನ್ನಣೆ. ಹಾಗೂ ಅವರಿಗೆ ಹೊಸತಾಗಿ ದೊರೆತಿದ್ದ ಪಂಪರಾಮಾಯಣ ಹಾಗೂ ಜಗನ್ನಾಥವಿಜಯ ಕಾವ್ಯಗಳ ಕೆಲ ಪದ್ಯಗಳನ್ನೂ ಇಲ್ಲಿ ಸೇರಿಸಿದ್ದಾರೆ.

ಇಲ್ಲಿರುವ ೬೨೦ ಪದ್ಯಗಳಲ್ಲಿ ಅತಿ ಹೆಚ್ಚಿನ ಪದ್ಯಗಳನ್ನು ತೆಗೆದುಕೊಂಡದ್ದು ಲಕ್ಷ್ಮೀಶಕವಿಯ ಜೈಮಿನಿಭಾರತ ಕಾವ್ಯದಿಂದ. ಮನಮಿಡಿಯುವ ಕಥಾಭಾಗಗಳಲ್ಲದೆ ಸರಸವಾದ ವರ್ಣನೆಗಳು ಪುಂಖಾನುಪುಂಖವಾಗಿ ಅದರಲ್ಲಿ ಬರುತ್ತವೆ; ಎಂದೇ ಇಂದಿಗೂ ಜನಪ್ರಿಯವಾದ ಕಾವ್ಯವದು. ಇದರಲ್ಲಿ ಬರುವ ಚಂದ್ರಹಾಸನ ಕಥಾನಕವನ್ನು ಕಿಟೆಲ್ ಇಡಿಯಾಗಿ ತೆಗೆದುಕೊಂಡಿದ್ದಾರೆ. ಅದರಲ್ಲಿ ಹಿಂದೂ ದೇವರ

ಪ್ರಸ್ತಾಪ ಮತ್ತು ಧಾರ್ಮಿಕ ವಿಚಾರಗಳು ಇಲ್ಲವಲ್ಲ! ಇನ್ನು ಪೌರಾಣಿಕ ಕಥಾನಕಗಳನ್ನು ಎತ್ತಿಕೊಳ್ಳುವುದಕ್ಕೆ ಕುಮಾರವ್ಯಾಸನ ಮಹಾಭಾರತದಲ್ಲಿ ಸಾಕಷ್ಟು ಸಂದರ್ಭಗಳಿದ್ದವು. ಷಡಕ್ಷರಿಯ 'ರಾಜಶೇಖರ ವಿಳಾಸ'ದ ಹಸ್ತಪ್ರತಿಯು ತಡವಾಗಿ ದೊರೆತುದೆಂದು ಕಾಣುತ್ತದೆ. ಕೊನೆಯಲ್ಲಿ ಆ ಕಾವ್ಯದಿಂದಲೂ ಅನೇಕ ಭಾಗಗಳನ್ನು ಆಯ್ದುಕೊಂಡಿದ್ದಾರೆ.

ಅವರಿಗೆ ಸುಲಭಗ್ರಾಹ್ಯವಾದವುಗಳೆಂದರೆ ಸರ್ವಜ್ಞನ ತ್ರಿಪದಿಗಳು, ಹಾಗೂ ಮೇಲೆ ಹೇಳಿದ ಸೋಮೇಶ್ವರ ಶತಕ ಮತ್ತು ದಾಸರ ಹಾಡುಗಳು; ಕಿಟೆಲರಿಗೆ ಆಪ್ಯಾಯಮಾನವಾಗಿದ್ದ ನೀತಿಬೋಧೆಗೆ ಹೇಳಿ ಮಾಡಿಸಿದಂತೆ ಇದ್ದವುಗಳು. ವಿಶೇಷವೆಂದರೆ ಕನ್ನಡ ನಾಡು ಮತ್ತು ನುಡಿಯ ಕುರಿತಾದ ಪದ್ಯಗಳನ್ನು ತಾವೇ ಹುಡುಕಿ ತಮ್ಮ ಸಂಗ್ರಹದ ಸುರುವಿಗೇ ಕೊಟ್ಟಿದ್ದಾರೆ. ಇಂದು ವಿಶೇಷವಾಗಿ ಒಡೆದು ತೋರುವ ಕನ್ನಡಾಭಿಮಾನವನ್ನು ಕಿಟೆಲ್ ನೂರೈವತ್ತು ವರ್ಷಗಳ ಹಿಂದೆಯೇ ತೋರ್ಪಡಿಸಿದ್ದಾರೆ.

ಈ ಸಂಗ್ರಹಕ್ಕೆ ಕಿಟೆಲರು ಪೀಠಿಕೆಯ ನಿಮಿತ್ತದಿಂದ ತತ್ಸಂಬಂಧಿತ ಕವಿಗಳ ಪರಿಚಯವನ್ನು ಕೊಟ್ಟಿದ್ದಾರೆ. ಈ ಕುರಿತ ಅವರ ಕೆಲವು ಅನಿಸಿಕೆಗಳು ತಪ್ಪಾಗಿ ಬಂದಿವೆ. ಕುಮಾರವ್ಯಾಸನ ಶೈಲಿ ಲಕ್ಷ್ಮೀಶನಿಗಿಂತ ಕಡಿಮೆ ಗುಣಮಟ್ಟದ್ದು ಎಂದಿದ್ದಾರೆ. 'ದಾಸರ ಪದಗಳು–ಅವುಗಳ ಶೈಲಿಯನ್ನು ನೋಡಿದರೆ, ೧೫೮೫ರ ಅನಂತರವೇ ರಚಿತವಾದವುಗಳು; ಪುರಂದರದಾಸರಂತೂ ೧೬ನೆಯ ಶತಮಾನದವರಲ್ಲ. ಕಾರಣವೆಂದರೆ ಅವರ ಹಾಡುಗಳಲ್ಲಿ, ಫ್ರೆಂಚರು ತಂದ ಹಲಸಿನ ಹಣ್ಣಿನ ಉಲ್ಲೇಖವಿದೆ. ಫ್ರೆಂಚರು ಇಲ್ಲಿ ಕಾಲಿಟ್ಟದ್ದೇ ೧೬೦೪ರ ಅನಂತರ', ಇತ್ಯಾದಿ. ಇನ್ನೊಂದೆಡೆ ಮಲ್ಲಣಾರ್ಯನು ಅರ್ಧಕ್ಕೆ ಬಿಟ್ಟದ್ದನ್ನು ಷಡಕ್ಷರಿಯು ಪೂರ್ಣ ಮಾಡಿದುದಂತೆ. ಕವಿಗಳ ಹೆಸರನ್ನು ಒಮ್ಮೊಮ್ಮೆ ಪೂರ್ಣವಾಗಿ ಹೇಳದಿದ್ದುದು ಮೋಜಿನದಾಗಿ ತೋರುತ್ತದೆ. ವೀರಶೈವರಾದ ಹರಿಹರ ರಾಘವಾಂಕರು ಕಾಣಿಸಿಕೊಂಡದ್ದು ಹೀಗೆ:

'Hari was guru and uncle of Raghava!

ಸೂಚಿತ ವಿಷಯಗಳು ಕಾವ್ಯಮಾಲೆಗಿಂತ ಬೇರೆಯೇ ಇವೆ. 'ಸುಕವಿತೆ–ದುಷ್ಕವಿತೆ' 'ಎಣೆಗಾಣದ ವಸ್ತು' 'ಅಸಾಧ್ಯವಾದ ಕಾರ್ಯ' 'ದುರ್ಮಾರ್ಗ' 'ದುರ್ಜನರು' ಮುಂತಾದವು. 'ಧರ್ಮದ ನಡಿಗೆ' ಮತ್ತು 'ಆಶಾನದಿ' ಎಂಬ ಹೆಸರಿನ ಪಾಠಗಳು ನಿಜಕ್ಕೂ ಹೊಚ್ಚ ಹೊಸವು. ಈಗ ಕೂಡಾ ಅಭ್ಯಾಸಿಗಳ ಗಮನಕ್ಕೆ ಬಂದಿರದ ಕವನಗಳು. ಇನ್ನೊಂದು ಪಾಠ ಮನೋಜ್ಞವಾಗಿದೆ. ಅದರಲ್ಲಿ ಓರ್ವ ಕವಿಯು 'ಕುರುಡನೂ ಹೆಳವನೂ' ಕತೆಯನ್ನು ನಮಗೆ ಜ್ಞಾಪಿಸುತ್ತಾನೆ. ಕುರುಡನ ಹೆಗಲ ಮೇಲೆ ಹೆಳವನು ಕುಳಿತು, ಒಬ್ಬರೊಬ್ಬರ ನ್ಯೂನತೆಯನ್ನು ಸರಿಪಡಿಸಿಕೊಂಡು ನದಿಯನ್ನು ದಾಟುತ್ತಾರಷ್ಟೆ. ಕವಿ ಹೇಳ್ತಾನೆ: "ಹಾಗೆ ಅವರು ಗಾವುದ ದೂರ ನಡೆದರೇನಂತೆ, ಬಳ್ಳಿದನು ನಡೆದಂತೆ ಆದೀತೆ? ಹಾಗೇನೆ ಎಲೈ ಅಳಿಕವಿಯೇ, ನಿನ್ನ ಕವಿತೆ ಎಷ್ಟು

ಉದ್ದವಾಗಿದ್ದರೇನು ಸುಕವಿಯ ಕಾವ್ಯಕ್ಕೆ ಸಾಟಿಯಾಗದು. ಆದ್ದರಿಂದ ನಿನ್ನ ಅಳಿಕವನಗಳನ್ನು ವಿದ್ವತ್ ವಲಯದಲ್ಲಿ ಓದಲು ಹೋಗಬೇಡ!"

ಯಥಾಪ್ರಕಾರ ಪದ್ಯಗಳ ಆಯ್ಕೆಯಲ್ಲಿ ನೀತಿಮತ್ತೆಗೆ ಒತ್ತು ಕೊಡಲಾಗಿದೆ. ಶಬ್ದಾರ್ಥ? ಕಠಿಣ ಶಬ್ದಕ್ಕೆ ಮಾತ್ರವಲ್ಲ; ಪದ್ಯಗಳಲ್ಲಿ ಬರುವ ಪ್ರತಿ ಶಬ್ದಕ್ಕೂ! ಉದ್ದೇಶ? ಕನ್ನಡ ಬಾರದವರು ವಿಶೇಷತಃ ವಿದೇಶೀ ವಾಚಕರು ಕಿಟೆಲರ ಗಮನದಲ್ಲಿದ್ದಿರಬೇಕು. ವಸಂತ ಋತುವಿನ ವರ್ಣನೆ ಇರುವ ಪಾಠದಲ್ಲಿ 'ಅದಿರ್ಮುತ್ತೆ' ಎಂಬ ಶಬ್ದ ಬರುತ್ತದೆ.

ಮುತ್ತಿನ ಪೊಸಪೊಚ್ಚೆಯಂ ತಳೆದವೋಲ್ ಅದಿ-
ರ್ಮುತ್ತೆ ಮುಗುಳ್ದೆತ್ತಲುಂ. . .

ಅದಿರ್ಮುತ್ತೆ ಎಂದರೆ ಒಂದು ಬಗೆಯ ಹೂವು. ಕಿಟೆಲ್ ಅದರ ಲ್ಯಾಟಿನ್ ರೂಪವನ್ನೂ ಕೊಟ್ಟಿದ್ದಾರೆ.! Gaertnera recemosa, ಎಂದು.

ಒಟ್ಟಿನಲ್ಲಿ ಕಿಟೆಲ್ ಈ ಹಿಂದಿನದ್ದರಕಿಂತ ಪದ್ಯದ ಆಯ್ಕೆ ಮತ್ತು ಮಂಡನೆಗಳಲ್ಲಿ ಹೆಚ್ಚಿನ ಸೂಜ್ಞತೆಯನ್ನು ತೋರಿಸಿದ್ದಾರೆ.

ಇವೆರಡು ಸಂಕಲನಗಳಿಂದ ಕಿಟೆಲ್ ಹಳಗನ್ನಡದಲ್ಲಿ ಎಷ್ಟೊಂದು ಪರಿಣತಿ ಪಡೆದಿದ್ದರೆಂಬುದು ವೇದ್ಯವಾಗುತ್ತದೆ. ಆ ದಿನಗಳಲ್ಲಿ ಹಳೆಯ ಕಾವ್ಯಗಳನ್ನು ಅದೂ ಹಸ್ತಪ್ರತಿಯಾಗಿ ಇದ್ದವುಗಳನ್ನು ಕಣ್ಣಿಟ್ಟು ಓದಿ ಇಷ್ಟರ ಮಟ್ಟಿಗೆ ತಿಳಿದವರು ದೇಶೀಯರಲ್ಲಿಯೂ ಇರಲಿಲ್ಲವೇನೋ.

## ೪.೩ ಶಬ್ದಮಣಿದರ್ಪಣ

ಹಳಗನ್ನಡದ ಪ್ರೌಢವೂ ಪ್ರಾಮಾಣ್ಯವೂ ಆದ ವ್ಯಾಕರಣವೆಂದರೆ ೧೩ನೆಯ ಶತಮಾನದಲ್ಲಿದ್ದ ಕೇಶಿರಾಜನ ಶಬ್ದಮಣಿದರ್ಪಣವೇ ಸೈ. ಇದರ ಮಹತ್ವವನ್ನರಿತು, ೧೮೬೦ರ ದಶಕದಿಂದ ಇಂದಿನವರೆಗೆ ಅದನ್ನು ಬೇರೆ ಬೇರೆಯವರು ಸಂಪಾದಿಸಿ ಹೊರತರುತ್ತಲೇ ಇದ್ದಾರೆ. ಕ್ರಿ.ಶ. ೧೮೨೦ರಲ್ಲಿ ಮೆಕ್ಕರೆಲ್ ಎಂಬವನಿಗೆ ಕನ್ನಡ ವ್ಯಾಕರಣ ಗ್ರಂಥವನ್ನು ರಚಿಸಲು ಸರಕಾರವು ಆದೇಶವಿತ್ತಿತು. ಅವನು ಬರೆದ 'A Grammar of the Carnataca Language' ಗ್ರಂಥವು ಕೇಶಿರಾಜನ ಶಬ್ದಮಣಿ ದರ್ಪಣವನ್ನು ಪರಿಚಯಿಸುವ ಮೊದಲ ಪ್ರಯತ್ನವೆನ್ನಬಹುದು. ಶಿಕ್ಷಣಾಧಿಕಾರಿ ಗ್ಯಾರೆಟ್ ೧೮೬೮ರಲ್ಲಿ ಅದನ್ನು ಇದ್ದುದಿದ್ದಂತೆ (ಕನ್ನಡದಲ್ಲಿ) ಪ್ರಕಟಿಸಿದ್ದನು. ಅನಂತರ ೧೮೭೨ರಲ್ಲಿ ಕಿಟೆಲರು ಸಂಪಾದಿಸಿದ ಆವೃತ್ತಿಯು ಹೊರಬಂದಿತು. ಆಮೇಲೆ ಹಲವು ಆವೃತ್ತಿಗಳನ್ನು ಕಂಡಿತು. ಅಂತಿಮವಾಗಿ ೧೯೨೦ರಲ್ಲಿ ಪಂಜೆ ಮಂಗೇಶರಾಯರು ಅದರ ಸುಧಾರಿತ ಆವೃತ್ತಿಯನ್ನು ಹೊರತಂದರು. ಇದರ ಮೇಲಿಂದ ಕಿಟೆಲ್ ಸಂಪಾದಿತ ಈ ಆವೃತ್ತಿಯ ಮಹತ್ವವನ್ನು ಅರಿಯಬಹುದು.

ಏನು ಅದರ ವೈಶಿಷ್ಟ್ಯ? ಮೊದಲಲ್ಲಿ ಕಿಟೆಲರು ಅದರ ಸಂಪಾದನ ಕಾರ್ಯದಲ್ಲಿ ಒಂದಲ್ಲ, ಒಂಬತ್ತು ಹಸ್ತಪ್ರತಿಗಳನ್ನು ಎಲ್ಲೆಲ್ಲಿಂದಲೋ ತರಿಸಿಕೊಂಡಿದ್ದರು. ಆ

ಹಿಂದೆಯೇ ಹಲವರು ಈ ಪ್ರೌಢ ಗ್ರಂಥಕ್ಕೆ ಟೀಕೆಗಳನ್ನು ಬರೆದಿದ್ದರು. ಕಿಟೆಲರು ಟೀಕಾಸಹಿತವಾದ ಎಲ್ಲ ಹಸ್ತಪ್ರತಿಗಳನ್ನು ಪರಿಶೀಲಿಸುವಾಗ, ಅವರಿಗೆ ಆ ಹಸ್ತಪ್ರತಿಗಳಲ್ಲಿ ಪದ್ಯಗಳು ಮತ್ತು ಅವುಗಳಲ್ಲಿಯ ಶಬ್ದಗುಚ್ಛಗಳು ಒಂದರಲ್ಲಿದ್ದ ಹಾಗೆ ಇನ್ನೊಂದರಲ್ಲಿ ಇರಲಿಲ್ಲ. ಯಾವುದೇ ಭಾಷೆಯ ಪ್ರಾಚೀನ ಹಸ್ತಪ್ರತಿಗಳಲ್ಲಿ ಇದು ಸಹಜ. ಸರಿಯಾದ ಮತ್ತು ಶುದ್ಧವಾದ ಪಾಠವನ್ನು ಕಿಟೆಲರು ತಮ್ಮ ವೈದುಷ್ಯದಿಂದ ಗೊತ್ತುಪಡಿಸಿದರಲ್ಲದೆ, ಬೇರೆ ಪಾಠಾಂತರಗಳನ್ನೂ ಅಡಿಟಿಪ್ಪಣಿಯಾಗಿ ಕೊಟ್ಟರು. ಪೀಠಿಕೆಯಲ್ಲಿ ತಾವು ಕಲೆಹಾಕಿದ ಹಸ್ತಪ್ರತಿಗಳ ಬಗ್ಗೆಯೇ ವಿವರಗಳನ್ನು ಕೊಟ್ಟು, ಇವಕ್ಕೂ ಹೆಚ್ಚು ವಿಶ್ವಾಸನೀಯವಾದ ಹಸ್ತಪ್ರತಿ ದೊರಕಿದ್ದರೆ ಚೆನ್ನಾಗಿತ್ತು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ದೊರೆತ ಹಸ್ತಪ್ರತಿಗಳಿಗೆ ಸಂಜ್ಞೆಯನ್ನು ಯಾವ ರೀತಿಯಾಗಿ ಕೊಡಬೇಕೆಂಬುದನ್ನೂ ಮುಂದಿನವರಿಗೆ ತೋರಿಸಿಕೊಟ್ಟಿದ್ದಾರೆ. ತಮಗಿಂತ ಭಿನ್ನವಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದವರಿಂದ ಕಿಟೆಲ್ ಅದಾವ ರೀತಿಯಲ್ಲಿ ಪತ್ರವ್ಯವಹಾರ ಮಾಡಿ ಹಸ್ತಪ್ರತಿಗಳನ್ನು ತರಿಸಿಕೊಂಡರೆಂಬುದು ಆಶ್ಚರ್ಯಕರವಾಗಿ ತೋರುತ್ತದೆ. ಇತ್ತ ಹಸ್ತಪ್ರತಿ ತಯಾರಿಸುವವರೆಲ್ಲರೂ ಸಾಮಾನ್ಯವಾಗಿ ಮಾಡುವ ತಪ್ಪುಗಳ ಬಗೆಯನ್ನು ಕೊಟ್ಟಿರುವುದರಿಂದ ಇದು ಕೂಡಾ ಇನ್ನು ಮುಂದೆ ಹಸ್ತಪ್ರತಿ ಸಂಪಾದನ ಮಾಡುವವರಿಗೆ ಉಪಯೋಗ ಬೀಳುವಂತಹದು.

ಪ್ರಾಚೀನ ಕಾವ್ಯಗಳ ಶಾಸ್ತ್ರೀಯ ಸಂಪಾದನಾ ಕಾರ್ಯವನ್ನು ಕಿಟೆಲರೇ ಆರಂಭಿಸಿದರೆಂಬುದು ನಿರ್ವಿವಾದದ ಸಂಗತಿ. ಅದರ ಮೊದಲ ಹೆಜ್ಜೆ: ಶಕ್ಯವಿದ್ದಷ್ಟು ಎಲ್ಲ ಹಸ್ತಪ್ರತಿಗಳನ್ನು ದೊರಕಿಸಬೇಕು. ಕಿಟೆಲರ ಕಾಲದಲ್ಲಿ ಅವು ಇಂಥದಲ್ಲಿ ಸಿಗುತ್ತವೆ ಎನ್ನುವುದು ತಿಳಿದಿರದು. ಪತ್ರ ವ್ಯವಹಾರ ಮಾಡಬೇಕು. ಹಸ್ತಪ್ರತಿ ಇಟ್ಟುಕೊಂಡವರ ಮನ ಒಲಿಸಬೇಕು ಮೇಲಾಗಿ ಇವರು ಹೊರದೇಶದಿಂದ ಬಂದವರು.

ತಮ್ಮ ಪೀಠಿಕೆಯಲ್ಲಿ ಹಸ್ತಪ್ರತಿ ಶೋಧನೆ ಶೇಖರಣೆಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಮೊದಲ ಬಾರಿಗೆ ನಡೆದ ಕೆಲಸ ಇದಾದ್ದರಿಂದ ವಿವರ ಕೊಡುವಾ. ಧಾರವಾಡದಲ್ಲಿದ್ದ ಹಿರಿಯ ಮಿಶನರಿ ವೈಗ್ಲೆ ಕೂಡ ಕನ್ನಡ ಸಾಹಿತ್ಯಾಸಕ್ತರು. ೧೮೫೦ರ ಸುಮಾರಿಗೆ ಶಬ್ದಮಣಿದರ್ಪಣದ ಪ್ರತಿಯನ್ನು ಯಾರಿಂದಲೋ ಮಾಡಿಸಿ ಇಟ್ಟುಕೊಂಡಿದ್ದರು. ಇದರ ಅಪೂರ್ವತೆ ಎಂದರೆ, ಪ್ರತಿ ಸೂತ್ರಕ್ಕೆ ಇರುವ ಲಕ್ಷ್ಯ ಪದ್ಯಗಳ ಇಡೀ ಪಠ್ಯವನ್ನು ಕೊಟ್ಟಿದ್ದು.

ಬಿ. ಮಲ್ಲಪ್ಪನವರು ಆಗಿನ ಕಾಲದ ಗಣ್ಯ ಕನ್ನಡ ಪಂಡಿತರು. ಮೈಸೂರಿನ ರಾಜಾ ಸ್ಕೂಲಿನ ಮುಖ್ಯಾಧ್ಯಾಪಕರು. ಅವರು ಶಾಲಾಮಕ್ಕಳಿಗೆಂದು ಬರೆದ ಕನ್ನಡ ವ್ಯಾಕರಣವು ಹಲವಾರು ದಶಕಗಳ ವರೆಗೆ ಮೈಸೂರು ಸಂಸ್ಥಾನದಲ್ಲಿ ಪಠ್ಯವಾಗಿದ್ದಿತು. ಪರಸ್ಪರ ಪರಿಚಯ ಇದ್ದಿಲ್ಲವಾದರೂ ಈ ವ್ಯಾಕರಣ ಪಂಡಿತರಲ್ಲಿ ಶಬ್ದಮಣಿದರ್ಪಣದ ಪ್ರತಿ ಇರಬೇಕೆಂದು ಊಹಿಸಿ ಕಿಟೆಲ್ ತಮ್ಮ ಉದ್ದೇಶವನ್ನು ತಿಳಿಸಿ ಪತ್ರ ಬರೆದರು. ತಡವಿಲ್ಲದೆ ಪ್ರತಿ ಬಂದಿತು. ಒಂದೇ ಅಲ್ಲ, ಇನ್ನೆರಡು ಹಸ್ತ ಪ್ರತಿಗಳು!

ಅದರಂತೆ ಮೈಸೂರು ಮಹಾರಾಜರ ಅರಮನೆಯ ಕಂಟ್ರೋಲರ್ ಆಗಿದ್ದ ರಂಗಾಚಾರ್ಯರು ಅರಮನೆಯ ಹಸ್ತ ಪ್ರತಿ ಭಂಡಾರದಿಂದ ಒಂದನ್ನು ಕಳಿಸಿಕೊಟ್ಟರು. ಅಲ್ಲಿ ಇನ್ನೂ ಒಂದು ಪ್ರತಿ ಇದೆ – ಎಂದು ತಿಳಿದು ಬಂತು. ಮಹಾರಾಜರ ಗಾರ್ಡಿಯನ್ ಆಗಿ ಇದ್ದ ಜೆ.ಡಿ. ಗಾರ್ಡನ್ ಎಂಬ ಆಂಗ್ಲನಿಂದ ಅದನ್ನೂ ತರಿಸಿಕೊಂಡರು.

ಕೊಡಗಿನ ಮಡಿಕೇರಿ ಕಿಟೆಲರ ಪ್ರೀತಿಯ ವಾಸಸ್ಥಳ. ಅಲ್ಲಿ ಒಬ್ಬರ ಮನೆಯಲ್ಲಿ ಶ.ಮ.ದ ಪ್ರತಿ ನೋಡಿದ್ದರು. ಮೊದಲ ನೋಟದಲ್ಲಿಯೇ ಗೊತ್ತಾಯಿತು – ತುಂಬಾ ಅಕ್ಷರಿಕೆಯ ತಪ್ಪುಗಳು ಇವೆಯೆಂದು. ಆದರೂ ಸಂಗ್ರಹಿಸಿದರು.

ಶಬ್ದಮಣಿದರ್ಪಣದ ಇಂಥ ಕೈಬರಹದ ಪ್ರತಿಗಳನ್ನು ಸ್ವಂತದ ಅಭ್ಯಾಸಕ್ಕಾಗಿ ಜನ ಮಾಡಿಕೊಳ್ಳುತ್ತಿದ್ದರೆಂಬುದು ಕಿಟೆಲರಿಗೆ ವೇದ್ಯವಾಯಿತು. ಬಳ್ಳಾರಿಯಲ್ಲಿ ಇಂಥದೊಂದು ಪ್ರತಿ ಸಿಕ್ಕಿತೆಂದು ಅದೇ ವೈಗಲರು ತಮ್ಮ ಮುನ್ಷಿ ರಾಘವೇಂದ್ರರಿಂದ ನಕಲು ಮಾಡಿಸಿ ಕಳಿಸಿಕೊಟ್ಟರಂತೆ.

ಅಂತೂ ಒಂಬತ್ತು ಹಸ್ತಪ್ರತಿಗಳು. ಮುಂದೆ ನಾಗವರ್ಮನ ಛಂದೋಂಬುಧಿಯನ್ನು ಇದೇ ರೀತಿ. ಶಾಸ್ತ್ರೀಯವಾಗಿ ಸಂಪಾದಿಸುವಾಗಲಂತೂ ಒಟ್ಟಿಗೆ ೧೫ ಹಸ್ತಪ್ರತಿಗಳನ್ನು (ಅದರಲ್ಲಿ ಅರೆಕೊರೆಯಾಗಿದ್ದವುಗಳು ಕೂಡಿ) ದೊರಕಿಸಿದರು.

'ಒಂದೆರಡು ಹಸ್ತಪ್ರತಿಗಳಿದ್ದರೆ ಸಾಕಲ್ಲ. ೧೦–೧೨ ಪ್ರತಿಗಳೇಕೆ ಬೇಕು? ಕಿಟೆಲರದು ಅತಿಯಾಯಿತು' ಎಂದು ಅನಿಸುವುದಲ್ಲವೆ? ನಿಜ ಸಂಗತಿಯೆಂದರೆ, ಹಸ್ತಪ್ರತಿ ತಯಾರಿಸುವಾಗ ಕೃತಿರಚಿತವಾಗಿ ನೂರಾರು ವರ್ಷಗಳೇ ಸಂದಿರಬಹುದು. ತಪ್ಪುಗಳು blunders ಎಂದು ಕರೆಯಬಹುದಾದಷ್ಟು ಇರುತ್ತವೆ. ಯಾವುದೊಂದು ಪದದ ಅಕ್ಷರಿಕೆ ಮತ್ತು ಅರ್ಥ ಗೊತ್ತು ಮಾಡಿದ್ದಾದರೆ, ಅದು ಸರಿಯಾದದ್ದೆಂದು ಸ್ಥಿರೀಕರಿಸಿಕೊಳ್ಳಲು ೨–೩ ಪ್ರತಿಗಳಲ್ಲಿ ಅದೇ ರೀತಿಯಾಗಿ ಬಂದಿದ್ದರೆ, ಅದು ಲೇಖಕನ ಆಶಯಕ್ಕೆ ಹತ್ತಿರವಾದ ಸವಿಯಾದ ಶಬ್ದ ಎಂದು ಖಾತರಿಪಡಿಸಿಕೊಳ್ಳಲು ಸಾಧ್ಯ. ಈ ವಿಷಯದಲ್ಲಿ ಕಿಟೆಲರ ಕಾಳಜಿ ಎಷ್ಟೆಂದರೆ, ಹಳಗನ್ನಡ ಕೃತಿಯೊಂದರ ಮುದ್ರಣ ನಡೆದಾಗಲೂ ಅದರ ಹಸ್ತಪ್ರತಿಗಳ ಅನ್ವೇಷಣೆಯನ್ನು ಮುಂದುವರಿಸಿದ ಪ್ರಸಂಗಗಳೂ ಇವೆ. ಅಂತೂ ಇಂದು ಶಾಸ್ತ್ರೀಯ ಸಂಪಾದನೆಯಲ್ಲಿ ತೊಡಗಿದವರು ಅವಶ್ಯವಾಗಿ ಈ ಅಂಶವನ್ನು ಗಮನಿಸುವಂತೆ ಕಿಟೆಲರು ಹಾದಿ ತೋರಿದ್ದಾರೆ.

ಆದರೆ ಶಬ್ದಮಣಿದರ್ಪಣದ ಉತ್ತಮ ಹಸ್ತಪ್ರತಿಯೊಂದು ಅವರಿಗೆ ಮುದ್ರಣ ಮುಗಿದ ಮೇಲೆ ದೊರೆಯಿತಂತೆ. The Editor believes that the present edition fairly represents Keshiraja's original ಎಂಬುದಾಗಿ ತಮ್ಮ ಎರಡನೆಯ ಆವೃತ್ತಿಯಲ್ಲಿ ಕಾಣಿಸಿ, ವ್ಯಾಕರಣ ನಿಯಮಗಳಿಗೆ ಸಂಬಂಧಿಸಿದ ಪ್ರಯೋಗ ವಾಕ್ಯಗಳನ್ನು ತಿದ್ದಿಕೊಂಡಿದ್ದಾರೆ.

ಶಬ್ದಮಣಿದರ್ಪಣದ ಕಿಟೆಲ್ ಆವೃತ್ತಿಯ ಸ್ವರೂಪ ಇಂತಿದೆ: ಮೊದಲಿಗೆ ವ್ಯಾಕರಣ ಸೂತ್ರ, ಎಡಮಗ್ಗಲಿಗೆ ಇಂಗ್ಲಿಷ್‌ನಲ್ಲಿ ಸಂಕ್ಷೇಪ್ತವಾಗಿ ಅದರ ಅರ್ಥ, ಆಮೇಲೆ ಪದ್ಯದ

ಪದಚ್ಛೇದ, ಅನ್ವಯ ಮತ್ತು ಪ್ರಾಚೀನರು ಬರೆದ 'ಟೀಕೆ' ಬಂದಿವೆ. ಅನಂತರ ಆ ವ್ಯಾಕರಣನಿಯಮಾನುಸಾರದ ಪ್ರಯೋಗ ಶಬ್ದಗಳು ಮತ್ತು ವಾಕ್ಯಗಳು. ಕೆಳಗಡೆ ಅಡಿಟಿಪ್ಪಣಿಯಾಗಿ ಪಾಠಾಂತರಗಳು, ಛಂದಸ್ಸು ಮುಂತಾದ ವಿಶೇಷಾಂಶಗಳನ್ನು ಕೊಟ್ಟಿದ್ದಾರೆ. ಸಂಸ್ಕೃತ ಪಾಣಿನೀ ವ್ಯಾಕರಣವನ್ನೂ ಅಲ್ಲಲ್ಲಿ ಪ್ರಸ್ತಾಪಿಸಿದ್ದಾರೆ.

ಇಲ್ಲಿ ದೊರಕಿಸಲಾದ ಪ್ರತಿಗಳ ವಿಶೇಷತೆ ಎಂದರೆ ಎಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಅರೆಕೊರೆಯುವು; ಇಲ್ಲವೇ ಪ್ರಕ್ಷಿಪ್ತ ಭಾಗಗಳನ್ನು ಒಳಗೊಂಡವುಗಳು. ಯಾವುದೊಂದು ವೃತ್ತದಲ್ಲಿ ತಮಗೆ ಬೇಕಾದಂತೆ ಪದ್ಯವೊಂದನ್ನು (ಲಕ್ಷ್ಯವಾಗಿ) ಯಾರೂ ಹೊಸೆಯಬಲ್ಲರು! ಕಿಟೆಲರು ಅಂಥ ಪದ್ಯದ ಲಕ್ಷಣ, ಮಾತ್ರೆ, ಇತ್ಯಾದಿ ಸರಿ ಇದ್ದರೆ ಮಾತ್ರ ಸ್ವೀಕರಿಸಿದ್ದಾಗಿ ಹೇಳಿದ್ದಾರೆ.

ಮಹತ್ವದ್ದೆಂದರೆ ಹಸ್ತಪ್ರತಿಗಳು ಹೆಚ್ಚಾಗಿ ಇದ್ದಷ್ಟೂ ಅವುಗಳ ಕಾಲದ ತರತಮವನ್ನೂ, ಪ್ರಕ್ಷಿಪ್ತವಾಗಿ ಸೇರಿಸಿದ ಭಾಗಗಳನ್ನೂ ಕಂಡು ಹಿಡಿಯಬಹುದು ಎನ್ನುವ ಗ್ರಂಥ ಸಂಪಾದನಾ ವಿಧಿಯನ್ನು ಕಿಟೆಲ್ ಮುಂದಿನವರಿಗೆ ತೋರಿಸಿಕೊಟ್ಟಂತಾಗಿದೆ. ತಮಿಳು ತೆಲುಗು ಶಬ್ದಗಳ ಸಾದೃಶ್ಯವನ್ನು ಕೊಟ್ಟಿದ್ದಾರೆ. ಅಲ್ಲಲ್ಲಿ ಜರ್ಮನ್ ವ್ಯಾಕರಣಕಾರರನ್ನು ಮತ್ತು ಕೋಶಕಾರರನ್ನು ಉಲ್ಲೇಖಿಸಿದ್ದಾರೆ. ಹೀಗೆ ಅವರದು ತೌಲನಿಕ ದೃಷ್ಟಿ ಎಂಬುದು ಮನವರಿಕೆಯಾಗುತ್ತದೆ. ಕಿಟೆಲರು ಈ ವ್ಯಾಕರಣದಷ್ಟೇ ಪ್ರೌಢವಾಗಿರುವ 'ಶಬ್ದಾನುಶಾಸನ' ಎಂಬ ಕನ್ನಡದ ವ್ಯಾಕರಣವನ್ನು ತುಸು ಹೆಚ್ಚೇ ಪ್ರಸ್ತಾಪ ಮಾಡಿದ್ದಾರೆ. ಅದು ಸಂಸ್ಕೃತದಲ್ಲಿ ಇರುವ ಕಾರಣದಿಂದ ಕನ್ನಡ ವ್ಯಾಕರಣಾಭ್ಯಾಸಿಗಳು ವಿಶೇಷವಾಗಿ ಗಮನಿಸಿಲ್ಲ.

ಸೂತ್ರ ೬೨೧ರಲ್ಲಿ ಅಸಹ್ಯೋಕ್ತಿಗೆ ಉದಾಹರಣೆಯಾಗಿ 'ಹೇ ಲತಾ ಕೋಮಲಾಂಗಿ' (ಹೇಲ ತಾ...) ಎಂಬಂತಹ ಉದಾಹರಣೆಗಳಲ್ಲಿಯ ಶಬ್ದಗಳು ಅಶ್ಲೀಲವಾಗಿವೆ. ಅಸಹ್ಯವೆನಿಸುತ್ತದೆ. ಏನಿದ್ದರೂ 'ಅಸಹ್ಯೋಕ್ತಿ'ಗೆ ಉದಾಹರಣೆಗಳಾಗಿ, ಇತರ ಶಬ್ದಮಣಿದರ್ಪಣದ ಸಂಪಾದಕರು ಕೊಟ್ಟಿದ್ದಾರೆ. (ಮೂಲದಲ್ಲಿವೆಯೆಂಬ ಕಾರಣದಿಂದ). ಕಿಟೆಲ್ ಮಾತ್ರ "We refrain from giving the original three little sentences" ಎಂದು ಕೈಬಿಟ್ಟಿದ್ದಾರೆ. ಅವರ ಕಡು ನೀತಿಮತ್ತೆಗೆ ಇದೂ ಒಂದು ಮಾದರಿ.

ಹೀಗಿಕೆಯಲ್ಲಿಯ ಒಂದು ಮೌಲಿಕವೆನಿಸುವ ಅಂಶವೆಂದರೆ ಈಗ ಲುಪ್ತವಾಗಿರುವ ಱ ಮತ್ತು ೞ ಗಳದ್ದು. ಅತಿ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ತಪ್ಪದೇ ಕಾಣಿಸಿಕೊಳ್ಳುವ ಈ ಶಬ್ದಗಳು ವಿಕಲ್ಪವಾಗಿ ರ ಮತ್ತು ಳ ಕ್ಕೆ ಮಾರ್ಪಾಟು ಹೊಂದಿದ್ದು ಆ ಮುಂದೆ ನಡುಗನ್ನಡ ಕವಿಗಳು ಹಳೆಯ ಱ ಮತ್ತು ೞ ಇವನ್ನು ಪೂರ್ಣವಾಗಿ ಕೈಬಿಟ್ಟರು. ಸಮಸ್ಯೆ ಎಂದರೆ ಮೊದಲಿಗೆ ಕೈಬಿಟ್ಟದ್ದು ಱವೆ? ಅಥವಾ ೞವೆ? ಮತ್ತು ಎಂದಿನಿಂದ? ಎರಡನೆಯ ಸಮಸ್ಯೆ ಎಂದರೆ ಪ್ರತಿ ಮಾಡಿದವರು ಹೆಚ್ಚಾಗಿ ನಡುಗನ್ನಡ ಕಾಲದವರಾದ್ದರಿಂದ ಅವರಿಗೆ ಱ–ರ ಮತ್ತು ೞ–ಳ ಇವುಗಳ ಅರ್ಥಭೇದ ತಿಳಿಯದೇ

ಹೋದಾಗ ಮೂಲತಃ ಕವಿ ಬಳಸಿದ್ದು ಯಾವುದು ಎಂಬುದು, ಗೊತ್ತಾಗದೇ ಅದರಿಂದ ಅರ್ಥದ ವ್ಯತ್ಯಾಸಕ್ಕೆ ಕಾರಣವಾಗಬಹುದು.

ಸಾಹಿತ್ಯ ಪರಿಷತ್ತಿನ ಕನ್ನಡ ಕನ್ನಡ ಕೋಶದ ಸಂಪುಟಗಳು ಈಚೆಗೆ ಪ್ರಕಟವಾದ ಮೇಲೆ ಈ ಪದ-ಅರ್ಥಗಳ ನಿಷ್ಕರ್ಷೆಯಾಗಿದ್ದರೂ ಅದಕ್ಕೂ ನೂರು ವರ್ಷಗಳ ಹಿಂದೆ ಕಿಟೆಲ್ ಈ ವಿಷಯವಾಗಿ ಆಳವಾಗಿ ಯೋಚಿಸಿ ಅವೆಷ್ಟೋ ಪದಗಳ ನಿಜರೂಪದ ನಿಷ್ಕರ್ಷೆಯನ್ನು ಮಾಡಿದ್ದರು. ಹಾಗೆ ಮಾಡುವಾಗ ತಮಿಳು, ಮಲೆಯಾಳ-ಈ ಸೋದರ ಭಾಷೆಗಳ ನೆರವನ್ನು ಪಡೆದಿದ್ದರು. ಮಾತ್ರವಲ್ಲ ತುಳು ಹಾಗೂ ಬಡಗು ಎನ್ನುವ ಉಪಭಾಷೆಯಲ್ಲಿಯ ತತ್ಸಮಾನ ಪದಗಳನ್ನೂ ಗಮನಿಸಿದ್ದುದು ಒಂದು ವಿಶೇಷ.

ಈ ಜ, ಟ ಗಳು ತುಳು ಭಾಷೆಯಲ್ಲಿ, ಕನ್ನಡದಲ್ಲಿ ಆದಂತೆ ರ, ಳ-ಇವಕ್ಕೆ ಮಾತ್ರವೆ ತಿರುಗಲಿಲ್ಲ. ಜ ಇದು ರ ಮಾತ್ರವಲ್ಲದೆ ಜ, ತ, ದ, ಮತ್ತು ರ್ - ಹೀಗೂ ಬದಲಾದದ್ದನ್ನು ಉದಾಹರಣ ಸಹಿತ ಕೊಡಮಾಡಿದ್ದಾರೆ. ಅದರಂತೆ ಟ ಸಹಿತ ತುಳುವಿನಲ್ಲಿ ಣ,ಲ ಮುಂತಾಗಿ ವಿವಿಧ ರೀತಿಯಲ್ಲಿ ಮಾರ್ಪಾಟನ್ನು ಕಂಡಿದೆ. ಕಿಟೆಲರು ಯಾವುದೊಂದು ವಿಷಯವನ್ನು ಎತ್ತಿಕೊಂಡರೂ ತೀರಾ ಆಳಕ್ಕೆ ಇಳಿಯುವುದೂ, ಸಮಾನ ಅಂಶಗಳಿಗೆ ಹೋಲಿಸಿಯೆ ನಿರ್ಣಯ ತಗೊಳ್ಳುವುದೂ ಅವರಿಗೆ ರೂಢಿಗತವಾಗಿತ್ತು.

ಈ ಹಿಂದೆ ಹೇಳಿದಂತೆ ಕೇಶಿರಾಜನೇ ಕಿಟೆಲರ ಕನ್ನಡ ಪ್ರೊಫೆಸರ್! ಪೀಠಿಕೆಯ ಕೊನೆಯಲ್ಲಿ ಈ ಕೆಳಗಿನ ಹೇಳಿಕೆಯಿತ್ತು ಕಿಟೆಲ್ ಆವನಿಗೆ ಋಣ ಸಲ್ಲಿಸಿದ್ದಾರೆ;

Keshiraja's grammar is the only true standard work, not merely for the ancient Canerese language, but also for all the niceties of its present form; as the essence of the language has not changed. By consulting it, various questions concerning new Canerese find their proper answer.

ಇಂತು ಇಡೀ ಗ್ರಂಥವನ್ನು ಪರಿಶೀಲಿಸಿದಾಗ ಕಿಟೆಲರ ಪಾಂಡಿತ್ಯ ಹಾಗೂ ಪರಿಶ್ರಮಕ್ಕೆ ಹಿರಿಯ ನಿದರ್ಶನ ದೊರೆತಂತಾಗಿದೆ.

## ೪.೪ ಛಂದೋಂಬುಧಿ

ಇದೇ ಕ್ರಮದಲ್ಲಿ ಸಂಪಾದಿತವಾದ ಇನ್ನೊಂದು ಕೃತಿ, ೧೧ನೆಯ ಶತಮಾನದ 'ಛಂದೋಂಬುಧಿ'. ವ್ಯಾಕರಣ ವಿಚಾರದಲ್ಲಿ ಶಬ್ದಮಣಿದರ್ಪಣಕ್ಕೆ ಇದ್ದ ಗೌರವದ ಸ್ಥಾನವು, ಛಂದಸ್ಸಿಗೆ ಸಂಬಂಧಿಸಿ, ಈ ಕೃತಿಗೆ ಇದೆ.

ಇದನ್ನು ಸಂಪಾದಿಸುವಲ್ಲಿಯೂ ಕಿಟೆಲರು ಹಸ್ತಪ್ರತಿಗಳನ್ನು ಅರಸಿಕೊಂಡು ಹೋದರಷ್ಟೆ. ಹಾಗೆ ದೊರೆತ ೧೫ ಹಸ್ತಪ್ರತಿಗಳಲ್ಲಿ ಹುಬ್ಬಳ್ಳಿಯಿಂದ ತಂದ ಪ್ರತಿ ಮೂಲ

ಕೃತಿಕಾರನಿಗೆ ಹೆಚ್ಚು ಹತ್ತಿರದ್ದು ಎಂದು ಅವರಿಗೆ ಎನಿಸಿತು. ಹೀಗೆ ಪರಿಶೀಲಿಸಿ ನಿರ್ಣಯಕ್ಕೆ ಬರುವ ಪರಿಕ್ರಮವೇ ಆಗಿನ ಕಾಲಕ್ಕೆ ಹೊಸದು. ಕಿಟೆಲರಿಗಿಂತ ಮೊದಲು ೧೮೬೫ರಲ್ಲಿ ಛಂದೋಂಬುಧಿಯು ಕಲ್ಲಚ್ಚಿನಲ್ಲಿ ಮುದ್ರಣಗೊಂಡಿತ್ತು-ಅದರೆ ಇದ್ದುದಿದ್ದಂತೆ. ಕಿಟೆಲ್ ಅದನ್ನೂ ಗಮನಿಸಿದ್ದಾರೆ.

ಈ ಗ್ರಂಥದ ವೈಶಿಷ್ಟ್ಯಗಳೆಂದರೆ "ನಿಷ್ಠೂರ ಸಂಜಯ್ಯ" ಎಂಬವನ ಟೀಕೆಯನ್ನು ಪ್ರಥಮವಾಗಿ ಸೇರಿಸಿದ್ದುದು. ಹಾಗೂ ಇಂಗ್ಲಿಷಿನಲ್ಲಿ ಆ ಸೂತ್ರಗಳ ಸಾರವನ್ನು ಕೊಟ್ಟದ್ದು. ಪ್ರಸ್ತಾವನೆಯಲ್ಲಿ ಕವಿ, ಟೀಕಾಕಾರರ ಪರಿಚಯ ಕಾಲನಿರ್ಣಯ ಮಾಡಿದ್ದಲ್ಲದೆ ತುಳು, ಬಡಗು, ಭಾಷೆಗಳೊಡನೆಯ ಕನ್ನಡ ಸಂಬಂಧವನ್ನು ಹೇಳಿದುದು.

ಸಾಮಾನ್ಯವಾಗಿ ಹಸ್ತಪ್ರತಿಗಳಲ್ಲಿ, ಪ್ರತಿಕಾರರು ನಾನಾ ವಿಧವಾಗಿ ಮತ್ತು ತಮಗೆ ಬೇಕೆನಿಸಿದ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರಾದ್ದರಿಂದ ಮೂಲ ಲೇಖಕನ ಆಶಯಕ್ಕೆ ಅನುಗುಣವಾದದ್ದನ್ನು ಕಂಡು ಹಿಡಿಯುವುದು ಕಠಿಣತರವಾಗುತ್ತದೆ. ಉದಾ.ಗೆ ಒಬ್ಬ ಹಸ್ತಪ್ರತಿಕಾರನು ಪ್ರಯೋಗ ಪದ್ಯಗಳೆಂದು ೨೪ ತೀರ್ಥಂಕರರ ಸ್ತುತಿಯುಳ್ಳ ಪದ್ಯಗಳನ್ನು ತಾನೇ ರಚಿಸಿ ಕೊಟ್ಟಿದ್ದಾನೆ. ಇನ್ನೊಂದು ವೈಚಿತ್ರ್ಯವೆಂದರೆ, ದೇವತಾಸ್ತುತಿಯುಳ್ಳ ನಾಂದೀ ಪದ್ಯದಲ್ಲಿ ನಾಗವರ್ಮನು ಯಾವ ದೈವತವನ್ನು ವರ್ಣಿಸಿದ್ದಾನೆಂಬುದು ಗೊತ್ತಾಗದಂತೆ ಆ ಪ್ರತಿಕಾರರು ತಮ್ಮದೇ ಆದ ಆರಾಧನಾ ದೈವತವನ್ನು ಸೇರಿಸಿದ್ದುದು. (ಶಿವ, ಅರುಹಂತ ಇತ್ಯಾದಿ) ಸಂಪಾದಕ ಏನು ಮಾಡಬೇಕು? ಹೀಗಾಗಿ ಕಿಟೆಲ್ ಸುರುವಾತಿನ ಆರು ನಾಂದಿ/ಮಂಗಳ ಪದ್ಯಗಳನ್ನೇ ಬಿಟ್ಟುಬಿಟ್ಟದ್ದಾರೆ! ಆದರೆ 'ನಾಗವರ್ಮನ ಈ ಕೃತಿ ಕಾಳಿದಾಸನ ಪದ ಪದ್ಧತಿಯನ್ನು ಮೀರಿಸಿದೆ' ಎಂಬ ಅರ್ಥದ ಪದ್ಯವೊಂದನ್ನು ತಾವೇ ರಚಿಸಿ ಆರಂಭ ಮಾಡಿದ್ದಾರೆ! ಮತ್ತು ಮುನ್ನುಡಿಯಲ್ಲಿ ಅವನು ಶೈವ, ಜೈನ, ಬ್ರಾಹ್ಮಣ ಈ ಮೂರು ಮತಗಳಲ್ಲಿ ಒಂದರ ಸಾಧ್ಯತೆಯ ಬಗ್ಗೆ ವ್ಯಕ್ತವಾದ ಅಭಿಪ್ರಾಯಗಳ ಸಾಧಕ-ಬಾಧಕಗಳನ್ನು ಕೊಡಮಾಡಿದ್ದಾರೆ. ಗ್ರಂಥ ಸಂಪಾದನ ಕಾರ್ಯದಲ್ಲಿ ತುಲನಾತ್ಮಕ ವಿವರಣೆ ಆವಶ್ಯವೆಂಬು ದನ್ನು ಅವರು ಸರಿಯಾಗಿಯೇ ಗ್ರಹಿಸಿದ್ದಾರೆ. ಒಟ್ಟಿನಲ್ಲಿ ಸಂಪಾದಕೀಯದ ಕೆಲಸ-ಎಂದರೆ ಮೂಲ ಲೇಖಕನಿಗೆ ಹತ್ತಿರವಾದ ಪ್ರತಿಯನ್ನು ಸಿದ್ಧಪಡಿಸುವುದು, ಎಂಬುದು ಕಿಟೆಲರ ಮನವೊಪ್ಪಿದ ಕೆಲಸವಾಗಿದ್ದಿತು.

ಸಂಪಾದನ ಕಾರ್ಯದಲ್ಲಿ ತೊಡಗಿದಾಗ ಕಿಟೆಲರು ಸಂಸ್ಕೃತ, ಪ್ರಾಕೃತ-ಈ ಎರಡೂ ಭಾಷೆಗಳಲ್ಲಿದ್ದ ಪಿಂಗಳ, ಹಲಾಯುಧ, ಕೇದಾರಭಟ್ಟ ಮುಂತಾದವರ ಛಂದೋಗ್ರಂಥ ಗಳನ್ನು ಆಳವಾಗಿ ಪರಿಶೀಲಿಸಿದ್ದರು. ಪಿಂಗಳನನ್ನು ಹೆಚ್ಚಾಗಿ ಅನುಕರಿಸಿದ್ದರೂ, ನಾಗವರ್ಮನು ಸ್ವತಂತ್ರವಾಗಿಯೂ ಹೊಸ ಛಂದೋವಿಧಾನಗಳನ್ನು ಹೇಳಿದ್ದಾನೆಂಬು ದನ್ನು ತೋರಿಸಿದ್ದಾರೆ. ಮತ್ತು ತೆಲುಗು, ತಮಿಳು ಭಾಷೆಗಳ ಛಂದೋಬಂಧ ಗಳೊಂದಿಗೆ ಹೋಲಿಸಿ ನಾಗವರ್ಮನ ಸ್ವಂತಿಕೆಯನ್ನು ಮನಗಾಣಿಸಿ ಕೊಟ್ಟಿದ್ದಾರೆ.

ಜರ್ಮನಿಯ ವೆಬರ್ ಮೊದಲಾದ ವಿದ್ವಾಂಸರನ್ನೂ ಉಲ್ಲೇಖಿಸಿದ್ದಾರೆ. ಪಠ್ಯಭಾಗ ದಲ್ಲಿಯೂ ತೌಲನಿಕರೀತ್ಯಾ ಪೂರಕ ವಿವರಣೆ ಕೊಟ್ಟಿದ್ದಾರೆ. ಹೀಗೆ ಇಡೀ ಗ್ರಂಥದ ಪುಟಪುಟಗಳಲ್ಲಿಯೂ ಕಿಟೆಲರ ವ್ಯಾಸಂಗ ಮತ್ತು ವಿದ್ವತ್ತು ಬೆಳಗಿದೆ.

ಆದರೆ ಒಂದು ವಿಷಯದಲ್ಲಿ ಮಾತ್ರ ಕಿಟೆಲರನ್ನು ಗಂಭೀರವಾಗಿ ಆಕ್ಷೇಪಿಸ ಬೇಕಾಗಿದೆ. ಪೀಠಿಕೆಯಲ್ಲಿ ಅವರು ಹೇಳುತ್ತಾರೆ:

As the present edition is first of all intended for schools, some independent epithets of Nagavarma's wife, to whom it is addressed and the superstitious first lines of verse V-22 have been altered.

ಕಾವ್ಯದಲ್ಲಿ ತಮಗೆ ಅಶ್ಲೀಲವೆನಿಸಿದ್ದು ಮಕ್ಕಳು ಗಮನಿಸುವುದು ಬೇಡ ಎಂದಾದರೆ ಅದನ್ನು ಕೊಡದೇ '...' ಈ ಮೂರು ಸೊನ್ನೆಗಳನ್ನು ಹಾಕಿ ಕೈ ಬಿಡಬಹುದಾಗಿತ್ತು. ಆದರೆ ಮೂಲ ಕೃತಿಕಾರನನ್ನು ಅವಜ್ಞೆ ಮಾಡಿ ತಾನೇ ಪದಗುಚ್ಛಗಳನ್ನು ಸೇರಿಸುವುದು ಅದಾವ ಗ್ರಂಥಸಂಪಾದನಾ ಶಾಸ್ತ್ರದಲ್ಲಿ ಹೇಳಿದೆ? ಯಾವುದೊಂದು ಕೃತಿಯ ಪ್ರತಿಕಾರರೇ ಏನಾದರೂ ತಮಗೆ ತಿಳಿದಂತೆ ಸೇರಿಸಿದರೆ (ಪ್ರಕ್ಷಿಪ್ತ ಅಂಶಗಳು) ಅದಕ್ಕೆ ಕಿಟೆಲರು ಆಕ್ಷೇಪಿಸುವುದಾದರೂ ಏಕೆ? ಎಂದು ಕೇಳಬೇಕಾಗುತ್ತದೆ. ಈ ರೀತಿಯ ತಮ್ಮ ಸೇರ್ಪಡೆಯನ್ನು ಹಿಂದೂ ದೇವತೆಗಳ ಹೆಸರಿಗೆ ಪ್ರತಿಯಾಗಿ ಅನೇಕ ಕಡೆ ಮಾಡಿದ್ದಾರೆ. ಎಂಬುದನ್ನು ನೋಡಿದ್ದೇವೆ.

ಅದಂತಿರಲಿ, ಹಳಗನ್ನಡ ಸಾಹಿತ್ಯದ ಮೂಲಭೂತ ವಿಷಯಗಳನ್ನೊಳಗೊಂಡ ಈ ಎರಡು ಕೃತಿಗಳನ್ನು ಹೊಸ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ಹೊರತಂದು ಕನ್ನಡದಲ್ಲಿ ಗ್ರಂಥಸಂಪಾದನಾ ಕಾರ್ಯದ ಅಡಿಪಾಯವನ್ನು ಹಾಕಿ ಮುಂದಿನವರಿಗೆ ಮಾರ್ಗದರ್ಶಿ ಯಾದದ್ದು ಕಿಟೆಲರ ಬಹು ದೊಡ್ಡ ಸಾಧನೆಯೆನಿಸಿದೆ.

### ೪.೫ ಕನ್ನಡ ಸಾಹಿತ್ಯದ ಚರಿತ್ರೆ

'ಛಂಧೋಂಬುಧಿ' ಪ್ರಕಟನೆಯ ಇನ್ನೊಂದು ಗಣನೀಯ ಅಂಶವೆಂದರೆ ಅದರಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು (An essay on Kanerese Literature) ಸೇರಿಸಿದುದು.

ಬಾಸೆಲ್ ಮಿಶನ್ನಿನವರು ಈ ಹಿಂದೆ ಹಳಗನ್ನಡ ಕಾವ್ಯಗಳ ಹತ್ತಾರು ಹಸ್ತಪ್ರತಿ ಗಳನ್ನು ಕಲೆಹಾಕಿದ್ದರು. ಅತ್ತ ಮದ್ರಾಸದ ಫೋರ್ಟ್ ಸೇಂಟ್ ಜಾರ್ಜ್ ಕಛೇರಿಯಲ್ಲಿ ಹಸ್ತಪ್ರತಿಗಳು ಅಷ್ಟಿಷ್ಟು ಸಂಗ್ರಹವಾಗಿದ್ದುವು. ಬೇರೆಡೆಯಲ್ಲಿಯೂ ಹಸ್ತಪ್ರತಿಗಳಿದ್ದುದು ಕಿಟೆಲರಿಗೆ ತಮ್ಮ ಈ ಮುನ್ನಿನ ಶಾಸ್ತ್ರಗ್ರಂಥದ್ವಯವನ್ನು ಸಂಪಾದಿಸುವ ಕಾಲಕ್ಕೆ ವೇದ್ಯವಾಗಿದ್ದಿತು. ಹಾಗಿದ್ದರೆ ಅವುಗಳನ್ನು ಆಧರಿಸಿ, ಈ ಹಿಂದಿನ ಕನ್ನಡ ಸಾಹಿತ್ಯದ ಚರಿತ್ರೆಯನ್ನು ರಚಿಸಬಹುದೆಂದು ಅನಿಸಿತು. 'An Essay' ೧೮೭೫ರ ಪ್ರಕಟನೆಯಾಗಿ ದೆಯಷ್ಟೆ. ಅದರ ಹಿಂದಿನ ವರ್ಷ Indian Evangelical Review ಪತ್ರಿಕೆಯಲ್ಲಿ ಈ

ಕುರಿತು ಒಂದು ಕಿರುಚರಿತ್ರೆಯನ್ನು, ಎಂದರೆ ಕಾಲಾನುಕ್ರಮವಾಗಿ ಹಳಗನ್ನಡ ಕಾವ್ಯಗಳನ್ನು ಪರಿಚಯಿಸಿದ್ದರು. ಪ್ರಕೃತ ಛಂದೋಂಬುಧಿಯ ಪೀಠಿಕೆಯಾಗಿ ತಕ್ಕ ಮಟ್ಟಿಗೆ ಚರಿತ್ರೆಯ ರೂಪದಲ್ಲಿಯೇ ಬರೆಯಬೇಕೆಂದರು.

ಕ್ರಿ.ಶ. ೮೦೦ ರಿಂದ ಕನ್ನಡ ಸಾಹಿತ್ಯ ರಚನೆ ಆರಂಭವಾಯಿತೆಂಬುದು ಅವರು ಮೊದಲಿಗೆ ಕೈಗೊಂಡ ನಿರ್ಣಯ. ಅಲ್ಲಿಂದ ೧೫೦೦ರ ಕಾಲಕ್ಕೆ ಕನ್ನಡ ಸಾಹಿತ್ಯವಾಹಿನಿ ಬಹುಮುಖವಾಗಿ ಹರಿಯಿತು. ೧೮೭೨ರಿಂದ ಹೊಸಗನ್ನಡ ಸಾಹಿತ್ಯ ಮೊದಲಾಯಿತು. ಇದು ಅವರು ಇಟ್ಟುಕೊಂಡ ಚಾರಿತ್ರಿಕ ಹೊಳಹು. ಈ ಹಿನ್ನೆಲೆಯಲ್ಲಿ ಸುಮಾರು ೧೫೦ ಕನ್ನಡ ಕಾವ್ಯಗಳನ್ನು ಪರಿಚಯಿಸಿದ್ದಾರೆ.

ಕನ್ನಡ ಸಾಹಿತ್ಯದ ಮೂಲ ಪ್ರೇರಣೆ ಧಾರ್ಮಿಕವಾದದ್ದು. ಆ ಧಾರ್ಮಿಕ ಮತಗಳೆಂದರೆ ಜೈನ, ಶೈವ, ವೀರಶೈವ ಮತ್ತು ಬ್ರಾಹ್ಮಣ. ಅದನ್ನು ಗಮನಿಸಿ ಧಾರ್ಮಿಕ ದೃಷ್ಟಿಯಿಂದ ಸಾಹಿತ್ಯ ಚರಿತ್ರೆಯ ಕಾಲವಿಭಾಗಗಳನ್ನು ಮಾಡಬೇಕೆಂದು ಅವರು ಹಾಕಿಕೊಟ್ಟ ದಾರಿ ಇಂದಿಗೂ ಒಟ್ಟಿನಲ್ಲಿ ಉಳಿದಿದೆ. ಈಗಿನವರು ಆ ಕಾಲಕ್ಕೆ ಹೆಸರನ್ನು ಬೇರೆ ಕೊಟ್ಟಿರಬಹುದು. (ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗ.) ಆದರೆ ಕಿಟೆಲ್ ಮಾಡಿಕೊಂಡಿರುವ 'ಶೈವ' ಎಂಬ ವಿಭಾಗ ಒಪ್ಪಿತವಾಗಿಲ್ಲ. ಯಾಕೆಂದರೆ ಅದರಲ್ಲಿ ವೀರಶೈವ, ಬ್ರಾಹ್ಮಣ ಎರಡೂ ಕವಿಗಳು ಸೇರಿಕೊಂಡಿದ್ದಾರೆ. ೧೮೭೨ರ ಅನಂತರ ಎಂದರೆ ಹೊಸಗನ್ನಡದ ಸಂಧಿಕಾಲದ ಕೃತಿಗಳ ದೀರ್ಘ ಪಟ್ಟಿ ಇದೆಯಾದರೂ, ಅವು ಮುದ್ರಣ ಸೌಕರ್ಯದ ಕಾರಣದಿಂದ ಹೊರಬಂದಂತಹವು. ಪ್ರತಿಯಾಗಿ ನಡುಗನ್ನಡ ಕಾಲದ ಕೃತಿಗಳು ಅವರ ಗಮನವನ್ನು ಹೆಚ್ಚಾಗಿ ಸೆಳೆದಿವೆ. ಆ ಕಾಲದ ಕವಿಗಳಲ್ಲಿ ರಾಜಶೇಖರವಿಳಾಸವನ್ನು ರಚಿಸಿದ ಷಡಕ್ಷರಿ ಅವರಿಗೆ ಮಹತ್ವದ ಕವಿಯಾಗಿ ಕಂಡಿದ್ದಾನೆ.

ಯಾವ ಕವಿ ಯಾವ ಕಾಲದಲ್ಲಿದ್ದ ಎಂಬ ಕಾಲನಿರ್ಣಯ ಮಾಡುವಲ್ಲಿ ಶಾಸನಗಳ ಪ್ರಯೋಜನ ಪಡೆದಿದ್ದಾರೆ. ಮತ್ತು ಹೀಗೆ ಮಾಡುವಲ್ಲಿ ಇತಿಹಾಸ ಸಂಶೋಧನ ದೃಷ್ಟಿ ಕಂಡು ಬಂದಿದ್ದರೂ, ಆಕರಗಳ ಅಸಮಗ್ರತೆಯಿಂದ ಈ ಕೆಲಸ ಅಸಮರ್ಪಕವೆನಿಸಿದೆ.

ಇದರ ಕೆಲವು ವಿಶೇಷತೆಗಳೆಂದರೆ ಹಾಡು-ಕುಣಿತಗಳಿಗೆಂದಿದ್ದ ಯಕ್ಷಗಾನ ಕೃತಿಗಳಿಗೆ ಸಾಹಿತ್ಯಿಕ ಮನ್ನಣೆಯನ್ನು ಕೊಟ್ಟದ್ದು. ಮತ್ತೊಂದು, ಕಿಟೆಲರು ಉಲ್ಲೇಖಿಸಿದ ಕೆಲವು ಕೃತಿಗಳು (ವೀರನಂದಿ, ವಿದ್ಯಾನಾಥರವು) ಆ ಮುಂದಿನ ಕರ್ಣಾಟಕ ಕವಿಚರಿತಕಾರರ ಗಮನಕ್ಕೆ ಸಹ ಬಾರದಿದ್ದವುಗಳು. ಇಂದಿಗೂ ಆ ಕೆಲವು ಹಸ್ತಪ್ರತಿಗಳು ಅಜ್ಞಾತವಾಗಿಯೆ ಉಳಿದಿವೆ. ಚಾಮರಸನ ಸುಪ್ರಸಿದ್ಧ 'ಪ್ರಭುಲಿಂಗಲೀಲೆ' ಕೃತಿಯು ತೆಲುಗು, ತಮಿಳು, ಭಾಷೆಗಳಿಗೆ ಅನುವಾದವಾಗಿದ್ದನ್ನು ಮೊದಲ ಬಾರಿಗೆ ತೋರಿಸಿದ್ದಾರೆ. ವಚನ ಸಾಹಿತ್ಯವು ೧೨ನೆಯ ಶತಮಾನದಲ್ಲಿ ವಿಜೃಂಭಿಸಿತಷ್ಟೆ. ಅದರ ಬಗ್ಗೆ ಈ ಚರಿತ್ರೆಯಲ್ಲಿ ಸ್ಥಾನ ದೊರಕಿಲ್ಲ. ಕಾರಣವೆಂದರೆ ಕಿಟೆಲರ ಕಾಲಕ್ಕೆ ಅವು ಬೆಳಕಿಗೆ ಬಂದಿರಲೇ ಇಲ್ಲ. (ಅಖಂಡೇಶ್ವರ ವಚನ ಬಂದನ್ನುಳಿದು).

ಈ ಕೃತಿಯಲ್ಲಿಯ ಕೆಲವು ಅರೆ–ಕೊರೆಗಳನ್ನು ಜೊತೆಗೆ ಅದರ ಮೌಲಿಕತೆಯನ್ನೂ ಎಮ್. ಎಮ್. ಕಲಬುರ್ಗಿಯವರು ಈ ರೀತಿ ತೋರಿಸಿದ್ದಾರೆ.

೧. ಕೇಶಿರಾಜನ ತಂದೆ ಮಲ್ಲಿಕಾರ್ಜುನನು ವೀರಶೈವ ಮಲ್ಲಿಕಾರ್ಜುನನೆಂದು ಸಂದೇಹ ತಾಳಿದುದು.

೨. ಅಭಿದಾನ ರತ್ನಮಾಲೆ ನಾಗವರ್ಮನದೆಂದು ತಿಳಿಯದೇ ಹೋದುದು.

೩. ಶಬ್ದಮಂಜರಿಯು ತೋಂಟದಾರ್ಯನು ಕಣ್ಣೆರೆಯವ ಎಂದು ಹೇಳಿ ತೋಂಟದ ಸಿದ್ಧ ಲಿಂಗಯತಿಯೊಂದಿಗೆ ತಪ್ಪಾಗಿ ಸಮೀಕರಿಸಿದುದು.

೪. ಕನ್ನಡ – ಸಂಸ್ಕೃತ ವ್ಯಾಕರಣಗಳೆಲ್ಲ ಒಬ್ಬನೇ ನಾಗವರ್ಮನ ಕೃತಿಗಳೆಂದದ್ದು. (ಕನ್ನಡದಲ್ಲಿ ಮೂರು ಜನ ನಾಗವರ್ಮ ಆಗಿಹೋಗಿದ್ದಾರೆ).

೫. ಆದಿಪಂಪನು ತಮಿಳು ರಾಮಾಯಣದ ಕರ್ತೃ ಕಂಬನಾಗಿರಬಹುದು.

೬. 'ಅಲ್ಲಮ' ಎಂಬ ಹೆಸರು ಮುಸಲ್ಮಾನ್ ಅಲ್ಲಾ ದಿಂದ ಬಂದಿರಲು ಸಾಧ್ಯ....

ಇಂತು ವಿಪುಲ ವಿಷಯವನ್ನು ತುಂಬಿ ಸಮಗ್ರಗೊಳಿಸಲು ಬಯಸಿದ ಕಾರಣದಿಂದ ಬೇಕು–ಬೇಕಾದ ವಿಷಯಗಳೆಲ್ಲ ಸೇರಿಕೊಂಡಿವೆ. ಏನೆಲ್ಲ ಊಹೆ – ಉಪ ಊಹೆಗಳನ್ನು ಬಳಸಿಕೊಂಡರು.

ಇದಕ್ಕೆ ಪ್ರತಿಯಾಗಿ ಕಲಬುರ್ಗಿಯವರು ಈ ರೀತಿ ಸಮಾರೋಪ ಮಾಡುತ್ತಾರೆ:

ಕೇವಲ ಸಂಶೋಧನೆಯ ಮೂಲಕ ಶುಷ್ಕವಾಗಬಹುದಿದ್ದ ಈ ಕೃತಿ ಅಲ್ಲಲ್ಲಿಯ ವಿಮರ್ಶಾತ್ಮಕ ಮಾತುಗಳಿಂದ ಜೀವಂತಗೊಂಡಿದೆ. ಅಲ್ಲದೆ ಕನ್ನಡ ಪ್ರಾಂತದ ಮತ್ತು ನೆರೆಯ ಪ್ರಾಂತದ ಕೃತಿಗಳ ಸಂಬಂಧ ನಿರ್ದೇಶನ..... ಕೇಶಿರಾಜನ ಕಾಲ ನಿರ್ಣಯ ಪ್ರಸಂಗದಲ್ಲಿ ಅವನು ಬಳಸಿದ 'ಟೊಪ್ಪಿಗೆ' ಪದವನ್ನು ಗಮನಿಸಿದುದು. ಬಿಜ್ಜಳನು ಜೈನನೆಂದು ಪ್ರತೀತಿ ಇದ್ದರೂ ಶಾಸನಗಳಲ್ಲಿ ಆತನು ಶೈವನಿದ್ದನೆಂದು ಗುರುತಿಸಿದುದೂ ಕಿಟೆಲರ ಸೂಕ್ಷ್ಮ ಸಂಶೋಧನ ದೃಷ್ಟಿಗೆ ನಿದರ್ಶನಗಳಾಗಿವೆ. ಈ ಅಪರೂಪದ ಸಂಗತಿ ಮತ್ತು ಸೂಕ್ಷ್ಮ ದರ್ಶನಗಳನ್ನೊಳಗೊಂಡ ಈ ಲೇಖನದಲ್ಲಿ ಕೆಲವು ದೋಷಗಳಿದ್ದರೂ ಗುಣಗಳ ಎದುರು ಅವುಗಳ ಪ್ರಮಾಣ ಕಡಿಮೆಯೆಂದೇ ಹೇಳಬೇಕು.

ಏನಿದ್ದರೂ "ಕಿಟೆಲರ ಈ ಪ್ರಬಂಧವೇ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಾಧಿಸುವುದಕ್ಕೆ ಮೊದಲ ಆಯುಧ ಪೂಜೆ" ಎಂದು ಬಿ.ಎಂ.ಶ್ರೀ ಅವರು ವರ್ಣಿಸಿದ್ದುದು ಯಥಾರ್ಥವಾಗಿದೆ. ಇದುವೆ ಕನ್ನಡ ಸಾಹಿತ್ಯದ ಚರಿತ್ರೆಯ, ತಕ್ಕಮಟ್ಟಿಗೆ ವ್ಯವಸ್ಥಿತವಾದ ಮೊದಲ ಪ್ರಯತ್ನವಾಗಿದೆ.

ತಮ್ಮ ಸಂಪಾದನಾ ಕಾರ್ಯದ ಅಸಮರ್ಪಕತೆಯನ್ನು ಕಿಟೆಲ್ ಅರಿತಿದ್ದರು. ಆಕರ ಸಾಮಗ್ರಿಯ ಕೊರತೆ ಎಂಬುದು ಅವರಿಗೆ ಚೆನ್ನಾಗಿ ವೇದ್ಯವಾಗಿದ್ದಿತು. ಅದಕ್ಕೆಯೇ "Its defects will doubtless be excused by all who know the difficulties connected with first attempts of a similar character"–ಎಂಬ ಮಾತಿನಿಂದ ಮುಗಿತಾಯ ಹೇಳಿದ್ದಾರೆ.

ಪ್ರಾಸಂಗಿಕವಾಗಿ ಹೇಳಬೇಕಾದದ್ದೆಂದರೆ ಕಿಟೆಲರು ಕನ್ನಡ ಸಾಹಿತ್ಯದ ಬಗ್ಗೆ ಬೆಳೆಯಿಸಿಕೊಂಡಿದ್ದ ಪ್ರೀತಿ-ಮತ್ತು ಅಭಿಮಾನ. ಅದೇ ರೀತಿಯಲ್ಲಿ ತಮಿಳು ಭಾಷೆ ಸಾಹಿತ್ಯಗಳ ಬಗ್ಗ ಡಾ. ಕಾಲ್ಡ್‌ವೆಲ್ ವ್ಯಕ್ತಪಡಿಸಿದ ಮೆಚ್ಚಿಕೆಯ ಮಾತುಗಳಿವೆ. ಅದನ್ನು ಅನುಲಕ್ಷಿಸಿ ಹೇಳುತ್ತಾರೆ. ಅದನ್ನು My own impression is that the more Canerese Vernacular literature becomes known, the more evident it becomes that it will fully bear comparison with any other Vernacular literature of the South.

## ೫. ಸಾಹಿತ್ಯಿಕ ಬಿಡಿ ಲೇಖನಗಳು

ತಾವು ಕಾಲಕಾಲಕ್ಕೆ ವ್ಯಾಸಂಗ ಮಾಡಿದ ಕನ್ನಡ ಕಾವ್ಯಗಳಲ್ಲಿ ತಮಗೆ ಮೆಚ್ಚಿಕೆಯಾದ ಅಂಶಗಳ ಬಗ್ಗೆ Indian Antiquary ಮತ್ತು Indian Evangelical Reviewನಲ್ಲಿ ಕಿಟೆಲರು ಲೇಖ ಬರೆಯುತ್ತಿದ್ದರು. ಕೆಲವನ್ನು ಉಲ್ಲೇಖಿಸೋಣ.

Karnataka Vaishnava Dasas (I.A. 1873) ಎಂಬ ಲೇಖನದಲ್ಲಿ ಹರಿದಾಸರ ಕೀರ್ತನೆಗಳನ್ನು ಸ್ಥೂಲವಾಗಿ ಪರಾಮರ್ಶನ ಮಾಡಿದ್ದಾರೆ. ಬಾಸೆಲ್ ಮಿಶನ್ನಿನ ಹಿರಿಯ ಮಿಶನರಿ ಮೈವ್‌ಗ್ಲಿಂಗ್ ೪೦೦ಕ್ಕೆ ಮಿಕ್ಕಿ ಹರಿದಾಸರ ಹಾಡುಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿ ೧೮೦ ಕೀರ್ತನೆಗಳನ್ನು ಕಲ್ಲಚ್ಚಿನಲ್ಲಿ ಮುದ್ರಿಸಿ ಪ್ರಕಟಿಸಿದ್ದರು (೧೮೫೦). ಕಿಟೆಲ್ ಅವೆಲ್ಲಾ ಕೀರ್ತನೆಗಳನ್ನು ಪರಾಮರ್ಶಿಸುವಾಗ, ಪುರಂದರದಾಸರಿಗೆ ಅಗ್ರಸ್ಥಾನ ಕೊಟ್ಟಿದ್ದಾರೆ. ಅವರ ಅನಂತರ ಕನಕದಾಸರ ಕೃತಿಗಳನ್ನು ಎತ್ತಿಕೊಂಡು ಜನತೆಯ ಮೌಢ್ಯ, ಪೊಳ್ಳು ನಂಬಿಕೆಗಳನ್ನು ಈ ದಾಸರು ಅದೆಂತು ಖಂಡಿಸಿದ್ದಾರೆಂಬುದನ್ನು ಎತ್ತಿ ಹೇಳಿದ್ದಾರೆ. ವಿಶೇಷವೆಂದರೆ, ಅದುವರೆಗೆ ಬೆಳಕಿಗೆ ಬಂದಿರದ 'ವರಾಹತಿಮ್ಮಪ್ಪ' ಎಂಬವರ ಕೀರ್ತನೆಗಳ ಪ್ರಸ್ತಾಪ ಮೊದಲ ಬಾರಿಗೆ ಕಂಡು ಬಂದದ್ದು–ಕಿಟೆಲರ ಈ ಲೇಖನದಿಂದ. ಒಟ್ಟಿನ ಕೃತಿಗಳಲ್ಲಿ ಶ್ರೀ ಮಧ್ವಾಚಾರ್ಯಪ್ರಣೀತ ದ್ವೈತ ತತ್ತ್ವಜ್ಞಾನವೇ ಪ್ರಧಾನವಾಗಿದೆ, ಎಂದು ಹೇಳಿ, But the devotion to sectarianism has not remained alone ಎನ್ನುತ್ತ, ಬದುಕಿನ ಬೇರೆ ಮುಖಗಳತ್ತಲೂ ದಾಸರುಗಳು ಗಮನ ಹರಿಸಿದ್ದಾರೆಂಬುದನ್ನೂ ಗುರುತಿಸಿದ್ದಾರೆ.

ಇದುವೇ ಹರಿದಾಸ ಸಾಹಿತ್ಯದ ವಸ್ತುನಿಷ್ಠವಾದ ಮೊದಲ ಮೌಲ್ಯಮಾಪನವಾಗಿದೆ. ಅದಾಗ್ಯೂ ತಮಗೆ 'ದಾಸಸಾಹಿತ್ಯದ ವ್ಯಾಪ್ತಿಯ ಪರಿಚಯ ಪೂರ್ಣವಾಗಿ ಇಲ್ಲ', ಎಂಬ ವಿನಯವನ್ನು ತೋರ್ಪಡಿಸಿದ್ದಾರೆ.

ಇದರ ಜೊತೆಗೇ ಗಮನಿಸಬೇಕಾದ ಕಿಟೆಲರ ಇನ್ನೊಂದು ಮೌಲಿಕ ಲೇಖನ Notes on Indian prosody and poetry ಎಂಬದು. (Indian Evangelical Review 1874) ಈ ಲೇಖನಕ್ಕೆ ಪ್ರೇರಣೆ ಅವರು ಓದಿದ್ದ ನಡುಗನ್ನಡ ಕವನಗಳ ಗೇಯಗುಣ. Poetry and music were cherished and cultivated together by the ancient Hindus– ಎಂದೇ ತಮ್ಮ ಲೇಖನವನ್ನು ಆರಂಭಿಸಿದ್ದಾರೆ. ಲೇಖನದ ಸುರುವಿಗೆ ವೈದಿಕ ಛಂದಸ್ಸಿನ ಮೂಲ ಹಾಗೂ ಅದರ ಪ್ರಕಾರಗಳಾದ ಗಾಯತ್ರಿ, ತ್ರಿಷ್ಟುಭ್ ಮತ್ತು ಜಗತೀ ಛಂದಸ್ಸಿನ ಬಗೆಯನ್ನು ವಿವರಿಸಿದ್ದಾರೆ. ಆಮೇಲೆ ಈ ಕುರಿತ ಪಿಂಗಳನ ಛಂದಸ್ಸೂತ್ರಗಳನ್ನು ಪರಿಚಯಿಸಿದ್ದಾರೆ. ಪ್ರಾಕೃತ ಛಂದಸ್ಸು ಎಂಬುದೂ ಪ್ರಾಚೀನರಲ್ಲಿ ಬಳಕೆಯಲ್ಲಿದ್ದಿತು. ಇದುವೇ ಪ್ರಧಾನವಾದದ್ದು ಎಂದು ತಿಳಿಸಿ ಈ ಛಂಧೋಪ್ರಕಾರವು ಕನ್ನಡದಲ್ಲಿ ರೂಪ ತಾಳಿದ ಬಗೆಯನ್ನು ಕೊಟ್ಟಿದ್ದಾರೆ. ವಿಶೇಷವೆಂದರೆ ಪಿಂಗಳನು ತನ್ನ ಛಂಧೋಗ್ರಂಥವನ್ನು ಬರೆಯುವ ಕಾಲಕ್ಕೆ

ಭಾರತದಲ್ಲಿ ಗ್ರೀಕ್ ಛಂದಸ್ಸಿನ ಪ್ರಭಾವ ಆಗಿರಬೇಕು.; ಎಂದರೆ ಪಿಂಗಳನ ಮಾತ್ರಾ ಲೆಕ್ಕ ಗ್ರೀಕರಲ್ಲಿಯೂ ಇದ್ದಿತು ಎಂಬ ಹೊಸ ಮಾತನ್ನು ಹೇಳಿದ್ದಾರೆ.* ಕೊನೆಯಲ್ಲಿ ಛಂದಸ್ಸಿನ ಅಭ್ಯಾಸದಿಂದ ಕನ್ನಡದಲ್ಲಿ ಒಳ್ಳೆಯ ಕಾವ್ಯಗಳು ರಚಿತವಾಗಲಿ ಎಂದು ಆಶಿಸಿದ್ದಾರೆ.

ಇದೇ ವಿಷಯದ ಕಿಟೆಲರ ಇನ್ನೊಂದು ಲೇಖನವನ್ನು ಪ್ರಸ್ತಾಪಿಸಬೇಕು. ನಡುಗನ್ನಡ ಕವಿ ನಿಜಗುಣ ಶಿವಯೋಗಿಗಳು ರಚಿಸಿದ 'ವಿವೇಕಚಿಂತಾಮಣಿ'ಯಲ್ಲಿಯ ಸಂಗೀತದ ಬಗ್ಗೆ ಬಂದಿರುವ ಅಂಶಗಳನ್ನು ಅದರಲ್ಲಿ ಪರಿಚಯಿಸಿದ್ದಾರೆ. ಆಗ ಪ್ರಚಲಿತವಿದ್ದ ಸಪ್ತಸ್ವರಗಳು, ಬತ್ತೀಸ ರಾಗಗಳು ಮುಂತಾದ ವಿವರಣೆ ಈ ಇಂಗ್ಲಿಷ್ ಲೇಖದಲ್ಲಿದೆ. (Nijaguna's Notes on Indian Music I.A. 1874). ಭಾರತೀಯ ಸಂಗೀತದಲ್ಲಿಯೂ ಕಿಟೆಲರಿಗೆ ಅಪರಿಮಿತ ಆಸ್ಥೆ ಇದ್ದುದರ ದ್ಯೋತಕವಿದು.

---

* ಈ ಲೇಖದ ಕೊನೆಯ ಪ್ಯಾರಾದಲ್ಲಿ ಕಿಟೆಲರು, ಪಿಂಗಳನು ಕೆಲವು ಛಂದೋರೂಪಗಳನ್ನು ಗ್ರೀಕರಿಂದ (ಯವನರಿಂದ) ತೆಗೆದುಕೊಂಡಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು "That the Hindus have always been an imitative people and ready to borrow foreign ideas, is proved by an enormous amount of evidence e.g. writing was certainly adopted by them from foreigners; their astronomy and medicine (partly, at all events) are of Greek origin; the Sikhs and similar sects are the result of intercourse with Mohammadans, and the Brahma Samaj derives its leading doctrines from Christiniaty. The Brahmins have even forged an Allah Upanishad". ಇವು ಕಿಟೆಲ್ಲರ ಅಭಿಪ್ರಾಯವಲ್ಲ; 'Words of a well deserving & distinguished Scholar' ಎಂದಿದ್ದಾರೆ; ಹೆಸರು ಕೊಟ್ಟಿಲ್ಲ. ಯಾರದ್ದೇ ಇರಲಿ ಹೆಚ್ಚಿನ ಅಭಿಪ್ರಾಯಗಳು ಸ್ವೀಕಾರಾರ್ಹವಲ್ಲ.

## ೬. ಕೊಡಗಿನ ಶಾಸನಗಳು; ಆದಿವಾಸಿ ಸಂಸ್ಕೃತಿ

ಕಿಟೆಲರು ತಮ್ಮ ಭಾರತ ವಾಸ್ತವ್ಯದ ಅರ್ಧದಷ್ಟು ವರ್ಷಗಳನ್ನು ಕೊಡಗಿನ ತಂಪು ಹವೆಯಲ್ಲಿಯೆ ಕಳೆದರೆನ್ನಬಹುದು. ಅವರ ವ್ಯಾಸಂಗ ಮತ್ತು ಲೇಖನ ಕಾರ್ಯಕ್ಕೆ ಅಲ್ಲಿ ಹೆಚ್ಚಿನ ವ್ಯವಧಾನ ಇದ್ದಿತು. ಪರಿಣಾಮವಾಗಿ ಅಲ್ಲಿಯ ಕೆಲವು ಶಿಲಾಶಾಸನಗಳನ್ನು ಕಂಡುಹಿಡಿದರು. ಅವನ್ನು ಸಂಪಾದಿಸಿ ಪ್ರಕಟಿಸಿದರು. ಜೊತೆಗೆ ಅಲ್ಲಿಯ ಬುಡಕಟ್ಟಿನ ಜನಾಂಗದ ಬಗ್ಗೆ (tribals) ಲೇಖನಗಳನ್ನೂ ಬರೆದಿದ್ದಾರೆ.

ಶಾಸನ ಕ್ಷೇತ್ರದಲ್ಲಿ ಅದಾಗಲೇ ಬಿ.ಎಲ್. ರೈಸರು ಹಾಗೂ ಜೆ.ಎಫ್. ಫ್ಲೀಟರು ಕರ್ನಾಟಕದಲ್ಲಿಯ ಶಾಸನಗಳನ್ನು ಪರಿಶೋಧಿಸಿದ್ದರು. ಕಿಟೆಲರೂ ಶಾಸನಾಧ್ಯಾಯನದಲ್ಲಿ ಆಸಕ್ತಿ ವಹಿಸಿದ್ದರು. ತಮಗೆ ಇದಕ್ಕಾಗಿ ದೊರೆತ ಅಲ್ಪ ಸಮಯದಲ್ಲಿಯೇ ನಾಲ್ಕು ಶಿಲಾಶಾಸನಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಮೂರು ಶಾಸನಗಳು ಕೊಡಗಿನ ಲಕ್ಕುಂದ ಮತ್ತು ಕೋತೂರ ಗ್ರಾಮಗಳಲ್ಲಿ ದೊರೆತವುಗಳು. ಒಂಬತ್ತನೆಯ ಶತಮಾನದ ಆ ಶಾಸನಗಳ ಪಠ್ಯವನ್ನು, ತಮ್ಮ ಟೀಕೆ–ಟಿಪ್ಪಣಿಗಳೊಡನೆ I.A. ಪತ್ರಿಕೆಯಲ್ಲಿ ಪ್ರಕಟಿಸಿದರು. ಅವುಗಳ ರಾಜಕೀಯ ಮಹತ್ವವನ್ನು ವಿವರಿಸಿದ್ದಾರೆ. ಬೆಳತೂರ ಎಂಬಲ್ಲಿ ದೊರೆತ ಒಂದು ಶಾಸನವನ್ನು ರೈಸರು ಈಗಾಗಲೇ ಪ್ರಕಟಿಸಿದ್ದರು. ಕಿಟೆಲರು ಅದರ ಪರಿಷ್ಕೃತ ಪಠ್ಯವನ್ನು ಕೊಟ್ಟು, ಟಿಪ್ಪಣಿಗಳಲ್ಲಿ ಅದರ ಭಾಷೆ, ಛಂದಸ್ಸು ಹಾಗೂ ಅದರಲ್ಲಿ ಬಂದಿರುವ ಕೆಲವು ಭೌಗೋಲಿಕ ಪದಗಳನ್ನು ವಿವರಿಸಿದ್ದಾರೆ. ಕನ್ನಡ ಕಾವ್ಯಗಳಲ್ಲಿ ಕಂಡುಬಾರದ ಕೆಲವು ಛಂದೋವೃತ್ತಿಗಳು ಶಾಸನಗಳಲ್ಲಿ ದೊರೆಯುತ್ತವೆ–ಎಂಬ ಹೊಸ ಅಂಶವನ್ನು ಹೇಳಿದ್ದಾರೆ. ಇಂಥದ್ದೇ ಹೊಸದೆನಿಸುವ ಶೂದ್ರರ ಸಹಗಮನದ ಘಟನೆಯೊಂದನ್ನು ಪ್ರಸ್ತಾಪಿಸಿದ್ದಾರೆ. ಮತ್ತು– This is perhaps the first inscription that has been discovered concerning self-immolation of a Shudra's wife after her husband's death. ಎಂದಿದ್ದಾರೆ.

ಶಾಸನಗಳನ್ನು ಸಾಹಿತ್ಯ ಹಾಗೂ ಭಾಷಾ ದೃಷ್ಟಿಯಿಂದಲೂ ಅಭ್ಯಸಿಸಬೇಕೆನ್ನುವುದು ಈಚಿನ ಕಲ್ಪನೆ, ಕಿಟೆಲ್ ೧೮೭೦ರಷ್ಟು ಹಿಂದೆಯೇ ಅತ್ತ ಗಮನಹರಿಸಿದ್ದರು. ರೈಸರು ಈ ಹಿಂದೆ ಪ್ರಕಟಿಸಿದ ಶಾಸನವನ್ನು ಮರುಪ್ರಕಟಿಸಿ ಹೊಸ ಬಗೆಯ ಟಿಪ್ಪಣಿಯನ್ನು ಸೇರಿಸಿದ್ದು ಈ ಕಾರಣಕ್ಕಾಗಿ. ಅದುವೆ ಬೆಳತೂರ ಶಾಸನ. ಅದರಲ್ಲಿಯ ಪದ್ಯಗಳ ವೃತ್ತಗಳು (ಅಕ್ಕರ ಹಾಗೂ ಲಲಿತ) ನಾಗವರ್ಮನ ಛಂದೋಂಬುಧಿಯಲ್ಲಿಯ ವೃತ್ತಗಳಿಗೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದನ್ನು ವಿವೇಚಿಸಿದ್ದಾರೆ. ಕಾವ್ಯದಲ್ಲಿ ಪ್ರಯೋಗಿಸಲ್ಪಡದ ಕೆಲವು ವೃತ್ತಗಳು ಶಾಸನಗಳಲ್ಲಿ ಕಂಡುಬರುತ್ತವೆನ್ನುವುದು ಇದರಿಂದ ಸಿದ್ಧವಾಗಿದೆ.

ಇನ್ನೊಂದು ವಿಶೇಷವೆಂದರೆ ಕಿಟೆಲರು ಶಾಸನಗಳ ರಾಜಕೀಯ ವಿಷಯಗಳನ್ನು..... ಕೊಡಗಿನಲ್ಲಿ ತಾವು ಹುಡುಕಿದ ಶಾಸನಗಳಲ್ಲಿ ಬಂದ ಕೊಂಗು, ಕೊಂಕಣ,

ಪೆರ್ಮಾಡಿ ಮುಂತಾದ ಸ್ಥಳಗಳ ಶಬ್ದೋತ್ಪತ್ತಿಯನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿಗಳನ್ನು ಬರೆದಿದ್ದಾರೆ. ಇಂತು ಶಾಸನಗಳು ಭಾಷಾಶಾಸ್ತ್ರದ ಅಧ್ಯಯನಕ್ಕೆ ನೆರವಾಗಬಲ್ಲವೆಂದು ಇದರಿಂದ ಕಂಡು ಬಂದಿತು.

ವಿಶೇಷವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಕಿಟೆಲರು ನಾಲ್ಕು ಶಾಸನಗಳನ್ನು ಮಾತ್ರ ಸಂಪಾದಿಸಿದ್ದರೂ, ರೈಸ್, ಫ್ಲೀಟ್ ಮೊದಲಾದವರು ಪ್ರಕಟಿಸಿದ ಕರ್ನಾಟಕದ ಅನೇಕ ಶಾಸನಗಳನ್ನು ಆತ್ಮಸಾತ್ ಮಾಡಿಕೊಂಡಿದ್ದರೆನ್ನುವುದಕ್ಕೆ ತಾವು ಕಂಡು ಹಿಡಿದ ಶಾಸನಗಳಿಗೆ ಬರೆದ ಟಿಪ್ಪಣಿಗಳು ಸಾಕ್ಷಿಯಾಗಿವೆ.

'Coorg Superstitions' ಎಂಬ ಲೇಖವು ಬುಡಕಟ್ಟಿನ ಜನಾಂಗದ ಸದರಿನಲ್ಲಿ ಬರುವಂತಹದು. ಕೊಡಗಿನಲ್ಲಿ ಆದಿವಾಸೀ ಜನಾಂಗಗಳು ಐವತ್ತಕ್ಕೂ ಮೇಲ್ಪಟ್ಟು ಇವೆ ಎಂದು ಹೇಳಿ ಅವುಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ಸಂಪ್ರದಾಯವಿದ್ದುದನ್ನು ಗುರುತಿಸಿದ್ದಾರೆ. ವಿಶೇಷವೆಂದರೆ ಅವರುಗಳು ಆಚರಿಸುತ್ತಿದ್ದ ಭೂತಾರಾಧನೆಯು. ಸತ್ತು ಹೋದ ಕೆಲವರು ಭೂತಗಳಾಗಿ ಜೀವಂತವಿರುವವರೆಂಬ ನಂಬಿಕೆಯಿಂದ ಮೂಡಿಬಂದ ದೈವಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವುಗಳ ಆರಾಧನೆಯು ಎದ್ದುಕಾಣುವಂತಹದು. ಆರಾಧನ ಕ್ರಮದಲ್ಲಿ ಭೂತಗಳಿಗೆ ಪ್ರಾಣಿಗಳನ್ನು ಬಲಿ ಕೊಡುವುದನ್ನು, ಕೋಲ ಮುಂತಾದ ಕುಣಿತಗಳನ್ನು ನೆರವೇರಿಸುವುದನ್ನು ಪ್ರಸ್ತಾಪಿಸಿದ್ದಾರೆ. ಈ ಭೂತಗಳಿಗೆ ಗುಡಿಗಳನ್ನೂ ಕಟ್ಟಿಸಿ (ಕೈಮಡಗಳು) ಪೂಜಾದಿ ನಡೆಸುತ್ತಿದ್ದರು.

ಭೂತಗಳಲ್ಲಿ ಸ್ತ್ರೀ, ಪುರುಷ ವರ್ಗಗಳಿವೆ. ಪುರುಷ ಭೂತಗಳಲ್ಲಿಯ ಅಜ್ಜಪ್ಪ, ಗುಳಿಗ, ಪಂಜುರ್ಲಿ, ಕಲ್ಲುರ್ಟಿ, ಕೊರಗ ಮುಂತಾದವುಗಳ ವರ್ಣನೆ ಈ ಲೇಖದಲ್ಲಿ ಬಂದಿದೆ. ಪಂಜುರ್ಲಿಯು ಹಂದಿಯ ಮೇಲೆ ಸವಾರಿ ಮಾಡುವಂತಹದು. ಕೊರಗ ಭೂತವನ್ನು ಹೊಲೆಯರೂ ಗುಳಿಗ ಭೂತವನ್ನು ತಮಿಳುವಾಸಿಗಳೂ ಆರಾಧಿಸುತ್ತಿದ್ದರು. ಇವುಗಳಲ್ಲಿ ಅಜ್ಜಪ್ಪ ಭೂತ ಹಿರಿಯ ಹಾಗೂ ಸಮರ್ಥಶಾಲಿಯೆಂದು ಕೊಡವರ ನಂಬಿಕೆ. ಅವನು ತನ್ನ ಕೈಮಡದಲ್ಲಿ ಕಾಣಿಸಿಕೊಳ್ಳುವುದೂ ಉಂಟಂತೆ.

ಹೆಣ್ಣು ಭೂತಗಳಲ್ಲಿ ಚಾಮುಂಡಿ ಮುಖ್ಯವಾದದ್ದು. ಈ ಚಾಮುಂಡಿಯಲ್ಲಿ ಕರಿ ಚಾಮುಂಡಿ, ಪುಲಿ ಚಾಮುಂಡಿ, ಬೇಟೆ ಚಾಮುಂಡಿ–ಎಂಬ ಪ್ರಕಾರಗಳಿವೆ. ಬೇಟೆಗೆ ಹೋಗುವಾಗ ಈ ಬೇಟೆ ಚಾಮುಂಡಿಯನ್ನು ಆರಾಧಿಸಿ ಮುಂದುವರಿಯುವ ಕ್ರಮವಿದ್ದಿತು. ಕುಂದೆಮ್ಮ, ಕಲ್ಲುರ್ಟ್ಟಿ, ಪೊನ್ನಂಗಲಮ್ಮ ಮುಂತಾದ ಹೆಣ್ಣು ಭೂತಗಳನ್ನು ಆ ಆ ಜನಾಂಗದವರು ಪೂಜಿಸುತ್ತಿದ್ದರು. ಭದ್ರಕಾಳಿ ಉರ್ಫ್ ಭಗವತಿಯನ್ನು ಬಹುತರ ಎಲ್ಲ ಜನಾಂಗದವರು ಆದರಿಸುತ್ತಿದ್ದರೆಂದು ಕಿಟೆಲ್ ಹೇಳಿದ್ದಾರೆ. ಭೂತಾರಾಧನೆಯ ಕ್ರಮವು ದಕ್ಷಿಣ ಕನ್ನಡ ಹಾಗೂ ಕೊಡಗಿನಲ್ಲಿ ಸಮಾನವಾಗಿದ್ದಿತು.

ಅಂದ ಹಾಗೆ ಭೂತಗಳ ಬಗ್ಗೆ ಆ ಮುಂದೆ I.A.ದಲ್ಲಿ ಎ.ಸಿ. ಬರ್ನೆಲ್ ಅವರಿಂದ ಒಂದು ವಿಸ್ತಾರವಾದ ಲೇಖ ಪ್ರಕಟವಾಗಿದೆ. (೧೮೯೪). ಅದರಲ್ಲಿ ಹತ್ತಾರು ಸ್ತ್ರೀ

ಭೂತಗಳ ಪ್ರಸ್ತಾಪವಿದೆ. ಆದರೆ ಕಿಟೆಲರು ಹೇಳಿದ್ದವುಗಳಲ್ಲಿ ೭-೮ ಹೆಣ್ಣು ಭೂತಗಳ ಹೆಸರು ಆ ಲೇಖದಲ್ಲಿ ಇಲ್ಲ. ಹೀಗಾಗಿ ಕಿಟೆಲರದು ಗಮನಿಸಬೇಕಾದ ಲೇಖವೇ ಎನಿಸಿದೆ-ಭೂತಾರಾಧನೆಯ ವಿಷಯದಲ್ಲಿ.

ಕೊಡಗಿನವರ ಭಾವುಕತನಕ್ಕೆ ಸಂಬಂಧಿಸಿದ ಕಿಟೆಲರ ಇನ್ನೊಂದು ಲೇಖ ಪ್ರಾಚೀನ ಕೊಡವರಲ್ಲಿದ್ದ ಬಹುಪತಿತ್ವ (Polyandry)ವನ್ನು ಕುರಿತದ್ದು. ಈ ಲೇಖವೂ Indian Antiquaryಯಲ್ಲೇ ಪ್ರಕಟವಾಯಿತು (೧೮೭೩). ಅವಿಭಕ್ತ ಕುಟುಂಬ ಜೀವನ ಕೊಡವರಲ್ಲಿ ಇದ್ದ ಕಾರಣ ಈ ಸಂಪ್ರದಾಯ ಬಂದಿರಬೇಕು. ಆದರೆ ಕೆಲವು ವಿಚಿತ್ರ ಮದುವೆಯ ಪದ್ಧತಿಗಳು ಪ್ರಾಚೀನ ಕಾಲದಲ್ಲಿ ಇದ್ದುವಂತೆ. ಉದಾ.ಗೆ 'ಬಟ್ಟೆ-ಮದುವೆ'. ಯಾವನೊಬ್ಬ ತನಗೆ ಇಷ್ಟವಾದ ಕನ್ಯೆಗೆ ಹೊಸ ಬಟ್ಟೆಯೊಂದನ್ನು ಕೊಟ್ಟು ಕರೆದರೆ, ಮದುವೆ ಆದಂತೆಯೇ. ಯಾವುದೇ ಸಮಾರಂಭವಿಲ್ಲ. ಒಂದು ಮಗುವೂ ಆಯಿತೆನ್ನುವಾ. ಆವಾಗ ಅವಳನ್ನು ಬಿಟ್ಟುಬಿಡಲೂ ಬಹುದು-ಯಾವುದೇ ಜವಾಬ್ದಾರಿಯನ್ನು ಹೊರದೇ! ಸುದೈವಕ್ಕೆ ಆ ವಿವಾಹಪದ್ಧತಿ ಈಗಿಲ್ಲ.

## ೨. ಹಿಂದೂಧರ್ಮ ವಿವೇಚನೆ

ಕಿಟೆಲರು ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ನಾಲ್ಕು ಗ್ರಂಥಗಳನ್ನು ರಚಿಸಿದ್ದಾರೆ. ಪರಮಾತ್ಮ ಜ್ಞಾನ (೧೮೬೩): A Survey of the Vedic Polytheism and Pantheism (೧೮೬೫): Tract on sacrifice (1872) ಮತ್ತು Ueber den Ursprung des Lingacultus in Indien (1876). ಮೊದಲಿನದು ಕನ್ನಡದಲ್ಲಿ: ಇನ್ನೆರಡು ಇಂಗ್ಲಿಷಿನಲ್ಲಿ: ಹಾಗೂ ಕೊನೆಯದು ಜರ್ಮನ್ ಭಾಷೆಯಲ್ಲಿ ಈ ನಾಲ್ಕೂ ಗ್ರಂಥಗಳು ಪ್ರಾಚ್ಯ ಭಾರತ ಶಾಸ್ತ್ರಗಳ ಕುರಿತಾಗಿದ್ದರೂ ಒಂದಕ್ಕೊಂದು ಸಂಬಂಧವಿದ್ದವುಗಳಲ್ಲ. ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಬೇರೆ ಬೇರೆ ಶ್ರೋತೃಗಳಿಗಾಗಿ ಬರೆದವುಗಳೆಂಬುದು ಸ್ಪಷ್ಟ.

ಮೊದಲಿಗೆ ತಿಳಿಯಬೇಕಾದ ಮಾತೆಂದರೆ, ಕಿಟೆಲರು ನಮ್ಮ ದೇಶಕ್ಕೆ ಬಂದ ಆರೇಳು ವರ್ಷಗಳಲ್ಲಿಯೆ ಸಂಸ್ಕೃತವನ್ನು ಕಲಿತುಕೊಂಡು ವೇದ, ವೇದಾಂಗಗಳನ್ನು, ಸ್ಮೃತಿಗ್ರಂಥ ಮುಂತಾದುವನ್ನು ಮತ್ತು ಅವುಗಳ ಮೇಲಿನ ವ್ಯಾಖ್ಯಾನಗಳನ್ನು ಸಹ ಆಳವಾಗಿ ಅಭ್ಯಸಿಸಿದ್ದರು. ಅವರದು ಕುಶಾಗ್ರ ಬುದ್ಧಿ ಮತ್ತು ಅಗಾಧವಾದ ನೆನಪಿನ ಶಕ್ತಿ ಎಂಬುದನ್ನು ಮತ್ತೊಮ್ಮೆ ನೆನೆಯೋಣ. ಹಾಗೆ ಅಭ್ಯಸಿಸಿದ್ದರ ಗುರುತು ಅವರ 'ಪರಮಾತ್ಮಜ್ಞಾನ'ವೆಂಬ ಚಿಕ್ಕ ಪುಸ್ತಕದಲ್ಲಿ (೧೮೬೩) ಇದೆ. ಐವತ್ತಕ್ಕೂ ಮಿಕ್ಕಿದ ಶಾಸ್ತ್ರಗ್ರಂಥಗಳನ್ನು ಅದರಲ್ಲಿ ಆಕರವಾಗಿ ಪ್ರಸ್ತಾಪಿಸಿದ್ದಾರೆ. ಉದಾ.ಗೆ ನೀಲಕಂಠ ಸದ್ದರ್ಶನ, ವಾಜಸನೇಯ ಉಪನಿಷತ್ತು. ಇವು ಸಾಮಾನ್ಯವಾಗಿ ಪ್ರಚುರದಲ್ಲಿದ್ದವು ಗಳಲ್ಲ.

### ೨.೧ ಪರಮಾತ್ಮ ಜ್ಞಾನ

ಇಂಗ್ಲಿಷ್‌ನಲ್ಲಿ ಈ ಪುಸ್ತಕಕ್ಕೆ ಕೊಟ್ಟ ಶೀರ್ಷಿಕೆ 'A Knowledge of the Supreme Spirit. A Dailogue on the Hindu doctrine of God's being the Author of Sin etc., ದೇವರೊಬ್ಬನೆ ಸತ್ಯ, ಜಗತ್ತೆಲ್ಲ ಮಾಯ. ಪರಮಾತ್ಮನು ಎಲ್ಲರಲ್ಲಿಯೂ ಇರುವುದರಿಂದ ವ್ಯಕ್ತಿಗೆ ಯಾವ ಅನನ್ಯತೆಯೂ ಇಲ್ಲ' ಎಂಬುದು ಅದ್ವೈತ ಮತದಲ್ಲಿ ಕಂಡುಬರುವ ನಿಲುವು. 'ಇದು ಸರಿಯಲ್ಲ. ಯಾಕೆಂದರೆ ಅವನು ಮಾಡುವ ಪಾಪಕ್ಕೂ ದೇವರೇ ಹೊಣೆ ಎಂದಂತಾಗುತ್ತದೆ. ಕ್ರೈಸ್ತ ಮತದಲ್ಲಿ ಹಾಗಿಲ್ಲ. ನಮ್ಮ ಪ್ರಕಾರ ದೇವರು ಸರ್ವತಂತ್ರ ಸ್ವತಂತ್ರನು. ನ್ಯಾಯಕರ್ತನು. ಪುಣ್ಯಮಿತ್ರನು; ಪಾಪವೈರಿಯು. ಆದ್ದರಿಂದ ದೇವರಿಗೂ ಮನುಷ್ಯನು ಮಾಡುವ ಪಾಪಕರ್ಮಕ್ಕೂ ಸಂಬಂಧವಿಲ್ಲ. ಆದರೆ ಮನುಷ್ಯನನ್ನು ಅವನು ಪಾಪದಿಂದ ವಿಮೋಚನೆ ಮಾಡಬಲ್ಲ. ಆದಕ್ಕಾಗಿ ತನ್ನ ತಪ್ಪಿನ ಅರಿವು ಅವನಿಗಾಗಬೇಕೆಂದು ದೇವರು (ಯೆಹೋವನು) ಯೇಸುವನ್ನು ತನ್ನ ದೂತನನ್ನಾಗಿ ಕಳಿಸಿದ್ದಾನೆ.' ಇದು ಕಿಟೆಲರ ವಾದ.

ಈ ಹಿನ್ನೆಲೆಯಲ್ಲಿ ಕಿಟೆಲರು ಯೇಸುವಿನ ಸಂದೇಶವೇನೆಂಬುದನ್ನು ಬೈಬಲಿನಿಂದ ಎತ್ತಿ ತೋರಿಸಿದ್ದಾರೆ. "ನಾನು ಸತ್ಯಕ್ಕೆ ಸಾಕ್ಷಿ ಕೊಡುವದಕ್ಕೋಸ್ಕರವೇ ಹುಟ್ಟಿ

ಆದಕ್ಕೋಸ್ಕರವೇ ಈ ಲೋಕಕ್ಕೆ ಬಂದೆ" (ಬೈಬಲಿನ ಹೊಸ ಒಡಂಬಡಿಕೆ, ಜಾನ್. ೧೮ನೇ ಸಂಧಿ) ಬೈಬಲಿನಿಂದ ಈ ರೀತಿಯಾಗಿ ಆಧಾರಗಳನ್ನು ಕೊಡುತ್ತಿದ್ದಂತೆಯೇ ಪಾಪ-ಪುಣ್ಯಗಳ ವಿಷಯವಾಗಿ ಹಿಂದೂಧರ್ಮವನ್ನು ಟೀಕಿಸಲಾಗಿದೆ. ಪಾಪವನ್ನೇ ಆಗಲಿ, ಪುಣ್ಯದ ಕೆಲಸವನ್ನೇ ಆಗಲಿ ಮನುಷ್ಯನು ಮಾಡುವುದಕ್ಕೆ ದೇವರು ಸ್ವಾತಂತ್ರ್ಯವನ್ನು ಕೊಟ್ಟಿರುವಾಗ ಪರಮಾತ್ಮನೇಕೆ ಹೊಣೆಗಾರನಾಗಬೇಕು? ಎಂದು ಕಿಟೆಲ್ ಕೇಳುತ್ತಾರೆ. ಈ ಚಿಕ್ಕ ಗ್ರಂಥದಲ್ಲಿ ಅನೇಕ ಹಿಂದೂ ಶಾಸ್ತ್ರಗ್ರಂಥಗಳಿಂದ ಆಧಾರವನ್ನು ಕೊಟ್ಟಿದ್ದಾರೆ. ಅದರಿಂದ ಈ ವಿಷಯಕವಾದ ಅವರ ಅಭ್ಯಾಸ ಆಳವಾದದ್ದೆಂಬುದು ಒಡೆದು ತೋರುತ್ತದೆ. ಆದರೂ ಕ್ರೈಸ್ತಧರ್ಮದ ಪುರಸ್ಕಾರಕ್ಕಾಗಿ ಎಂದೇ ರಚಿತವಾದ ಏಕಪಕ್ಷೀಯ ವಿವೇಚನೆ ಇಲ್ಲಿದೆ.

ಸುಚಿತ್ತಿ ಎಂಬ ಶಾನಭೋಗನೂ ರಂಗನೆಂಬ ವ್ಯಾಪಾರಸ್ಥನೂ ಅಣ್ಣ ತಮ್ಮಂದಿರೆಂಬಂತೆ ಆತ್ಮೀಯರಾಗಿದ್ದು ಅವರ ಸಂವಾದದ ರೂಪದಲ್ಲಿ ಈ ವಿಷಯ ಮಂಡನೆಯನ್ನು ಮಾಡಲಾಗಿದೆ. ಈ ಬಗೆಯ ನಿರೂಪಣೆಯು ಮ್ಯೆವ್‌ಗ್ಲಿಂಗ್‌ರಿಂದ ಮೊದಲಿಗೆ ಅನುಷ್ಠಾನದಲ್ಲಿ ಬಂದದ್ದಿದೆ.

## ೭.೨ Vedic Polytheism and Pantheism

ಈ ವಿಷಯದ ಕುರಿತು ಕಿಟೆಲರು ಮಂಗಳೂರಲ್ಲಿ ಭಾಷಣ ಮಾಡುವ ಪ್ರಸಂಗ ಬಂದಿತು. ಅದನ್ನೇ ವಿಸ್ತರಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದರು (೧೮೭೨). ದೇವರು ಸರ್ವಾಂತರ್ಯಾಮಿ, ಸೃಷ್ಟಿಕರ್ತ, ಸರ್ವಶಕ್ತ, ಎಂಬ ಮಾತು ಬೈಬಲಿನಲ್ಲಿ ಹೇಗೆ ಸ್ಪಷ್ಟವಾಗಿ ಹೇಳಿದೆಯೊ ಹಾಗೆ ವೇದಗಳಲ್ಲಿ ಹೇಳಿಲ್ಲ. ಬದಲಾಗಿ ಆತ ಒಬ್ಬನೇ ಆಗಿರದೇ, ಬಹುದೈವತ ಸ್ವರೂಪದಲ್ಲಿ ಇದ್ದಾನೆ. ಋಗ್ವೇದದಲ್ಲಿ, ೩೩ ದೇವತೆಗಳು (ಸ್ವರ್ಗ, ಮರ್ತ್ಯ, ಪಾತಾಳ ಒಂದೊಂದರಲ್ಲಿ ೧೧ರಂತೆ) ಎಂಬುದಾಗಿ ಬಂದಿದ್ದರೆ ಇನ್ನೊಂದೆಡೆ ೩೩೩೯ ದೇವರುಗಳೆಂದು ಹೇಳಿದೆ. ಮತ್ತೆ ಅಷ್ಟೇ ಸಂಖ್ಯೆಯಲ್ಲಿ ಅವರ ಹೆಂಡಂದಿರು! ಅಂತೂ ವೇದಗಳಲ್ಲಿ, ಬಹುದೈವತದ ಸಂಖ್ಯೆಯು ಸಹ ಒಂದರಂತೆ ಇನ್ನೊಂದಿಲ್ಲ ಎಂಬುದು ಕಿಟೆಲರ ತಕರಾರು. ಇಂಥ ವೇದಗಳನ್ನು 'ಪರಮಪವಿತ್ರ' ಎಂದಾಗಲೀ, ಪ್ರಾಮಾಣ್ಯವೆಂದಾಗಲೀ ತಿಳಿಯಲಾಗದು ಎನ್ನುತ್ತಾರೆ. ಪರಿಣಾಮ ವಾಗಿ–

It is the same childish, mad and sinful polytheism which we meet with everywhere ಎನ್ನುವ ಖಚಿತ ಅಭಿಪ್ರಾಯ ತಳೆದಿದ್ದಾರೆ. ಈ ಬಹುದೈವತ್ವವೇ (Polytheism) ಅಂತಿಮವಾಗಿ ವಿಶ್ವ-ದೇವ ಐಕ್ಯವಾಗಿ (Pantheism) ಪರಿಣಮಿಸುತ್ತದೆ.

ಅನಂತರ 'ಬ್ರಹ್ಮ'ನು ಸೃಷ್ಟಿಮಾಡುವವ ಎಂಬ ಪರಿಕಲ್ಪನೆಯನ್ನು ವಿವೇಚಿಸುತ್ತ–

The Veda speaks of the Brahma, i.e. the substance of growth in nature in manyfold ways, prominently calling it the Prana and the Atman. The root word for both is 'An' to breathe, to blow.

ಎಂಬ ಹೊಸ ಅಂಶವನ್ನು ಮಂಡಿಸಿದ್ದಾರೆ. ಈ 'ಬ್ರಹ್ಮ' ಎನ್ನುವುದು ಶಾಶ್ವತ. ಈ ಶಾಶ್ವತದಿಂದ, ಜೇಡರ ಹುಳ ಎಳೆಯನ್ನು ನೆಯ್ದಂತೆ ಸೃಷ್ಟಿ. ಪರಿವರ್ತನ ರೂಪದ ಈ ಸೃಷ್ಟಿ ಮತ್ತು ಶಾಶ್ವತರೂಪದ ಬ್ರಹ್ಮ-(ದೇವರು) ಒಂದೇ ಎಂದು ಹೇಳಬಾರದು (Pantheism). ಈ ಅಂಶವನ್ನು ಮೇಲಣ 'ಪರಮಾತ್ಮ ಜ್ಞಾನ'ದಲ್ಲಿಯೂ ಮಂಡಿಸಿದ್ದಾರೆ.

ಗಮನಿಸಬೇಕಾದ ಮಾತೆಂದರೆ ಅದ್ವೈತ ಪಂಥವನ್ನುಳಿದು ದ್ವೈತ, ಮುಂತಾದ ಪಂಥಗಳವರು 'ದೇವರು ಬೇರೆ; ಆತ ಒಬ್ಬನೇ, ಈ ಸೃಷ್ಟಿ ಬೇರೆ' ಎಂದು ಹೇಳಿಯೇ ಇದ್ದಾರೆ. ಕಿಟೆಲರು ಗೊತ್ತಿದ್ದೊ, ಗೊತ್ತಿಲ್ಲದೆಯೊ ಆ ಮತ ತತ್ವಗಳನ್ನು ಪ್ರಸ್ತಾಪಿಸಿಯೆ ಇಲ್ಲ. ಆದರೆ ಹಿಂದೂಧರ್ಮಕ್ಕೆ ಸಂಬಂಧಿಸಿದ ಅವರ ಇನ್ನೆರಡು ಕೃತಿಗಳಲ್ಲಿ ಇಷ್ಟರ ಮಟ್ಟಿಗೆ ಸ್ವಧರ್ಮನಿಷ್ಠೆ ವ್ಯಕ್ತವಾಗಿಲ್ಲ.

ಇನ್ನು ಪಾಶ್ಚಾತ್ಯರನ್ನು ಗಮನದಲ್ಲಿರಿಸಿಕೊಂಡು ಬರೆದ ಆ ಎರಡು ಪುಸ್ತಕಗಳ ಹಿನ್ನೆಲೆ ತಿಳಿಯಬೇಕಾದರೆ ಕಿಟೆಲರ ಕಾಲದಲ್ಲಿ ಜರ್ಮನಿಯಲ್ಲಿ ಕಂಡು ಬಂದ ಭಾರತೀಯ ಪ್ರಾಚ್ಯ ಸಂಸ್ಕೃತಿಯ ವ್ಯಾಸಂಗದ ಬಗೆಯನ್ನು ತುಸು ತಿಳಿದಿರಬೇಕು. ಸಂಸ್ಕೃತವನ್ನು ಆಳವಾಗಿ ಅಭ್ಯಸಿಸಿ, ವೇದ, ವೇದಾಂಗಗಳನ್ನು ಮತ್ತು ಕಾವ್ಯ ಶಾಸ್ತ್ರಗಳನ್ನು ಕರಗತ ಮಾಡಿಕೊಳ್ಳುವುದಲ್ಲದೆ, ಜರ್ಮನ್ ಭಾಷೆಯಲ್ಲಿ ಅವುಗಳ ಅನುವಾದಗಳನ್ನು ಟೀಕೆ ಟಿಪ್ಪಣಿಗಳ ಸಹಿತ ಪ್ರಕಟಿಸುವ ಒಂದು ಪರಂಪರೆಯೇ ಆ ದೇಶದಲ್ಲಿ ನಿರ್ಮಾಣ ವಾಗಿತ್ತು. ಕ್ರಿ.ಶ. ೨೦೦೩ರಲ್ಲಿ ನಾನು ಬಾಸಲ್‌ಗೆ ಹೋದಾಗ ಅಲ್ಲಿಯ ಗ್ರಂಥಾಲಯ ದಲ್ಲಿ ಇಂಥ ಒಂದು ನೂರು ಗ್ರಂಥಗಳನ್ನು ಕಂಡಿದ್ದೇನೆ.

ಈ ಬಗೆಯ ಸಂಸ್ಕೃತದ ವಿದ್ಯಾ ಕೇಂದ್ರಗಳಲ್ಲಿ ಟ್ಯೂಬಿಂಗನ್ ವಿಶ್ವವಿದ್ಯಾಲಯವು ಗಣ್ಯ ಸ್ಥಾನದಲ್ಲಿದ್ದಿತು. ಬಾಸೆಲ್ ಮಿಶನ್ನಿನ ಮ್ಯೆವ್‌ಗ್ಲಿಂಗ್, ಗುಂಡರ್ಟ ಮತ್ತು ವೈಗ್ಲೆ ಅಲ್ಲಿಂದಲೇ ಬಂದವರು. ಇವರಿಗೆ ಪ್ರಾಧ್ಯಾಪಕ ಸ್ಥಾನದಲ್ಲಿದ್ದ ಎ.ವೆಬರ್, ರಡೋಲ್ಫ್ ವಾನ್ ರಾಥ್‌ರವರೇ ಮೇಲೆ ಪ್ರಸ್ತಾಪಿಸಿದ ಗ್ರಂಥಗಳನ್ನು ರಚಿಸಿದವರು. ರಾಥ್‌ನ 'On the literature and history of the Vedas (1846) ತುಂಬಾ ಮೌಲಿಕವಾದದ್ದೆಂದು ಹೆಸರು ಮಾಡಿತ್ತು. (ಆವರನ್ನು ಶಿಷ್ಯರು 'Brahman' ಎಂದು ಕರೆಯುತ್ತಿದ್ದರಂತೆ). ಈತನೇ ಮ್ಯೆವ್‌ಗ್ಲಿಂಗರ ಪ್ರಾಚೀನ ಕನ್ನಡ ಗ್ರಂಥಗಳ ಪ್ರಕಟನ ಕಾರ್ಯಕ್ಕೆಂದು ಪಿಎಚ್.ಡಿ ಗೌರವ ಪದವಿ ಕೊಡಬೇಕೆಂದು ಟ್ಯೂಬಿಂಗೆನ್ ಯುನಿವರ್ಸಿಟಿಗೆ ಶಿಫಾರಸು ಮಾಡಿದ್ದವರು. ಇದುವೆ ಕನ್ನಡದ ಕೆಲಸಕ್ಕಾಗಿ ದೊರೆತ ಮೊತ್ತ ಮೊದಲಿನ ಡಾಕ್ಟರೇಟ್.

ವೆಬರ್ ಅವರಂತೂ ಹಿರಿಯ ಸಂಸ್ಕೃತ ಪ್ರಾಧ್ಯಾಪಕರೇ ಆಗಿದ್ದರು. ಅವರು ನಮ್ಮ ಆರ್ಷೇಯ ಕೃತಿಗಳ ಬಗ್ಗೆ ಅನೇಕ ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲ

'Indisch Studien' ಎಂಬುದಾಗಿ ೭ ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ವೆಬರ್ ಹಾಗೂ ಇತರ ಕೆಲವು ಯೂರೋಪಿಯನ್ ಪಂಡಿತರು, ನಮ್ಮ ಪ್ರಾಚೀನ ಮಾರ್ಗ ಕೃತಿಗಳನ್ನು ತುಸು ಗೌರವದಿಂದ ಕಾಣುತ್ತಿದ್ದವರು. ಟೀಕಿಸುವುದಿದ್ದಾಗಲೂ ಆ ಗೌರವದ ರೇಖೆಯೊಳಗೇ ಸಾಗಿ ಬಂದದ್ದಿತ್ತು. ಆಕ್ಸ್‌ಫರ್ಡಿನಲ್ಲಿದ್ದರೂ ಜರ್ಮನಿಗ ನಾದ ಮ್ಯಾಕ್ಸ್‌ಮುಲ್ಲರ್ ಅನೇಕ ಭಾರತೀಯ ಪ್ರಾಚ್ಯ ಗ್ರಂಥಗಳನ್ನು ಮಾಲಿಕೆಯಾಗಿ ಪ್ರಕಟಿಸಿದನಲ್ಲವೆ. ಗಯಟೆ ಅಂತೂ ಕಾಳಿದಾಸನ ಶಾಕುಂತಲವನ್ನು ತಲೆಯ ಮೇಲಿಟ್ಟುಕೊಂಡು ತನ್ನ ಮೆಚ್ಚಿಕೆಯನ್ನು ಸೂಚಿಸಿದ್ದನಲ್ಲವೆ.

ಆದರೆ ಅಪ್ಪಟ ಮಿಶನರಿಯಾದ ಕಿಟೆಲರಿಗೆ ಈ ನಿಲುಮ ಒಪ್ಪಿತವಾಗಿರಲಿಲ್ಲ. ಹಲವಾರು ದೇವತೆಗಳನ್ನು ಸ್ತುತಿಸಿರುವ ವೇದವು ಅವರಿಗೆ ಅಪ್ರಾಮಾಣಿಕವಾದದ್ದೆನಿಸಿತ್ತು. ಸಮಗ್ರ ಸೃಷ್ಟಿಯನ್ನು ಸೃಷ್ಟಿಸಿದವನು ಒಬ್ಬನೇ ದೇವರು ಎಂಬ ನಿಲುಮೆ ಉಪನಿಷತ್ತಿನಲ್ಲಿದ್ದು (Pantheism) ಅದು ಕೂಡ ಕಿಟೆಲರಿಗೆ ಗ್ರಾಹ್ಯವಾಗಿರಲಿಲ್ಲ.

ಈ ವೇದ – ವೇದಾಂಗಗಳ ಕುರಿತಾದ ಐರೋಪ್ಯ ಕೃತಿಗಳಲ್ಲಿ ಯಜ್ಞ ಮತ್ತು ಲಿಂಗೋಪಾಸನೆಯ ಬಗ್ಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದರಿಂದ ಆ ಬಗ್ಗೆ ಕಿಟೆಲ್ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಿತ್ತು.

## ೭.೩ A Tract on Sacrifice (ಯಜ್ಞತಂತ್ರ ಸುಧಾನಿಧಿ)

ಇದರಲ್ಲಿ 'ಯಜ್ಞ' ಕಾರ್ಯದ ಮೂಲ ಯಾವಲ್ಲಿಯದು? ಅದರ ಉದ್ದೇಶವೇನು? ಭಾರತದಲ್ಲಿ ಅದರ ಆಚರಣೆ ಹೇಗೆ? ಯಜ್ಞಗಳನ್ನು ಮಾಡುವಾಗಿನ ಪ್ರೇರಣೆ ಯಾವುದು? ಇವೆಲ್ಲ ಅಂಶಗಳನ್ನು ಖಚಿತ ಸ್ವರೂಪದಲ್ಲಿ ಮಂಡಿಸಲಾಗಿದೆ. ಯಜ್ಞ ನಡೆಸುವುದರ ಮೂಲ ಉದ್ದೇಶ ಪಾಪಕ್ಷಾಲನೆ. ಇನ್ನೊಂದು ಉದ್ದೇಶ ಸಂತಾನಾಪೇಕ್ಷೆ, ಶತ್ರು ನಿರ್ಮೂಲನ ಇತ್ಯಾದಿ. ಯಜ್ಞ ಪ್ರಕ್ರಿಯೆ ೪೫೦೦ ವರ್ಷಗಳಷ್ಟು ಹಿಂದಿನದು. ಮೂಲತಃ ಪೂರ್ವ ಏಶಿಯಾ, ಇಜಿಪ್ತ ಮತ್ತು ಈಗಿನ ಯುರೋಪದಲ್ಲಿ ಮೊದಲು ಬಳಕೆಯಲ್ಲಿ ಬಂದಿತು. ಆರ್ಯರು ಹಿಂದುಸ್ಥಾನವನ್ನು ಪ್ರವೇಶಿಸಿದಾಗ ಯಜ್ಞ ಕರ್ಮವೂ ಅವರೊಂದಿಗೆ ಆಗಮಿಸಿತು. ಇಲ್ಲಿಯ ಬುಡಕಟ್ಟಿನ ಜನಾಂಗದವ ರಲ್ಲಿಯೂ ಯಜ್ಞಕ್ರಿಯೆ ಬಳಕೆಯಲ್ಲಿದ್ದಿತು. ಅದರ ಸ್ವರೂಪ ಮಾತ್ರ ಬೇರೆ. ಅವರು ಜಾತ್ಯತಃ ಶಕ್ತಿಯ ಉಪಾಸಕರು–ಎಂದು ಮುಂತಾಗಿ ಕಿಟೆಲ್ ವಿವೇಚಿಸಿದ್ದಾರೆ.

ಆದರೆ ಯಜ್ಞದಲ್ಲಿ ಒಂದು ಮಾತ್ರ ಎಲ್ಲ ಕಡೆಗೆ ಬಳಕೆಯಲ್ಲಿದ್ದಿತು: ಪ್ರಾಣಿಗಳನ್ನು, ಮನುಷ್ಯರನ್ನೂ ಸಹ ಬಲಿಕೊಡುವುದು ಹಾಗೂ ಸುರೆಯನ್ನೂ ಅರ್ಪಿಸುವುದು. 'ಯೆಹೋವ' ಎಂಬ ಏಕೋದೇವತೆಯ ಉಪಾಸನೆ ಮಾಡುತ್ತಿದ್ದ ಐಗುಪ್ತರ ಯಜ್ಞಕಾರ್ಯ ಹೆಚ್ಚು ಶಾಸ್ತ್ರ ಶುದ್ಧವೆನಿಸಿತ್ತು – ಎಂದು ಕಿಟೆಲ್ ಹೇಳುತ್ತಾರೆ.

ಈ ಹಿನ್ನೆಲೆಯನ್ನು ಕೊಟ್ಟು ಕಿಟೆಲರು ಪ್ರಾಚೀನ ಭಾರತದಲ್ಲಿ ನಡೆಯುತ್ತಿದ್ದ ಇಪ್ಪತ್ತಕ್ಕೂ ಮೇಲ್ಪಟ್ಟು ಯಜ್ಞ ವಿಧಿಗಳ ವಿವರಗಳನ್ನು ಕೊಟ್ಟಿದ್ದಾರೆ. ಇವುಗಳಿಗೆ ಹೆಚ್ಚಿನ

ಆಕರ ಸಾಮಗ್ರಿ ದೊರೆತದ್ದು ವೇದ, ವೇದಾಂಗಗಳಿಂದಲೇ. ಅವುಗಳ ನಿಯಮಗಳು, ಬಳಸುತ್ತಿದ್ದ ಉಪಕರಣಗಳು, ಮುಂತಾದ್ದನ್ನು ಹೇಳಿದ್ದಾರೆ. ಎಷ್ಟೊಂದು ವೈವಿಧ್ಯಮಯ ಉಪಕರಣಗಳು! ಮಾಂಸವನ್ನು ಕುದಿಸಲು ಒಂದಲ್ಲ ಆರು ಬಗೆಯ, ಕಟ್ಟಿಗೆಯ ಉಪಕರಣಗಳಿದ್ದುವಂತೆ. ಯಜ್ಞ ನಡೆಸುವ ಕಾಲ, ಒಟ್ಟಿನ ಅವಧಿ ಬೇರೆ ಬೇರೆ ಇದ್ದುವು. ಕೆಲವೆಡೆ ವರ್ಷದ ಶ್ರಾವಣಮಾಸ ಪ್ರಶಸ್ತವಾಗಿ ಕಂಡಿದ್ದಿತು. ಒಟ್ಟಿನ ಕಾಲಾವಧಿ ಒಂದು ದಿನವೂ ಇರಬಹುದು. ವರ್ಷವಿಡೀ ನಡೆಯಲೂಬಹುದು. ರಾಜಸೂಯ, ಅಶ್ವಮೇಧಗಳಂತಹವು ಅದಕ್ಕೂ ಹೆಚ್ಚಿನ ಸಮಯದವರೆಗೆ ನಡೆಯುತ್ತಿದ್ದವು. ಪ್ರಾಚೀನ ಜರ್ಮನಿಯಲ್ಲಿ ಒಂದು ಜನಾಂಗದ ಯಜ್ಞವು ವರ್ಷಕ್ಕೊಮ್ಮೆ, ೯ ದಿನಗಳ ವರೆಗೆ ನಡೆಯುತ್ತಿತ್ತು. ಆಗ ೯೯ ಜನ ಮನುಷ್ಯರ ಬಲಿ ಮತ್ತು ಮೂರು ಬಗೆಯ ಪ್ರಾಣಿಗಳ ಬಲಿ! ಅವು ಒಂದೊಂದೂ ೯೯ ಸಂಖ್ಯೆಯವು. ರಾಮಾಯಣದಲ್ಲಿ ನಿಕುಂಭಿಲರೆಂಬ ಬುಡಕಟ್ಟಿನ ಜನಾಂಗದವರು ನರಬಲಿ ಕೊಡುತ್ತಿದ್ದ ಬಗ್ಗೆ ಸ್ಪಷ್ಟ ಉಲ್ಲೇಖವಿದೆಯೆಂದು ಕಿಟೆಲ್ ಹೇಳಿದ್ದಾರೆ.

ಆದರೆ ಬೌದ್ಧ ಹಾಗೂ ಜೈನ ಧರ್ಮಗಳು ನಮ್ಮ ದೇಶದಲ್ಲಿ ಪ್ರಚುರದಲ್ಲಿ ಬಂದಂತೆಲ್ಲ, ಮೇಲ್ವರ್ಗದವರು ಈ ಪಶುಸಂಹಾರವನ್ನು ಬಿರುಗಣ್ಣಿನಿಂದ ಕಾಣುತ್ತಿದ್ದರು. ಕ್ರಮೇಣ ಈ ಪಶುಬಲಿಯ ನಿರಾಕರಣೆಯು ನಿಮ್ನ ವರ್ಗದವರಲ್ಲಿಯೂ ಕಾಣಿಸಿಕೊಳ್ಳತೊಡಗಿತು. ಅದಕ್ಕೆ ಉದಾಹರಣೆಯಾಗಿ ಕಿಟೆಲರು ಕೊಡವರ ಒಂದು ಸಂದರ್ಭವನ್ನು ಕೊಟ್ಟಿದ್ದಾರೆ. ಭದ್ರಕಾಳಿ ದೇವತೆಗೆ ಪಶುಬಲಿಯನ್ನು ಕೊಡುವಾಗ ಒಬ್ಬ ಹೇಳುತ್ತಾನೆ: "ಇದು ಮನುಷ್ಯ ಬಲಿ ಅಲ್ಲಮ್ಮಾ, ಆಡಿನದು".

ಈ ಪಶುಬಲಿ-ನರಮೇಧಗಳ ಆಶಯವೇನು? ತನ್ನ ಪಾಪವನ್ನು ತೊಡೆದು ಹಾಕಲು ಬಲಿ ಕೊಡುವುದು ಯಾವ ನ್ಯಾಯ? ಎಂದು ಕೇಳಿದ್ದಾರೆ ಕಿಟೆಲ್. ಈ ವಿಷಯದ ಮೌಢ್ಯವೆಂದರೆ, ಹಾಗೆ ಜೀವಹಾನಿ ಮಾಡುವುದರಿಂದ ಸ್ವತಃ ತಾನೇ ಪಾಪಗೈಯುತ್ತಿದ್ದೇನೆಂದು ಅವನಿಗೆ ಅನಿಸುವುದೇ ಇಲ್ಲ. ಕ್ರಿಸ್ತ ಶಕದ ಒಂದೆರಡು ಶತಮಾನಗಳಲ್ಲಿ ಈ ಯಜ್ಞ-ಯಾಗದ ಉದ್ದೇಶ, ಆತ್ಮೋದ್ಧಾರ ಎಂಬುದಾಗಿ ಪರಿವರ್ತಿತವಾಯಿತು. ಆ ಮುಂದೆ ನರಮೇಧವು ನಿಂತಿತಾದರೂ ಪಶುಬಲಿಯು ನಿಮ್ನ ವರ್ಗದವರಲ್ಲಿ ಮುಂದುವರಿಯಿತು.

ತನ್ನ ಈ ಗ್ರಂಥದ ಕೊನೆಯಲ್ಲಿ ಕಿಟೆಲ್ 'ನಮ್ಮ ಪಾಪದ ನಾಶಕ್ಕಾಗಿ ಬೇರೆಯೇ ಕ್ರಮವಿದೆ; ಅದುವೆ ಯೇಸು ಕ್ರಿಸ್ತನಲ್ಲಿ ಶರಣು ಹೊಂದುವುದು'-ಎಂಬುದಾಗಿ ಪ್ರತಿಪಾದಿಸಿದ್ದಾರೆ.

'ಇಂಡಿಯನ್ ಎಂಟಿಕ್ವೆರಿ' ಪತ್ರಿಕೆಯಲ್ಲಿ ಈ ಗ್ರಂಥವನ್ನು ವಿಮರ್ಶಿಸುತ್ತ, ಎ.ಸಿ. ಬರ್ನೆಲ್ "Ancient Vedic Sacrifices are very numerous and often exceedingly complex. Mr. Kittel's tract will be found the most useful aid" ಎಂದಿದ್ದಾರೆ. (I.A. 1872, P. 351).

ವಿವಿಧ ವಿದೇಶೀ ಜನಾಂಗಗಳಲ್ಲಿ ನಡೆಯುತ್ತಿದ್ದ ಯಜ್ಞ ಕರ್ಮದ ಬಗ್ಗೆ ಯುರೋಪಿಯನ್ ಭಾಷೆಗಳಲ್ಲಿ ಪುಸ್ತಕ–ಲೇಖನಗಳು ಹೊರಬಂದಿರಬಹುದು– ನಮ್ಮ ದೇಶದಲ್ಲಿ ಕಂಡುಬಂದ ಯಜ್ಞಗಳ ಕುರಿತ ಕಿಟೆಲರ ಕಾಲದಲ್ಲಂತೂ ಯಾರೂ ಬರೆದಿರಲಿಲ್ಲ. ಗ್ರಂಥದ ಕೊನೆಯಲ್ಲಿಯ ಸ್ವಮತ ಪ್ರಸಾರದ ಅಂಶವೊಂದನ್ನು ಬಿಟ್ಟರೆ ಇದೊಂದು ಕಿಟೆಲರ ಮೌಲಿಕ ಗ್ರಂಥವೆನಿಸಿದೆ.

## ೭.೪ LINGA CULTUS (ಲಿಂಗೋಪಾಸನೆ)

Linga Cultus– ಎಂಬೀ ಪುಸ್ತಕವು ಜರ್ಮನ್ ಭಾಷೆಯಲ್ಲಿದೆ. ಆ ಭಾಷೆಯಲ್ಲಿ ಬರೆದದ್ದರ ಉದ್ದೇಶ, ಈ ವಿಷಯದ ಕುರಿತು ತತ್ಪೂರ್ವದಲ್ಲಿ ಅಭಿಪ್ರಾಯ ಮಂಡಿಸಿದ ಡಾ. ಮೂರ್, ಲಾಸೆನ್, ವಾರೆನ್ ಮುಂತಾದ ವಿದ್ವಾಂಸರು ಜರ್ಮನಿಗರು. ಅವರುಗಳ ಒಟ್ಟಿನ ಅಭಿಪ್ರಾಯ ಕಿಟೆಲರಿಗೆ ಒಪ್ಪಿಗೆಯಾಗದ್ದರಿಂದ ಆ ಭಾಷೆಯಲ್ಲಿಯೆ ಉತ್ತರಿಸುವುದು ಅನಿವಾರ್ಯವಾಗಿ ಕಂಡಿತು.

ಕಿಟೆಲರಿಗೆ ಸಮ್ಮತವಾಗದ ಅವರುಗಳ ಅಭಿಪ್ರಾಯವೆಂದರೆ ಲಿಂಗೋಪಾಸನೆಯು ಮೂಲತಃ ಆರ್ಯೇತರರಿಂದ ಆರಂಭವಾದದ್ದು ಎಂಬುದಾಗಿತ್ತು. ಅದಕ್ಕೆ ಅವರುಗಳು ಕೊಟ್ಟ ಮುಖ್ಯ ಕಾರಣಗಳೆಂದರೆ–

ಅ) ಪ್ರಾಚೀನ ಲಿಂಗ ದೇವಸ್ಥಾನಗಳು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲೆಲ್ಲ ದ್ರಾವಿಡರೇ– ಎಂದರೆ ಆರ್ಯೇತರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲದೆ ಈ ಪೂಜಾ ಸ್ಥಳಗಳು ಬ್ರಾಹ್ಮಣ ವಸತಿಗಿಂತ ದೂರದಲ್ಲಿದ್ದುವು.

ಆ) ಆರ್ಷೇಯ ಸಾಹಿತ್ಯದಲ್ಲಿ ಮತ್ತು ಅಮರಕೋಶದಲ್ಲಿ ಸಹ 'ಲಿಂಗ' ಶಬ್ದವಿಲ್ಲ. ಆ ಪರಿಕಲ್ಪನೆ ಪ್ರಾಚೀನ ಭಾರತದಲ್ಲಿ ಇದ್ದಿರಲಿಲ್ಲ. ಇತ್ಯಾದಿ.

ಕಿಟೆಲ್ ಇವರ ಒಂದೊಂದು ಹೇಳಿಕೆಯನ್ನೂ ಎತ್ತಿಕೊಂಡು ಉತ್ತರಿಸಿದ್ದಾರೆ. ಉತ್ತರ ಹಿಂದುಸ್ಥಾನದಲ್ಲಿಯೂ ಪ್ರಾಚೀನ ಲಿಂಗಪೂಜೆ ಇದ್ದಿತು ಎನ್ನುವುದಕ್ಕೆ ಕಾಶಿಯ ವಿಶ್ವನಾಥ ಒಂದು ಉದಾಹರಣೆ. ಲಿಂಗಪೂಜೆ ಮಾಡುವ ಬ್ರಾಹ್ಮಣ ಪೂಜಾರಿಗಳು ದಕ್ಷಿಣ ಭಾರತದಲ್ಲಿಯೂ ಸಾಕಷ್ಟು ಜನ ಇದ್ದಾರೆ. ಹೀಗೆ ಪ್ರಾದೇಶಿಕ ವಿಭಾಗಮಾಡಿ ಲಿಂಗೋಪಾಸನದ ಮೂಲವನ್ನು ತಿಳಿಯಹೋಗುವುದು ತಪ್ಪು ಎನ್ನುವುದು ಕಿಟೆಲರ ನಿಲುವು. ವೇದ ಸಾಹಿತ್ಯದಲ್ಲಿ ಇದರ ಪ್ರಸ್ತಾಪವಿಲ್ಲ; ಆದ್ದರಿಂದ ಇದು ಆರ್ಯರಿಂದ ಬಂದದ್ದಲ್ಲ ಎನ್ನುವುದು ತಾರ್ಕಿಕವೆನಿಸುವುದಿಲ್ಲ. ಶತಪಥ ಬ್ರಾಹ್ಮಣದಲ್ಲಿ 'ವೇತಸ' ಎಂಬ ಪದ ಸಿಗುತ್ತದೆ. ವೇತಸ ಎಂದರೆ ಲಿಂಗವೇ. ಲಿಂಗವನ್ನು ಶಿವನ ಪ್ರತೀಕವಾಗಿ ಸ್ವೀಕರಿಸಲಾಗಿದೆ ಎಂಬುದಾಗಿ ಮಹಾಭಾರತ, ರಾಮಾಯಣಗಳಲ್ಲಿ ಪರೋಕ್ಷವಾದ ಹೇಳಿಕೆಗಳಿವೆ–ಎಂದೆಲ್ಲ ತಮ್ಮ ವಾದವನ್ನು ಮಂಡಿಸಿದ್ದಾರೆ. ಈ ಗ್ರಂಥವನ್ನು ರಚಿಸುವಲ್ಲಿ ಕಿಟೆಲರು ಆರ್ಯೇತರರಲ್ಲಿ ಲಿಂಗಪೂಜೆಯ ಮೂಲವನ್ನು ಹುಡುಕುವವರಿಗೆ ಉತ್ತರಿಸಲೆಂಬುದು ಮುಖ್ಯ ಆಶಯವಾಗಿತ್ತು. ಅತ್ಯಂತ ವಸ್ತುನಿಷ್ಠವಾಗಿ ತಮ್ಮ ಸಂಶೋಧನೆಯನ್ನು ಮಂಡಿಸಿದ್ದಾರೆ.

ಕೊನೆಯಲ್ಲಿ ಕಿಟೆಲ್, ಬೌದ್ಧ ಧರ್ಮದ ಪ್ರಸಾರವನ್ನು ತಡೆಗಟ್ಟಲು ಹಿಂದೂಗಳು ಲಿಂಗೋಪಾಸನೆಗೆ ಮಹತ್ವವನ್ನು ಕೊಡತೊಡಗಿದರು. ಸ್ವತಃ ಶಂಕರಾಚಾರ್ಯರು ಈ ಉಪಾಸನೆಯ ಪುರಸ್ಕರ್ತರಾಗಿದ್ದರು, ಎಂದು ಹೇಳಿದ್ದಾರೆ.

ನಮಗೆ ಹೆಚ್ಚು ಪ್ರಸ್ತುತವಾದದ್ದೆಂದರೆ ಈ ಜರ್ಮನ್ ಪುಸ್ತಕದ ವಿವೇಚನೆಯಲ್ಲಿ, ಕರ್ನಾಟಕದ ವೀರಶೈವರನ್ನೂ ಮತ್ತು ವಚನ ಸಾಹಿತ್ಯವನ್ನೂ ಅಲ್ಲಲ್ಲಿ ಆಧಾರವಾಗಿ ಕೊಟ್ಟಿದ್ದಾರೆ. ಲಿಂಗಾಂಗ ಸಾಮರಸ್ಯ (ಶಿವ–ಮಾನವ) ವೀರಶೈವ ಸಿದ್ಧಾಂತದ ಒಂದು ಮುಖ್ಯ ಭಾಗವಾಗಿರುವುದು ತಿಳಿದ ವಿಷಯ.

ಇಂತು ಈ ಕೃತಿಯು ಕಿಟೆಲರ ಉಚ್ಚಮಟ್ಟದ ಸಂಶೋಧನೆಯಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಆದರೇನು? ಬಾಸೆಲಿನ ಕೇಂದ್ರ ಸಂಸ್ಥೆಯು ಈ ಪುಸ್ತಕದಿಂದ ಮಿಶನರಿ ಕಾರ್ಯಕ್ಕೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಬೇರೆ ಮಿಶನರಿಗಳಿಗೆ ಪ್ರತಿ ಕಳಿಸುವದನ್ನು ಇಲ್ಲವೆ ಶಿಫಾರಸು ಮಾಡುವುದನ್ನು ಮಾಡಬಾರದು, ಎಂದು ದಾಖಲಿಸಿದೆ!

## ೮. ಕ್ರೈಸ್ತ ಮತೀಯ ಗ್ರಂಥಗಳು

ಸ್ವಮತದ ಪ್ರಚಾರಕ್ಕೆಂದು ಆಗಮಿಸಿದ್ದ ಕಿಟೆಲ್ ಈ ಕುರಿತು ಹಲವು ಗ್ರಂಥಗಳನ್ನು ರಚಿಸಿರುವುದು ಸ್ವಾಭಾವಿಕ. ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ತನ್ನ ಇತರ ಗ್ರಂಥಗಳಲ್ಲಿ ತಂದ ಬಗೆಯನ್ನು ಈ ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಇಲ್ಲಿ ಅವರ ಎರಡೇ ಕೃತಿಗಳನ್ನು ಗಮನಿಸೋಣ. ಒಂದನೆಯದು ಯೇಸುವಿನ ಜೀವನ ಚರಿತ್ರೆಯುಳ್ಳ **'ಯೇಸು ಕ್ರಿಸ್ತನ ಕ್ರಮೇ ಚರಿತ್ರ'** ಎಂಬುದು (೧೮೬೫). 'ಮಿಶನರಿಗಳ ಭಾಷೆ ಇದು' ಎಂದು ಬೆರಳೆತ್ತಿ ಹೇಳಬೇಕಾದ ರೀತಿಯಲ್ಲಿ ಅದರ ಬರವಣಿಗೆ. ಆದರೆ ನೇರವಾದ ಸುಸ್ಪಷ್ಟವಾದ ಗದ್ಯದಲ್ಲಿ ಹೊರಹೊಮ್ಮಿದೆ.

### ೮.೧ 'ಕ್ರೈಸ್ತಸಭಾ ಚರಿತ್ರೆ'

ಇದು ಏಳುನೂರು ಪುಟಗಳ ಬೃಹತ್ ಗ್ರಂಥ (೧೮೬೮). ಕ್ರೈಸ್ತ ಸಭೆಯ (Church) ಹುಟ್ಟು, ಬೆಳವಣಿಗೆ, ಸುರುವಾತಿನ ರಕ್ತಪಾತ, ವಿವಿಧ ದೇಶಗಳಲ್ಲಿ ಅದರ ಅಸ್ತಿತ್ವ, ಇಷ್ಟನ್ನು ಹೇಳಿದ ಮೇಲೆ ಮಾರ್ಟಿನ್ ಲೂಥರನು ಮೂಲ ಮತದಿಂದ ಬೇರ್ಪಡೆಯಾದ ಪ್ರೊಟೆಸ್ಟಂಟ್ ಪಂಥವನ್ನು ಆರಂಭಿಸಿದ್ದರ ವಿವರಣೆ ಇದೆ. ಅನಂತರ ಕ್ರೈಸ್ತ ಸಭೆ ಭಾರತದಲ್ಲಿ ಬೆಳೆದು ಬಂದದ್ದರ ವಿಸ್ತಾರವಾದ ವರ್ಣನೆ ಇದೆ. ಅರ್ಥಾತ್ ಪ್ರೊಟೆಸ್ಟಂಟ್ ದೃಷ್ಟಿಕೋಣದಿಂದ ಅದರ ನಿರೂಪಣೆ ಸಾಗಿ ಬಂದಿದೆ. ಇನ್ನೊಂದು ಗಣನೀಯ ಅಂಶವೆಂದರೆ ಅಲ್ಲಲ್ಲಿ ಹಿಂದೂ ಧರ್ಮದ ಹೋಲಿಕೆ ಇದ್ದುದು. ರೋಮೀಯರ ಪ್ರಧಾನ ದೇವತೆ ಯೂಪಿತರ್-(ದಿವಪಿತರ್) ಇವನು ಇಂದ್ರನಿಗೆ ಸಮಾನನು ಎಂದೂ ಮೆರ್ಕುರಿಯನು (ಆರ್ಯಮನು) ಹಿಂದೂ ಗಣೇಶನಿಗೆ ಹೋಲಿಕೆಯುಳ್ಳವನು ಎಂದೂ ಹೇಳಿದ್ದಾರೆ. ರೋಮೀಯರ ವಿವಿಧ ಮೂರ್ತಿಪೂಜಕತ್ವವನ್ನು, ಅದರ ನಿರರ್ಥಕತೆಯನ್ನು ವಿವರಿಸುವಾಗ ಅದನ್ನು ಹಿಂದೂಗಳ ಬಹುದೈವತಕ್ಕೂ ಅನ್ವಯಿಸಿದ್ದಾರೆ.

ಕಿಟೆಲ್ ಇದನ್ನು ರಚಿಸಿದ್ದೇಕೆ? 'ಪ್ರತಿಯೊಬ್ಬ ಕ್ರೈಸ್ತನು ತನ್ನ ಧರ್ಮದ ಇತಿಹಾಸವನ್ನು ಅರಿತಿರಬೇಕಾದದ್ದು ಅವನ ಕರ್ತವ್ಯವೇ ಆಗಿದೆ. ಮಾತ್ರವಲ್ಲ, ಇದರ ವಾಚನವು ದೇವರಲ್ಲಿ ವಿಶ್ವಾಸವನ್ನು ಹೆಚ್ಚಿಸುತ್ತಿದೆ' ಎಂದಿದ್ದಾರೆ. ಪುಟ ಪುಟಗಳಲ್ಲಿರುವ ಟಿಪ್ಪಣಿಗಳು ಈ ವಿಷಯಕವಾದ ಅವರ ವ್ಯಾಸಂಗದ ವ್ಯಾಪ್ತಿಯನ್ನು ಸೂಚಿಸುವಂತಿವೆ. ಮೇಲಾಗಿ ಕಿಟೆಲರು ಭಾರತದ ಪ್ರಸ್ತಾಪ ಬಂದಾಗಲೆಲ್ಲಾ 'ನಮ್ಮ ಹಿಂದೂ ದೇಶದಲ್ಲಿ' ಎಂದು ಹೇಳಿದ್ದುದು ಅವರ ಇಲ್ಲಿನ ನೆಂಟನ್ನು ಜ್ಞಾಪಿಸಿಕೊಡುತ್ತದೆ. ಕಿಟೆಲರ ವಿಶೇಷ ಪರಿಶ್ರಮದ ಫಲವಾಗಿ ಹೊರಬಂದ ಈ ಗ್ರಂಥವು ಕ್ರೈಸ್ತ ಮತದ ಐತಿಹಾಸಿಕ ವಿಶ್ವಕೋಶ-ಎಂದು ತಿಳಿಯಬಹುದಾಗಿದೆ. ಇಷ್ಟೊಂದು ಸುದೀರ್ಘವಾದ ಗದ್ಯ ಬರವಣಿಗೆ ಆ ಕಾಲಕ್ಕೆ ಕನ್ನಡದಲ್ಲಿ ಬೇರೆ ಇರಲಿಲ್ಲ.

ಅಂದ ಹಾಗೆ, ಈ ಗ್ರಂಥದ ಶೀರ್ಷಿಕಾ ಪುಟದಲ್ಲಿ ಕಿಟೆಲರ ಹೆಸರಿಲ್ಲ. ಆದ್ದರಿಂದ ಇದು ಅವರು ಬರೆದದ್ದಲ್ಲ, ಯಾವುದೋ ಯುರೋಪಿಯನ್ ಭಾಷೆಯಿಂದ ಅನುವಾದಗೊಂಡದ್ದು – ಎಂಬ ಅಭಿಪ್ರಾಯ ಒಂದೆಡೆ ವ್ಯಕ್ತವಾಗಿದೆ. ಇದು ಕಿಟೆಲರೇ ಬರೆದದ್ದು ಎಂಬುದಾಗಿ ಅವರ ಚರಮ ಲೇಖದಲ್ಲಿ (obituary) ಸ್ಪಷ್ಟವಾಗಿ ಹೇಳಿದೆ. ಇದು ಯುರೋಪಿಯನ್ ಭಾಷೆಯಿಂದ ನೇರವಾಗಿ ಅನುವಾದಗೊಂಡದ್ದಂತೂ ಅಲ್ಲವೇ ಅಲ್ಲ – ಭಾರತದ ಪ್ರಸ್ತಾಪ ವಿವರವಾಗಿ ಬಂದಿರುವುದರಿಂದ.

## ೮.೨ ಬೈಬಲ್ ಅನುವಾದ

ಬಾಲ್ಯಕಾಲದಿಂದಲೂ ಕಿಟೆಲರಿಗೆ ಬೈಬಲ್ ಸಂಸ್ಕಾರ ಇದ್ದುದೇ. ತಮ್ಮ ಬರಹಗಳಲ್ಲಿ ಅವರು ಈ ಮೂರು ರೀತಿಯಲ್ಲಿ ಬೈಬಲಿನ ಪ್ರಕ್ರಿಯೆಗಳನ್ನು ತಂದಿದ್ದಾರೆ.

ಒಂದು–ಬೈಬಲಿನ ಕಥಾಂಶಗಳನ್ನು, ವಿಶೇಷತಃ ಯೇಸುವಿನ ಚರಿತ್ರೆಯನ್ನು ನೇರವಾಗಿ ನಿರೂಪಿಸುವುದು.

ಇನ್ನೊಂದು– ತಮ್ಮ ಬೇರೆ ವಿಚಾರಗಳ ಮಂಡನೆಯಲ್ಲಿ, ಬೈಬಲಿನ ಸಂದರ್ಭ ಇಲ್ಲವೆ ಆಧಾರವನ್ನು ಕೊಡುವುದು.

ಮತ್ತೊಂದು– ಬೈಬಲಿನ ಕನ್ನಡಾನುವಾದದಲ್ಲಿ ಪಾಲ್ಗೊಳ್ಳುವುದು.

ಮೊದಲನೆಯ ಕ್ರಮಕ್ಕೆ ಅವರ 'ಯೇಸುಕ್ರಿಸ್ತನ ಶ್ರಮೇ ಚರಿತ್ರೆ' ಮುಂತಾದವು ನಿದರ್ಶನಗಳಾಗಿವೆ. ಅಂದ ಹಾಗೆ ಕಿಟೆಲರು ಕೊಡವ ಭಾಷೆಯಲ್ಲಿ The Parable of the Sower ಎಂಬ ಚಿಕ್ಕ ಕೃತಿಯನ್ನು ರಚಿಸಿದ್ದುಂಟು. ಇತ್ತ ಕ್ರೈಸ್ತ ಸಭಾಚರಿತ್ರ ಗ್ರಂಥದಲ್ಲಿ ಕ್ರಿಸ್ತ ಶಕದ ಮೊದಲಿನ ನೂರು ವರ್ಷಗಳೆಂದರೆ ಮತ್ತಾಯ, ಜಾನ್ ಮೊದಲಾದ ಸುವಾರ್ತಿಕರ ಚರಿತ್ರೆಯೇ (ಎಂದರೆ ಹೊಸ ಒಡಂಬಡಿಕೆ) ಬರುತ್ತದಲ್ಲವೆ.

ಎರಡನೆಯ ಕ್ರಮಕ್ಕೆ ಮಾದರಿಯೆಂದು 'ಪರಮಾತ್ಮಜ್ಞಾನ' ಇದನ್ನು ಉಲ್ಲೇಖಿಸಬಹುದು. (ಈ ಬಗ್ಗೆ ವಿವರವಾಗಿ ಈ ಹಿಂದೆ ಹೇಳಿದೆ) ಕ್ರೈಸ್ತ ಪ್ರಣಾಲಿಯ ಪ್ರಕಾರ, ಪಾಪ ಪುಣ್ಯದ ಹೊರೆ ಆ ವ್ಯಕ್ತಿಗಳದೇ. ಅವರಿಗೆ ತಪ್ಪಿನ ಅರಿವಾದರೆ ದೇವರು ಕ್ಷಮಿಸುವನು. ಈ ತಪ್ಪಿನ ಅರಿವಾಗುವುದಕ್ಕೆ ದೇವರ ದೂತ (ಯೇಸು) ನೆರವಾಗುವನು. ಈ ವಿಚಾರವನ್ನು ಮಂಡಿಸುವಲ್ಲಿ ಕಿಟೆಲರು ಹೆಜ್ಜೆ ಹೆಜ್ಜೆಗೆ ಬೈಬಲಿನ ಆಧಾರ ಕೊಡುತ್ತಾರೆ.

ಇವೆರಡಕ್ಕಿಂತ ಕಿಟೆಲರು ಬೈಬಲಿನ ಅನುವಾದದಲ್ಲಿ ಪಾಲ್ಗೊಂಡ ಬಗೆಯು ನಮಗೆ ಹೆಚ್ಚು ಪ್ರಸ್ತುತವಾದುದು. ಕನ್ನಡದಲ್ಲಿಯ ಬೈಬಲ್ ಅನುವಾದದ ಎತ್ತುಗಡೆಯಲ್ಲಿ ಮೂರು ಕಾಲಖಂಡಗಳನ್ನು ಗುರುತಿಸಬಹುದು. ೧೮೨೦–೧೮೪೦ರ ವರೆಗೆ ಪ್ರಾರಂಭದ ಪ್ರಯತ್ನಗಳು. ಇವು, ಇಂಗ್ಲೆಂಡಿನ King James ಆವೃತ್ತಿಯನ್ನು ಹೆಚ್ಚಾಗಿ ಅವಲಂಬಿಸಿದವುಗಳು. ಬಾಸೆಲ್ ಮಿಶನ್ನಿನವರು ಸೇರಿಕೊಂಡ ಮೇಲೆ ಬೈಬಲಿನ

Greek ಮತ್ತು Hebrew ಆವೃತ್ತಿಗಳನ್ನೂ ಗಣನೆಗೆ ತೆಗೆದುಕೊಳ್ಳಲಾಯಿತು. ಮುಂದಿನ ಎರಡು ದಶಕಗಳಲ್ಲಿ ಬೈಬಲ್ ನವೀಕರಣ ನಡೆದು ೧೮೬೦ರ ಸುಮಾರಿಗೆ ಇಡೀ ಬೈಬಲ್ ಕನ್ನಡಾನುವಾದ ಸಿದ್ಧವಾಯಿತು. ೧೮೯೦ನೆಯ ದಶಕದಲ್ಲಿ ಮತ್ತೊಂದು ಬಾರಿಗೆ ಬೈಬಲ್ ನವೀಕರಣ ನಡೆಯಿತು. ಹೆನ್ರಿ ಹೇಗ್ ಎಂಬಾತ ಅಧ್ಯಕ್ಷನಿದ್ದ. ಆ ಸಮಿತಿಯಲ್ಲಿ ಏಳು ಜನ ಸದಸ್ಯರಿದ್ದರು. ಅವರು ಬೈಬಲಿನ ಹೊಸ ಒಡಂಬಡಿಕೆಯ ನವೀಕರಣದ ಕರಡು ಅನುವಾದ ಪ್ರತಿಗಳನ್ನು ಕ್ರೈಸ್ತ ಸಮಾಜದ ಪ್ರಮುಖರಿಗೆ ಕಳಿಸಿಕೊಟ್ಟರು. ಅಂಥವರಲ್ಲಿ ಕಿಟೆಲರೂ ಒಬ್ಬರು. ಆ ವೇಳೆಗೆ ಕಿಟೆಲ್ ಕೋಶವು ಹೊರಬಂದಿತ್ತು. ಅವರು ಸ್ವಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು.

ಕಿಟೆಲರು ಸೂಚಿಸಿದ ಬದಲಾವಣೆಗಳ ಹಸ್ತ ಪ್ರತಿಯಲ್ಲಿ (ನಮಗೆ ದೊರೆತದ್ದು) ಮ್ಯಾಥ್ಯೂ ಹಾಗೂ ಜಾನ್ ಇವರಿಬ್ಬರ ಸುವಾರ್ತೆಗಳ ಪ್ರಸ್ತಾಪ ಮಾತ್ರ ಇದೆ.

ಕಿಟೆಲರು ಮಕ್ಕಿಕಾ ಮಕ್ಕಿ ಎಂದರೆ ಶಬ್ದಕ್ಕೆ ಪ್ರತಿ ಶಬ್ದದ ಅನುವಾದವನ್ನು ಸ್ಪಷ್ಟವಾಗಿ ವಿರೋಧಿಸಿದರು. ಸೇಂಟ್ ಜಾನ್‌ನ ಸುವಾರ್ತಿಕದಲ್ಲಿ I say unto you truthfully ಎಂಬ ಮಾತು ಬರುತ್ತದೆ. ಅದರ ಅನುವಾದವನ್ನು ಹೇಗ್ ಸಮಿತಿಯು 'ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ' ಎಂದು ಅನುವಾದಿಸಿದೆ. Truthfully ಇದರ ಶಾಬ್ದಿಕ ಅನುವಾದ 'ನಿಜವಾಗಿ'; ಸರಿಯೇ. ಆದರೆ ಕಿಟೆಲರು ಮೂಲದ ಅವಧಾರಣೆಯನ್ನು ಉಳಿಸಿಕೊಂಡೇ 'ನಾನು ನಿಮಗೆ ಹೌದು ಹೌದೆಂದು ಹೇಳುತ್ತೇನೆ.' ಎಂಬುದನ್ನು ಸೂಚಿಸಿದ್ದರು.

ಇದೇ ಸುವಾರ್ತಿಕದಲ್ಲಿ ಬರುವ Mosaic Law (liber offictiourm) 'ಮೋಶೆಯ ಧರ್ಮಶಾಸ್ತ್ರ' ಎಂದು ಅನುವಾದಿಸಲಾಗಿದೆ. ಆದರೆ ಧರ್ಮಶಾಸ್ತ್ರ ಎಂದೊಡನೆ ಭಾರತೀಯನಿಗೆ ತನ್ನ ಧರ್ಮಶಾಸ್ತ್ರ ನಿಯಮಗಳ ಕಲ್ಪನೆ ಬರುತ್ತದೆ. ಅರ್ಥಾತ್ ಅದೊಂದು ವಿಶಿಷ್ಟ ಅರ್ಥದ ಪಾರಿಭಾಷಿಕ ಪದ. ಬದಲಾಗಿ 'ನ್ಯಾಯ ಪ್ರಮಾಣ' ಶಬ್ದವನ್ನು ಪ್ರಯೋಗಿಸಬಹುದೆಂದು ಕಿಟೆಲ್ ಸೂಚಿಸಿದ್ದಾರೆ. ಇದೇ ಕಾರಣದಿಂದ ಪರಲೋಕ ಎಂಬ ವಿಶಿಷ್ಟಾರ್ಥದ ಭಾರತೀಯ ಶಬ್ದಕ್ಕೆ ಬದಲಾಗಿ ಮೇಲ್ಲೋಕ ಎಂಬುದನ್ನು ಸೂಚಿಸಿದ್ದರು.

Spirit– ಆತ್ಮ ಎನ್ನುವುದು ಕ್ರೈಸ್ತ ಧರ್ಮ ವಿಚಾರದಲ್ಲಿ ಮೇಲಿಂದ ಮೇಲೆ ಬಳಕೆಯಾಗುವ ಪದ. ಆತ್ಮವು ಅಥವಾ ಆತ್ಮನು–ಯಾವುದು ಸರಿ? Holy Spirit ಇದನ್ನು 'ಪವಿತ್ರಾತ್ಮವು' ಎಂದು ಅನುವಾದಿಸಿದ್ದರ ಬಗ್ಗೆ ಕಿಟೆಲ್ ಹೀಗೆ ಹೇಳುತ್ತಾರೆ:

With regard to Canerese ಪವಿತ್ರಾತ್ಮವು which the revisers use in v.33. the writer (i.e. Kittel) remarks that it can only mean a pure man. ಪವಿತ್ರಾತ್ಮನು therefore, can without any hesitation be used.

ಹೀಗೆ ಅವರು ಅದರ ಪುಲ್ಲಿಂಗ ರೂಪವನ್ನು ಸೂಚಿಸುತ್ತಾರೆ. ಈ ಅಂಶವನ್ನು ಸ್ಪಷ್ಟಗೊಳಿಸಲು ಕಿಟೆಲರು ಇಡೀ 'ಅನುಭವಾಮೃತ' ಕಾವ್ಯವನ್ನು (ಮಹಲಿಂಗರಂಗ

ವಿರಚಿತ) ಅದೂ ಎರಡು ಬೇರೆ ಬೇರೆ ಪ್ರತಿಗಳನ್ನು ಪರಿಶೀಲಿಸಿದ್ದರು! ಅದರಲ್ಲಿ ಆತ್ಮ ಶಬ್ದವು ೮೫೫ ಬಾರಿ ಬಂದಿದೆಯೆಂದೂ ಜೀವಾತ್ಮ, ಪ್ರತ್ಯಗಾತ್ಮ, ಸತ್ಯಾತ್ಮ, ಸರ್ವಾತ್ಮ, ಮಂಗಳಾತ್ಮ ಮುಂತಾದ ವಿವಿಧ ರೂಪಗಳಲ್ಲಿ ಆತ್ಮ ಶಬ್ದವು ಬಂದಿದ್ದು, ಅದು ಪುಲ್ಲಿಂಗವಾಚಿ ಶಬ್ದವಾಗಿದೆಯೆಂಬ ವಿವರಣೆ ಕೊಟ್ಟಿದ್ದಾರೆ! ಯಾವುದೇ ವಿಷಯವಿರಲಿ ಕಿಟೆಲ್ ಅತ್ಯಂತ ಆಳಕ್ಕೆ ಇಳಿಯುತ್ತಿದ್ದರೆಂಬುದರಲ್ಲಿ ಸಂಶಯವೇ ಇಲ್ಲ.

ಹೇಗ್ ಸಮಿತಿಯು ೧೯೦೦ರ ದಶಕದ ಆರಂಭದಲ್ಲಿ ಹೊಸ ಒಡಂಬಡಿಕೆಯ ಸುಧಾರಿತ ಅವೃತ್ತಿಯನ್ನು ಹೊರತಂದಿತು. ಅದರೇನು, ಕಿಟೆಲರು ತರ್ಕಬದ್ಧವಾಗಿ ಮಾಡಿದ್ದ ಯಾವೊಂದು ಸೂಚನೆಯೂ ಅನುಷ್ಠಾನದಲ್ಲಿ ಬಂದಂತಿಲ್ಲ! ಪ್ರಾಯಶಃ ಅವರ ಸೂಚನೆಗಳು ದೂರದ ಜರ್ಮನಿಯಿಂದ ಬರುವಷ್ಟರಲ್ಲಿ ಸುಧಾರಣಾ ಸಮಿತಿಯು ನಿರ್ಣಯ ತೆಗೆದುಕೊಂಡು ಮುಗಿಸಿರಬೇಕು.

## ೯. ದ್ರಾವಿಡ ಸಂಸ್ಕೃತ ಸಂಪರ್ಕ

ಕಿಟೆಲರಲ್ಲಿ ಶಬ್ದಾಸಕ್ತಿ ಆಳವಾಗಿದ್ದಿತು. ಯಾವುದೇ ಭಾಷೆಯ ಶಬ್ದವಿರಲಿ, ಅವರ ಕೈಗೆ ಸಿಕ್ಕಿತೆಂದರೆ ಒಂದು ಅಪ್ಷಪೈಲಿನ ರತ್ನ ಸಿಕ್ಕ ಹಾಗೆ. ಅದನ್ನು ಮನದಲ್ಲಿ ಹಿಡಿದುಕೊಂಡು, ಆ ಶಬ್ದದ ಮೂಲವೇನಿರಬಹುದು? ಅದರ ಅರ್ಥವೇನು? ಬೇರೆ ಭಾಷೆಗಳಲ್ಲಿ ಹೇಗಿರಬಹುದು–ಎಂದು ಸದಾ ಯೋಚಿಸುತ್ತಿದ್ದರು. ಸ್ಪಷ್ಟ ಹೇಳಬೇಕೆಂ–ದರೆ ಅವರಿಗೆ ಅದೊಂದು ಗೀಳು (obsession) ಎನ್ನುವಷ್ಟು ಇದ್ದಿತು. Indian Anti-quary ಪತ್ರಿಕೆ ಆರಂಭವಾಗಿ (೧೮೭೨) ಅವರಿಂದ ಲೇಖನಗಳನ್ನು ಕೇಳಿದಾಗ ಕಿಟೆಲರು ಮೊದಲಿಗೆ ಶಾಬ್ದಿಕ ವಿಚಾರವಾಗಿಯೇ ಬರೆದರು. ಒಂದು ಲೇಖನದಲ್ಲಿ ಇಂಗ್ಲಿಷ್‌ನ elephant ಶಬ್ದವು ದ್ರಾವಿಡ ಪದವಾದ 'ಏಲೆ' ಎಂಬುದರಿಂದ ಬಂದಿರಬಹುದೇ? ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. (ಅದರಂತೆ ಕನ್ನಡದಲ್ಲಿ 'ಆನೆ' ಮತ್ತು ಸಂಸ್ಕೃತದಲ್ಲಿ ಐರಾವತ–ಎಂಬ ರೂಪಾಂತರಗಳು)

ಪಾಲ್ ವುರ್ಮ್ ಎಂಬವರು ಹಿಂದೂ ಧರ್ಮದ ಬಗ್ಗೆ ಜರ್ಮನಿಯಲ್ಲಿ ಒಂದು ಗ್ರಂಥ ರಚಿಸಿದ್ದಾರೆ (೧೮೭೪). 'ಇಂಡಿಯನ್ ಇವ್ಯಾಂಜೆಲಿಕಲ್ ರಿವ್ಯೂ'ದವರು ಅದರ ವಿಮರ್ಶೆಗೆಂದು ಕಿಟೆಲರಿಗೆ ಕಳಿಸಿದ್ದರು. ಅದನ್ನು ಓದುತ್ತಿರುವಾಗ ಕಿಟೆಲರಿಗೆ ತುಕಿಮ್ ಎಂಬ ಶಬ್ದವು ಸಂಸ್ಕೃತದ ಸಿಖಿ (ಮ್) ಎಂಬುದರಿಂದ ಬಂದಿದೆ ಎಂಬ ಹೇಳಿಕೆ ಕಂಡು ಬಂತು. ಕಿಟೆಲರ ಶಬ್ದಾಸಕ್ತಿಯು ಧಾರ್ಮಿಕ ವಿಷಯದ ವಿಮರ್ಶೆ ಮಾಡುವಾಗಲೂ ಮೇಲ್ವಾಯ್ದು ಬಂತು. ತುಕಿಮ್ ಶಬ್ದದ ಜ್ಞಾತಿ ಪದಗಳು ದ್ರಾವಿಡ ಭಾಷೆಗಳಲ್ಲಿವೆಯಾದ್ದರಿಂದ ಅದು ಮೂಲತಃ ದ್ರಾವಿಡ ಪದವೇ ಎಂಬುದಾಗಿ ಹೇಳಿದರು.

ಈ ಶಬ್ದಾಸಕ್ತಿಯ ಇನ್ನೊಂದು ಪರಿಣಾಮವೆಂದರೆ, ಹಳಗನ್ನಡ ಕಾವ್ಯಗಳ ಪ್ರತಿಕಾರರು ಶಬ್ದಗಳ ಅಕ್ಷರಿಕೆಯ ವಿಚಾರದಲ್ಲಿ ನಾನಾ ಬಗೆಯಿಂದ ತಪ್ಪು ಮಾಡುತ್ತಿದ್ದಾಗ, ಸರಿಯಾದ ಶಬ್ದವನ್ನು ಕಂಡು ಹಿಡಿಯಲೆಂದು ಆ ಕಾವ್ಯದ ಇತರ ಹಸ್ತಪ್ರತಿಗಳನ್ನು ಎಲ್ಲೆಲ್ಲಿಯೋ ಅರಸಿಕೊಂಡು ಹೋಗುವುದಕ್ಕೆ ಚಡಪಡಿಸುತ್ತಿದ್ದರೆಂಬುದನ್ನು ನೋಡಿದ್ದೇವೆ. ಹಾಗೆ ದೊರೆತ ಹಸ್ತಪ್ರತಿಗಳಲ್ಲಿಯ ಶಬ್ದಗಳ ತಪ್ಪು, ಸರಿಗಳನ್ನು ಆಳವಾಗಿ ವಿಶ್ಲೇಷಿಸಿದ್ದ ಅಂಶ ಅವರ ಪೂರ್ವೋಕ್ತ ಶಬ್ದಮಣಿದರ್ಪಣ ಹಾಗೂ ಛಂದೋಂಬುಧಿ ಪೀಠಿಕೆಗಳಿಂದ ವೇದ್ಯವಾಗಬಲ್ಲುದು.

ಹೀಗೆ ಶಬ್ದಗಳ ಮೂಲರೂಪ, ಸಾಧಿತರೂಪ, ಅರ್ಥ, ಜ್ಞಾತಿಪದ–ಇವು ಅವರ ಮನದಲ್ಲಿ ಮುಗಿಬೀಳುತ್ತಿದ್ದವು. ಅಗತ್ಯದ ವಿವರಗಳನ್ನು ಕೊಡುತ್ತಿದ್ದರು. 'ಕರ್ನಾಟಕ ಕಾವ್ಯ ಮಾಲೆ' ಈ ಕವನ ಸಂಗ್ರಹಕ್ಕೆ ೩೦ ಪುಟಗಳಷ್ಟು ಶಬ್ದಾರ್ಥ ಸೂಚಿ ಇದೆ. ಅರ್ಥವೊಂದನ್ನು ಕೊಟ್ಟಿದ್ದರೆ ಸಾಕಾಗುತ್ತಿತ್ತು. ಇಲ್ಲ; ಅನೇಕ ಶಬ್ದಗಳ ಮೂಲ ರೂಪ ಇತ್ಯಾದಿ ಹೇಳ ಹೊರಟಿದ್ದಾರೆ.

'ಪಂಚತಂತ್ರ'ವನ್ನು ಕಿಟೆಲ್ ಸಂಪಾದಿಸಿದ್ದ ವಿಷಯ ಈ ಹಿಂದೆ ನೋಡಿದ್ದೇವೆ. ಅವರ ಸ್ವಂತ ಪ್ರತಿಯ ಹಿಂಬದಿಯಲ್ಲಿ ಅನೇಕ ಶಬ್ದಗಳ ಮೂಲ ರೂಪಗಳನ್ನು ಗುರುತು ಹಾಕಿಕೊಂಡಿದ್ದಾರೆ. (ಬಾಸೆಲ್‌ನ ಪತ್ರಾಗಾರದಲ್ಲಿದೆ ಆ ಪ್ರತಿ) ಒಂದೆರಡನ್ನು ಇಲ್ಲಿ ಕೊಡುವೆ.

"**ಮಂತ್ರಿ**–from ಮನ್, to think. ಯೋಚಿಸು. ಯೋಚಿಸುವವ", (ರಾಜನಿಗಾಗಿ ಯೋಚಿಸುವವ– ಮಂತ್ರಿ)

"**ಅತಿಶಯ**–from ಶಿ to lie, ಅತಿ. ಶೀ– to lie beyond, = Excessive" ಎಂಬುದು.

ಈ ಪ್ರಾಥಮಿಕ ಮಟ್ಟದಿಂದ ಕಿಟೆಲ್ ಆ ಮುಂದೆ ದ್ರಾವಿಡ ವರ್ಗದಿಂದ ಸಂಸ್ಕೃತಕ್ಕೆ ಹೋದ ಶಬ್ದಗಳ ಅನ್ವೇಷಣೆಗೆ ತೊಡಗಿದರು. ಈ ವಿಷಯದಲ್ಲಿ ಕಾಲ್ಡ್‌ವೆಲ್ ಕೆಲವು ಸೂತ್ರಗಳನ್ನು ಹಾಕಿಕೊಟ್ಟು, ಸುಮಾರು ೩೦ ದ್ರಾವಿಡ ಶಬ್ದಗಳು ಸಂಸ್ಕೃತದಲ್ಲಿ ಕಾಣಿಸಿಕೊಂಡದ್ದರ ಯಾದಿ ಕೊಟ್ಟಿದ್ದರು. ಕಿಟೆಲ್ ಈ ಕೆಲಸವನ್ನು ಮುಂದುವರಿಸಿ ೪೨೦ಕ್ಕೂ ಮೇಲ್ಪಟ್ಟು ದ್ರಾವಿಡದಿಂದ ಸಂಸ್ಕೃತ ರೂಪಾಂತರ ಹೊಂದಿದ ಶಬ್ದಗಳ ಪಟ್ಟಿಯನ್ನು ಸಿದ್ಧಪಡಿಸಿ, ತಮ್ಮ ಕನ್ನಡ – ಇಂಗ್ಲಿಷ್ ಶಬ್ದಕೋಶದಲ್ಲಿ ಕೊಟ್ಟಿದ್ದಾರೆ. (ಎಲ್ಲವೂ ಖಚಿತವಾದವುಗಳೇನಲ್ಲ).

ಸರಿಯೇ. ಈ ವಿಷಯದಲ್ಲಿ ಕಿಟೆಲರ ಮೂಲಭೂತ ನಿಲುವೇನೆಂಬುದನ್ನು ತಿಳಿಯಬೇಕು. ಬೇರೆ ಭಾಷೆಗಳಲ್ಲಿಯ ಶಬ್ದಗಳ ಪರಸ್ಪರ ಕೊಡು–ಪಡೆ ತಿಳಿಯುವುದಕ್ಕೆ ಮೊದಲಿಗೆ ಆ ಶಬ್ದಗಳ ಉಚ್ಚಾರ–ಅಕ್ಷರಿಕೆಯನ್ನು, ಧಾತು ಹಾಗೂ ನಾಮಗಳನ್ನು ಹೋಲಿಸಿ ನೋಡುವುದು ಸಾಮಾನ್ಯ ನಿಯಮವಾಗಿದೆ. ಕಿಟೆಲ್ I E Rದ ೧೮೭೭ರ ಒಂದು ಲೇಖದಲ್ಲಿ ಹೀಗೆ ಹೇಳಿದ್ದಾರೆ:

About the mutual relaton of languages, Roots and occasionally Nouns are as important as grammatical forms. True, grammatical forms will not easily change, but the **Primary roots** always remain the same, also presenting a firmer base. These original roots constitute the skeleton and the derived forms are the softer part supported on it.

ಹೀಗೆ ಶಬ್ದದ ತಳಪದಿ ರೂಪದ ಅರ್ಥವೇ ನಿಜವಾದ ಮಾನದಂಡವೆಂದು ಅವರು ತಿಳಿಯಪಡಿಸಿದ್ದಾರೆ. ಅದಕ್ಕೆ ಅವರು ಕೊಟ್ಟ ಹಲವಾರು ಉದಾಹರಣೆಗಳಲ್ಲಿ ಒಂದನ್ನು ಇಲ್ಲಿ ಉಲ್ಲೇಖಿಸುವೆ:

'ಮಗ' ಎನ್ನುವ ಶಬ್ದ. ಇದರ ಅರ್ಥ Son. ಎಲ್ಲ ದ್ರಾವಿಡ ಭಾಷೆಗಳಲ್ಲಿ ಇದರ ವಿವಿಧ ರೂಪಗಳು ದೊರೆಯುತ್ತದೆ. (ತುಳು=ಮಗೆ, ತಮಿಳು=ಮಗ. ಇದರ ಹಿಂದಿನ ರೂಪ 'ಮಗ್' ಎಂಬುದಾಗಿದ್ದು, ಮಗಿ, ಮಗವು, ಮಗಳ್ ಮುಂತಾದವು ಅದರ ಸಾಧಿತ ರೂಪಗಳು. ಹೀಗೆ ಇದು ಮೂಲತಃ ದ್ರಾವಿಡ ಪದವೇ. ಅಲ್ಲಿಗೆ ಸರಿ. ಆದರೆ–

ಇಂಡೋ-ಯುರೋಪಿಯನ್ ಭಾಷೆಗಳಲ್ಲಿಯೂ ಇಂಥದೇ ಶಬ್ದ ಇದೆಯಲ್ಲ? ಗೋಥಿಕ್ ಭಾಷೆಯಲ್ಲಿ 'ಮಗಸ್' ಎಂಬುದು ಹುಡುಗನೆಂಬ ಅರ್ಥವನ್ನು ಕೊಡುತ್ತದೆ. ಲ್ಯಾಟಿನ್ 'ಮಸ್'. ಇದರ ಅರ್ಥ ಗಂಡು ವ್ಯಕ್ತಿ. ಸಂಸ್ಕೃತದಲ್ಲಿ 'ಮನುಷ್' ಎಂಬುದು ಅದೇ ಅರ್ಥವನ್ನು ಕೊಡುತ್ತದೆ. ಆದರೆ ಇಲ್ಲಿ ಅದರ ಮೂಲ ರೂಪವು 'ಮಹ್' ಅಥವಾ 'ಮಘ್' ಎಂಬುದಾಗಿ ಮತ್ತು ಅದರ ಅರ್ಥವು ಮಹತ್ತಾದದ್ದು (great) ಎಂಬುದಾಗಿ ಸಂಸ್ಕೃತ ವಿದ್ವಾಂಸರು ಒಪ್ಪಿದ್ದೇ ಇದೆ. ಹಾಗಿದ್ದರೆ ಆ ದ್ರಾವಿಡ ಮೂಲ ರೂಪದಿಂದ ಇಂಡೋ-ಯುರೋಪಿಯನ್ ಶಬ್ದಗಳು ಸಾಧಿತವಾದುವೆಂಬ ಸಂದೇಹ ಮೂಡಬಹುದು.

ಇಲ್ಲ!; ಶಬ್ದಗಳ ಸಾಮ್ಯದಿಂದ ಮಾತ್ರ ಇಂಥ ನಿರ್ಣಯಕ್ಕೆ ಬರಬಾರದು. 'ಮಗ' ಈ ಕನ್ನಡ ಶಬ್ದದ ದ್ರಾವಿಡ ಮೂಲ ಶಬ್ದವು 'ಮಿಗ್' ಅಥವಾ 'ಮಗ್' ಎಂಬುದಾಗಿಯೂ ಮೆಗ, ಮೊಗ ಇವು ಅದರ ಸಾಧಿತ ರೂಪಗಳಿದ್ದು ಈ ಮೂಲ ರೂಪದ ಅಥವಾ 'ಮುಂದೆ ಇರು/ಆಗು ಎಂದಾಗುತ್ತದೆ. ಮಗ-ಮುಂದಿನವನೇ ತಾನೇ!

ಆದರೆ ಈ ಬಗೆಯ ನಿರ್ಣಯ ಎಲ್ಲ ಕಾಲಕ್ಕೂ ಸುಲಭ ಸಾಧ್ಯವಲ್ಲ ಎಂದು ಕಿಟೆಲ್ ಒಪ್ಪುತ್ತಾರೆ. ಉದಾ.ಗೆ ಸಂಸ್ಕೃತ ಶಬ್ದ 'ಬಿಂದು' ಎಂದರೆ ಒಂದು ಹನಿ. ಸಂಸ್ಕೃತದಲ್ಲಿ 'ಬಿದ್' ಎಂಬ ಧಾತು ಇದ್ದು ಅದರರ್ಥ ಬಡವಾದದ್ದು, ಎರಡಾಗು ಎಂಬುದು. ಆದ್ದರಿಂದ 'ಬಿಂದು' ಎಂದರೆ ಎರಡಾದದ್ದು, ಅರ್ಥಾತ್ (ನೀರ) ಹನಿಯು. ಆದರೆ ದ್ರಾವಿಡದ ಒಂದು ಧಾತು 'ಬಿಳ್ತು' ಎಂಬುದಿದ್ದು, ಅದರರ್ಥ 'ಕೆಳಗೆ ಬೀಳು' ಎಂದಾಗುತ್ತದೆ. ನೀರಹನಿ ಕೆಳಗೆ ಉದುರುವುದೂ ಉಂಟಲ್ಲವೆ? ಅಂದಾಗ 'ಬಿಂದು'ವಿನ ಮೂಲವು ದ್ರಾವಿಡದ್ದೇ, ಇಂಡೋ-ಆರ್ಯನ್ ಮೂಲದ್ದೇ ಎಂಬು ನಿರ್ಣಯಿಸುವುದು ಕಷ್ಟ, ಎನ್ನುತ್ತಾರೆ ಕಿಟೆಲ್. ಏನೇ ಇರಲಿ, ಅವರ ವ್ಯಾಸಂಗ ತೀಕ್ಷ್ಣತೆ ಎಷ್ಟೆಂದು ನಾವು ಇದರಿಂದ ತಿಳಿಯಬಹುದು.

ಈ ನಿಮಿತ್ತದಿಂದ ಕಾಲ್ಡ್‌ವೆಲ್ ಮತ್ತು ಕಿಟೆಲ್-ಇವರ ನಡುವಿನ ಸಂಪರ್ಕ ಮತ್ತು ಸಂಬಂಧವನ್ನು ಪರಿಶೀಲಿಸುವ ಹಾಗಿದೆ. ವಯೋವೃದ್ಧ ಕಾಲ್ಡ್‌ವೆಲ್ ತನ್ನ 'A Comparative study of the South Indian Languages' ಗ್ರಂಥದಿಂದ (೧೮೫೬) ತುಂಬಾ ಪ್ರಸಿದ್ಧಿಗೆ ಬಂದಿದ್ದರು. ಕಿಟೆಲ್ ಆ ಕ್ಷೇತ್ರದಲ್ಲಿ ಪ್ರವೇಶಿಸಿ ಬರೆಯ ತೊಡಗಿದ್ದು ೧೮೭೩ ರಿಂದ ಎಂದರೆ ತನ್ನ ೪೦ನೆಯ ವಯಸ್ಸಿನಲ್ಲಿ. ಮುಂದೆ ಎರಡೇ ವರ್ಷಗಳಲ್ಲಿ ಕಾಲ್ಡ್‌ವೆಲ್‌ರ ಗ್ರಂಥದ ಎರಡನೆಯ ಆವೃತ್ತಿ ಹೊರಬಂದಿದ್ದಿತು. ಅಂದರೆ ಆ ಎರಡೇ ವರ್ಷಗಳಲ್ಲಿ ಕಿಟೆಲ್ ಬರೆದಿದ್ದ ಕೆಲವೇ ಲೇಖನಗಳಿಂದ ಅವರ ವಿದ್ವತ್ತಿನ ಆಳ ಮತ್ತು ವಿಮರ್ಶನ ವಿಚಕ್ಷಣತೆ ಕಾಲ್ಡ್‌ವೆಲ್‌ರಿಗೆ ವೇದ್ಯವಾಗಿದ್ದಿತು. ತನಗೆ ಸಂದೇಹ ಬಂದಾಗ ಕಿಟೆಲರಿಗೆ ಬರೆದು ಕೇಳುತ್ತಿದ್ದರು.

Mr. Kittel in a private communication with which he has favoured me regarding the word Dap.....

ಇನ್ನೊಂದೆಡೆ ತನ್ನ ಗ್ರಂಥದಲ್ಲಿ ಕಾಲ್ಡ್‌ವೆಲ್ "I have no doubt that Kittel is right in saying...."

ಕಿಟೆಲ್ '೧' ಈ ಸಂಖ್ಯಾವಾಚಿಯ ಬಗ್ಗೆ Indian Antiquary ಪತ್ರಿಕೆಯ ೧೮೭೪ರ ಸಂಚಿಕೆಯಲ್ಲಿ ಒಂದು ಲೇಖ ಬರೆದಿದ್ದರು. ಅದರ ಮರುವರ್ಷವೇ ಪ್ರಕಟವಾದ ತನ್ನ ಗ್ರಂಥದಲ್ಲಿ ಕಾಲ್ಡ್‌ವೆಲ್, ಅದರಲ್ಲಿ ಬಂದ ಒಂದು ಅಡಿ ಟಿಪ್ಪಣಿಯನ್ನು ಎತ್ತಿಕೊಂಡು ಉಲ್ಲೇಖಿಸಿದ್ದಾರೆ! ಆದರೂ ಕೆಲವೊಂದು ಅಭಿಪ್ರಾಯಗಳಿಗೆ ಕಾಲ್ಡ್‌ವೆಲ್ ಸೌಮ್ಯವಾಗಿ ತಮ್ಮ ಅಸಮ್ಮತಿಯನ್ನು ದಾಖಲಿಸಿದ್ದಾರೆ. ಇದೊಂದು ಉದಾಹರಣೆ:

Mr. Kittel derives 'Mundru' from 'Mu', but interprets 'mu' as meaning 'to advance' to grow, i.e. a further advance. This is ingeneous. But I cannot find any authority (P. 228, C.S.S.I.L)

## ೧೦. ಕಿಟೆಲರ ಸ್ವಯಂ ಶಬ್ದಸೃಷ್ಟಿ

ಕಿಟೆಲರ ಶಬ್ದಾಸಕ್ತಿಯ ಇನ್ನೊಂದು ಬಗೆಯೆಂದರೆ ತಾವೇ ಶಬ್ದಗಳನ್ನು ಸೃಷ್ಟಿಸುವುದು. ಇಂಥ ಸಂದರ್ಭ ಅವರಿಗೆ ಒದಗಿ ಬಂದದ್ದರ ಕಾರಣವೆಂದರೆ ಕ್ರೈಸ್ತ ಸಭೆಯ ಚರಿತ್ರೆಯಲ್ಲಿ (Church History) ಅನೇಕಾನೇಕ ವಿದೇಶೀ ಮೂಲದ ಅಂಕಿತನಾಮಗಳು, ಧಾರ್ಮಿಕ ಪದಗಳು ಬರುತ್ತವಾದ್ದರಿಂದ ಅವುಗಳನ್ನು ಕನ್ನಡದಲ್ಲಿ ಹೇಗೆ ರೂಪಾಂತರಿಸುವುದೆಂಬ ಸಮಸ್ಯೆ ಎದುರಾಯಿತು. ಪರಿಣಾಮವಾಗಿ ತಾವು ಸೃಷ್ಟಿಸಿದ ಇಂಥ ಶಬ್ದಗಳ ಬೃಹತ್ ಕೋಶವನ್ನು (೩೪ ಪುಟಗಳದ್ದು) ತಮ್ಮ 'ಕ್ರೈಸ್ತ ಸಭಾ ಚರಿತ್ರೆ'ಯ ಕೊನೆಯಲ್ಲಿ ಕೊಟ್ಟಿದ್ದಾರೆ.

ಹೀಗೆ ಕನ್ನಡ ರೂಪವನ್ನು ಮತ್ತು ಅದರ ಆಂಗ್ಲ (ಪಾಶ್ಚಾತ್ಯ) ರೂಪವನ್ನು ಕೊಡುವಾಗ, ತಾವು ಸೃಷ್ಟಿಸಿದ ಶಬ್ದದ ಅರ್ಥವನ್ನು 'ಅಂದರೆ' ಎಂಬ ಶಬ್ದ ಕಾಣಿಸಿ ವಿವರಿಸುತ್ತಾರೆ.

ಉದಾ: 'ಅಂದರ್ಸನ' (ಅಂದರೆ ಅಂದ್ರೆಯ ಸೂನು, Andrew's Son). Anderson ಎಂಬ ಮಿಶನರಿಯ ನಿಮಿತ್ತದಿಂದ ಈ ಶಬ್ದವು ರೂಪ ತಾಳಿತಷ್ಟೆ. ಇಂಗ್ಲಿಷ್‌ನಲ್ಲಿ ಆ ಶಬ್ದದ ವ್ಯುತ್ಪತ್ತಿಯನ್ನು ಕಿಟೆಲರು ಒದಗಿಸಿದ್ದು ಒಂದು ವಿಶೇಷ.

ಅವರು ಒದಗಿಸಿದ ಇನ್ನೊಂದು ವಿವರಣೆ "=" ಈ ಸಂಜ್ಞೆಯ ಮೂಲಕ ಬಂದಿದೆ. ಇದರರ್ಥ ತಾನು ಕೊಟ್ಟಿರುವ ಶಬ್ದದ ಜೊತೆಗೆ ಇನ್ನೂ ಒಂದು ರೂಪವನ್ನು ಕೊಡಬಹುದಾಗಿದೆ.

ಉದಾ: ಸೆಬಸ್ತಿಯಾನ (=ಸಪರ್ಯಮಾನ)

ಯಾಕೆ ಈ ಪ್ರತಿರೂಪ? ಕಾರಣವೆಂದರೆ St. Sebastian ಎಂಬುದನ್ನು ಸೆಬಸ್ತಿಯಾನ ಎಂದು ಪರಿವರ್ತಿಸುವಾಗ ಆ ಮೂಲ ಹೆಸರಿನ ಅರ್ಥ ಗೌರವಾನ್ವಿತ ಎಂದಿದೆಯಂತೆ. 'ಸಪರ್ಯಮಾನ'ವು ಸೆಬಸ್ತಿಯಾನ ಉಚ್ಚಾರದ ಹತ್ತಿರ ಹತ್ತಿರ ಇದ್ದುಕೊಂಡು 'ಗೌರವಾನ್ವಿತ' (=ಸಪರ್ಯಮಾನ) ಅರ್ಥವನ್ನೂ ಕೊಡುತ್ತದೆ. ಕಿಟೆಲರ ಕಲ್ಪಕತೆ ಇಂಥ ಅನೇಕ ಶಬ್ದಗಳಲ್ಲಿ ಕಂಡುಬರುತ್ತವೆ.

ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ತದ್ಭವರೂಪದಲ್ಲಿ ಹೇಳುತ್ತೇವೆ. ಆದರೆ ಪಾಶ್ಚಾತ್ಯ ಹೆಸರುಗಳನ್ನು ಇದ್ದುದಿದ್ದಂತೆ ಬರೆಯುತ್ತೇವೆ. ಇಜಿಪ್ಟ್, ಹ್ಯಾಮಿಲ್ಟನ್ ಇತ್ಯಾದಿ. ಕಿಟೆಲ್ ಇವುಗಳಿಗೂ ತದ್ಭವ ರೂಪವನ್ನು ಕೊಟ್ಟಿದ್ದಾರೆ.

Egypt= ಐಗುಪ್ತ; Hamilton= ಹಮಿಲ್ತನ; Pope =ಪಪ್ಪ (!) Hungary = ಹುಂಗರಿಯ; Anthony = ಅಂತೋನಿ.

Rationalist- ಇದೇನೂ ಅಂಕಿತನಾಮವಲ್ಲ. ಸಾರಾಸಾರ ವಿಚಾರವಾದಿ ಎಂದು ಅರ್ಥಾನುವಾದ ಮಾಡಬಹುದಿತ್ತು. ಆದರೆ ಆದದ್ದು ರಾತಿಯಾನಾಲಿಸ್ಟ್ ಎಂದು. Realist ಎನ್ನುವುದಕ್ಕೆ ವಾಸ್ತವವಾದಿ ಶಬ್ದ ಈಗ ಬಳಕೆಯಲ್ಲಿದೆಯಷ್ಟೆ. ಕಿಟೆಲ್

ಅನುವಾದಿಸಿದ್ದು ಹೀಗೆ: 'ಸ್ವಭಾವಪ್ರಮಾಣಿಕ'. ಈ ಮಾದರಿಯಲ್ಲಿ. Revolutionary- ಇದರ ರೂಪಾಂತರ ಪ್ರಜೋದ್ಬಂಧಕ (=Raising up the people). ಇಂಥ ಕೆಲವು ಶಬ್ದಾನುವಾದಗಳು ಅಸಹಜವೆನಿಸುತ್ತವೆ.

ಕೆಲವಂತೂ ಅರ್ಥಪೂರ್ಣವಾಗಿವೆ; ಸಮಂಜಸವೆನಿಸಿವೆ. Heretic ಗೆ 'ಪಾಷಂಡಿ' ಎನ್ನುವುದು ಸರಿಯಾದದ್ದೇ. ಈ ಹಿಂದೆ ಆ ಅರ್ಥದಲ್ಲಿ ಯಾರೂ ಕನ್ನಡದಲ್ಲಿ ಬಳಸಿದಂತಿಲ್ಲ. Piracyಗೆ ಈಗ ಹಡಗುಗಳ್ಳತನ ಎನ್ನುತ್ತೇವಷ್ಟೆ. ಅದನ್ನೇ ಕಿಟೆಲ್ ಸಂಸ್ಕೃತದಲ್ಲಿ 'ಸಮುದ್ರಚೌರ್ಯ' ಎಂದಿದ್ದಾರೆ. ನನಗೆ ಹೆಚ್ಚು ಖುಶಿಕೊಟ್ಟದ್ದು 'ಲಕ್ಷ್ಮಣಾವತಿ' ಎಂಬ ರೂಪ ಲಖನೌಗೆ ಬಂದದ್ದು.

ಕೆಲವುಗಳ ರೂಪಗಳು ನೇರವಾದ ಅರ್ಥವನ್ನು ಒಳಗೊಂಡಿರುತ್ತವೆ.

Laws of Celibacy – ಅವಿವಾಹಿತಾಜ್ಞೆ

Cripples' home – ಅಂಗಹೀನಾಶ್ರಯ

Asylum of Idiots – ಉನ್ಮತ್ತಾಶ್ರಯ

ಈ ಅನುವಾದದಲ್ಲಿ ವಿಚಿತ್ರವೆನಿಸುವ ಶಬ್ದಗುಚ್ಛಗಳೂ ಕೆಲವಿವೆ:

Hospital for Incurables-ಅಪ್ರಾಪ್ತಕ್ಷೇಮೌಷಧದಾಯಕ ಗೃಹ

Orthodox Man - ಪ್ರಮಾಣಾನುಗುಣ ವಿಶ್ವಾಸಿ!

Born in the Isle of Socotra - ದ್ವೀಪಸುಖತರಜ

Circular– ಎಂಬುದಕ್ಕೆ ಈಗ 'ಪರಿಪತ್ರ' ಎಂಬುದು ಬಳಕೆಯಲ್ಲಿದೆಯಷ್ಟೆ. ಆದರೆ ಕಿಟೆಲ್ ಹೇಳುವುದು; 'ಪರಿಕ್ರಮಣ ಸೂತ್ರ'. Blessing- ಪುಣ್ಯಾಹವಾಚನ. ಶಬ್ದಶಃ ಅರ್ಥವು ಸರಿಯೇ. ಆದರೆ ಈಗ ಹಿಂದೂಗಳಲ್ಲಿ ಅದರ ಬಳಕೆಯಾಗುತ್ತಿರುವುದು, ಒಂದು ವಿಶಿಷ್ಟ ಸಂದರ್ಭದಲ್ಲಿ.

ಅಂತೂ ಕಿಟೆಲರು ತಮ್ಮ ಸಂಸ್ಕೃತ ಭಾಷಾ ಪರಿಣತಿಯನ್ನು ಪೂರ್ತಿಯಾಗಿ ಬಳಸಿಕೊಂಡಿದ್ದಾರೆ. ಆ ಶಬ್ದಸೃಷ್ಟಿಯಲ್ಲಿ ಕೆಲವು ವಿನೂತನ ರೀತಿಯವಾಗಿವೆ. ಇನ್ನು ಕೆಲವು ಸಮರ್ಪಕವಾಗಿ ತೋರುತ್ತವೆ. ಕೆಲವು ಮಾತ್ರ ವಿಕೃತಗೊಂಡಿವೆ. ಏನಿದ್ದರೂ ಎರಡು ಸಾವಿರದಷ್ಟು ಶಬ್ದಗಳನ್ನು ಸಂದರ್ಭಕ್ಕೆ ಹೊಂದುವಂತೆ ಸೃಷ್ಟಿಸಿದ್ದುದು ಅದ್ಭುತವಾದ ಪ್ರಕಲ್ಪವೇ ಸೈ. ಅವರು ತೋರಿದ ಸೃಜನಶೀಲತೆ ಮೆಚ್ಚುವಂಥದ್ದು.

## ೧೧. ಕನ್ನಡ-ಇಂಗ್ಲಿಷ್ ನಿಘಂಟು

ಒಂದು ಭಾಷೆಯ ಜೀವಾಳ ಅದರ ಶಬ್ದಸಂಪತ್ತಿನಲ್ಲಿ ಇರುತ್ತದೆ. ಗದ್ಯಪದ್ಯಗಳಲ್ಲಿಯ ಅವರ ಪ್ರಯೋಗದಿಂದ, ನುಡಿಗಟ್ಟುಗಳಿಂದ ನಮಗೆ ಬದುಕಿನ ಸಾರವೇ ಕರಗತವಾಗುವುದು. ಶಬ್ದಗಳ ವ್ಯಂಜಕಗುಣವನ್ನು ಅರಿತಾಗಲೇ ಕಾವ್ಯದ ರಸಾಸ್ವಾದವನ್ನು ಗ್ರಹಿಸಬಹುದು. ಹೀಗೆ ಕನ್ನಡ ಶಬ್ದ ಸಂಪದದ ಜೀವಾಳವನ್ನು ಆತ್ಮಸಾತ್ ಮಾಡಿಕೊಂಡವರೆಂದು ಕುಮಾರವ್ಯಾಸ, ಮುದ್ದಣ, ಗೋವಿಂದ ಪೈ, ಕವಿ ಬೇಂದ್ರೆ ಈ ಕೆಲವರನ್ನು ಹೆಸರಿಸಬಹುದು. ಕಿಟೆಲರೂ ಹೌದು. ಇತರರು ತಮ್ಮ ಕೃತಿಗಳಲ್ಲಿ ಆ ಗುಣವಿಶೇಷವನ್ನು ತೋರ್ಪಡಿಸಿದ್ದರೆ ಕಿಟೆಲರು ಕನ್ನಡ ಶಬ್ದಪರ್ವತಕ್ಕೇನೆ ತೆಕ್ಕೆ ಹಾಕಿದರು.

ಕನ್ನಡಕ್ಕಾಗಿ ಒಂದು ಕೋಶವನ್ನು ತಯಾರಿಸಬೇಕು ಮತ್ತು ಆ ಕೆಲಸವನ್ನು ಕಿಟೆಲರಿಗೆ ಒಪ್ಪಿಸಬೇಕು ಎಂಬ ಕಲ್ಪನೆ ಮೊದಲು ಯಾರಲ್ಲಿ ಮೂಡಿತು? ಬಾಸೆಲ್ ಮಿಶನ್ನಿನವರೇ ಆದ ಗುಂಡರ್ಟ್ ಮಲೆಯಾಳೀ ಭಾಷೆಗೆಂದು ಕೋಶವನ್ನು ತಯಾರಿಸಿದ್ದರಷ್ಟೆ. ಕನ್ನಡಕ್ಕೂ ಅಂಥದೊಂದು ಕೋಶ ಬೇಕು ಎಂದು ಮೊದಲಿಗೆ ಯೋಚಿಸಿದವರು-ಮೈವ್‌ಗ್ಲಿಂಗ್. ಅದಕ್ಕೆ ದನಿಗೂಡಿಸಿದವರು ಈ ಗುಂಡರ್ಟರು!

ಇದಕ್ಕೊಂದು ವಿಶೇಷವಾದ ಹಿನ್ನೆಲೆ ಇದೆ. ಮಿಶನರಿಗಳ ಮತಪ್ರಚಾರದ ನೇರ ಸಾಧನಗಳೆಂದರೆ ಪ್ರವಚನ, ಸಂಭಾಷಣೆ ಮತ್ತು ಪುಸ್ತಕ ಪ್ರಕಟನೆ. ಮೊದಲಿನ ಎರಡು ಸಾಧನೆಗಳೇ ಮುಖ್ಯವೆಂದು ತಿಳಿಯಲಾಗುತ್ತಿತ್ತು. ಮತ್ತು ಕಿಟೆಲ್ ಈ ಕಾರ್ಯರಂಗದಲ್ಲಿ 'ಪ್ರಯೋಜನಕ್ಕೆ ಬಾರದವರು' ಎಂದು ಬಾಸೆಲ್ ಕಮಿಟಿಯವರು, ಅವರ ಸಹೋದ್ಯೋಗಿಗಳೂ ಹಾಗೆ ತಿಳಿದಿದ್ದರು. ಸ್ವತಃ ಕಿಟೆಲರಿಗೂ ಹಾಗೆಂದು ಅನಿಸುತ್ತಿತ್ತು! ಬುದ್ಧಿ, ಭಾವನೆ ಇವರೆಡರ ಹೊಂದಾಣಿಕೆ ಎಲ್ಲರಿಗೂ ಸಾಧ್ಯವಾಗದೇನೊ. ಪ್ರಖರವಾದ ಮೇಧಾಶಕ್ತಿ ಮತ್ತು ಶಾಸ್ತ್ರೀಯ ಮನೋಧರ್ಮವೇ ಮೇಲ್ವಾಯ್ದು ಬಂದು, ಕಿಟೆಲರು ಇಲ್ಲಿಗೆ ಬಂದ ಮೊದಲ ಏಳು ವರ್ಷ ಈ ಸಂದಿಗ್ಧದಲ್ಲಿ ಕಳೆದಾದ ಮೇಲೆ (೧೮೫೩-೧೮೬೦) ಕಿಟೆಲರನ್ನು ಮಂಗಳೂರಲ್ಲಿಯ ಮುದ್ರಣಾಲಯದಲ್ಲಿ ಗ್ರಂಥೋದ್ಯಮಕ್ಕೆಂದು ನೇಮಿಸಲಾಯಿತು- ಮೈವ್‌ಗ್ಲಿಂಗ್‌ರ ಸೂಚನೆಯ ಮೇರೆಗೆ. ಆ ಕೆಲಸ ಮಾಡಲು ಮೈವ್‌ಗ್ಲಿಂಗ್‌ರ ಅನಂತರ ಬೇರೆ ಯಾರೂ ಯೋಗ್ಯರಿರಲೇ ಇಲ್ಲ. ರೋಗಿ ಬಯಸಿದ್ದು ಒಂದಾದರೆ; ವೈದ್ಯ ಹೇಳಿದ್ದೂ ಅದೇ, ಎಂಬಂತೆ ಕಿಟೆಲರಿಗೆ ಆ ಕೆಲಸ ಒಗ್ಗಿತು. ಜೊತೆಗೆ ಅವರಿಗೆ ಇಷ್ಟವೆನಿಸಿದ್ದ ಕನ್ನಡ ಭಾಷೆ, ಸಾಹಿತ್ಯಗಳ ಅಭ್ಯಾಸವನ್ನು ಕೈಕೊಂಡು, ಆಗಿನ ಕಾಲದ ದೇಶೀಯರಿಗೂ ಇರದಷ್ಟು ಆಳವಾದ ಹಾಗೂ ಹೆಚ್ಚಿನ ವ್ಯಾಪ್ತಿಯುಳ್ಳ ಪರಿಣತಿಯನ್ನು ಪಡೆದರು. ವಿಶೇಷತಃ ಭಾಷಾವಿಷಯಕವಾದ ಅವರ ಪ್ರಗಲ್ಭತೆ ಗುಂಡರ್ಟ್ ಮತ್ತು ಮೈವ್‌ಗ್ಲಿಂಗ್‌ರಿಗೆ ಮನದಟ್ಟಾಗಿದ್ದಿತು.

ಅಕಡೆಮಿಕ್ ದೃಷ್ಟಿಕೋಣ ಇದ್ದವರೂ, ಮಲೆಯಾಳೀ ಭಾಷೆಯ ವ್ಯುತ್ಪತ್ತಿ ಕೋಶವನ್ನು ತಯಾರಿಸಿದವರೂ ಆದ ಈ ಗುಂಡರ್ಟ್‌ರಿಗೆ ಕನ್ನಡದ ಅನೇಕ ಶಬ್ದಗಳ

ವ್ಯುತ್ಪತ್ತಿಯನ್ನು ಹೇಳಬಹುದಾದ ಒಂದು ನೂರು ಪುಟಗಳ ಕೋಶ ತಯಾರಿಸಿದರಾದೀತು ಎಂದಷ್ಟೇ ಅನಿಸಿತ್ತು.

ಈ ನಿಟ್ಟಿನಲ್ಲಿ ಗುಂಡರ್ಟ್ 'ಪೆರ್ಬುಲಿ' ಎಂಬ ಕನ್ನಡ ಶಬ್ದವನ್ನು ದೃಷ್ಟಾಂತವಾಗಿ ಕೊಟ್ಟಿದ್ದಾರೆ. ಇದನ್ನು ಪೆರ್ + ಪುಲಿ ಎಂದು ಮೇಲು ನೋಟಕ್ಕೆ ಹೇಳಬಹುದು. ಆದರೆ ಅದು ತಪ್ಪು. ಪೂರ್ವಪದವು ಮೂಲತಃ ಪಿರ್ ಇದ್ದು, 'ಇ' ಕಾರದ ಅವೆಷ್ಟೋ ಶಬ್ದಗಳು ಎ ಕಾರಕ್ಕೆ ಹಳಗನ್ನಡದಲ್ಲಿ ತಿರುಗುತ್ತವೆ. ಆದ್ದರಿಂದ ಪಿರ್+ಪುಲಿ – ಪೆರ್+ಪುಲಿ – ಹೆರ್+ಬುಲಿ– ಹೆಬ್ಬುಲಿ ಎಂಬ ರೀತಿಯಲ್ಲಿ ಶಬ್ದಗಳ ವ್ಯುತ್ಪತ್ತಿ ಸಿದ್ಧಮಾಡಿ ತೋರಿಸಬೇಕು–ಎಂದಿದ್ದಾರೆ. ಅವರು, ಆಗ ಜರ್ಮನಿಯಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದ ಮೈವ್‌ಗ್ಲಿಂಗ್‌ರಿಗೆ ಬರೆದ ಪತ್ರದಲ್ಲಿ (೧೮೭೯)–

I agree with Kittel's book project. A dictionary on radical roots would be useful. It seems to me more effective to put together related word groups. It could well be recommended in a document of about 100 pages giving the radical....

ಎಂದು ಬರೆದಿದ್ದರು. ಕಿಟೆಲ್ ಕೋಶದ ಅಸ್ಪಷ್ಟ ಹೊಳಹು ಇಲ್ಲಿಂದಲೇ ಆರಂಭವಾಗುತ್ತದೆ. ಮುಂದೆ ೧೮೮೨ರಲ್ಲಿ ಪೂರ್ಣ ಸ್ವರೂಪದ ಕನ್ನಡ ಕೋಶವು ಸಿದ್ಧವಾಗುವುದರ ಅಗತ್ಯವನ್ನು ಅವರು ಮೈವ್‌ಗ್ಲಿಂಗ್‌ರಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದ್ದರು. ಅದನ್ನು ಮಾಡಲು ಬಾಸೆಲ್ ಮಿಶನ್ನಿನಲ್ಲಿ ಕಿಟೆಲ್ ಬಿಟ್ಟರೆ ಬೇರೆ ಯಾರೂ ಇಲ್ಲ ಎಂದೂ ಹೇಳಿದ್ದರು. ಆದರೂ–

Kittel has already become a little bit old and might have breakdown. Anyway he might start preparing the work and find others to help in collecting..... ಎಂಬ ಕುಂಟು ಪಂಕ್ತಿಯನ್ನೂ ಸೇರಿಸಿದ್ದರು! (ಆಗ ಕಿಟೆಲರಿಗೆ ೪೦ ವರ್ಷ ಮಾತ್ರ).

ಕನ್ನಡದ ವಿವಿಧ ಶಬ್ದಗಳನ್ನು ಕೋಶ ರಚನೆಗಾಗಿ ಸಂಗ್ರಹಿಸುವ ಕೆಲಸವನ್ನು ಕಿಟೆಲ್ ೧೮೭೯ರಿಂದಲೇ ಆರಂಭಿಸಿರಬೇಕು. ಅದಕ್ಕಾಗಿ ಕಿಟೆಲರು ೧೮ ಹಳಗನ್ನಡ ಕಾವ್ಯಗಳನ್ನು, ಅಷ್ಟೇ ಸಂಖ್ಯೆಯ ನಡುಗನ್ನಡ ಕಾವ್ಯಗಳನ್ನೂ ಮತ್ತು ನಾಲ್ಕು ಮಾತ್ರ ಹೊಸಗನ್ನಡದ (೧೯ನೇ ಶತಮಾನದ್ದು) ಕೃತಿಗಳನ್ನು ಶಬ್ದಗಳಿಗಾಗಿ ಆಯ್ದುಕೊಂಡಿದ್ದರು. ಮಾತ್ರವಲ್ಲ, ಆಡುಮಾತಿನ, ಶಬ್ದಗಳನ್ನು ಹಾಗೂ ಜೊತೆಗೆ ಪ್ರಾದೇಶಿಕವಾದ ಕೆಲವು ಕೂಡುನುಡಿ, ಸಮಾಸಪದಗಳನ್ನು (ಕೈಗೆ ದೊರೆತಷ್ಟು) ಸೇರಿಸಿಕೊಂಡಿದ್ದಾರೆ. ವಿಶೇಷವಾಗಿ ಅವುಗಳ ಮೂಲವನ್ನು ಅರಸಿಕೊಂಡು ಹೋಗುವತ್ತ ಅವರು ತೀರಾ ಮೊದಲಿನಿಂದಲೂ ಗಮನವನ್ನು ಕೊಡುತ್ತಿದ್ದರು. ಎನ್ನುವುದಕ್ಕೆ ನಿದರ್ಶನವೆಂದರೆ, ಅವರು ಮದ್ರಾಸ ಸರಕಾರಕ್ಕಾಗಿ ರಚಿಸಿದ್ದ ಕನ್ನಡ ಮೂರನೆಯ ಪುಸ್ತಕದಲ್ಲಿ (೧೮೭೪) ಇಂಗ್ಲಿಷ್–ಜರ್ಮನ್–ಕನ್ನಡ ಶಬ್ದಗಳ ಸಾಮ್ಯದ ಪಟ್ಟಿಯನ್ನು

ಕೊಟ್ಟಿದ್ದಾರಲ್ಲವೆ. ಈ ಪ್ರಾಥಮಿಕ ಶಾಲಾಪುಸ್ತಕದಲ್ಲಿ ಅದರ ಅಗತ್ಯವೇನಿದ್ದಿತು? ಎಂದು ಕೇಳುವುದು ಬೇಡ – ಕಿಟೆಲರ ವಿಷಯದಲ್ಲಿ!

ಕ್ರಮೇಣ, ಕಿಟೆಲರು ಕನ್ನಡ ಕೋಶದ ಕೆಲಸ ಮಾಡಲಿದ್ದಾರೆ ಎಂದು ಪ್ರಚುರವಾಯಿತು. ಇಂಥದೊಂದು ಕೋಶ ಸರಕಾರೀ ವಲಯದಲ್ಲಿಯೂ ಉಪಯುಕ್ತ ಎಂದು ಭಾವಿಸಿದ ಕೆಲವು ಬ್ರಿಟಿಶ್ ಅಧಿಕಾರಿಗಳು ಸಹ ಈ ಯೋಜನೆಯಲ್ಲಿ ಆಸ್ಥೆ ವಹಿಸುವಂತೆ ಮಾಡಿದವರು ಮ್ಯೆವ್‌ಗ್ಲಿಂಗ್. ಕಾರಣವೆಂದರೆ ಮತ ಪ್ರಚಾರದ ಕೆಲಸವನ್ನು ಬಹುಕಾಲದವರೆಗೆ ಬದಿಗಿಡುವುದಾದರೆ ಬಾಸೆಲ್ ಮಿಶನ್ ಎಷ್ಟರ ಮಟ್ಟಿಗೆ ಕಿಟೆಲರನ್ನು ಆರ್ಥಿಕವಾಗಿ ಪೋಷಿಸಲು ಸಾಧ್ಯ? ಬ್ರಿಟಿಶ್ ಸರಕಾರವು ಅವರ ತಿಂಗಳ ವೆಚ್ಚವನ್ನು ನೋಡಿಕೊಳ್ಳಬಹುದಲ್ಲ? ಎಂಬುದಾಗಿ ಯೋಚಿಸಿ ಅವರು ಎಲಿಯೆಟ್, ಯೂಲ್, ಬರ್ನೆಲ್ ಮುಂತಾದವರೊಡನೆ, ಸರಕಾರವನ್ನು ಹೇಗೆ ಒಲಿಸಬೇಕೆಂಬ ಬಗ್ಗೆ ಪತ್ರವ್ಯವಹಾರಕ್ಕೆ ತೊಡಗಿದರು. ವಿಶೇಷತಃ ಯೂಲ್ (ಹಾಬ್‌ಸನ್-ಜಾಬ್‌ಸನ್ ಕೋಶದ ಕರ್ತೃ), ಲಂಡನ್ನಿನಲ್ಲಿದ್ದ 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ' ಅವರಿಗೆ ಶಿಫಾರಸು ಮಾಡಿದುದು ಈಚೆಗೆ ಬೆಳಕಿಗೆ ಬಂದಿದೆ. 'ಬ್ರಿಟಿಶ್ ಸರಕಾರವು ಹಾಗೆ ಎಂದೂ ಹಣ ಕೊಡುವುದಿಲ್ಲ; ಅದಕ್ಕೆ ಪ್ರತಿಯಾಗಿ ಇಂತಿಷ್ಟು ಪ್ರತಿಗಳನ್ನು ಕೊಡುತ್ತೇವೆ– ಎಂದು ಹೇಳಿದ್ದಾದರೆ ಕಿಟೆಲರಿಗೆ ಮಾಸಾಶನ ಕೊಡಲು ಸರಕಾರವು ಒಪ್ಪಬಹುದು' ಎಂಬ ಸೂಚನೆಯೂ ತೇಲಿ ಬಂತು. ಆಗ ಮ್ಯೆವ್‌ಗ್ಲಿಂಗ್ ಬಾಸೆಲ್ ಮಿಶನ್ ಮತ್ತು ಬ್ರಿಟಿಶ್ ಸರಕಾರ–ಇವೆರಡರ ಮಧ್ಯೆ ಸೂತ್ರಧಾರನ ಕೆಲಸ ಮಾಡಿದರು.

ಹೀಗಾಗಿ ಬ್ರಿಟಿಶ್ ಸರಕಾರವು ೧,೦೦೦ ಪೌಂಡುಗಳನ್ನು ಬಾಸೆಲ್ ಮಿಶನ್ನಿಗೆ ಕೊಡಬೇಕು; ಇದಕ್ಕೆ ಪ್ರತಿಯಾಗಿ ಮುದ್ರಣಗೊಂಡ ಪುಸ್ತಕದ ೭೦೦ ಪ್ರತಿಗಳನ್ನು ಪುಕ್ಕಟೆಯಾಗಿ ಕೊಡಬೇಕು ಎಂದು ನಿರ್ಧಾರವಾಯಿತು. ಮತ್ತು ಕಿಟೆಲ್ ಮೂರು ವರ್ಷಗಳಲ್ಲಿ ಮುಗಿಸಬೇಕು ಎಂದೂ ಹೇಳಲಾಯಿತು. (ಆ ಹಣವನ್ನಾದರೂ ಮೈಸೂರು, ಮುಂಬಯಿ, ಮದ್ರಾಸ್ ಮತ್ತು ಹೈದರಾಬಾದಿ ನಲ್ಲಿಯ ಸರಕಾರಗಳ ಬೊಕ್ಕಸಗಳಿಂದ ವಸೂಲು ಮಾಡಿ, ಮುಂದೆ ಆ ಆ ಪ್ರಮಾಣದಲ್ಲಿ ೭೦೦ ಪ್ರತಿಗಳನ್ನು ಹಂಚಲಾಯಿತು) ಅಂತೂ ಕಿಟೆಲರಿಗೆ ಸಲ್ಲಬೇಕಾದ ಹಣದಲ್ಲಿ ಲಂಡನ್ನಿನ ಕೇಂದ್ರ ಸರಕಾರವು ಮುಕ್ಕಾಲುವಾಸಿ ಹಣವನ್ನು ಪೌಂಡುಗಳ ರೂಪದಲ್ಲಿ ಸಲ್ಲಿಸಿತೆಂಬುದು ನಿಜ. ಆದರೆ ಭಾರತದಲ್ಲೇ ಇದ್ದ ಕಿಟೆಲ್ಲರ ಸಂಬಳವೆಂದು ರೂ. ೩೨೫ರಂತೆ ಪ್ರತಿ ತಿಂಗಳು ಮೈಸೂರು ಸರಕಾರದಿಂದ ಪಡೆಯಲಾಯಿತು.

ಈ ಅವಧಿಯಲ್ಲಿ ಬರೆದ ತನ್ನೊಂದು ತ್ರೈಮಾಸಿಕ ವರದಿಯಲ್ಲಿ ಕಿಟೆಲ್ ಕನ್ನಡ ಶಬ್ದ ಸಂಗ್ರಹದ ತನ್ನ ಉದ್ದೇಶವೇನೆಂಬುದನ್ನು ಹೀಗೆ ವಿವರಿಸಿದ್ದಾರೆ. ಆ ಸೀಮಿತ ಉದ್ದೇಶ ಇಂತಿದೆ:

ಅ) ಮಿಶನರಿಗಳ ಕೆಲಸಕ್ಕೆ (ಪ್ರವಚನ, ಲೇಖನಾದಿ) ಉಪಯೋಗವಾಗಬೇಕು. ಅವರು ಕನ್ನಡದ ಸೂಕ್ತ ಶಬ್ದವನ್ನು ಬಳಸುವಂತಾಗಬೇಕು.

ಆ) ಕನ್ನಡದ ಗ್ರಾಂಥಿಕ ಹಾಗೂ ಆಡುನುಡಿಯ ಎರಡೂ ಸ್ವರೂಪಗಳನ್ನು ಕನ್ನಡಿಗರಿಗೆ ತಿಳಿಯಪಡಿಸಬೇಕು. ಅದಕ್ಕಾಗಿ ಪಡೆನುಡಿಗಳನ್ನು ಸೇರಿಸಬೇಕು.

ಇ) ಕನ್ನಡ ಭಾಷೆಯ ನುಡಿಗಟ್ಟನ್ನು ಮಿಶನರಿಗಳು ತಿಳಿದಿರಬೇಕು. ಕ್ರೈಸ್ತ ವಿಚಾರಗಳನ್ನು ಬರೆಯುವುದಕ್ಕೆ ಅದರಿಂದ ನೆರವಾಗುತ್ತದೆ.

ಈ) ಇಂಗ್ಲಿಷ್ ಅಧಿಕಾರಿಗಳೂ, ಅದರಂತೆ ಇಂಗ್ಲಿಷ್ ಕಲಿತ ದೇಶೀಯರೂ ಇದರ ಪ್ರಯೋಜನ ಪಡೆಯುವಂತಾಗಬೇಕು.

ಈ ಕಾರಣದಿಂದ, ಗುಂಡರ್ಟ್ ಮುಂತಾದ ಹಿರಿಯರು ಸೂಚಿಸಿದ್ದಂತೆ ಕಿಟೆಲ್ ಹತ್ತಾರು ಜನರ ಸಹಾಯವನ್ನು ಶಬ್ದ ಸಂಗ್ರಹ ಮತ್ತು ಅರ್ಥ ವಿವರಣೆಗಾಗಿ ಪಡೆದಿದ್ದರು. ಕೋಶದ ಪೀಠಿಕೆಯಲ್ಲಿ ಅಂಥ ಒಬ್ಬಿಬ್ಬರು ದೇಶೀಯರ ಹೆಸರನ್ನು ಮಾತ್ರ (ಉದಾ.ಗೆ ವಸ್ತ್ರದ ಶಿವಲಿಂಗಪ್ಪ) ಹೇಳಿದ್ದಾರೆ. ಅವರ ತ್ರೈಮಾಸಿಕ ವರದಿಗಳಲ್ಲಿ ದಾಖಲಾದ ಪ್ರಕಾರ ಸಂಸ್ಕೃತ ಮತ್ತು ಹಳಗನ್ನಡ ಕಾವ್ಯಗಳಲ್ಲಿ ಬಂದ ಶಬ್ದಗಳಿಗೆ ಇಬ್ಬರು ಸಹಾಯಕರನ್ನು, ತಮಿಳು, ತೆಲುಗು ಭಾಷಾ ಶಬ್ದಗಳಿಗಾಗಿ ಇಬ್ಬರನ್ನು ಗೊತ್ತುಪಡಿಸಿಕೊಂಡಿದ್ದರು. ಕೃಷಿ, ವಿವಿಧ ವೃತ್ತಿಗಳು, ವೈದ್ಯಕೀಯ, ಆಭರಣಗಳು, ಆಹಾರ ಪದಾರ್ಥಗಳು-ಹೀಗೆ ರೂಢಿಯಲ್ಲಿಲ್ಲದ ವಿಶಿಷ್ಟ ಪದಗಳನ್ನು ಹೆಕ್ಕಿಕೊಂಡು, ಅರ್ಥ ತಿಳಿಯಲು ಅನೇಕರನ್ನು ಸಂಪರ್ಕಿಸಿದ್ದರೆಂಬ ಅಂಶ ಆ ವರದಿಗಳಿಂದ ತಿಳಿದು ಬರುತ್ತದೆ.

ಆರಂಭದ ಪ್ರತೋದಕರಿಗೆ ಆ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ಏಳೆಂಟು ನೂರು ಪುಟಗಳ, ಒಂದು ಸ್ಟ್ಯಾಂಡರ್ಡ್ ಶಬ್ದಕೋಶ ಸಿದ್ಧವಾದರೆ ಸಾಕು ಎಂದಿದ್ದಿತೇನೊ. ಆದದ್ದೇನು? ಮೂರು ವರ್ಷಗಳ ಬದಲಿಗೆ ೧೫ ವರ್ಷಗಳೇ ಹಿಡಿದವು. ಕೋಶವು ೧೭೦೦ ಪುಟಗಳಷ್ಟು ವಿಸ್ತಾರವನ್ನು ಪಡೆಯಿತು.

ಈ ಕೋಶದ ಕೆಲಸವನ್ನು ಕಿಟೆಲರಿಗೆ ಒಪ್ಪಿಸಲಾಗಿದೆ-ಎಂಬ ಸುದ್ದಿಯೇ ಆಗಿನ ವಿದ್ವಾಂಸ ವಲಯದಲ್ಲಿ ಸಂತೋಷವನ್ನುಂಟು ಮಾಡಿತು; ಕಿಟೆಲ್ ಮಾಡ್ತಾರಲ್ಲವೆ; ಹ್ಞಾ! ಅಂದ ಮೇಲೆ ಕೇಳುವುದೇನಿದೆ? ಎ.ಸಿ. ಬರ್ನೆಲ್ ಅವರಂತೂ ಒಂದು ಹೆಜ್ಜೆ ಮುಂದೆ ಹೋದರು. ತಂಜಾವೂರಿನಿಂದ ಅವರು ೩-೯-೧೮೭೭ ರಂದು ಕಿಟೆಲರಿಗೆ ಈ ರೀತಿ ಪತ್ರ ಬರೆದರು:

I am delighted to hear that the Kannada dictionary is in hand. I shall be glad to contribute Rs. 1,500 annually for 1877-78 and shall pay it quarterly through your Mangalore office. Next year if I am alive I will do what more can be done.

ಬರ್ನೆಲ್ ಮದ್ರಾಸ ಪ್ರಾಂತದಲ್ಲಿ ನ್ಯಾಯಾಧೀಶರಾಗಿದ್ದವರು. ಮಂಗಳೂರಲ್ಲಿಯೂ ಕೆಲಕಾಲ ಇದ್ದಾಗ ಕಿಟೆಲರ ಪರಿಚಯವಾಗಿದ್ದಿತು. ತಮಗೆ ನೇರವಾಗಿ ಏನೂ ಸಂಬಂಧವಿರದ ಈ ಕನ್ನಡ ಕೆಲಸಕ್ಕಾಗಿ ಅಪ್ರಾರ್ಥಿತ ಆರ್ಥಿಕ ಸಹಾಯವನ್ನು

ನೀಡುವಷ್ಟು ಉದಾರಭಾವವನ್ನು ತೋರಿದ ಬರ್ನೆಲ್ ಬಗ್ಗೆ ನಿಜಕ್ಕೂ ನಾವು ಅಭಿಮಾನ ಪಡಬೇಕು.

ಆ ಮುಂದೆ ಕಿಟೆಲರು ಶಬ್ದ ಸಂಗ್ರಹ, ಅವುಗಳ ಪ್ರಯೋಗ ವಾಕ್ಯಗಳು, ಮೂಲರೂಪ, ಜ್ಞಾತಿಶಬ್ದಗಳು ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು. ಆ ಕಾಲದ ಬಾಸೆಲ್ ಮಿಶನ್ನಿನ ವಾರ್ಷಿಕ ವರದಿಗಳಲ್ಲಿ "ಬ್ರದರ್ ಕಿಟೆಲ್ ತಮ್ಮ ಸಾಹಿತ್ಯಿಕ ಕೆಲಸಗಳಲ್ಲಿ ಎಂದಿನಂತೆ ತೊಡಗಿದ್ದಾರೆ" ಎಂಬ ಧರತಿಯ ಮಾತುಗಳೇ ಕಂಡುಬರುತ್ತವೆ. ಕೋಶ ರಚನೆಯ ಈ ಕೆಲಸ ಹೆಚ್ಚಾಗಿ ಮಡಿಕೇರಿಯಲ್ಲಿ ನಡೆಯಿತೆಂಬುದನ್ನು ನೆನೆದಿರಬೇಕು.

ಈ ನಡುವೆ ಬ್ರಿಟಿಶ್ ಸರಕಾರದಿಂದ ವಿಶೇಷತಃ ಲಂಡನ್ನಿನಲ್ಲಿದ್ದ Secretary of State for India ಇವರಿಂದ ಒಂದು ಮಹತ್ತರವಾದ ಸೂಚನೆ ಬಂದಿತು. ಉತ್ತರ ಕರ್ನಾಟಕದ ಕನ್ನಡ ಭಾಷೆಗೂ ತುಂಗಭದ್ರೆಯ ಕೆಳಗಿರುವವರ (ಮೈಸೂರು ಸಂಸ್ಥಾನ) ಭಾಷೆಗೂ ತುಂಬಾ ಭೇದವಿದೆ. ಉತ್ತರ ಕರ್ನಾಟಕದವರ ಭಾಷೆಗೆ ಸೂಕ್ತ ಪ್ರಾಧಾನ್ಯವನ್ನು ಕೊಡಬೇಕು; ಎಂದರೆ ಅಲ್ಲಿಯ ಶಬ್ದಗಳನ್ನು ಪ್ರತ್ಯೇಕವಾಗಿ ಕಾಣಿಸಬೇಕು ಎಂಬುದು ಅದರ ಆಶಯ. ಕಿಟೆಲರು (ದಿ.೨೫-೨-೧೮೭೯) ಸುದೀರ್ಘವಾಗಿ ಉತ್ತರ ಕೊಟ್ಟದ್ದು, ಅದರಲ್ಲಿಯ ಎರಡು ಅಂಶಗಳನ್ನು ಇಲ್ಲಿ ಕಾಣಿಸುವೆ:

The form of government, laws, institution, traditions and customs are nearly identical throughout the whole Canarese country, and the Canarese language, excepting style and the use of borrowed terms, is everywhere substantially the same.

As English dictionaries do not deal of the specialities of local dialects but of common English, so a Canarese dictionary has first of all to introuduce the Canarese language (as such)... However, I shall not forget to advance any important points of difference... I trust the work will prove to be an accurate representation of what Canarese is to the South as well as to the north of Tungabhadra.

ಮುಂದುವರಿದು ಕಿಟೆಲ್ ಕನ್ನಡ ಸಾಹಿತ್ಯದ ಬಗ್ಗೆ ಹೀಗೆ ಹೇಳಿದ್ದಾರೆ:

To Canerese literature, in the proper sense of the word, i.e. the standard works of the language of the old, middle and later period of the whole country, northern and southern Canerese is not applicable. It is a well established fact that the difference from grammatical affixes, difference in their talents and style, will become apparent from the copious

quotations from those given in my work. Rejecting subjectivism in whatever shape. in this respect follows the plan adopted by the authors of the well-known St. Petersburg's Sanskrit dictionary.

ಕನ್ನಡ ಭಾಷೆಯನ್ನು ಹೀಗೆ ಸಮಷ್ಟಿ ಸ್ವರೂಪದಲ್ಲಿ ಕಂಡವರಲ್ಲಿ ಕಿಟೆಲರೇ ಮೊದಲಿಗರು. ಅಲ್ಲದೆ ಕಿಟೆಲ್ ಅದರ ಸ್ವರೂಪದ ಬಗ್ಗೆ ತಾನು ಈ ಕೆಳಗಿನ ಆಶಯಗಳನ್ನು ಇಟ್ಟುಕೊಂಡಿರುವುದಾಗಿ ಅದೇ ಪತ್ರದಲ್ಲಿ ಕಾಣಿಸಿದ್ದಾರೆ.

It aims to supply the want of a standard work on the Canerese language and literature, on the etymology of Canerese and of Dravida, and on the question as to how much the Sanskrit language has been enriched by Dravida. It is quite impossible to put aside any one of these considerations in the preparation of a Canarese dictionary.

ಕೋಶ ರಚನೆಗಾಗಿ ವಿವಿಧ ಮೂಲಗಳಿಂದ ಹಾಗೂ ನಾನಾ ರೀತಿಯಲ್ಲಿ ಶಬ್ದಗಳನ್ನು ಮೊದಲಿಗೆ ಹಸ್ತಪ್ರತಿಗಳನ್ನು ಓದಿ ಆಯ್ದುಕೊಳ್ಳುವ ಅವುಗಳನ್ನು ಬರೆದು ತೆಗೆಯುವ ಕೆಲಸವೇ ಕಷ್ಟದಾಯಕವಾದದ್ದು. ಆಮೇಲೆ ಅವುಗಳ ಪ್ರಯೋಗ ವಾಕ್ಯಗಳನ್ನು ಪರಿಶೀಲಿಸಿ ಮತ್ತು ಜ್ಞಾತಿ ಶಬ್ದಗಳನ್ನು ಗುರುತಿಸಿ ಶಬ್ದಗಳಿಗೆ ಅರ್ಥಹಚ್ಚುವುದು. ಈ ಎಲ್ಲ ಕೆಲಸ ಒಂದು ತಪಶ್ಚರ್ಯೆಯಂತೆ ಅಖಂಡವಾಗಿ ೧೦–೧೨ ವರ್ಷ ನಡೆಯಿತು. ಸುಮಾರು ಮೂವತ್ತು ಸಾವಿರ ಶಬ್ದಗಳಿಗೆ ಅರ್ಥ ಹಚ್ಚುವ ಕೆಲಸ ಒಬ್ಬನೇ ವ್ಯಕ್ತಿಯಿಂದ! ಈ ಮೊದಲು ಹೇಳಿದ ಅಪ್ರತಿಮ ಮೇಧಾಶಕ್ತಿ ಹಾಗೂ ಅದ್ಭುತ ಸ್ಮರಣ ಶಕ್ತಿ ಇವು ಕೋಶರಚನೆಯಲ್ಲಿ ನೆರೆನಿಂತವು.

ಕೋಶದ ತಳಪಾಯದ ಕೆಲಸ ೧೮೭೭–೧೮೮೩ರ ವರೆಗೆ ಎಸ್ಲಿಂಜೆನ್ ಎಂಬಲ್ಲಿ ನಡೆಯಿತು. ಕೋಶದ ಕರಡು ಎನ್ನಬಹುದಾದ ಪ್ರತಿ ಅಲ್ಲಿಯೇ ತಯಾರಾಯಿತು. ಆದರೆ ಅವೆಷ್ಟೋ ಸಂದೇಹಗಳು; ಅರ್ಥವಾಗದ ಶಬ್ದಗಳು! ಹೀಗಾಗಿ ಕಿಟೆಲ್ ೧೮೮೪ರಲ್ಲಿ ಮಂಗಳೂರಿಗೆ ಮರಳಿದರು. ಸಾವಿರಾರು ಶಬ್ದಗಳನ್ನು ಹೀಗೆ ತೆಕ್ಕೆಗೆ ತೆಗೆದುಕೊಂಡಾಗ ತಮಗಾದ ಒದ್ದಾಟವನ್ನು ಒಂದು ಪತ್ರದಲ್ಲಿ ಹೀಗೆ ತೋಡಿಕೊಂಡಿದ್ದಾರೆ;

Caste with their specific expressions; professions and words concerning ceremonies, feasts, games of all kinds, proverbs, house and Kitchen tools, history, zoology, botany etc; also giving the exact meaning of words... throwing light on the hidden meaning of words, describing common and local use of words, ...identifying homonyms..." ಮುಂತಾದ ಶಬ್ದಗಳ ಅನ್ವೇಷಣೆ, ಅರ್ಥೈಸುವಿಕೆ ಆಗಬೇಕು. ಇದರ ಮೇಲಿಂದ ಕಿಟೆಲ್ ಶಬ್ದ ಮತ್ತು ಅರ್ಥಕ್ಕಾಗಿ ಪ್ರಯೋಗ ವಾಕ್ಯಗಳಿಗಾಗಿ ಎಷ್ಟೊಂದು ಆಳವಾಗಿ ಯೋಚಿಸಿದ್ದರೆಂಬುದರ ಕಲ್ಪನೆ ಬಂದೀತು.

ಕೋಶದ ಹಸ್ತಪ್ರತಿ ಸಿದ್ಧವಾಗಿ ಮುದ್ರಣಕ್ಕೆ ಕೊಟ್ಟಾಗಿದೆ. ಆ ಘಟ್ಟದಲ್ಲಿ ಕಿಟೆಲರು ಮಿಶನ್ನಿನ ಪ್ರೆಸ್ಸಿನ ಮುಖಾಂತರ ಒಂದು ಸಾರ್ವಜನಿಕ ಪರಿಪತ್ರವನ್ನು ಮುದ್ರಿಸಿ ಅಲ್ಲಲ್ಲಿಗೆ ಕಳಿಸಿದರು. ವಿಷಯ? ಪ್ರಾಚೀನ ನಿಘಂಟುಗಳ ಹಸ್ತಪ್ರತಿ ಯಾರದಾದರೂ ಬಳಿ ಇದ್ದರೆ ಕೊಡಬೇಕು ಎಂದು!

ಪ್ರೆಸ್ಸಿನವರು ಅದರಲ್ಲಿ ಕಿಟೆಲರು ಈ ಮುನ್ನ ಸಂಶೋಧಿಸಿದ ಎರಡು ಹಳಗನ್ನಡ ಕಾವ್ಯಗಳನ್ನು ಪ್ರಸ್ತಾಪಿದ್ದರು. "ಪ್ರಕೃತ ಕನ್ನಡ ಕೋಶವನ್ನು ಸಿದ್ಧಪಡಿಸುತ್ತಿದ್ದಾರೆ. ಆ ಕೆಲಸ ಪರಿಪೂರ್ಣವಾಗುವುದಕ್ಕೆಂದು ಈ ನಿಘಂಟುಗಳು ಬೇಕು. ಅವರಿಗೆ ಬೇಕಿದ್ದ ಹಳಗನ್ನಡ ಕೋಶಗಳಿವು:

ಅ) ಈಗಾಗಲೆ ಅವರಲ್ಲಿ ಕೆಲವು ಶಬ್ದಕೋಶಗಳಿವೆ. ಆದರೆ ಇದ್ದದ್ದು ಒಂದೊಂದೇ ಪ್ರತಿ. ಅದರದ್ದೇ ಬೇರೆ ಪ್ರತಿಯಲ್ಲಿ ಹೆಚ್ಚು ಶಬ್ದಗಳಿರಬಹುದು. ತಪ್ಪುಗಳು ಇಲ್ಲದಿರಬಹುದು. ಆದ್ದರಿಂದ ಆ ಶಬ್ದಕೋಶಗಳ ಬೇರೆ ಪ್ರತಿಗಳು ಬೇಕು.

ಆ) ೨–೩ ಪ್ರತಿಗಳಿರುವ ಹಸ್ತಪ್ರತಿಗಳೂ ಇವೆ. ಆದರೆ ಅವು ದೋಷಪೂರಿತ. ಬೇರೆ ಪ್ರತಿಗಳು ಸಿಕ್ಕಲ್ಲಿ ತಿದ್ದಿಕೊಳ್ಳುವುದಕ್ಕೂ ಹೆಚ್ಚಿನ ಶಬ್ದಗಳು ಇದ್ದರೆ ಅವನ್ನು ಸೇರಿಸುವುದಕ್ಕೂ ಅನುಕೂಲವಾಗುತ್ತದೆ.

ಇ) ಮೇಲೆ ಹೇಳಿದವುಗಳಲ್ಲದೆ ಬೇರೆ ಕೋಶಗಳಿದ್ದರೂ ಅವನ್ನು ಉಪಯೋಗಿಸಿ ಕೊಳ್ಳಲಾಗುವುದು. ಅವು ಮೂಲೆಯಲ್ಲಿ ಇದ್ದುಬಿಟ್ಟರೆ ನಶಿಸಿಹೋಗಬಹುದು".

ಈ ಪರಿಪತ್ರಕ್ಕೆ ಡಬ್ಲ್ಯೂ. ಸಿಕೆಮೀರ ಎಂಬವರ ಸಹಿ ಇದ್ದರೂ ಕಿಟೆಲರೇ ಹೇಳಿ ಬರೆಯಿಸಿದ್ದೆಂಬುದು ಸ್ಪಷ್ಟ. ಅವರಿಗೆ ಶುದ್ಧ ಶಬ್ದಗಳ ಶೋಧ, ಅವುಗಳ ನಿಖರವಾದ ಅರ್ಥದ ಬಗ್ಗೆ ಎಷ್ಟು ಗಮನ ಕೊಟ್ಟರೂ ಸಾಲದಾಗಿತ್ತು.

ಕಿಟೆಲರಿಗೆ ಸಹಾಯಕರೇನೋ ಇದ್ದರು. ಆದರೆ ಅವರಲ್ಲಿ ಕೆಲವರದು ಕನ್ನಡದಲ್ಲಿ ಅರ್ಧಮರ್ಧ ಜ್ಞಾನ. ಅವರು ಮಾಡಿದ್ದ ತಪ್ಪುಗಳನ್ನು ಸರಿಮಾಡುವ ತಲೆಬೇನೆಯನ್ನು ಕಿಟೆಲರು ಮುದ್ರಣ ನಡೆದಿದ್ದಾಗಲೂ ಸಹಿಸಬೇಕಾದ ಪರಿಸ್ಥಿತಿ ಇದ್ದಿತು. ಶಬ್ದಗಳ ನಮೂದುಗಳನ್ನು ನೋಡುವುದು, ತಿದ್ದುವುದು ಈ ಕೆಲಸಗಳಿಂದಾಗಿ ಅವರ ಕಣ್ಣಿನ ನರಗಳು ನಿಶ್ಶಕ್ತಗೊಂಡು ದೃಷ್ಟಿ ಮಂದವಾಯಿತು. ಅಂಥದರಲ್ಲಿಯೂ ಗ್ರಂಥದ ೬೦% ಭಾಗದ ಅಚ್ಚಿನ ಕರಡುಗಳನ್ನು ತಿದ್ದಿದರು. ಆ ಮುದ್ರಣವೆಂದರೆ ೧೨ ಪ್ಪೊಂಟಿನ ಮೊಳೆಗಳನ್ನೆ ಉದ್ದಕ್ಕೂ ಜೋಡಿಸುವ ಮಾಮೂಲಿಯ ಕೆಲಸವಾಗಿರಲಿಲ್ಲ. ಅದಕ್ಕಿಂತ ಸಣ್ಣ ಗಾತ್ರದ ಮೊಳೆಗಳನ್ನು ಹಿಡಿದು ವಿವಿಧ ಗಾತ್ರದ ಮೊಳೆಗಳನ್ನು, ಸಂಕ್ಷೇಪಾಕ್ಷರ ಸಂಜ್ಞೆಗಳನ್ನು ಅವಗ್ರಹ ಚಿಹ್ನೆ ಮುಂತಾದವನ್ನು ಈ ಕೋಶಕ್ಕೆಂದೇ ಬಾಸೆಲ್ ಮಿಶನ್ನಿನವರು ಸಿದ್ಧಪಡಿಸಿದ್ದರು. ಸಾಲದ್ದಕ್ಕೆ ಮುದ್ರಣ ಕಾರ್ಯವು ಮಂಗಳೂರಿನಲ್ಲಿ; ಕಿಟೆಲರಿದ್ದುದು ತಮ್ಮ ಊರಾದ ಟ್ಯೂಬಿಂಗೆನ್ನಿನಲ್ಲಿ. ಈ ತಾಪತ್ರಯಗಳೇನೆ ಇದ್ದರೂ ಕೋಶವನ್ನು ಪರಾಮರ್ಶಿಸಿದಾಗ ಸಾಮಾನ್ಯವಾಗಿ ದೋಷಗಳೇನೂ ತೋರುವುದಿಲ್ಲ. ಆದರೆ ಕಿಟೆಲರ ದೃಷ್ಟಿಮಾಂದ್ಯದ ಕಣ್ಣಿಗೇನೆ ಅಲ್ಲಲ್ಲಿ ಕಂಡಿವೆ. ಒಂದೆಡೆ ಕೇವಲ ಒಂದು

ಪೂರ್ಣ ವಿರಾಮ ಚಿಹ್ನೆ ಕೊಡದ್ದಕ್ಕಾಗಿ ಪರಿತಪಿಸಿದ್ದಾರೆ. ಪ್ರಸ್ತಾವನೆಯಲ್ಲಿ ಹೀಗೆ ಅದನ್ನು ಕಾಣಿಸಿದ್ದಾರೆ:

ವಿಸ್ಫುಲಿಂಗ: A spark of fire 2. A sort of poison (bp. 53,52)

ಈ ಶಬ್ದ ಬರುತ್ತದೆ. ಈ ಶಬ್ದಕ್ಕೆ ೨ ಅರ್ಥಗಳಿದ್ದು, bp ಎಂದರೆ ಬಸವ ಪುರಾಣದ ೫೩ ಮತ್ತು ೫೨ನೆಯ ಪದ್ಯಗಳಲ್ಲಿ ಅದು ಪ್ರಯೋಗವಾಗಿದೆ ಎಂದು ಈಗಿದ್ದಂತೆ ಬೋಧೆಯಾಗುತ್ತದೆ. ಎಂದರೆ ಆ ಎರಡೂ ಅರ್ಥಗಳಲ್ಲಿ ಬಸವಪುರಾಣದಲ್ಲಿ ಬಂದಿದೆ ಎಂದು ಹೇಳಬೇಕಾಗುತ್ತದೆ. ಅದು ನಿಜವಲ್ಲ. ಎರಡನೆಯ ಅರ್ಥದಲ್ಲಿ ಮಾತ್ರ ಬ.ಪು.ದಲ್ಲಿ ಪ್ರಯೋಗವಾಗಿದೆ. ಈ ತಪ್ಪು ಅಭಿಪ್ರಾಯಕ್ಕೆ ಕಾರಣ, ಮೊದಲಿನ ಅರ್ಥದ fire ಶಬ್ದವಾದೊಡನೆ ಅಲ್ಲಿ ಒಂದು ಪೂರ್ಣ ವಿರಾಮ ಚಿಹ್ನೆ ಕೊಡುವುದು ಉಳಿಯಿತೆಂದು ಕಿಟೆಲರಿಗೆ ಬೇಸರ. ಇಷ್ಟೊಂದು ಸೂಕ್ಷ್ಮ ಗಮನವಿತ್ತದ್ದರಿಂದಲೇ ಕೋಶವು ಪ್ರಾಮಾಣ್ಯವೆನಿಸಿತು.

ಕಿಟೆಲರು ಶಬ್ದವೊಂದನ್ನು ಯಾವ ಯಾವ ನಿಟ್ಟಿನಲ್ಲಿ ನಿರೀಕ್ಷಿಸಿ ವಿವರಗಳನ್ನು ಒದಗಿಸುತ್ತಿದ್ದರು–ಎಂಬುದನ್ನು ಅರಿಯಲೋಸುಗ 'ಕೆಯ್' ಎಂಬ ಶಬ್ದದ ಅಂಗಗಳ ಸಹಿತವಾಗಿ ಅಂಥ ವಿವರಗಳನ್ನು ಇಲ್ಲಿ ಕೊಟ್ಟಿದೆ.

(ಆಕರ: ಡಾ. ಕೆ. ಎಂ. ಮ್ಯಾಥ್ಯೂ ಅವರ 'ರೆ। ಎಫ್. ಕಿಟೆಲ್.)

೧. ಶಬ್ದ **ಕೆಯ್**

೨. ಧ್ವನಿಲಿಪಿ – Key (ಕೆಯ್)

೩. ಉಚ್ಚಾರಭೇದ – ಕೆಯ್ಯಿ, ಕೈ, ಕೈಯಿ,

೪. ಪ್ರಧಾನ ಅರ್ಥ – The hand

೫. ಇತರ ಶಬ್ದಾರ್ಥ – The fore-arm

೬. ಸಂಬಂಧಾರ್ಥಗಳು – An elephant's trunk- A key- The branch of a tree-Means- A staff-Intrumentality- A pole, Handiness- a Handle- Smallness.

೭. ಇತರ ಕೋಶಗಳ ಸಮಾನ ಶಬ್ದಗಳು.

– ಕರ, ಹಸ್ತ (ನಾನಾರ್ಥ ರತ್ನಾಕರ)

– ತಳ, ತಲ – (ಕಬ್ಬಿಗರ ಕೈಪಿಡಿ, ಶಬ್ದಮಂಜರಿ)

೮. ಜ್ಞಾತಿ ಶಬ್ದಗಳು : ಕೈ – ತಮಿಳಿನಲ್ಲಿ

ಕೈ – ತುಳು

ಕಯ್ಯಿ – ಮಲೆಯಾಳಿ

ಚೆಯಿ, ಚೆಯ್ಯಿ – ತೆಲುಗು

೯. ಪ್ರಯೋಗಗಳು – ಹಳಗನ್ನಡ ನಿಘಂಟುಗಳಿಂದ
– ಎತ್ತಿದ ಕೆಯ್ಯೊಳ್ ಮುತ್ತಿದಂ (ಶಬ್ದಮಣಿದರ್ಪಣ)
– ಕೆಯ್ ಕಾಲ್ ಇಲ್ಲದವನು
– ಕೆಯ್ಯ ಕಾಲ ಎಲ್ವು (ಹಲಾಯುಧ)
– ಕೆಯ್ಯ ಕಜ್ಜಿ ಹಗೆಯ ಕೆಯ್ಯಲ್ಲಿ ಪಡಿದವನು (ಪುರಸ್ಕೃತ)
– ಆನೆಯ ಕೆಯ್ಯಿನ್ನ ಸುರಿಯುವ ಸೀಕರವು – (ನಾಚಿರಾಜೀಯ)
– ಕೈಯ್ಯ ಬೊಗಸೆ – (ನಾನಾರ್ಥ ರತ್ನಾಕರ)
– ಸುರಿಗೆ ಮೊದಲಾದುದು ಕೆಯ್ಯಿಂ ಬಿಡಲ್ ಬಾರದು
– ಆನೆಯ ಕೆಯ್ಯ ತುನ್ತುರ್ಬನಿ
– ಆನೆಯ ಕೆಯ್ (ಹಲಾಯುಧ)

೧೦. ಪ್ರಯೋಗ – ಹಳಗನ್ನಡ, ನಡುಗನ್ನಡ, ಕೃತಿಗಳಲ್ಲಿ : ಅಂಗೆಯ್, ಮುಂಗೆಯ್, ಮೇಗೆಯ್,
– ಮೊಣಕೈ, ಇತ್ಯಾದಿ.
– ಪಂಪ ರಾಮಾಯಣ, ಬಸವಪುರಾಣ, ದಾಸರ ಪದ, ರಾಜಶೇಖರ ವಿಳಾಸ, ಕುಮಾರವ್ಯಾಸ ಭಾರತಗಳಲ್ಲಿ.

೧೧. ಗಾದೆಮಾತು – ಕೆಯ್ ತೋರಿಸಿ ಅವಲಕ್ಷಣ ಅನ್ನಿಸಿಕೊಂಡ ಹಾಗೆ.

ಕಿಟೆಲರು ಅನುಸರಿಸಿದ ಈ ವಿಧಾನವು ಅವರ ಕಾಲಕ್ಕಂತೂ ಬೇರೆ ಭಾಷಾ ಕೋಶಗಳಲ್ಲಿ ಕಂಡು ಬಂದಿಲ್ಲ. 'ಕೆಯ್' ಇದರ ಪೂರ್ಣ ವಿವರಣೆಯುಳ್ಳ ನಮೂದನ್ನು ಅನುಬಂಧ (ಇ) ಯಲ್ಲಿ ಕೊಟ್ಟಿದೆ.

ಕಿಟೆಲರು ತಮ್ಮೆಲ್ಲ ಕ್ರತು ಶಕ್ತಿಯನ್ನು ಧಾರೆಯೆರೆದಿದ್ದ ಈ ಮಹಾನ್ ಕೋಶದ ಮುದ್ರಣವು ಕೊನೆಗೊಮ್ಮೆ ಮುಗಿಯಿತು. ಇನ್ನು ಅದರ ಬೈಂಡಿಂಗ್ ಆಗಬೇಕು. ಮುದ್ರಣಕ್ಕೆ ಬ್ರಿಟಿಶ್ ಸರಕಾರದವರು ನೆರವಾಗಿದ್ದರಷ್ಟೆ. ಮಿಶನ್ನಿನವರು ಆ ಬೃಹದ್ಗಾತ್ರದ ಗ್ರಂಥದ ಬೈಂಡಿಂಗ್ ವೆಚ್ಚದ ವಿವರಗಳನ್ನು ಕೊಟ್ಟು ೫೬ ಪೌಂಡುಗಳಷ್ಟು ಹಣವನ್ನು ಯಾಚಿಸಿದರು. ಅದಕ್ಕೆ ಬ್ರಿಟಿಶ್ ಸರಕಾರದವರು ಕೊಟ್ಟ ಉತ್ತರ (ದಿ. ೧೧–೩–೧೮೯೬) ಅವರ ವ್ಯಾವಹಾರಿಕ ಬುದ್ಧಿಗೆ ಕನ್ನಡಿ ಹಿಡಿದಂತಿದೆ:

With regard to your application for extra payment on account of binding.... the claim is inadmissible as it was certainly not comtemplated by this office at the time of making the grant that the copies would be supplied unbound.

ಕಿಟೆಲರು ಕನ್ನಡ ಕಾವ್ಯಗಳಲ್ಲಿ ಬಂದ ಸಂಸ್ಕೃತ ಮೂಲದ ಹಾಗೂ ಅದರಿಂದ ಸಾಧಿತ ಪದಗಳನ್ನು ಸಣ್ಣ ಅಕ್ಷರದಲ್ಲಿ ಮುದ್ರಿಸಿದ್ದಾರೆ. ಆದರೆ ಎಷ್ಟೋ ಸಂಸ್ಕೃತ ಶಬ್ದಗಳು ಮೂಲಾರ್ಥವನ್ನು ಕಳೆದುಕೊಂಡು ಬೇರೆ ಅರ್ಥವನ್ನು ಕೊಡುತ್ತವೆ. ಉದಾ:

ಚಿಂತಾ (ಸಂಸ್ಕೃತದಲ್ಲಿ ವಿಚಾರ: ಕನ್ನಡದಲ್ಲಿ ಚಿಂತೆ, ಕಳವಳ). ಅನುಮಾನ (ಸಂಸ್ಕೃತದಲ್ಲಿ ತರ್ಕ: ಒಂದು ಅಲಂಕಾರ ಕನ್ನಡದಲ್ಲಿ; ಸಂಶಯ). ಕಿಟೆಲರು ಸಂಸ್ಕೃತ ಕೋಶಗಳಲ್ಲಿ ಕಂಡುಬರುವ ಮೂಲಾರ್ಥವನ್ನು ಹೇಳದೆ, ಕನ್ನಡದಲ್ಲಿಯ ಅರ್ಥವನ್ನಷ್ಟೆ ಕೊಡುವಲ್ಲಿ ಅವರ ಕನ್ನಡ ಪ್ರಜ್ಞೆ ಎಷ್ಟು ಸೂಕ್ಷ್ಮವಾಗಿತ್ತೆಂಬುದು ಕಂಡು ಬರುವುದು. ಇಂಥ ಶಬ್ದಾರ್ಥ ಪರಿವರ್ತನೆಯು ಅವರು ಆಯ್ದ ಹಿಂದೀ ಶಬ್ದಗಳಿಗೂ ಅನ್ವಯಿಸುತ್ತದೆ.

ಕ್ರಿ. ಶ. ೧೮೯೪ರಲ್ಲಿ ಗ್ರಂಥವು ಹೊರಬಂದೊಡನೆ ಅದಕ್ಕೆ ತಡವಿಲ್ಲದೆ ಅಖಿಲ ಭಾರತ ಮನ್ನಣೆ ದೊರಕಿತು. ಗ್ರಂಥವಿಮರ್ಶೆಯ ರೂಪದಲ್ಲಿಯೂ ಹೊಗಳಿಕೆಯ ಮೇಲೆ ಹೊಗಳಿಕೆ. ಇವು ಕೆಲವು ಗಮನಿಸುವಂತಿವೆ:

It will remain a monumentum aere perennius of a noble life devoted to incessant earnest labour.

- Hultsch (Archaeologist)

Every page of it and its preface bear witness to the constant care, earnestness and thoroghness. It would have been difficult to find any one more competent to undertake this task.

- J.F. Fleet.

ಕನ್ನಡಿಗರೇ ಆದ ವಿದ್ವಾಂಸ ಡಿ.ಎಲ್. ನರಸಿಂಹಾಚಾರ್ಯರು ಹೇಳಿದ ಮಾತು ಹೆಚ್ಚು ಮನೋಜ್ಞವಾಗಿದೆ:

ಈ ನಿಘಂಟು ಇವತ್ತಿಗೂ ಕನ್ನಡ ಭಾಷೆಯ ನಿಷ್ಕೃಷ್ಟವಾದ ಪ್ರಮಾಣಭೂತವಾದ ಮಹಾ ಶಬ್ದಕೋಶವಾಗಿದೆ. ಇಷ್ಟು ಖಚಿತವೂ ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭರತಖಂಡದ ಯಾವ ದೇಶಭಾಷೆಗೂ ಇಲ್ಲವೇನೊ.

ಅಂತೂ ಈ ಕೋಶದ ಮೂಲಕ ಕನ್ನಡ ಭಾಷೆಯ ಸ್ಥಾನಮಾನವೂ ಮೇಲಕ್ಕೇರಿತಲ್ಲವೆ.

ಈ ಸಂದರ್ಭದಲ್ಲಿ ಈರ್ವರ ಹೆಸರನ್ನು ತಪ್ಪದೇ ನಾವು ನೆನೆಯತಕ್ಕುದು. ಒಬ್ಬರಂತೂ ಕಿಟೆಲರಿಗೆ ಹಿರಿಯಣ್ಣನಂತಿದ್ದ ಮೋಗ್ಲಿಂಗ್. ಕನ್ನಡದ ಬಗ್ಗೆ ಅವರಿಗೆ ಅನೂಹ್ಯವಾದ ಪ್ರೀತ್ಯಾಭಿಮಾನ ಇದ್ದಿತು. ಇನ್ನೊಬ್ಬರು, ಕನ್ನಡಿಗರನ್ನು ಬಹುವಾಗಿ ಮೆಚ್ಚಿದ್ದ ನಿವೃತ್ತ ಬ್ರಿಟಿಶ್ ಅಧಿಕಾರಿ ವಾಲ್ಟರ್ ಎಲಿಯೆಟ್. ಕನ್ನಡಕ್ಕೆ ಶಬ್ದಕೋಶವೊಂದು ಬೇಕು ಮತ್ತು ಆ ಕೆಲಸವನ್ನು ಕಿಟೆಲರಿಗೇ ಒಪ್ಪಿಸಬೇಕು ಎಂದು ಬಲವಾಗಿ ಪ್ರತಿಪಾದಿಸಿದವರು. ಮೋಗ್ಲಿಂಗ್ ಜಾಸೆಲ್ ಮಿಶನ್ನಿನವರನ್ನೂ, ಎಲಿಯಟ್ ಬ್ರಿಟಿಶ್ ಸರಕಾರವನ್ನೂ ಈ ವಿಷಯವಾಗಿ ಒಪ್ಪಿಸುವುದಕ್ಕೆ ಮನಸ್ಸೋ ಪ್ರಯತ್ನಿಸಿದವರು (೧೮೭೭). ಕಿಟೆಲ್ ತನ್ನ ಕೋಶದ ಕೆಲಸವನ್ನು ಮೋಗ್ಲಿಂಗರ ಮನೆಯಲ್ಲಿಯೇ ಇದ್ದುಕೊಂಡು ಪ್ರಾರಂಭಿಸಿದ್ದರು. ಮುಂದಿನ ದಶಕದಲ್ಲಿ ಅವರಿಬ್ಬರೂ ತೀರಿಹೋದದ್ದು

ರಿಂದ, ಕೋಶವು ೧೮೯೪ರಲ್ಲಿ ಹೊರಬಂದಾಗ ಅದನ್ನು ಕಂಡು ಸಂಭ್ರಮಗೊಳ್ಳುವ ಭಾಗ್ಯ ತಪ್ಪಿಹೋಯಿತು.

ಇವರಿಬ್ಬರ ಜೊತೆಗೆ ಬರ್ಗೆಸ್ ಮತ್ತು ಯೂಲ್ – ಈ ಪ್ರಾಚ್ಯವಿದ್ಯಾವಿಶಾರದ ಅಧಿಕಾರಿಗಳನ್ನೂ ಹೆಸರಿಸಬೇಕು. ಪ್ರಾಸಂಗಿಕವಾಗಿ ಹೆಸರಿಸಬೇಕಾದ ಇನ್ನೊಬ್ಬ ವ್ಯಕ್ತಿ – ಅದೇ ಬಾಸೆಲ್ ಮಿಶನ್ನಿಗೆ ಸಂಬಂಧಿಸಿದ ಡಾ. ಗುಂಡರ್ಟ್ (ಮರಣ ೧೮೯೩). ಅವರು ಕಿಟೆಲರ ಸಹೋದ್ಯೋಗಿ. ಇಂಥದೇ ಶಾಸ್ತ್ರೀಯ ರೀತಿಯ ಕೋಶವನ್ನು, ಅದೂ ಜ್ಞಾತಿಭಾಷೆಯಾದ ಮಲೆಯಾಳದಲ್ಲಿ ರಚಿಸಿದವರಲ್ಲವೆ. ತನ್ನ ಕೋಶದ ವಿಷಯವಾಗಿ ಗುಂಡರ್ಟ್‌ರೊಡನೆ ಕಿಟೆಲ್ ಹಲವು ಬಾರಿ ಚರ್ಚಿಸಿದವರು. ಆದಾಗ್ಯೂ ಉಪೋದ್ಘಾತದಲ್ಲಿ ಕಿಟೆಲ್ ಅವರನ್ನು ನೆನೆದಿಲ್ಲದ್ದು ಅಚ್ಚರಿಯ ಸಂಗತಿ.

## ಕೋಶದ ಫಲಶ್ರುತಿ

ಕಿಟೆಲ್ ಮರಣಾನಂತರ ಅನೇಕ ಹಳಗನ್ನಡ ಕಾವ್ಯಗಳ ಹಸ್ತಪ್ರತಿ ದೊರಕಿದವು. ಅವುಗಳಲ್ಲಿಯ ಶಬ್ದಗಳನ್ನು ಸೇರಿಸಿ ಎಂ. ಮರಿಯಪ್ಪಭಟ್ಟರು ಮದ್ರಾಸ ವಿಶ್ವವಿದ್ಯಾನಿಲಯದ ವತಿಯಿಂದ ವಿಸ್ತಾರಿತ ಆವೃತ್ತಿಯನ್ನು ಹೊರತಂದಿದ್ದಾರೆ. ಅವರು ೭,೮೦೦ ಹೊಸ ಶಬ್ದಗಳನ್ನು ಸೇರಿಸಿ ಕಿಟೆಲ್ ಕ್ರಮದಲ್ಲಿಯೇ ವಿವರಣೆ ನೀಡಿದ್ದಾರೆ. ಆದರೆ ಮರಿಯಪ್ಪ ಭಟ್ಟರು ಪಂಪಭಾರತ, ಆದಿಪುರಾಣ ಮತ್ತು ವಡ್ಡಾರಾಧನೆ –ಮುಂತಾದ ಕೆಲವು ಕಾವ್ಯಗಳಿಂದಷ್ಟೇ ಹೊಸ ಶಬ್ದಗಳನ್ನು ಸೇರಿಸಿದ್ದಾರೆಂದು ಕಾಣುತ್ತದೆ. ರನ್ನ, ಪೊನ್ನ, ಜನ್ನ, ನೇಮಿಚಂದ್ರ, ಷಡಕ್ಷರಿ ಮೊದಲಾದವರಿಂದ ಶಬ್ದಗಳನ್ನು ಆಯ್ದಿಲ್ಲ. ವಚನ ಸಾಹಿತ್ಯದಲ್ಲಿ ಬಸವೇಶ್ವರ ಹಾಗೂ ಚನ್ನಬಸವೇಶ್ವರರ ಕೃತಿಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಮಹತ್ವದ್ದೆಂದರೆ ಅನುಪಿದ್ದಲ್ಲೆಲ್ಲ ತುಳು ಜ್ಞಾತಿ ಶಬ್ದಗಳನ್ನು ಸೇರಿಸಿದ್ದುದು. ಈ ಕನ್ನಡ ಕಾವ್ಯಗಳಲ್ಲಿ ಬಂದ ಸಂಸ್ಕೃತ ಶಬ್ದಗಳನ್ನು ಪೂರ್ಣತಃ ಕೈಬಿಟ್ಟಿದ್ದಾರೆ– ಹೇಗೂ ಸಂಸ್ಕೃತ ಕೋಶಗಳಲ್ಲಿ ಸುಲಭವಾಗಿ ಸಿಗುತ್ತವೆ ಎಂಬ ಕಾರಣದಿಂದ.

ಕ್ರಿ. ಶ. ೧೯೪೩ರಿಂದ ಆರಂಭಿಸಿ ಕನ್ನಡ ಸಾಹಿತ್ಯ ಪರಿಷತ್ತು ಬೃಹತ್ ಕನ್ನಡ–ಕನ್ನಡ ಕೋಶವನ್ನು ಸಿದ್ಧಪಡಿಸಿ ಈಚೆಗೆ ಹೊರತಂದಿದೆಯಷ್ಟೆ. ಅದರ ಸಂಪಾದಕ ಮಂಡಲಿಯ ವಿದ್ವಾಂಸರು, ಪ್ರಯೋಗ ವಾಕ್ಯಗಳು ಲಭ್ಯವಿಲ್ಲದಂಥ ಶಬ್ದಗಳ ಅರ್ಥವನ್ನು ಕಿಟೆಲರು ಹೇಳಿದ್ದಂತೆಯೇ ಸ್ವೀಕರಿಸಿದ್ದಾಗಿ ಹೇಳಿದ್ದಾರೆ. ಕಿಟೆಲ್ ಕೋಶದ ಪ್ರಾಮಾಣ್ಯತೆಯ ಮನ್ನಣೆಗೆ ಇದೊಂದು ನಿದರ್ಶನ.

ಕಿಟೆಲ್ ಕೋಶವು ದೋಷರಹಿತವೆಂದೇನೂ ಅಲ್ಲ. ಸ್ವತಹ ಕಿಟೆಲರಿಗೆ ಅಂಥ ಲೋಪ ದೋಷಗಳ ಅರಿವಿದ್ದಿತು. ಹಾಗೆಂದು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇಷ್ಟೇ ಅಲ್ಲ; ಕೋಶವು ಪ್ರಕಟವಾಗಿ ಹಲವು ವರ್ಷಗಳೇ ಸಂದ ಮೇಲೆ ಬಾಸೆಲ್ ಕಮಿಟಿಗೆ ಬರೆದ ಒಂದು ಪತ್ರದಲ್ಲಿ 'ಅನುಭವಾಮೃತ' ಕಾವ್ಯದ ಕೆಲವು ಶಬ್ದಗಳನ್ನು

ಸೇರಿಸುವುದು ಉಳಿದುಬಿಟ್ಟಿದೆ ಎಂದು ಸು. ೨೫೦ ಶಬ್ದಗಳ ಪಟ್ಟಿ ಕೊಟ್ಟಿದ್ದಾರೆ! ಈ ಬಗೆಯ ಅಭಾವವನ್ನು ಪ್ರಸ್ತಾವನೆಯಲ್ಲಿ ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ:

The Compiler entreats the public to look upon the present dictionary with an indulgent eye. He is aware of the many deficiencies, shortcommings and inelegancies it contains and has to confess that the longer he worked, the more he became aware of his incompetency to satisfy all the wishes of scholars.

ಮುಂದುವರಿದು ಕೋಶದ ಲೋಪ ಮತ್ತು ದೋಷಗಳಾದದ್ದರ ಹಿನ್ನೆಲೆಯನ್ನು ಈ ರೀತಿ ಕೊಟ್ಟಿದ್ದಾರೆ:

ಅ) ಅಕ್ಷರಿಕೆಯ ತಪ್ಪುಗಳು

ಆ) ಸಂಪಾದಕನ ಅರೆ–ತಿಳಿವಳಿಕೆ

ಇ) ಮೂಲ ಲೇಖಕರೇ ಮಾಡಿದ ತಪ್ಪುಗಳು

ಈ) ದೇಶೀ ಸಹಾಯಕರ ಶಬ್ದಾರ್ಥ ವಿಷಯಕ ಅಜ್ಞಾನ, ಮತ್ತು

ಉ) ಸಮಯದ ಅಭಾವ


ಕಿಟೆಲರ ಸವಿನಯತೆ, ಮತ್ತು ಪ್ರಾಮಾಣಿಕತೆಗೆ ಈ ಮಾತುಗಳು ಕನ್ನಡಿ ಹಿಡಿದಂತಿವೆ. ಇತ್ತ ಫ್ಲೀಟ್‌ರು ಕೋಶದ ವಿಮರ್ಶೆ ಮಾಡುವಾಗ, ಅದರಲ್ಲಿಯ cross references ತಲೆಬೇನೆ ತರುವಂತಿವೆ ಎಂಬ ಮಾತನ್ನು ಕಾಣಿಸಿದ್ದಾರೆ.

ಇತ್ತ ಕನ್ನಡಿಗ ವಿಮರ್ಶಕರಲ್ಲಿ ಆರ್. ರಘುನಾಥರಾಯರದ್ದು ಗಮನಿಸುವಂತಿದೆ. 'ಗಂಡ ಎಂಬುದಕ್ಕೆ ಕುತ್ತ ಎಂಬ ಅರ್ಥವೂ ಇದ್ದು ಅದನ್ನು ಕಿಟೆಲರು ಕೊಟ್ಟಿಲ್ಲ'. 'ಮಕ್ಕಳು ಎನ್ನುವಲ್ಲಿ ಅದು ಜಾತಿವಾಚಕವೂ ಆಗುವುದು. (ಒಕ್ಕಲು ಮಕ್ಕಳು)' ಅದನ್ನು ಕಿಟೆಲರು ಹೇಳಿಲ್ಲ–ಎಂದಿದ್ದಾರೆ. ಅಲ್ಲದೆ 'ಕೋಶವು ಗ್ರಾಮ್ಯ ಪದಗಳಿಂದ ತುಂಬಿ ಹೋಗಿದೆ' 'ಯಾವುದೇ ಶಾಸ್ತ್ರಾಭ್ಯಾಸಕ್ಕೆ ಅನುಕೂಲಿಸುವುದಿಲ್ಲ' ಎಂದುದಲ್ಲದೆ ಕೊನೆಯಲ್ಲಿ 'ಕಿಟೆಲ್ ಸಾಹೇಬರವರ ನಿಘಂಟುವಿನ ಸಹಾಯದಿಂದ ಕನ್ನಡದ ಸಾಧಾರಣ ಪದ್ಯಕ್ಕೂ ಅರ್ಥ ಮಾಡಲಿಕ್ಕಾಗುವುದಿಲ್ಲ ಎಂದು ಉದ್ಗರಿಸಿದ್ದಾರೆ. ಇದು ಮುಡುಕಿನ ನಿರ್ಣಯ ಎನ್ನುವುದು ಸ್ಪಷ್ಟ.*

---

* ಆರ್. ತಾತಾಚಾರ್ಯರು ತಮ್ಮ 'ಕಿತ್ತೀಳೆಯೂ (ಕಿಟೆಲ್!) ಕನ್ನಡವ್ವೋ' ಎಂಬ ಲೇಖನದಲ್ಲಿ ಇದೇ ರೀತಿಯಾಗಿ ಕಿಟೆಲ್ ಕೋಶವನ್ನು ಹೀಗಳೆದಿದ್ದಾರೆ. ತಿಳಿಯಬೇಕಾದ ಮಾತೆಂದರೆ ಕೋಶವು ಪ್ರಕಟವಾದ ಅಲ್ಪ ಕಾಲದಲ್ಲಿ ಇವೆರಡು ಲೇಖನಗಳು ಹೊರಬಂದವು. ಅವರಿಗೆ ಕೋಶವನ್ನು ಪೂರ್ಣವಾಗಿ ಪರಿಶೀಲಿಸಲು ಅವಕಾಶ ದೊರೆತಿರಲಿಕ್ಕಿಲ್ಲ. ಮೇಲಾಗಿ ಯಾವನೋ ಒಬ್ಬ ವಿದೇಶೀಯನ ಕೆಲಸವಿದು–ಎಂಬ ಪೂರ್ವಾಗ್ರಹವೂ ಕಾರಣವಾಗಿರಬೇಕು.

## ಗೋವಿಂದ ಪೈ ಅವರ ಕಿಟೆಲ್ ಕೋಶದ ಪ್ರತಿ



A

KANNADA-ENGLISH

DICTIONARY

BY

REV. F. KITTEL

P. G. E. M.

(2)

BANGALORE

BASEL MISSION BOOK & TRACT DEPOSITORY

1894

LONDON
LUZAC & Co.

BASEL
MISSIONSBUCHHANDLUNG

LEIPZIG
O. HARRASSOWITZ

# ಕಿಟ್ಟೆಲ್ ಅರ್ಥಕೋಶದ ಅಧ್ಯಯನ

[illegible]

a musquito, from a scratch with the nails, etc. (S. Mhr.).

ಗಾದಾರಿ gâdâri. — [illegible]. A N. applied to different plants of the order of Compositae, especially to Cyathocline lyrata Cass. (Z.). See [illegible].

ಗಾದಿ gâdi. A cushion, the seat of some eminent personage (C.; Mhr.; B. 5, 43. 55. 185).

ಗಾದಿಗೆ gâdigĕ. Tbh. of [illegible], q. v. ([illegible] Ct. II, 77).

ಗಾದು gâdu. Luxuriant growth of grass, shrubs, etc. (S. Mhr.).

ಗಾದೆ gâdĕ. Tbh. of ಗಾಥೆ. A saying, a proverb (C.). [illegible] (Prvs.). See [illegible]; Prvs. [illegible]. — ಗಾದೆ ಕಟ್ಟು dupl. (C.). — [illegible] (C.). [illegible] (or [illegible], Prv.).

ಗಾದೆಗಾರ gâde-gâra. A man familiar with proverbs. See [illegible].

[illegible]

[illegible]

[illegible] singer ([illegible] Sn. 135, o. r. [illegible]); a cuckoo; a dove, etc. ([illegible] 73); the Kanda n. tree ([illegible] Ct. I, 36). See Prv. s. [illegible].

ಗಾನ gâna. 2. Tbh. of ಗಹನ (Smd. 352, 361).

ಗಾನದೇವತೆ gâna-dêvatĕ. A deity presiding over vocal music (J. 21, 57).

ಗಾಂತ ga-anta. A term with final ga (Smd. 274, 305).

ಗಾಂಧರ್ವ gândharva. (fr. ಗಂಧರ್ವ). Belonging or relating to the Gandharvas. 2, the art of the Gandharvas: song, music and dance. See Bp. 6, 26; 8, 4.

ಗಾಂಧರ್ವಭವನ gândharva-bhavana. A beautiful edifice (My.); — a music-hall.

ಗಾಂಧರ್ವ ವಿವಾಹ gândharva-vivâha. = ಗಂಧರ್ವವಿವಾಹ. (My.).

[illegible] gândhâra. *The third of the seven primary notes of music or saptasvaras* (Mr. 76). 2, Candahar and its people.

[illegible] gândhâri. N. of the wife of Dhritarâshtra (Smd [illegible] 3). 2, N. of a plant ([illegible] Mr. 197, o. r. [illegible]). 3, = [illegible], q. v. 4, N. of a râga (My.).

ಗಾಬರ gâbara. = ಗಾಬರಿ. (My.).

ಗಾಬರಿ gâbari. Overcome by terror, grief, etc.; the state of being overcome by fear, etc. (C., Mhr., H. [illegible], B. 4, 60. 197; 5, 53).

ಗಾಬು gâbu. Fear, alarm (C.; Tu.; T. [illegible], to be confused, cf. [illegible] 1). [illegible] (C.).

[illegible] gâmi. Going, moving; approaching, attaining; *referring to, used as.*

ಗಾಂಪ gâmpa-ŋŋ. = [illegible]. A rustic, a simpleton; a vulgar or vile man ([illegible] 95, [illegible] 107, [illegible] Bhn. 31; Kâvy. III, 3, 12, [illegible] 4,

[illegible]

10; Sr. 1, 22; 4, 127; C.; Te. [illegible], a holder of [illegible], a tenant, inhabitant, a farmer, cultivator, a rustic).

ಗಾಂಪತನ gâmpatana. The condition or behaviour of a gâmpa ([illegible] Sm. 54; My.; Te. [illegible], the state of farmers, the rustic condition).

ಗಾಂಪು gâmpu. = [illegible]. Stupidity ([illegible] II, 24, V. [illegible] 54).

ಗಾಂಭೀರ್ಯ gâmbhîrya. (fr. ಗಂಭೀರ). Deepness; profundity of character, earnestness, sagacity. (B. 5, 226; My.).

ಗಾಯ gâya. ([illegible]). A hit, a bruise ([illegible] Bhn. 36); a wound ([illegible] Bhn. 51; [illegible] Sm. 115; C.; [illegible]; Te.; M., T. [illegible]; Mhr., H. [illegible], sharpness = [illegible], cutting; Te. [illegible], a hole; a wound; cf. [illegible]). See Bp. 61, 31; J. 7, 45; 12, 28. 19, 21; 14, 12. 18, 10. B. 2, 13. 26; 3, 109, 5, 40. 62. 161; Ct. I, 12; [illegible]. — [illegible]. To wound (Bhn. 8, 26, 57; J. 22, 6). — [illegible]. A common weed, the ash-coloured fleabane, Vernonia cinerea [illegible] (Z.). — [illegible]

[illegible]

[illegible]

ಗಾಯಕ gâyaka. Singing; a singer. See Smd. 296; Bp. 6, 17; 19, 38. 39. 59, 29. J. 7, 6.

ಗಾಯಕಿ gâyaki. A songstress (Urj. 7, after 11).

ಗಾಯತ್ರಿ gâyatri. A song. 2, *N. of a type of metres* ([illegible]; Mr. 302). 3, a vedic hymn composed in the gâyatri metre. 4, the gâyatri or vedic verse (Rigvêda III, 62, 10) repeated by every Brâhmana at his morning and evening devotions (Bp. 3, 63); the gâyatri verse personified as a goddess, the wife of Brahmâ and mother of the vêdas (J. 31, 73). 5, *the tree Acacia catechu* Willd.

ಗಾಯನ gâyana. Singing; song; *a singer.*

ಗಾಯನಗಾರ gâyana-gâra. A singer (My.).

[illegible] gâyani. A songstress (Abh. P. 3, 107).

ಗಾಯಿ gâyi. A cow (Mhr. [illegible]). — [illegible]. A beef butcher (My.). — [illegible]. A creeping plant, Boerhavia repens L. (Z.).

ಗಾರ gâra. Emitting or ejecting from the mouth, swallowing. See [illegible].

ಗಾರಡ gâraḍa. Tbh. of [illegible]. (My.; Te.).

ಗಾರಡಿ gâraḍi = [illegible] 2, [illegible], [illegible]. (My., Te.

ಗಾರಡಿಗ gâraḍiga. = [illegible], [illegible]. (Sr. 79; C.

ಗಾರಡಿಗಾರ gâraḍi-gâra. = [illegible] (My. [illegible] rare).

ಗಾರಣ gârana. (= [illegible]). (Tbh. of [illegible], accusing of unfaithfulness? or of [illegible]). Bearing tales, aspersing, calumniating ([illegible] Smd. II, Kk. 90, Mhr. [illegible], complaint against). See [illegible].

ಗಾರಣೆ gâraṇĕ. = [illegible]. — [illegible]. Sparks in the form of [illegible] (Râm. 5, [illegible], 77).

ಗಾರಿಗೆ gârigĕ. (= [illegible]?). A flat, circular cake made of wheaten flour (or rice flour) and jaggory, and fried in ghee or oil (Bp. 14, [illegible] V. 1, 80, C.; Tu.; Te. [illegible]). See Sr. 301, [illegible].

ಖ್ಯಾತನಾಮ ಎಂ. ಗೋವಿಂದ ಪೈಗಳು ಕಿಟೆಲ್ ಕೋಶವನ್ನು ಕಂಡ ಬಗೆಯೇ ಬೇರೆ. ಅವರು ಸ್ವಂತಕ್ಕೆ ಬಳಸುತ್ತಿದ್ದ ಕೋಶದ ಪ್ರತಿಯು ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿದೆ. ಅದರ ಪ್ರತಿಯೊಂದು ಪುಟದಲ್ಲಿಯೂ ನೇರಿಳೆ ಶಾಹಿಯಲ್ಲಿ ಕೆಳಗೆರೆ, ಬದಿಗೆರೆ, ಪ್ರಶ್ನಾರ್ಥಕ ಚಿಹ್ನೆ, ಶಬ್ದಕ್ಕೆ ಪ್ರತಿ ಶಬ್ದ, ಏನೆಲ್ಲ ಕಂಡು ಬರುತ್ತದೆ. ಅರ್ಥಾತ್ ಅವರು ಈ ಕೋಶವನ್ನು ಯಾವುದೊಂದು ಶಬ್ದದ ಅರ್ಥಕ್ಕಾಗಿ ನೋಡದೆ, ವೈಚಾರಿಕ ಗ್ರಂಥವೊಂದನ್ನು ಪರಿಶೀಲಿಸಿದ ರೀತಿಯಲ್ಲಿ ಗಮನಿಸಿದ್ದಾರೆ.

೧. ಮೊದಲಿಗೆ ಅವರು ಗುರುತಿಸಿದ ತಪ್ಪುಗಳನ್ನು ನೋಡೋಣ:

| **ಕೋಶದಲ್ಲಿ** | **ಪೈ ತಿದ್ದುಗೆ** |
|---|---|
| ಏಕಾಂಬ್ರನಾಥ | –ಇಲ್ಲಿ ಬ ಬೇಕಾಗಿರಲಿಲ್ಲ. |
| ಅಚ್ಚುಬೆಲ್ಲ ಅಚ್ಚಪ್ಪಗೆ ಸುಚ್ಚುಬೆಲ್ಲ ವೆಂಕಪ್ಪಗೆ ಮೂಡಲ್ ಇರ್ದ ಪರದೊಳ್.. | ...ನುಚ್ಚು ಬೆಲ್ಲ ನಚ್ಚಪ್ಪಗೆ ಇರಬೇಕು |
| ತಾ ರಾಮನೋ ವಲ್ಲಭಂ | ...ತಾರಾಮನೋವಲ್ಲಭಂ (ಬಿಡಿಸಿ ಅಲ್ಲ) |

೨. ಪೈಗಳು ಕೆಲವು ಸೇರ್ಪಡೆಗಳನ್ನೂ ಮಾಡಿದ್ದಾರೆ:

| **ಕೋಶದಲ್ಲಿ** | **ಪೈ ಸೇರ್ಪಡೆ** |
|---|---|
| ಕಾವಡಿ: ಮುಚ್ಚು | – ಇವು ಹಿಂದೀಯಲ್ಲಿಯೂ ಇವೆ. |
| ಕುಜಿಜೆ; ಪಡಿಗ | – ತುಳುವಿನಲ್ಲಿ ಗುಜ್ಜೆ ಮತ್ತು ಪಡ್ಡೆ |
| ತಲಬು | – ಪರ್ಶಿಯನ್‌ದಲ್ಲಿ ತಲ್ಬೀದನ್ |
| ತೆಜ[ದಿ] | – ಅರೆಬಿಕ್‌ದಲ್ಲಿ ತರಹ್ |
| ಹವ್ಯಾಸ (ಸಂಸ್ಕೃತ ಅಲ್ಲ) | – ಅರೆಬಿಕ್‌ದಲ್ಲಿ ಹವ್ವಸ್. |
| ಪಾಲುದಾರ | – ಪರ್ಶಿಯನ್‌ದಲ್ಲಿ ಪಾಲ್ದಾರ್ |

೩. ಕೋಶದಲ್ಲಿ ಕಿಟೆಲ್ ಕೊಡದಿದ್ದ ಹೆಚ್ಚಿನ ಅರ್ಥಗಳು:

| | |
|---|---|
| ಅಕ್ಷಿಗತ, detestable | – ಇನ್ನೊಂದು ಅರ್ಥ eyesore |
| ಕೆಂದು, to lean on | – ಇನ್ನೊಂದು ಅರ್ಥ to lie down |

ಪೈಗಳು ತೋರಿಸಿದ ಇನ್ನು ಕೆಲವು ಲೋಪ–ದೋಷಗಳು ಇಂತಿವೆ:

ಕೊನೆ; ಇದರ ಅರ್ಥ ನಮಗೆಲ್ಲ ಗೊತ್ತಿದ್ದ ಹಾಗೆ 'The end'. ಆದರೆ ಕಿಟೆಲ್ to thrive or to succeed ಎಂದು ಕೊಟ್ಟಿದ್ದಾರಲ್ಲ! ಮೇಲಾಗಿ 'ಗಿರಿಜಾಕಲ್ಯಾಣ'ದಲ್ಲಿ ಆ ಶಬ್ದ ಬಂದ ಸಂದರ್ಭದಿಂದ ಅದು 'ಕೊಂಡುಕೊನೆ' ಇರಬೇಕಿತ್ತು. ಈ 'ಕೊಂಡುಕೊನೆ' ಎಂಬುದನ್ನು ಪೈಗಳು ಮಾರ್ಜಿನ್‌ನಲ್ಲಿ ಕಾಣಿಸಿದ್ದಾರೆ, ಕಿಟೆಲ್ ಹೇಳಿದ್ದಂತೆ ಬರಿ 'ಕೊನೆ' ಅಲ್ಲ.

ಘಾತಾಳಿ: ಕಿಟೆಲ್ ಕೊಟ್ಟ ಅರ್ಥ a mischievous woman ಎಂದರೆ ಅದು ಸ್ತ್ರೀ-ವಾಚಿ ಮಾತ್ರವೆ? 'ಆಳಿ' ಇದನ್ನು ಸ್ತ್ರೀವಾಚಿಯಾಗಿ ಪರಿಭಾವಿಸಿ ಕಿಟೆಲ್ ಹಾಗೆ ಹೇಳಿರಬೇಕು. ಪೈ ತಮ್ಮ ಕೋಶದಲ್ಲಿ ಇದನ್ನು ಕಾಣಿಸಿ 'ವಾಚಾಳಿ' ಮುಂತಾದ್ದರಲ್ಲಿ ಅದು ಪುರುಷವಾಚಿಯೂ ಆಗಿರುವುದನ್ನು ತೋರಿಸಿದ್ದಾರೆ.

ಮುಕ್ತಾಯ-ಈ ಶಬ್ದ ಸಂಸ್ಕೃತದ್ದು ಎಂದು ಕಿಟೆಲ್ ಕಾಣಿಸಿದ್ದಾರೆ. ಹಾಗೇನಲ್ಲ. ಅದು ಕನ್ನಡ ಶಬ್ದ. 'ಮುಗಿತಾಯ' ದಿಂದ ರೂಪುಗೊಂಡಿರಬೇಕು, ಎಂಬುದು ಪೈ ಅವರ ಅಭಿಪ್ರಾಯ.

ಮರ್ತ್ಯಾವತಾರ-ಇದನ್ನು ಮರ್ತ್ಯ+ಅವತಾರ ಎಂದೇನೊ ಸಂಧಿ ಬಿಡಿಸಬಹುದು. ಆದರೆ ಅರ್ಥ ಸ್ಪಷ್ಟವಾಗದು. ಕಿಟೆಲರೇ ಕೊಟ್ಟ 'ವಿಷ್ಣು ಪಡೆವಂ ಮತ್ಸ್ಯಾವತಾರಕ್ಕೆ' ಎಂಬ ಪ್ರಯೋಗ ವಾಕ್ಯದ ಮೇಲಿಂದ ಅದು 'ಮತ್ಸ್ಯಾವತಾರ' ಎಂದಿರಬೇಕು ಎಂಬುದಾಗಿ ಪೈಗಳು ಕಾಣಿಸಿದ್ದಾರೆ.

ನೃಪತುಂಗ- ಎಂಬುದು ಅಂಕಿತನಾಮ. ಆದರೆ ಕಿಟೆಲ್ ಕೋಶದಲ್ಲಿ ಈ ರಾಜನು the most prominent king' ಎಂದು ರೂಢನಾಮವಾಗಿ ಕಾಣಿಸಿಕೊಂಡಿದ್ದಾನೆ. ಅಂತೂ ರಾಷ್ಟ್ರಕೂಟ ದೊರೆ ಇಲ್ಲಿ ಮರೆಯಾಗಿದ್ದಾನೆ.

ಈ ಮೊದಲು ಪ್ರಸ್ತಾಪಿಸಿದ ಅಲ್ಲಮ-ಈ ಶಬ್ದದ ಅರ್ಥ ಏನು ಗೊತ್ತೆ? 'A Lingayat name perhaps taken from Allah'!!

ಕನ್ನಡ ನಾಡು ಮತ್ತು ಕೆನಡಾ ದೇಶಕ್ಕೆ ಸಂಬಂಧ ಕಲ್ಪಿಸ ಹೋದರೆ ಹೇಗೆ ಹಾಸ್ಯಾಸ್ಪದವಾಗುವುದೋ ಹಾಗೆಯೇ ಇದು! 'ಸಿ.ಪಿ. ಬ್ರೌನ್ ಮತ್ತು ಎ.ಸಿ. ಬರ್ನೆಲ್ ಕೂಡಾ ಹಾಗೇ ತಿಳಿದಿದ್ದಾರೆ'. ಎಂದು ಕಿಟೆಲ್ ಸಮರ್ಥನೆ ಮಾಡಿದ್ದಾರೆ. ತಿಳಿಯಬೇಕಾದ ಮಾತೆಂದರೆ 'ಅಲ್ಲಾ' ಎಂಬ ಶಬ್ದ ಸಂಸ್ಕೃತ ಹಾಗೂ ಕನ್ನಡ ಈ ಎರಡು ಭಾಷೆಗಳಲ್ಲಿ ಬೇರೆ ಬೇರೆ ಅರ್ಥದಲ್ಲಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದಿತು. ಸಂಸ್ಕೃತದಲ್ಲಿ ಅದರ ಅರ್ಥ 'ತಾಯಿ' ಎಂಬುದು. ಹಾಗ ಅಥರ್ವಣವೇದ ಹಾಗೂ ಪಾಣಿನಿ ವ್ಯಾಕರಣದಲ್ಲಿ ಬಂದಿದೆಯಾಗಿ ಸಂಸ್ಕೃತ ಕೋಶಗಳು ಹೇಳುತ್ತವೆ. ಕನ್ನಡದಲ್ಲಿ ಅದು ಒಂದು ವ್ಯಕ್ತಿನಾಮವಾಗಿ ಅಲ್ಲಯ್ಯ, ಅಲ್ಲಮಯ್ಯ, ಅಲ್ಲಮನ್ ಮುಂತಾಗಿ ಶಾಸನಗಳಲ್ಲಿ ಬಂದದ್ದೇ ಇದೆ. (ಹಳಗನ್ನಡದಲ್ಲಿ ಅಪ್ಪ ಎನ್ನುವ ಅರ್ಥದಲ್ಲಿ 'ಅಮ್ಮ' ಬಳಕೆಯಾಗುತ್ತಿತ್ತು. ಹೀಗಾಗಿ ೧೨ನೇ ಶತಮಾನದ ಆ ಶಿವಶರಣರ ಹೆಸರು ಅಲ್ಲಮಪ್ರಭು ಎಂದಾಗಿದ್ದಿತು. ಹಾಗೆಂದು ಈಗಾಲೇ ಕನ್ನಡ ವಿದ್ವಾಂಸರು ಅರ್ಥವಿಸಿದ್ದಾರೆ.

ಎಂ. ಮರಿಯಪ್ಪ ಭಟ್ಟರು ಕಿಟೆಲ್ ಕೋಶವನ್ನು ವಿಸ್ತರಿಸಿ ಪ್ರಕಟಿಸಿದರಷ್ಟೆ. ಅವರಿಗೆ ಗೋವಿಂದ ಪೈಗಳು ಬಳಸಿದ್ದ ಕೋಶದ ಪ್ರತಿ ಸಿಕ್ಕಿದ್ದರೆ, ಕೋಶದಲ್ಲಿಯ ಅನೇಕ ತಪ್ಪುಗಳನ್ನು ಅನಾಯಾಸವಾಗಿ ತಿದ್ದುವುದು ಸಾಧ್ಯವಿತ್ತು.

ಎನ್. ಬಸವಾರಾಧ್ಯರು, ಪ್ರತಿಗಳ ದೋಷದಿಂದಾಗಿ ಕಿಟೆಲರಿಂದಾದ ಒಂದೆರಡು ತಪ್ಪುಗಳನ್ನು ಕೊಟ್ಟಿದ್ದಾರೆ:

'ಅಗಟು' ಶಬ್ದದ ಕೆಳಗೆ 'ಅಗಟುನೆಲ' ಎಂಬ ಸಮಾಸವನ್ನು ಕೊಡಲಾಗಿದೆ ಮತ್ತು ಅದಕ್ಕೆ 'a deep place, a ditch' ಎಂಬ ಅರ್ಥವನ್ನು ಸೂಚಿಸಿದ್ದಾರೆ. ಆದರೆ ಇದು ಸಮಾಸ ಪದವಲ್ಲ; ಎರಡು ಭಿನ್ನ ಶಬ್ದಗಳಿವು. 'ಅವು ಒಂದು ಅಗಟು ನೆಲದಲ್ಲಿ ಬೀಟಿಲು' ಹೀಗೆ ಅವು ಬೇರೆ ಬೇರೆ ಶಬ್ದಗಳು; ಆದರೆ ಪ್ರತಿಕಾರನ ದೋಷದಿಂದ ಅದೊಂದು ಸಮಾಸವೆಂಬುದಾಗಿ ತಪ್ಪು ತಿಳಿಯುವಂತಾಯಿತು, ಎಂಬುದು ಬಸವಾರಾಧ್ಯರ ಅಭಿಪ್ರಾಯ.

ಈ ನಿಮಿತ್ತದಿಂದ ಕಿಟೆಲರ ಬೇರೊಂದು ವಿಶಿಷ್ಟ ವಿಚಾರಸರಣಿಯನ್ನು ಗುರುತಿಸಬಹುದು. ಅದೆಂದರೆ ಹಿಂದೂಧರ್ಮದ ಬಗ್ಗೆ ಅವರಿಗಿದ್ದ ಅಲಕ್ಷ್ಯ ಮತ್ತು ಅವಹೇಳನೆ. ಅವರ 'ಕರ್ನಾಟಕ ಕಾವ್ಯಮಾಲೆ'ಯ ಪರಿಶೀಲನೆಯಲ್ಲಿ ತುಸು ಮಟ್ಟಿಗೆ ಇದನ್ನು ಕಂಡಿದ್ದೇವೆ. ಈ ನಿಘಂಟುವಿನಲ್ಲಿಯೂ ಅಲ್ಲಲ್ಲಿ ಅದರ ಸೆಳಕುಗಳಿವೆ. ಮೇಲಿನ 'ಅಲ್ಲಮ' ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಧಾರವಾಡದಲ್ಲಿ ವೀರಶೈವರ ಒಡನಾಟದಲ್ಲಿದ್ದೂ, ಅಲ್ಲಮ ಶಬ್ದದ ನಿಷ್ಪತ್ತಿ ಈ ರೀತಿ ತಪ್ಪಾಗಿ ಬರಬೇಕಿತ್ತೆ?

ಅಂಕಿತನಾಮಗಳಲ್ಲಿ ಆ ಈ ಪುರಾಣಗಳ ಹೆಸರುಗಳೂ ಬರುತ್ತವಷ್ಟೆ. ಅವುಗಳ ವಿಷಯದ ಬಗ್ಗೆ ಒಂದು ವಾಕ್ಯ ಹೇಳಿದರೆ ಸಾಕಾಗಿತ್ತು. ಬೇಡ; 'Name of a Purana' ಎಂದಿದ್ದರೂ ನಡೀತಿತ್ತು. ಬ್ರಹ್ಮವೈವರ್ತ ಪುರಾಣದ ಬಗ್ಗೆ ಬಂದ ಅವರ ಹೇಳಿಕೆ ಇಂತಿದೆ.

'Name of a Purana containing prayers, with tedious narratives of Krishna and his love for the Gopis and Radha'.

ಶಬ್ದಕೋಶದಂತಹ ವಸ್ತುನಿಷ್ಠ ವಿವೇಚನೆಯಲ್ಲಿ 'tedious' ಎಂಬಂತಹ ವಿಶೇಷಣ ಬರಬಾರದಿತ್ತು.

ಇಂತಹ ತಪ್ಪುಗಳಿಂದ ಕಿಟೆಲ್ ಕೋಶದ ಮೌಲಿಕತೆ, ಮಹತ್ವಗಳಿಗೆ ಕುಂದೇನೂ ಇಲ್ಲ. ಇವು ನದಿಯ ಮಹಾ ಪ್ರವಾಹದಲ್ಲಿ ಕಸ, ಕಡ್ಡಿಗಳು ಸಾಗಿ ಬಂದಂತೆ- ಎನ್ನಬಹುದು.

## ಇತರ ದ್ರಾವಿಡ ಭಾಷಾ ಕೋಶಗಳೊಡನೆ

ಕಿಟೆಲರ ಶಬ್ದಕೋಶವನ್ನು ಆ ಕಾಲದ ದ್ರಾವಿಡ ಭಾಷಾ ಶಬ್ದಕೋಶಗಳೊಡನೆ ಹೋಲಿಸಿ ನೋಡಬಹುದಾಗಿದೆ. ೧೮೮೬ರಲ್ಲಿ ಅದೇ ಮಿಶನನ್ನಿನ ಮೆನರ್ ತುಳು ಶಬ್ದಕೋಶವನ್ನು ರಚಿಸಿದ. ಅದರ ಹರಹು ಈ ಕನ್ನಡ ಕೋಶದಷ್ಟು ಆಳ ಹಾಗೂ ವಿಸ್ತಾರವಾದದ್ದಲ್ಲ. ತುಳು ಶಬ್ದ ಸಂಗ್ರಹವೂ ಕನ್ನಡಕ್ಕೆ ಹೋಲಿಸಿದಾಗ ಕಡಿಮೆಯದೇ ತಾನೆ. ತಮಿಳಿನಲ್ಲಿ ಎಮ್.ಎಸ್ ಸ್ಲೋ ಎಂಬಾತ ೧೮೬೨ರಷ್ಟು ಹಿಂದೆ ಶಬ್ದಕೋಶವನ್ನು ರಚಿಸಿದ್ದಾನೆ. ಈ ಕೋಶಕ್ಕೂ ಮೇಲಿನ ಮಾತು ಅನ್ವಯಿಸುತ್ತದೆ,

ಸಿ.ಪಿ. ಬ್ರೌನ್‌ನ ತೆಲುಗು ಕೋಶವೂ ಇವೆರಡರ ಸದರಿನಲ್ಲಿಯೇ ಬರುವಂತಹವು. ಕಿಟೆಲ್ ಕೋಶದ ಜೊತೆ ಹೋಲಿಕೆಗೆ ನಿಲ್ಲುವಂತಹದಲ್ಲ.

ಆದರೆ ಮಲೆಯಾಳಮ್ ಕೋಶಕ್ಕೆ ಹೋಲಿಸಿ ಹೇಳಬಹುದಾದ ಹಲವಾರು ಮಹತ್ವದ ಅಂಶಗಳಿವೆ. ಇಬ್ಬರೂ ಬಾಸೆಲ್ ಮಿಶನ್ನಿನವರೇ. ವಯಸ್ಸಿನಲ್ಲಿ ಕಿಟೆಲ್‌ರಿಗಿಂತ ೧೮ ವರ್ಷಕ್ಕೆ ಹಿರಿಯನಾದ ಗುಂಡರ್ಟ್ ಕಿಟೆಲ್‌ರಿಗಿಂತ ೧೫ ವರ್ಷ ಮೊದಲೇ ತನ್ನ ಮಲೆಯಾಳಮ್ ಕೋಶವನ್ನು ಹೊರತಂದಿದ್ದನು. ಗುಂಡರ್ಟ್‌ನು ಮಲೆಯಾಳಮ್ ಶಬ್ದಗಳಿಗಾಗಿ ೧೮೦ ಪ್ರಾಚೀನ ಕಾವ್ಯಗಳನ್ನೂ ಜೊತೆಗೆ ೫ ಹಿಂದಿನ ಮಲೆಯಾಳ ಕೋಶಗಳನ್ನು ಪರಿಶೀಲಿಸಿದ್ದರೆ, ಕಿಟೆಲ್ ೪೦ ಹಳಗನ್ನಡ ಕಾವ್ಯಗಳಿಂದ ಮತ್ತು ಪರಂಪರಾಗತ ೧೦ ಶಬ್ದಕೋಶಗಳಿಂದ ಶಬ್ದಗಳನ್ನು ಆಯ್ದುಕೊಂಡಿದ್ದಾನೆ. ಹಾಗಿದ್ದರೂ ಮಲೆಯಾಳೀ ಕೋಶವು ೯೮೫ ಪುಟಗಳಷ್ಟಿದ್ದರೆ ಕಿಟೆಲ್ ಕೋಶವು ೧೭೫೨ ಪುಟಗಳ ವರೆಗೆ ವಿಸ್ತಾರವನ್ನು ಹೊಂದಿದೆ. ಅದರ ಕಾರಣವನ್ನು ಬಿ.ಎಲ್. ರೈಸರ ಈ ಹೇಳಿಕೆಯುಲ್ಲಿ ಕಾಣಬಹುದು.

This increase in Kittel is due to the numerous examples as to the uses and meanings of the words with references to the authorrities from which they are taken – an admirable feature. (Journal of the Royal Asiatic Society. 1896. P 232-235).

ಈಚೆಗೆ, ಕೆಲ ದಶಕಗಳ ಹಿಂದೆ ಕಿಟೆಲರ ಮೂಲ ಕೃತಿಯೇ ಇದ್ದುದಿದ್ದಂತೆ ಮರುಮುದ್ರಣಗೊಂಡು, ಅದೇ ಹೆಚ್ಚು ಬಳಕೆಯಲ್ಲಿದೆ. ಕಿಟೆಲ್ ಅದನ್ನು ಪ್ರಕಟಿಸಿ ನೂರು ವರ್ಷಗಳು ಗತಿಸಿದ್ದರೂ, ಬೇರೆ ಕೋಶಗಳು ಬಳಕೆಯಲ್ಲಿದ್ದರೂ ಮೂಲ ಕಿಟೆಲ್ ಕೋಶದ ಉಪಯುಕ್ತತೆ ಏನೇನೂ ಕಡಿಮೆಯಾಗಿಲ್ಲ; ಹಾಗೆ ನೋಡಿದರೆ ಹೆಚ್ಚುತ್ತಲೇ ಇದೆ. ಅರ್ಥಾತ್ ಅದರ ಮೌಲಿಕತೆಗೆ ಬೇರೆ ನಿದರ್ಶನ ಬೇಕಿಲ್ಲ.

ವ್ಯಾವಹಾರಿಕ ಜಗತ್ತಿನಲ್ಲಿಯೂ ಕಿಟೆಲ್ ಕೋಶವು ಎಷ್ಟೊಂದು ಮನ್ನಣೆ ಪಡೆದಿತ್ತೆಂಬುದಕ್ಕೆ ಬ್ರಿಟಿಶರ ಆಡಳಿತ ಕಾಲಕ್ಕೆ ನಡೆದ ಸಂಗತಿ ಇದು. ಬಿ.ಎ ವಿವೇಕ ರೈಗಳ ತಂದೆ ಅವರಿಗೆ ಹೇಳಿದ್ದಂತೆ. ಒಬ್ಬ ವ್ಯಕ್ತಿ ತನ್ನ ಗುರುತಿನವನನ್ನು 'ಘಟಿಂಗ' ಎಂದು ಬೈದನಂತೆ. ಹಾಗೆ ಕರೆಯಿಸಿಕೊಂಡ ವ್ಯಕ್ತಿ ಕೋರ್ಟಿನ ಕಟ್ಟೆ ಹತ್ತಿದ. ಆ ನ್ಯಾಯಾಧೀಶ 'ಘಟಿಂಗ' ಶಬ್ದ ಸರಿಯಾದ ಅರ್ಥ ತಿಳಿಯಲೆಂದು ಕಿಟೆಲ್ ಕೋಶದ ಪ್ರತಿಯನ್ನು ತರಿಸಿ ನೋಡಿದ. ಆದರ ೯೨೫ನೆಯ ಪುಟದಲ್ಲಿ ಬಂದ 'ಘಟಿಂಗ' ಎಂದರೆ 'ಕುಟುಂಬಸ್ಥನಲ್ಲದವನು; ಅವಿವಾಹಿತ ಮುಖಂಡ' ಎಂದು ಇತ್ತು. ಆ ಫಿರ್ಯಾದು ನೀಡಿದ ವ್ಯಕ್ತಿ ಅವಿವಾಹಿತನೇ ಇದ್ದ. ಕುಟುಂಬಸ್ಥನೂ ಆಗಿರಲಿಲ್ಲ. ಹೀಗಾಗಿ ಘಟಿಂಗ ಎಂದು ಬೈದವನು ನಿರಪರಾಧಿ ಎಂದು ನಿರ್ಣಯವಾಯಿತು!

## ಕಿಟೆಲರಿಗೆ ಸಂದ ಗೌರವ ಡಾಕ್ಟರೇಟ್ ಪದವಿಯ ಒಕ್ಕಣಿಕೆ

### WORDING OF KITTEL'S HONARARY DOCTORATE, BY THE TEUBINGEN UNIVERSITY

The Dean of the Philosophical Faculty being the most respectable Theoderich Schafer. Doctor of Philosophy, Public Professor of History in ordinary; the most Honarable Order of the Philosophers of the Regal Eberchard Carl University of Tubingen makes,

The most Reverend man Mr. Ferdinand Kittel, a Fressian from Resterhaven, who once had been sent to India by the Basel Missionary Society in order to propagate the evangelical faith and who has stayed there for 39 years, who in hardest work spending all his free time has consumed himself in explaining the South Indian Languages, especially the Canarese language, and deserved well because of his skilful, learned and unslothful compiling and editing of a dictionary of the Canarese words of that time and other worthy publication,

A Doctor of Philosophy and a Master of Liberal Arts Honoris Causa. 4th June 1896.

## ೧೨. A GRAMMAR OF THE KANNADA LANGUAGE

ಕಿಟೆಲರು ತಮ್ಮ ಕೊನೆಯ ವರ್ಷಗಳಲ್ಲಿ ಕನ್ನಡದ ಪ್ರೌಢ ವ್ಯಾಕರಣವೊಂದನ್ನು ರಚಿಸಿದ್ದಾರೆ. ಜೆ.ಎಫ್. ಫ್ಲೀಟರು ಕಿಟೆಲರ ಶಬ್ದ ಕೋಶವನ್ನು I.A. ಪತ್ರಿಕೆಯಲ್ಲಿ ವಿಮರ್ಶಿಸುವಾಗ ಕನ್ನಡ ವ್ಯಾಕರಣ ಗ್ರಂಥವನ್ನು ರಚಿಸಬೇಕು ಎಂದು ಸೂಚಿಸಿದ್ದೇನೋ ನಿಜ. ಆದರೆ ಅದಕ್ಕೆ ಬೇಕಾದ ಟಿಪ್ಪಣಿಗಳನ್ನು ಕಿಟೆಲ್ ಮುಂಚೆಯೇ ಮಾಡಿಕೊಂಡು ಇಟ್ಟಿರಬೇಕು. ಮತ್ತು ಶಬ್ದಕೋಶವು ಸಿದ್ಧವಾಗುತ್ತಿದ್ದಾಗಲೇ ಅವರಿಗೆ ಈ ಗ್ರಂಥದ ಯೋಚನೆ ಮೂಡಿರಬೇಕು.

ಗ್ರಂಥದ ಹೆಸರು A Grammar of the Kannada Language. ರಾಯಲ್ ಸೈಜಿನ ಐದು ನೂರು ಪುಟಗಳಿಷ್ಟಿರುವ ಉದ್ಗ್ರಂಥವಿದು. ಇಂಗ್ಲಿಷ್‌ನಲ್ಲಿ ಇದ್ದುದರ ಕಾರಣ, ಇಂಗ್ಲಿಷ್‌ನ್ನು ಬಲ್ಲ ಯುರೋಪಿಯನ್ನರು ಕನ್ನಡ ಕಲಿಯುವುದಕ್ಕೆ ಸಹಾಯವಾಗಬೇಕೆಂಬುದಾಗಿತ್ತು. ಅದರಂತೆ ಮಿಶನರಿಗಳಿಗೆ ಕನ್ನಡ–ಇಂಗ್ಲಿಷ್ ಅನುವಾದ ಕಾರ್ಯಕ್ಕೂ ನೆರವಾಗಬೇಕೆಂಬುದಾಗಿತ್ತು. ಗ್ರಂಥದ ಉದ್ದಕ್ಕೂ "ಇಂಗ್ಲಿಷ್ ಭಾಷೆಯಲ್ಲಿ ಈ ಕುರಿತು ಹೀಗೆ ನಿಯಮವಿದೆ" ಎಂಬ ಸೂಚನೆಯೇ ಎದ್ದು ಕಾಣುತ್ತದೆ. ಇಂಗ್ಲಿಷ್ ಗ್ರಂಥದ ೧೮ ರಿಂದ ೨೬ ಪ್ರಕರಣಗಳಲ್ಲಿ ಬಂದ ಪಕ್ರರಣ ಭಾಷೆಗೆ ಸಹಜವಾದ ಕರ್ಮಣಿ ಪ್ರಯೋಗ ಕನ್ನಡದಲ್ಲಿ ಅಷ್ಟು ಸಹಜವಲ್ಲವಾದ್ದರಿಂದ ಅದನ್ನು ಹೇಗೆ ವ್ಯಕ್ತಪಡಿಸಬೇಕು ಎಂದು ಒಂದೆಡೆ ವಿವರಿಸಿದ್ದಾರೆ. ಹಾಗೇನೇ a, the, an ಮುಂತಾದ ಸರ್ವನಾಮಗಳು ಕನ್ನಡದಲ್ಲಿ ಇಲ್ಲ. ಅದನ್ನು ಮಾನಸಿಕವಾಗಿ ಒದಗಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ಅದರಂತೆ ಕನ್ನಡದ 'ಊ' ಎಂಬ ಸಮುಚ್ಚಯ (ರಾಮನೂ ಕೃಷ್ಣನೂ) ಪದಕ್ಕೆ ಸಂವಾದಿಯಾದ ಪ್ರಯೋಗ ಇಂಗ್ಲಿಷ್‌ನಲ್ಲಿ ಇಲ್ಲ ಅದನ್ನೂ ಮಾನಸಿಕವಾಗಿ ಒದಗಿಸಿಕೊಳ್ಳಬೇಕು ಎಂದಿದ್ದಾರೆ.

ಕಾಲ್ಡವೆಲ್ ಎಲ್ಲ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನವನ್ನು ಮನದಲ್ಲಿಟ್ಟುಕೊಂಡು ತಮ್ಮ ಸುಪ್ರಸಿದ್ಧ ಗ್ರಂಥವನ್ನು ರಚಿಸಿದರಷ್ಟೆ. ಕಿಟೆಲ್ ಕನ್ನಡವೊಂದನ್ನೇ ತಮ್ಮ ಗಮನದಲ್ಲಿ ಇಟ್ಟುಕೊಂಡಿದ್ದರೂ, ಇತರ ದ್ರಾವಿಡ ಭಾಷಾ ಅಂಶಗಳನ್ನು ತೌಲನಿಕವಾಗಿ ತಂದಿದ್ದಾರೆ.

ವ್ಯಾಕರಣವೊಂದನ್ನು ರಚಿಸುವಾಗ ಸಾಮಾನ್ಯವಾದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅನುಗುಣವಾದ ಪ್ರಯೋಗಗಳನ್ನು ಕೊಡುತ್ತಾರೆ. ಕಿಟೆಲರು ಪ್ರಯೋಗ ವಾಕ್ಯಗಳನ್ನೇ ಮೂಲವಾಗಿ ಇಟ್ಟುಕೊಂಡು ನಿಯಮಗಳನ್ನು ರಚಿಸಿದ್ದಾರೆ. ಇದಕ್ಕಿಂತ ಮೊದಲು ಮಲೆಯಾಳೀ ಭಾಷೆಗೆ ವ್ಯಾಕರಣವನ್ನು ರಚಿಸಿದಾಗ ಗುಂಡರ್ಟ್ ಅವರು ಇಂಥ ನಿಲುವೆಯನ್ನು ವಿಶದಗೊಳಿಸಿ ಹೇಳಿದ್ದು ಕಿಟೆಲ್ ವ್ಯಾಕರಣಕ್ಕೂ ಅನ್ವಯಿಸುತ್ತದೆ:

Rules were not laid down a priori, or delivered from any existing grammar nor have the examples been improvised to fit the rules, but the latter as well as the former are the result of careful perusal of native property, prose writings, judicial and other Government papers, as well as the common language.

ಪರಿಣಾಮವಾಗಿ ನೂರಕ್ಕೂ ಹೆಚ್ಚು ಇಂಥ ಹೊಸ ಹೊಸ ನಿಯಮಗಳನ್ನು ಕನ್ನಡ ವ್ಯಾಕರಣಕ್ಕೇ ಅನ್ವಯವಾಗಿಸಿರುವುದು ಕಿಟೆಲರ ದೊಡ್ಡ ಸಾಧನೆ.

ಈ ವ್ಯಾಕರಣದ ಮತ್ತೊಂದು ವಿಶೇಷತೆ ಎಂದರೆ, ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ ಇಲ್ಲಿ ನಿರೂಪಿತವಾಗಿದೆ. ಕನ್ನಡ ಭಾಷೆಗೆ ಪ್ರಾಚೀನ, ಮಧ್ಯಯುಗೀನ ಹಾಗೂ ಅರ್ವಾಚೀನ ಎಂಬ ಅವಸ್ಥಾಭೇದಗಳಿದ್ದು ಯಾವುದೊಂದು ನಿಯಮವನ್ನೆತ್ತಿಕೊಂಡು ಈ ಮೂರೂ ಅವಸ್ಥೆಗಳಲ್ಲಿ ಅದು ಹೇಗೆ ಕಂಡುಬರುವುದು ಎಂದು ತೋರಿಸಿದ್ದಾರೆ. ಪ್ರಾರಂಭದ ಹಂತದಲ್ಲಿ ಹುಟ್ಟಿದ ಕನ್ನಡದ ಮೂಲ ಪದಗಳು ನಾಮ (noun) ಹಾಗೂ ಧಾತು (verb) ಎರಡಕ್ಕೂ ಒಂದೇ ಆಗಿದ್ದು (ಉದಾ.ಗೆ ಓದು, ಕಟ್ಟು) ಆಮೇಲೆ ವೈವಿಧ್ಯಮಯವಾಗಿ ಭಾಷೆ ಬೆಳೆಯುತ್ತ ಹೋಯಿತು ಎಂದಿದ್ದಾರೆ. ಅಲ್ಲದೆ ಕನ್ನಡದ ಪ್ರಾದೇಶಿಕ ಭೇದಗಳನ್ನು ಗುರುತಿಸಿದ್ದಾರೆ. ಬಿ.ಎ. ಮಹೀದಾಸರ ಪ್ರಕಾರ, ಕನ್ನಡದಲ್ಲಿ ಭಾಷಾಶಾಸ್ತ್ರ ಮತ್ತು ಭಾಷಾಂತರಶಾಸ್ತ್ರ ಇವೆರಡೂ ಕಿಟೆಲರ ಈ ವ್ಯಾಕರಣದಿಂದಲೇ ಆರಂಭವಾಗಿವೆ.

ಜಿ.ಎಸ್. ಕುಳ್ಳಿಯವರು ಇನ್ನು ಕೆಲವು ವೈಶಿಷ್ಟ್ಯಗಳನ್ನು ತೋರಿಸಿದ್ದಾರೆ :

೧) ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರಗಳಿಗೆ ವ್ಯಾಖ್ಯಾನ ರೂಪದ ವಿವರಣೆ ಕೊಟ್ಟಿದ್ದಾರೆ. ಜೊತೆಗೆ ಕೇಶಿರಾಜನು ಹೇಳದೇ ಉಳಿದ ಕೆಲವು ವ್ಯಾಕರಣಾಂಶಗಳನ್ನು ಕೊಡಮಾಡಿದ್ದಾರೆ. ಉದಾ.ಗೆ ಕೇಶಿರಾಜನು ಲಿಂಗವನ್ನು ೯ ವಿಧವಾಗಿ ಕೊಟ್ಟಿದ್ದಾನಷ್ಟೆ. ಅವು ನಾಮ ಪ್ರಕೃತಿ ಬಾಹ್ಯ ಚಿಹ್ನೆಗಳಾಗಿರದೆ ಅವುಗಳ ಗುಣಲಕ್ಷಣಗಳು ಆಧಾರವಾಗಿದೆ ಎಂಬುದನ್ನು ಹೊಸದಾಗಿ ಹೇಳಿದ್ದಾರೆ.

೨) ಯಾವುದೇ ವ್ಯಾಕರಣಾಂಶವಿರಲಿ ಅದನ್ನು ಸಾಂಗೋಪಂಗವಾಗಿ ವಿವರಿಸುತ್ತಾರೆ; ಚರ್ಚಿಸುತ್ತಾರೆ.

೩) ಇಂಗ್ಲಿಷ್ ಭಾಷಿಕರನ್ನು ಗಮನದಲ್ಲಿಟ್ಟುಕೊಮಡು ಅಲ್ಲಲ್ಲಿ ವ್ಯಾಕರಣ ಪ್ರಕ್ರಿಯೆಗಳನ್ನು ಕೊಟ್ಟಿರುವರಷ್ಟೆ. ಅದರಿಂದ ಆ ಭಾಷೆಯನ್ನೂ ನಾವು ಸರಿಯಾಗಿ ಗ್ರಹಿಸಲು ಸಹಾಯವಾಗುತ್ತದೆ.

ಕಿಟೆಲ್ ವ್ಯಾಕರಣದ ಇನ್ನೂ ಕೆಲವು ವೈಶಿಷ್ಟ್ಯಗಳನ್ನು ಹೀಗೆ ಸಂಕ್ಷೇಪಿಸಬಹುದು.

ಅ) ಗ್ರಂಥಸ್ಥ ಶಬ್ದಗಳ ಜೊತೆಗೆ ಆಡುನುಡಿಯ ಶಬ್ದಗಳಿಗೂ ಅವಕಾಶ ದೊರೆತಿದೆ. (ಶಾಸನಗಳಲ್ಲಿ ಬಂದ ಶಬ್ದಗಳ ಬಳಕೆ ಕಡಿಮೆ)

ಆ) ಯಾವುದೊಂದು ವ್ಯಾಕರಣ ಪ್ರಕ್ರಿಯೆಯ ಪೂರ್ಣ ಕಲ್ಪನೆ ಬರಬೇಕಾದರೆ ಅದರ ಪ್ರಯೋಗ ಅಥವಾ ಬಳಕೆ ಮುಖ್ಯವಾಗುತ್ತದೆ. ಗಾದೆ ಮಾತುಗಳಲ್ಲಿ ಅದು ಇನ್ನಷ್ಟು ಸ್ಪಷ್ಟ. ಅಂಥ ಗಾದೆಗಳ ವಿಪುಲ ಸಂಗ್ರಹ ಇಲ್ಲಿದೆ. ಇದೊಂದು ಮಾದರಿ : ಅಂಗಾಲಿನಲ್ಲಿ ಬಲವಿದ್ದರೆ ಬಂಗಾಳಿಗೂ ಹೋಗಬಹುದು.

ಇ) ಈ ರೀತಿಯ ಪ್ರಯೋಗಗಳನ್ನು ಸಮಷ್ಟಿಯಾಗಿ ನೋಡಿದಾಗ, ನಮ್ಮ ಸಾಮಾಜಿಕ ಜೀವನದ ಪಡಿನೆಳಲೇ ಹೊಮ್ಮಿದಂತಾಗಿದೆ.

ವ್ಯಾಕರಣ ವಿಷಯವು ಸಾಮಾನ್ಯವಾಗಿ ನೀರಸವಾದದ್ದು ಎಂಬ ಭಾವನೆ ಇದೆ. ವ್ಯಾಕರಣದ ಬಗ್ಗೆ ನಮ್ಮ ಅನಿಸಿಕೆ ಏನೇ ಇದಲಿ, ಅಸಂಖ್ಯ ಉದಾಹರಣೆಗಳಿಂದಾಗಿ, ಇಲ್ಲಿ ನಿರೂಪಣೆ ಸರಳವೂ ಸ್ಪಷ್ಟವೂ ಆಗಿ ಮೂಡಿಬಂದಿದೆ. ಮತ್ತು 'Remarks' ಎಂದು ಅಲ್ಲಲ್ಲಿ ತಮ್ಮ ಸ್ವಂತದ ಅಭಿಪ್ರಾಯಗಳನ್ನು ಕೊಡುವುದರ ಮೂಲಕ ಈ ವ್ಯಾಕರಣವು ಸ್ವೋಪಜ್ಞತೆಯಿಂದ ಕೂಡಿದೆ. ಕನ್ನಡ ವ್ಯಾಕರಣದ ಅಧ್ಯಯನಕ್ಕೆ ಗೌರವಾಸ್ಪದ ಸ್ಥಾನವನ್ನು ಕಲ್ಪಿಸಿದೆ.

# ಪ್ರಕರಣ – 5

# ಸಮಾರೋಪ

'ಅನ್ಯ ಪ್ರದೇಶಗಳಿಗೆ ಹೋಗು; ಯೇಸುವಿನ ಸಂದೇಶವನ್ನು ಸಾರು' ಎಂಬ ಬೈಬಲಿನ ಆದೇಶದ ಪ್ರಕಾರ ಕಿಟೆಲ್ ಕರ್ನಾಟಕಕ್ಕೆ ಬಂದರು (ಗಲ೫ಜ). ಆದರೆ ಮುಂದಿನ ಐದು ದಶಕಗಳಲ್ಲಿ ಅವರು ಹೆಚ್ಚಾಗಿ ಮಾಡಿದ್ದು ಕನ್ನಡದ ಕೆಲಸವನ್ನೇ.

ಹೊಸಗನ್ನಡ ಸಾಹಿತ್ಯವು ಇನ್ನೂ ಉದಯಿಸಿರದ ಕಾಲವದು. ಹೀಗಾಗಿ ಕಿಟೆಲ್ ಅನೇಕ ಸಾಹಿತ್ಯ ವಿಚಾರಗಳಲ್ಲಿ ಮೊದಲಿಗರಾದರು. ಅವೆಂದರೆ;

– ಪ್ರಾಚೀನ ಕನ್ನಡ ಸಾಹಿತ್ಯವನ್ನು ಇವರಷ್ಟು ವ್ಯಾಪಕವಾಗಿ, ಮತ್ತು ಆಳವಾಗಿ ಅಭ್ಯಸಿಸಿದವರು ಬೇರಾರೂ ಆಗಿನ ಕಾಲದಲ್ಲಿ ಇರಲಿಲ್ಲ.

– ಶಬ್ದಮಣಿದರ್ಪಣ ಮತ್ತು ಛಂದೋಂಬುಧಿ–ಈ ಪ್ರೌಢ ಗ್ರಂಥಗಳನ್ನು ಆಧುನಿಕ ರೀತಿಯಲ್ಲಿ ಶಾಸ್ತ್ರೀಯವಾಗಿ ಸಂಪಾದಿಸಿದರು. ಮುಂದಿನವರಿಗೆ ಮಾರ್ಗದರ್ಶಿಯಾದರು.

– ಕನ್ನಡ ಸಾಹಿತ್ಯ ಚರಿತ್ರೆಯ ಹೊಳಹನ್ನು ಹಾಕಿದರು.

– ಕಾವ್ಯ ಸಂಕಲನಗಳಲ್ಲಿ ವಿಷಯವಾರು ಕವಿತೆಗಳ ಆಯ್ಕೆಯನ್ನು ರೂಢಿಸಿದರು.

– ಕ್ರೈಸ್ತ ಮತ ಪ್ರಸಾರದಲ್ಲಿ ಸಂಗೀತಕ್ಕೆ ಪ್ರಾಧಾನ್ಯ ಬೇಕೆಂದು ಪ್ರತಿಪಾದಿಸಿದರು.

– ಹೊಸಗನ್ನಡ ಕವಿತೆ ಗಲಲಂರ ದಶಕದಲ್ಲಿ ಆರಂಭವಾಯಿತೆಂದು ತಿಳಿದಿದ್ದೇವೆ. ಕಿಟೆಲ್ ಅದಕ್ಕೂ ಇಪ್ಪತ್ತು ವರ್ಷಗಳ ಹಿಂದೆಯೇ ಆ ಬಗೆಯ ಕವಿತೆ ರಚಿಸಿದ್ದಾರೆ. ಕವಿತಾ ರಚನೆ ಅವರ ಸಹಜವಾದ ಪ್ರವೃತ್ತಿಗಳಲ್ಲಿ ಒಂದಾಗಿದ್ದಿತು.

– ಕನ್ನಡದ ಶಬ್ದಭಂಡಾರ ಮತ್ತು ವ್ಯಾಕರಣಾಂಶ ಇವನ್ನು ಸಂಪೂರ್ಣವಾಗಿ ಕರಗತ ಮಾಡಿಕೊಂಡಿದ್ದರು; ಗ್ರಂಥ ರಚಿಸಿದರು.

ಈ ಕಾರಣಗಳಿಂದ ಅವರು ಹೊಸಗನ್ನಡ ಸಾಹಿತ್ಯದ ಆದ್ಯ ಪ್ರವರ್ತಕರಲ್ಲಿ ಒಬ್ಬರು ಎಂಬುದರಲ್ಲಿ ಸಂದೇಹವಿಲ್ಲ.

ಕನ್ನಡದಲ್ಲಿ ಅನೇಕ ಕವಿಗಳಿದ್ದಾರೆ; ಮತ್ತೆ ಸಂಶೋಧಕರಿದ್ದಾರೆ. ಆದರೆ ಕವಿ ಮತ್ತು ಸಂಶೋಧಕ ಇವೆರಡನ್ನೂ ಕರಗತ ಮಾಡಿಕೊಂಡವರು ತೀರಾ ಕಡಿಮೆ. ಒಬ್ಬ ಗೋವಿಂದ ಪೈಗಳನ್ನು ಕವಿ – ಸಂಶೋಧಕ ಎಂದು ನೆನೆಯುತ್ತೇವೆ. ಅವರು ಇಪ್ಪತ್ತನೆಯ ಶತಮಾನದವರು. ಅವರಿಗಿಂತ ಮುಂಚೆ ಕವಿ–ಸಂಶೋಧಕರೆಂದು ಕಿಟೆಲರನ್ನೇ ಹೆಸರಿಸಬೇಕಾಗುತ್ತದೆ.


ಕ್ರಿ.ಶ. ೨ನೇ ಶತಮಾನದ್ದಾಗಿರಬಹುದಾದ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡದವೆನ್ನಬಹುದಾದ ಕೆಲ ಮಾತುಗಳು ಬರುತ್ತವೆ– ಎಂಬುದಾಗಿ ಶಾಸನತಜ್ಞ

ಫುಲ್ಟ್ ೧೯೦೪ರ ತಮ್ಮೊಂದು ಲೇಖದಲ್ಲಿ (JRAS, 1904. P. 401) ಆ ಮುಂದೆ ಈ ವಿಷಯವನ್ನೆತ್ತಿಕೊಂಡು ಬಿ.ಎಲ್. ರೈಸ್, ಗ್ರಿಯರ್‌ಸನ್, ಸಲ್ವಿನ್ ಲೆವಿ, ಆರ್. ನರಸಿಂಹಾಚಾರ್, ಗೋವಿಂದ ಪೈ. ಮುಂತಾದ ವಿದ್ವಾಂಸರು ಇವು ಕನ್ನಡದವು ಹೌದು; ಕನ್ನಡದ್ದು ಇರಲಿಕ್ಕಿಲ್ಲ, ಇನ್ನಷ್ಟು ಆಧಾರಬೇಕು– ಎಂದೆಲ್ಲ ಅಭಿಪ್ರಾಯಗಳು ವ್ಯಕ್ತವಾದುವು. ಆಗ ಫುಲ್ಟರು, "ಕಿಟೆಲರು ಇದ್ದಿದ್ದರೆ (ತೀರಿಹೋದರು, ೧೯೦೩ರಲ್ಲಿ) ಸರಿಯಾದದ್ದನ್ನು ಅಧಿಕೃವಾಗಿ ಹೇಳಿಬಿಡುತ್ತಿದ್ದರು" ಎಂಬರ್ಥದ ಮಾತನ್ನು ಹೇಳಿದ್ದಾರೆ. ಅಂದರೆ ಕಿಟೆಲರ ಭಾಷಾ ವಿಷಯಕವಾದ ಪ್ರೌಢಿಮೆಗೆ ಎಷ್ಟೊಂದು ಮನ್ನಣೆ ದೊರಕಿತ್ತೆಂಬುದು ವೇದ್ಯವಾಗುತ್ತದೆ. (ಈ ಅಂಶವನ್ನು ನನ್ನ ಗಮನಕ್ಕೆ ತಂದವರು ಡಾ. ವೆಂಕಟಾಚಲಶಾಸ್ತ್ರಿಗಳು)

ಕೊನೆಯದಾದ ಮಾತು : ಬಾಸೆಲ್ ಮಿಶನ್ನಿನ ಸಮಗ್ರ ಇತಿಹಾಸವನ್ನು ಹೇಳಲು ನಾಲ್ಕೈದು ಸುದೀರ್ಘವಾದ ಗ್ರಂಥಗಳು ಜರ್ಮನ್ ಭಾಷೆಯಲ್ಲಿವೆ. ದ್ರಾವಿಡ ಭಾಷೆಗಳಲ್ಲಿ ಸಾಧನೆ ಮಾಡಿದವರೆಂದು ಗುಂಡರ್ಟ್ ಹಾಗೂ ಇನ್ನು ಕೆಲವರ ಸಾಧನೆಯ ಅಂಶಗಳು ಬೆಳಕಿಗೆ ಬಂದಿವೆ. ಆದರೆ ಕಿಟೆಲ್ ಅವರ ಹೆಸರು Passing reference ತರಹ ಬರುತ್ತದೆಯೇ ಹೊರತು ಅವರು ಕೈಕೊಂಡ ದ್ರಾವಿಡ ಸಂಶೋಧನೆ, ಕನ್ನಡ ಗ್ರಂಥರಚನೆ – ಇದಾವುದೂ ಆ ಚರಿತ್ರಕಾರರ ಕಣ್ಣಿಗೆ ಬಿದ್ದುದಿಲ್ಲ. ಬಿಡಲಿ; ಕನ್ನಡಿಗರೆಲ್ಲರೂ ಅವರನ್ನು ಹೃತ್ಪೂರ್ವಕವಾಗಿ ಇಂದಿಗೂ ನೆನೆಯುತ್ತಿದ್ದಾರೆ. ಕನ್ನಡ ಎನ್ನುವ ಪರಿಕಲ್ಪನೆ ಬಳಕೆಯಲ್ಲಿ ಇರುವ ವರೆಗೂ 'ಕಿಟೆಲ್' ಎಂಬ ಹೆಸರು ಸದೈವ ಜೊತೆಗೆ ನಿಲ್ಲತಕ್ಕದ್ದಾಗಿದೆ. ಸಾಕಲ್ಲ!

* * * * * * * *

# ಕಿಟೆಲರ ಮರಣ ಶತಾಬ್ದಿಯ ವರ್ಷದ ನೆನಪಿಗಾಗಿ ಭಾರತೀಯ ಅಂಚೆ ಇಲಾಖೆಯವರು ಹೊರಡಿಸಿದ ಕವರ್



# ಕಿಟೆಲ್ ಜೀವನ ಪಟ

| | |
|---|---|
| ೧೮೩೨, ಏಪ್ರಿಲ್ ೭ | ರೆಸ್ಸರ್‌ಹಾಫ್ (ಜರ್ಮನಿ) ನಲ್ಲಿ ಜನನ |
| ೧೮೪೯- | ಔರಿಕ್ ಶಾಲೆಯಲ್ಲಿ ವಿದ್ಯಾರ್ಥಿ |
| ೧೮೫೦-೧೮೫೩ | ಬಾಸೆಲ್ ಸೆಮಿನರಿಯಲ್ಲಿ ಮತ ಶಿಕ್ಷಣ |
| ೧೮೫೩, ಅಕ್ಟೋಬರ್ ೨೦ | ಧಾರವಾಡಕ್ಕೆ ಆಗಮನ |
| ೧೮೫೪-೧೮೫೬ | ಧಾರವಾಡ ಹುಬ್ಬಳ್ಳಿಗಳಲ್ಲಿ ಮಿಶನರಿ ಕಾರ್ಯ |
| ೧೮೬೦, ನವೆಂಬರ್ | ಪೌಲಿನಾ ಐತ್‌ಳೊಡನೆ ಮದುವೆ. |
| ೧೮೬೨-೧೮೬೪ | ಆರಂಭದ ಲೇಖನ ಕಾರ್ಯ: ಪತ್ರಿಕೋದ್ಯಮ. ಪದ್ಯ ರಚನೆ |
| ೧೮೬೪, ಮೇ ೨೮ | ಹೆಂಡತಿಯ ಮರಣ |
| ೧೮೬೫ | ಕನ್ನಡ ಕವಿತೆಗಳ ಸಂಕಲನ, ಪ್ರಕಟನೆ |
| ೧೮೬೬-೧೮೬೭ | ದೀರ್ಘಾವಧಿ ರಜೆಯ ಮೇಲೆ ಜರ್ಮನಿಯಲ್ಲಿ |
| ೧೮೬೭ | ಮರುಮದುವೆ – ಜ್ಯೂಲಿ ಐತ್‌ಳೊಡನೆ (ಮೊದಲ ಹೆಂಡತಿಯ ತಂಗಿ) |
| ೧೮೬೮- | ಮಡಿಕೇರಿಯಲ್ಲಿ ವಾಸ್ತವ್ಯ |
| ೧೮೭೦ | 'ಕ್ರೈಸ್ತ ಸಭಾಚರಿತ್ರೆ'ಯ ಪ್ರಕಟನೆ |
| ೧೮೭೨ | 'ಶಬ್ದಮಣಿದರ್ಪಣ'ದ ಪ್ರಕಟನೆ<br>ಇಂಡಿಯನ್ ಆ್ಯಂಟಿಕ್ವೆರಿ'ಯಲ್ಲಿ ಲೇಖನಾರಂಭ<br>ಕನ್ನಡ ಶಬ್ದಕೋಶ ರಚನೆಗೆ ಕೇಂದ್ರ ಮಿಶನ್ನಿನ ಅನುಮೋದನೆ |
| ೧೮೭೨-೧೮೭೪ | ಭಾರತೀಯ ತತ್ವಜ್ಞಾನದ ಕುರಿತ ಗ್ರಂಥಗಳ ರಚನೆ |
| ೧೮೭೫ | 'ಛಂದೋಬುಧಿ'ಯ ಪ್ರಕಟನೆ |
| ೧೮೭೭-೧೮೮೨ | ಸ್ವದೇಶ ಗಮನ. ಎಸ್ಲಿಂಗೆನ್‌ನಲ್ಲಿ ವಾಸ. ಕನ್ನಡ ಕೋಶದ ಪ್ರಥಮ ಕರಡು |
| ೧೮೮೩-೧೮೮೪ | ಧಾರವಾಡ ಬಾಸೆಲ್ ಮಿಶನ್ ಹೈಸ್ಕೂಲಿನ ಪ್ರಿನ್ಸಿಪಾಲ್ |
| ೧೮೯೨ | ಮರಳಿ ಸ್ವದೇಶಕ್ಕೆ ಹೋದುದು |
| ೧೮೯೪ | 'ಕನ್ನಡ-ಇಂಗ್ಲಿಷ್ ಕೋಶ'ದ ಪ್ರಕಟನೆ |
| ೧೮೯೬ | ಟ್ಯೂಬಿಂಗನ್ ವಿಶ್ವವಿದ್ಯಾಲಯದಿಂದ ಗೌರವ ಡಿ.ಫಿಲ್. ಪದವಿ |
| ೧೯೦೩ | ಕನ್ನಡ ವ್ಯಾಕರಣ (ಇಂಗ್ಲಿಷ್ ಗ್ರಂಥ) ದ ಪ್ರಕಟನೆ |
| ೧೯೦೩, ಡಿಸೆಂಬರ್ ೧೯ | ಮರಣ. |

# ಕಿಟೆಲ್, ನೀ ನಮ್ಮವ!

ಸೋಮಶೇಖರ ಇಮ್ರಾಪೂರ

-೧-

ಕಿಟೆಲ್ !
ಬರಗಾಲದಾಗ ಬಗಲೆತ್ತಿ ಬಿಸೇ ಹುಡಿ ಮಣ್ಣಿನ್ಯಾಗ ಹಡೆದ ಕೂಸು
ಕಕ್ಕಸ ಪಡುವಾಗ ತುಂತುರ ಹನಿಯೊಡೆದು ನೆಲದಾಗ ಒಲವು ಸೆಲೆಯಿಕ್ಕಿ
ಹಸಿಗೆ ಹಸಿ ಕೂಡಿ, ಹಸಿರಾಗಿ, ಹಂಡೆಗಟ್ಟಲೆ ಹೈನು ಹಾಲು
ಸುರಿವಾಗ ನಿನ್ನ ನೆನಪು.

ನೀ ನಮ್ಮವ,
ನೀನೆಲ್ಲೇ ಹುಟ್ಟಿ ಎಲ್ಲೇ ಬೆಳದ್ರೂ ನಡೆದ ಮಣ್ಣಿನ ಉಡಿ ತುಂಬಾ
ಕೊಬರೀ ಬೆಲ್ಲಾ ತುಂಬ್ದಿ ಅನ್ನೂದು ಹಗರು ಮಾತಲ್ಲ.
ನೆತ್ತೀ ಮ್ಯಾಗಲ ಬಿಸಿಲಿನೊಳಗ ಹೊಕ್ಕುಳತನಕಾ ನೀರು ಇಳಿಸ್ದಿ !
ನಾವಿರೂ ತನಕಾನೂ ನಮ್ಗೂಡ ಬೆಳೆಯೂ ಕೂವತ್ತು ನಿಂದು.

ಮಾಡ್ದಾನ್ ಸೂರ್ಯಾ ಕಾಣ್ದಾಗ, ಬಂಜಿ ಮಾಡ ತೇಲುವಾಗ
ಚಂದಪ್ಪ ಬಿಸಿಲು ಕಕ್ಕೂವಾಗ, ಬಿತಿಗಾದ್ರೂ ಬೆಳೀ ಕಾಣ್ದ
ಬೆಳಿ ಬಂದ್ರೂ ಹುಳಾ ತಿಂದ, ಬೇಬರ್ಸಿ ಕೆಟಬ್ಯಾನಿ ಕಾಲ್ದಾಗ
ನೀ ಬಂದಿ, ಕೈಗೆ ಹತ್ತಿದ್ದೆಷ್ಟ್ ಅಷ್ಟು ಕಲ್ತತರು ಕಾಣಿಸಿಗೊಂತು.
ಹಸಿದ ಮಣ್ಣು ಹಸಿರಾತು.
ಮುಗಿಲಾನ್ ಮಾತು ನೆಲಕಿಳದು
ನೆಲದಾನ ಮಾತು ಹೂವಾತು
ಬಂಡಿ ತುಂಬಾ ಬಂಗಾರಾಗಿ, ಹಂಗು ಹರಿದು.
ಮುಂಗಾರಿ ರೊಟ್ಟಿ ಮುಂಗೈಯಾಗ ಹಿಡದು ಮುರುದು ತಿನ್ನೂ ಭಾಗ್ಯಾ
ನೀ ತಂದಿ.

ಶರಣರ ಭಾವದ ಒಳಗಿನ ದನಿ, ವಚನದ ನಿಧಿ ಕಂಡಿದ್ದೆಂದ್ರ
ಪುಣ್ಯಕ್ಕ ಪುಟ್ಟಾಪೂರಾ ಮುಕ್ತಿ ಸಿಗತಿತ್ತು.
ನಮ್ಮದನ್ನೊ ನಮ್ಮದಃ ಸಗ್ಗ ನಮ್ಮದಾಗ್ತಿತ್ತು.

ಹದ ಹಾಕಿ ಮಾಡಿದ ಶ್ಯಾವಿಗೀ ಸುರಿದ್ಹಾಂಗ ನಿನ್ನ ಕನ್ನಡ ಚಾಕರಿ
ಸಾಲಿಗೀ ಚಾಚಿ ಬಾಯ್ಸುತ್ತಾ ತಿರುವ್ಯಾಡಿ ಸುರಿಸುರಿದ್ಹಾಂಗ
ಥರಥರಾ ರುಚಿ
ಈ ಹುಗಿದ ಗುಡೀ ಕದಕಿ ಎಣಿಗಮುಟು ಕದ ಒರೆಸಿ
ಬಾದರಾಯಣ ಕೀಲಿ ತೆಗೆದು ಒಳಹೊಕ್ಕ ಭೂಪರೊಳಗ
ನೀನೂ ಒಬ್ಬ.
ನಾನಾ ನಮೂನಿ ಕೀಲಿ ಕೈ ಗೊಂಚಲಿನ್ಯಾಗ ನಿನ್ನದs ಒಂದು ಮಜಬೂತ ಕೈ
ಕೈಚಾಚಿ ನಿಲು ನಿಲುಕಿದ್ಹಾಂಗ ಮಾರುಗ್ಯೆ ಮಾಡಿ ಮುಗಿಸೇಬಿಟ್ಟಿ ಅಳತಿ.

-೨-

ಅಂಥಾದ್ದು ಇಂಥಾದ್ದು ಎಂಥಾದ್ದೆಂದು ಎಣಿಸಿಟ್ಟಿ
ನಿನ್ನ ಎದಿ ಕಂಚಿನಂಥಾದ್ದು;
ಲೆಕ್ಕದಾಗ ಲೆಕ್ಕಣಿಕಿ ಗೊಣ್ಣೀ ಬಿಟ್ಟಿದ್ದೀತು !
ಮುಗಿಲಾನ ಚಿಕ್ಕಿ, ಹಳ್ಳದಾಗ ಹಳ್ಳು ಎಣಿಸೂ ಕೆಲ್ಸದಾಗ
ತುಸಾ ತೂಕ ತಪ್ಪಿದ್ದೀತು ! ಅಂತೂ ಕೂವತ್ತಿನವ !
ಮುಗಿಲಾಗ ಮರಿಯಾದ ಮೇರು ಪರ್ವತದ್ಹಾಂಗ
ಕನ್ನಡದ ಗ್ವಾಡಿ ಥರದಾಗ ಬೆರತು
ಕಟ್ಟಡದ ತುದಿ ತನಕ ಶಕ್ತಿ ನೀಡಿ, ಚಂದ ಚಾರಾಗಿ
ನಿಂತದ್ದು
ಸಮಗೆಲ್ಲಾ ಆಗಾದಾಗಿ ಕಣ್ಣಾಲಿ ಸೋತು ಬೆಳ್ಳಗಾದಾಗ
ನೀ ಅಗದು ತೋರಿದ ನಿಧಿ ನಮಗ ದಗದದ ಬೆಲಿ ಹೇಳಿತು.
ಪೆಂಡಿಗಟ್ಟಲೆ ಮಾತು, ಮುತ್ತು ಮುತ್ತಿನ ಮಾಲೆ ನಮ್ಮುಂದ ಇಟ್ಟು
ನೀ ಕೊಟ್ಟ ಕೋಶ ನಮಗೊಂದು ಹನ್ನೆರಡೂ ತಿಂಗಳ ಹಿಂಡುವ ಎಮ್ಮಿ.

ಆ ಕತೀ ಈ ಕತೀ ಆ ಈ ಕವಿಯಂಥಾ ಕವಿ ಕೊರದ
ಹಾಳೀ ಪಾನ ಬಣವ್ಯಾಗ ಇಳಿದಿ
ಬ್ಯಾಟರಿ ಬುಟ್ಟಿ ಹಿಡಕೊಂಡು ಹೋದಿ, ಬಂದಿ
ತುಂಬಿ ತಂದಿ ಹೊಟ್ಟು ಮೇವು.
ಹಸಿದು ಕೊಸರ್ಯಾಡಿದ ನಿನ್ನ ಹೋರಿಯ ಕಟ್ಟಿ ಮೇಸಿದಿ.
ಮೈಕಂಡ ತುಂಬಿ, ಮಿರಿ ಮಿರಿ ಮಿಂಚಿ
ಪಕಡೆಲ್ಲಾ ಅಳ್ಳೆಯಾದ ಹೋರಿಗೇನು ಧಾಡಿ !
ತೆಂಬದಾಗೂ ತೆಗುವಾಗದ್ಹಾಂಗ ಹೋಯ್ತು ಗಾಳಿಪಟದ್ಹಾಂಗ

೧೦೮

ಲುಟುಲುಟು ದಾಸಗತ್ತಿನ ಗಮಜು ಗಮ್ಮತ್ತಿನಾಗ
ಮಂಗಬಾಲ ತಲಿಮ್ಯಾಲ ಏರಿಸಿ
ಹೊಂಬಣ್ಣದಾಗ ಹೊನ್ನಾಗಿ ಜನ್ನಗುದುರಿಯಾಗಿ
ಅದು ನಿನ್ನ ಜ್ಞಾನದಾಶೆ.

ಏನಾದರೂ ಕಿಟೆಲ್ ! ನೀ ಅಂತೆಕಂತೆಗಳಿಗೊಳಪಡದ ಪುಣ್ಯವಂತ;
ಬಾಯೊಣಗಿ ತುತ್ತು ಅಂಗಳಕ ಕುಳಿತಾಗ
ನಮಗ ನಿನ್ನದs ನೀರು !

# ಅನುಬಂಧ – (ಅ)

## ಕಿಟೆಲ್ ವಾಙ್ಮಯ ಸೂಚಿ

ಅ) ಇಲ್ಲಿಯ ಪ್ರತಿಯೊಂದು ಬರಹವನ್ನು ಸ್ವಯಂ ನೋಡಿ ಸೇರಿಸಿದ್ದಾಗಿದೆ.

ಆ) ಅನೇಕ ಪುಸ್ತಕಗಳಿಗೆ ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಶೀರ್ಷಿಕೆಗಳಿವೆ. ಯಾವ ಭಾಷೆಯಲ್ಲಿ ಆ ಪುಸ್ತಕ ಇದೆಯೋ, ಅದನ್ನೇ ಮೊದಲಿಗೆ ಕೊಡಲಾಗಿದೆ.

ಇ) ಸಂಕ್ಷೇಪಗಳು : ಬಾ.ಮಿ.ಪ್ರೆ – ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು

I.A – Indian Antiquary

I.E.R – Indian Evangelical Review

E.I – Epigraphia Indica

E.M – Evangelische Hydenboten

## ಗ್ರಂಥಗಳು / Books

### ಕನ್ನಡ – ಕಾವ್ಯ; ವ್ಯಾಕರಣ ಮತ್ತು ಶಬ್ದಕೋಶ

೧. **ಸಣ್ಣ ಕರ್ನಾಟಕ ಕಾವ್ಯಮಾಲೆ Minor Poetical Anthology**
ಮಂಗಳೂರು, ಬಾ.ಮಿ.ಪ್ರೆ. ೧೮೬೫
೨ನೇ ಆವೃತ್ತಿ, ೧೮೬೮, ೩ನೇ ಆ. ೧೮೭೪ (ವಿಸ್ತಾರಿತ)

೨. **ಕರ್ನಾಟಕ ಕಾವ್ಯಮಾಲೆ Canerese Poetical Anthology**
(ಸಣ್ಣ ಕರ್ನಾಟಕ ಕಾವ್ಯಮಾಲೆಯ ವಿಸ್ತಾರಿತ ಆವೃತ್ತಿ)
(ಕವಿಪರಿಚಯ ಸಹಿತವಾದ ಪೀಠಿಕೆ, ಟಿಪ್ಪಣಿ ಹಾಗೂ ಶಬ್ದಕೋಶದೊಡನೆ)
ಮಂಗಳೂರು, ಬಾ.ಮಿ.ಪ್ರೆ. ೧೮೭೪, ಪುಟ ೨೦+೪೦೧

೩. **ಕೇಶಿರಾಜಕವಿಯ ಶಬ್ದಮಣಿದರ್ಪಣಂ**
**Keshiraja's Jewel Mirror of Grammar**
ನಿಷ್ಠೂರ ಸಂಜಯ್ಯನ ವ್ಯಾಖ್ಯಾನಂ ಸಹಿತ
ಮಂಗಳೂರು, ಬಾ.ಮಿ.ಪ್ರೆ, ೧೮೭೨, ಪುಟ ೩೬+೪೨೦
೩ನೇ ಆವೃತ್ತಿಯ ಸಂಪಾದಕರು : ಪಂಜೆ ಮಂಗೇಶರಾವ್, ೧೯೨೦

೪. ನಾಗವರ್ಮನ ಕನ್ನಡ ಛಂದಸ್ಸು
**Nagavarma's Canerese Prosody**
(ಸುದೀರ್ಘ ಪೀಠಿಕೆ ಸಹಿತ)
ಮಂಗಳೂರು, ಬಾ.ಮಿ.ಪ್ರೆ. ೧೮೭೫, ಪುಟ ೨೮+೧೬೦

೫. **Eassay on Canerese Literature**
**Included in the above book**

೬. **KANNADA – ENGLISH DICTIONARY**
(With a Preface; also containing,
a List of words borrowed by Sanskrita from Dravida)
Mangalore, B.M.P. 1894, Pp. 47+1752

೭. **KITTEL'S KANNADA – ENGLISH DICTIONARY**
Revised and Enlarged by Prof. M. MARIAPPA BHAT
Madras, Madras Univ. 1968-71, Pp. 68+1781

೮. **A Grammar of the Kannada Language**
Comprising the three dialects of the language – Ancient,
Medieval and Modern,
Mangalore, B.M.P. 1903, Pp 6+483

## ಧಾರ್ಮಿಕ /RELIGION

೯. **ಕಥಾಮಾಲೆ Selection of Scripture stories**
In Hindu Metre. New Testament
ಮಂಗಳೂರು, ಬಾ.ಮಿ.ಪ್ರೆ. ೧೮೬೨. ೨ನೇ ಮು. ಪು. ೬೬ ೧೩೫

೧೦. **ಪರಮಾತ್ಮಜ್ಞಾನ Knowledge of the Supreme Spirit**
A dialogue on the Hindu doctrine of God's
being the author of sin etc
ಮಂಗಳೂರು, ಬಾ.ಮಿ.ಪ್ರೆ. ೧೮೬೩. ಪುಟ ೯೦

೧೧. **ಯೇಸುಕ್ರಿಸ್ತನ ಶ್ರಮೇ ಚರಿತ್ರಮುಂ. Sufferings of Christ**
ಮಂಗಳೂರು, ಬಾ.ಮಿ.ಪ್ರೆ. ೧೮೬೫. ೩ನೇ ಆ. ೧೮೬೯

೧೨. **ಕ್ರೈಸ್ತ ಸಭಾ ಚರಿತ್ರ History of the Church of Christ**
ಮಂಗಳೂರು, ಬಾ.ಮಿ.ಪ್ರೆ. ೧೮೭೦. ಪುಟ ೬೬೬

೧೩. **A Short Survey on the Vedic Polytheism And Pantheism. A lecture**
Mangalore, B.M.P. 1872, Pp. 56

೧೪. **Tract on Sacrifice. Yajnasudhanidhi**
Mangalore, B.M.P. 1872, Pp. 134

೧೫. **Specimens of South Indian Dialects,**
Being translations of the Parable of Sower, etc.
Collected by A.C. Burnell.
No. 3, In the Kodagu, language, Tr. by F. Kittel
Mangalore, B.M.P. 1873, Pp. 5 + 10

೧೬. **Ueber de ursprung des Lingacultus in Indien**
Mangalore, B.M.P. 1876. Pp. 74

## ಪಠ್ಯ ಪುಸ್ತಕಗಳು

೧೭. **ಕನ್ನಡ ಪಂಚತಂತ್ರವು School Panchatantra**
ಮಂಗಳೂರು, ಬಾ.ಮಿ.ಪ್ರೆ. ೩ನೇ ಆ. ೧೮೭೬. ಪುಟ ೨೦+೧೪೬

೧೮. **ಇಂಗ್ಲೆಂಡ್ ದೇಶದ ಚರಿತ್ರವು, History of England**
ಎಚ್. ಮಾರಿಸ್ ಕೃತ. ಚೆನ್ನಪಟ್ಟಣದ (ಮದ್ರಾಸ್) ಅಧಿಪತ್ಯದ ಮೇರೆಗೆ ಶಾಲೆಗಳ ಪ್ರಯೋಜನಾರ್ಥವಾಗಿ 'ಬೋಧನೆಯ ಸರಕಾರೀ ಡೈರೆಕ್ಟರ್' (D.P.I) ಅವರ ಅಪ್ಪಣೆಯ ಪ್ರಕಾರ ಕನ್ನಡದಲ್ಲಿ ಟೀಕಿಸಿದ್ದು.
ಮಂಗಳೂರು, ಬಾ.ಮಿ.ಪ್ರೆ. ೧೮೭೪. ಪುಟ ೪೨೩+೪.
೨ನೇ ಆ. ೧೮೭೭

೧೯. **ಹಿಂದೂ ದೇಶದ ಚರಿತ್ರವು History of India**
ಎಚ್. ಮಾರಿಸ್ ಕೃತ.....
ಮಂಗಳೂರು, ಬಾ.ಮಿ.ಪ್ರೆ., ೨ನೇ ಆ ೧೮೬೬. ಪುಟ ೩೨+೪೦೪

೨೦. **ಕನ್ನಡ ಪಾಠಗಳ ಮೂರನೇ ಪುಸ್ತಕವು**
**Third Book of Lessons In Canerese**
Adapted to the Vernacular schools of the Madras Presidency
ಮಂಗಳೂರು, ಬಾ.ಮಿ.ಪ್ರೆ. ೧೮೬೪. ೩ನೇ ಆ ೧೮೭೦.
ಪುಟ ೮+೨೪೮

೨೧. **ಕಾವ್ಯಮಂಜರಿ First Book of Canerese Poetry**
ಮಂಗಳೂರು, ಬಾ.ಮಿ.ಪ್ರೆ. ೧೮೭೭. ಪು. ೬೪

## ಪತ್ರಿಕೆಗಳು

೨೨. **ವಿಚಿತ್ರ ವರ್ತಮಾನ ಸಂಗ್ರಹ Illustrated Canerese Journal**
